ಗುರುವಾರ, ಮೇ 7, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಕ್ಲಾಸೆನ್ ಮಿಂಚು

ಸನ್‌ರೈಸರ್ಸ್ ಹೈದರಾಬಾದ್ ಬ್ಯಾಟರ್ ಹೆನ್ರಿಚ್ ಕ್ಲಾಸೆನ್ (69;43ಎ) ಅವರು ಹೈದರಾಬಾದ್‌ನಲ್ಲಿ ಬುಧವಾರ ನಡೆದ ಪಂಜಾಬ್ ಕಿಂಗ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಅರ್ಧಶತಕ ದಾಖಲಿಸಿದರು



ವಸ್ತ್ರ ವೈಭವ

ದಾವಣಗೆರೆಯ ಎಆರ್‌ಜಿ ಕಾಲೇಜಿನಲ್ಲಿ ಆಯೋಜಿಸಿದ್ದ ‘ಎಆರ್‌ಜಿ ವೈಭವ–2026’ ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯೊಬ್ಬರು ಸಾಂಪ್ರದಾಯಿಕ ಲಂಬಾಣಿ ದಿರಿಸು ಧರಿಸಿದ್ದರು

PRM/KA/RERA/1251/310/PR/040524/006862
WWW.RERA.KARNATAKA.GOV.IN

27	674	24	2.5	130+
ACRES ROMAN-THEMED COMMUNITY	LUXURY HOMES IN PHASE 2	ACRES OF OPEN SPACE	ACRES OF MONUMENTAL CLUBHOUSES	WORLD-CLASS AMENITIES

A TRUE BLOCKBUSTER LIFE YOU WON'T FIND ANYWHERE ELSE

★ COMMUNITY ★

- An iconic Roman-themed community of 1400+ homes
- 19 acres of lush landscapes with a tropical forest
- Vehicle-free community with basement parking for safer living
- 7-star styled double-height entrance & lift lobbies
- Resort like ambience for luxury living

★ AMENITIES ★

- Grand 28000 sft. temperature-controlled swimming pools
- 25+ sports courts like badminton, squash, table tennis, basketball & pickleball
- Leisure zones with 5 amphitheatres, forest walkways, koi & lily ponds, themed gardens & more

★ LOCATION ★

- 6 mins signal free access to NICE road
- 5 mins from Vajarahalli metro station
- 10 mins from Forum mall & Global tech park
- Close proximity to schools, colleges, business centers & IT parks

★ FLOOR PLAN AND SPECIFICATIONS ★

- Spacious homes for maximum functionality, comfort & privacy
- Huge ceiling height windows for 2x brighter & breezier living
- Vaastu-compliant homes with no space wastage
- Convertible balcony in bedrooms offer 3x more ventilation & scenic views
- High-end specifications like Italian marble flooring, digital door lock & luxury bath fittings

★ CONVENIENCE ★

- 2 independent entrances for seamless accessibility
- Multi-layer safety & security system
- All-in-one hub: supermarket, cafeteria, clinic, laundry & more
- 100% hassle-free living with assured maintenance services
- Casagrand exclusive community events, festivals & social experiences



ಗುರುವಾರ, ಮೇ 7, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 126 | ಪುಟ 18
prajavani.net prajavani www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಗುಕೇಶ್ ಗೆಲುವಿನ ನಡೆ



ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಪೋಲೆಂಡ್‌ನಲ್ಲಿ ನಡೆಯುತ್ತಿರುವ ಸೂಪರ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ಬುಧವಾರ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಅವರನ್ನು ಸೋಲಿಸಿದರು

ಸೆನ್ಸೆಕ್ಸ್ 77,958 | ನಿಫ್ಟಿ 24,330 | $/₹ 94.49 | ಚಿನ್ನ (Std. 10g) ₹1,55,850 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,61,600 (ಬೆಂಗಳೂರು)

ಬಹುಮತ: ಸಾಕ್ಷ್ಯ ಕೇಳಿದ ರಾಜ್ಯಪಾಲ

ತಮಿಳುನಾಡು: ವಿಜಯ್‌ಗೆ 'ಕೈ' ಬೆಂಬಲ

• ಪ್ರಮಾಣಕ್ಕೆ ನಿಗದಿಯಾಗದ ಮುಹೂರ್ತ

ಪ್ರಜಾವಾಣಿ ವಾರ್ತೆ/ ಪಿಟಿಐ

ಚೆನ್ನೈ/ ನವದೆಹಲಿ: ತಮಿಳುನಾಡು ಮುಖ್ಯಮಂತ್ರಿಯಾಗಿ ಬೇಗ ಅಧಿಕಾರ ವಹಿಸಿಕೊಳ್ಳುವ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ಜೋಸೆಫ್ ವಿಜಯ್ ಅವರ ಉತ್ಸಾಹಕ್ಕೆ ಬುಧವಾರ ಅಡ್ಡಿ ಎದುರಾಗಿದೆ. 'ಸರ್ಕಾರ ರಚನೆಗೆ ಆಹ್ವಾನಿಸಬೇಕಾದರೆ ಬಹುಮತ ಹೊಂದಿರುವ ಬಗ್ಗೆ ದಾಖಲೆ ಒದಗಿಸಬೇಕು' ಎಂದು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಸೂಚಿಸಿದ್ದಾರೆ.

ವಿಜಯ್ ಅವರು ಲೋಕ ಭವನಕ್ಕೆ ಭೇಟಿ ನೀಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದಾಗ ರಾಜ್ಯಪಾಲರು ತಮ್ಮ ನಿಲುವನ್ನು ತಿಳಿಸಿದ್ದಾರೆ. ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ 108 ಸ್ಥಾನಗಳನ್ನು ಗೆದ್ದು ಟಿವಿಕೆ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಐದು ಸ್ಥಾನಗಳನ್ನು ಗೆದ್ದಿರುವ ಕಾಂಗ್ರೆಸ್, ತನ್ನ ಬೆಂಬಲ ಸೂಚಿಸಿರುವುದರಿಂದ ಟಿವಿಕೆ ಒಟ್ಟು 113 ಶಾಸಕರ ಬಲ ಹೊಂದಿದೆ. ಆದರೆ 'ಮ್ಯಾಜಿಕ್ ಸಂಖ್ಯೆ' ಆಗಿರುವ 117 ಶಾಸಕರ ಬೆಂಬಲ ಇರುವುದಕ್ಕೆ ದಾಖಲೆ ಒದಗಿಸುವಂತೆ ರಾಜ್ಯಪಾಲರು ಸೂಚಿಸಿದ್ದಾರೆ.

ವಿಜಯ್ ಅವರು ಶೀಘ್ರವೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಬೇಕೆಂದು ಟಿವಿಕೆ ಹಾಕಿಕೊಂಡಿದ್ದ ಯೋಜನೆಗೆ ಇದರಿಂದ ಹಿನ್ನಡೆಯಾಗಿದೆ. ಕಾಂಗ್ರೆಸ್ ಪಕ್ಷವು ಟಿವಿಕೆಗೆ ಬೆಂಬಲ ನೀಡಿರುವುದು ಮತ್ತು ಹೊಸ ಸರ್ಕಾರದ ಭಾಗವಾಗಲು ಮುಂದಾಗಿರುವುದು ಈ ಎಲ್ಲಾ ಬೆಳವಣಿಗೆಗಳಿಗೆ ಕಾರಣ ಎಂದು ಉನ್ನತ ಮೂಲವೊಂದು ತಿಳಿಸಿದೆ.

ಟಿವಿಕೆಯನ್ನು ಬೇಷರತ್ತಾಗಿ ಬೆಂಬಲಿಸಲು ಪಕ್ಷವು ಸಿದ್ಧವಾಗಿದೆ ಎಂದು ಎಐಎಡಿಎಂಕೆ ನಾಯಕರು ಬುಧವಾರ ಬೆಳಿಗ್ಗೆ ಹೇಳಿದ್ದರು.

▶10



ವಿಜಯ್ ಅವರು ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ಭೇಟಿಯಾದರು –ಪಿಟಿಐ ಚಿತ್ರ


ಡಿಎಂಕೆ ಮೈತ್ರಿಗೆ 'ಕೈ' ಗುಡ್‌ಬೈ

ಸರ್ಕಾರ ರಚಿಸಲು ವಿಜಯ್ ನೇತೃತ್ವದ ಟಿವಿಕೆಗೆ ಬೆಂಬಲ ನೀಡುವುದಾಗಿ ಕಾಂಗ್ರೆಸ್ ಬುಧವಾರ ಘೋಷಿಸಿದೆ. ಈ ಮೂಲಕ, ದೀರ್ಘಕಾಲದ ಮಿತ್ರಪಕ್ಷ ಡಿಎಂಕೆ ಜತೆಗಿನ ಮೈತ್ರಿಯನ್ನು ಕಡಿದುಕೊಂಡಿದೆ. ಈ ಬೆಳವಣಿಗೆ ತಮಿಳುನಾಡಿನಲ್ಲಿ ಹೊಸ ರಾಜಕೀಯ ಸಮೀಕರಣಕ್ಕೆ ದಾರಿ ಮಾಡಿಕೊಡಲಿದೆ ಎಂದು ವಿಶ್ಲೇಷಿಸಲಾಗಿದೆ.

▶10

ಕೇರಳಂ ಸಿ.ಎಂ: ಮುಂಚೂಣಿಯಲ್ಲಿ ಸತೀಶನ್

ತಿರುವನಂತಪುರ (ಪಿಟಿಐ): ಕೇರಳಂ ಮುಖ್ಯಮಂತ್ರಿ ಗಾದಿಗಾಗಿ ಸ್ಪರ್ಧೆ ತೀವ್ರಗೊಂಡಿದ್ದು, ಸ್ಪರ್ಧಾ ಕಣದಲ್ಲಿರುವ ವಿ.ಡಿ. ಸತೀಶನ್, ಕೆ.ಸಿ. ವೇಣುಗೋಪಾಲ್ ಮತ್ತು ರಮೇಶ್ ಚೆನ್ನಿತ್ತಲ ಪರವಾಗಿ ಬೆಂಬಲಿಗರು ತೀವ್ರ ಲಾಬಿ ಆರಂಭಿಸಿದ್ದಾರೆ. ಸಾಮಾಜಿಕ ಜಾಲತಾಣಗಳ ಮೂಲಕವೂ ಅಭ್ಯರ್ಥಿ ಪರವಾಗಿ ಅಭಿಯಾನ ಬಿರುಸುಗೊಂಡಿದೆ.



ವಿ.ಡಿ. ಸತೀಶನ್

ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿ ಹೆಸರನ್ನು ಇನ್ನೂ ಅಂತಿಮಗೊಳಿಸಿಲ್ಲ. ಪಕ್ಷದ ಹಿರಿಯ ಮುಖಂಡರಾದ ಮುಕುಲ್ ವಾಸ್ನಿಕ್ ಮತ್ತು ಅಜಯ್ ಮಾಕನ್ ಅವರನ್ನು ವೀಕ್ಷಕರನ್ನಾಗಿ ಹೈಕಮಾಂಡ್ ನೇಮಿಸಿದ್ದು, ಅವರು ಬುಧವಾರ ಸಂಜೆಯೇ ಕೇರಳಂಗೆ ಬಂದಿದ್ದಾರೆ.

'ಎಐಸಿಸಿ ವೀಕ್ಷಕರು ಚುನಾಯಿತ ಸದಸ್ಯರೊಂದಿಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಬೇಕು, ಇದರಿಂದ ಅವರಿಗೆ ಮುಕ್ತವಾಗಿ ತಮ್ಮ ಆಯ್ಕೆಯನ್ನು ತಿಳಿಸಲು ಸಾಧ್ಯವಾಗುತ್ತದೆ' ಎಂದು ಸತೀಶನ್ ಬೆಂಬಲಿಗರು ಆಗ್ರಹಿಸಿದ್ದಾರೆ.

'ಮುಖ್ಯಮಂತ್ರಿ ಆಯ್ಕೆ ವಿಷಯದಲ್ಲಿ ವೇಣುಗೋಪಾಲ್ ರಾಜಕೀಯವಾಗಿ ಹೆಚ್ಚು ಪ್ರಭಾವಿಯಾಗಿದ್ದಾರೆ. ಆದರೆ, ಜನಪ್ರಿಯತೆ ವಿಷಯದಲ್ಲಿ ಸತೀಶನ್ ಒಂದು ಹೆಜ್ಜೆ ಮುಂದೆ ಇದ್ದಾರೆ. ಯುಡಿಎಫ್ ಗೆಲುವಿನ ಮೂಲಕ ಸತೀಶನ್ ಕೇರಳಂನ 'ಪ್ರಭಾವಿ ನಾಯಕರಾಗಿ ಹೊರಹೊಮ್ಮಿದ್ದಾರೆ. ಯುಡಿಎಫ್ ಮೈತ್ರಿಕೂಟದಲ್ಲಿರುವ ಮುಸ್ಲಿಂ ಲೀಗ್‌ನ ಬೆಂಬಲವೂ ಸತೀಶನ್ ಅವರಿಗೆ ಇದೆ' ಎನ್ನುವುದು ಕಾಂಗ್ರೆಸ್ ಮುಖಂಡರ ಅಭಿಪ್ರಾಯ.

ನೆಹರೂ–ಗಾಂಧಿ ಕುಟುಂಬಕ್ಕೆ ನಿಷ್ಠರಾಗಿರುವ ಚೆನ್ನಿತ್ತಲ ಅವರು ಬುಧವಾರ ನವದೆಹಲಿಯಲ್ಲಿ ರಾಹುಲ್ ಗಾಂಧಿ ಸೇರಿ ಪಕ್ಷದ ಮುಖಂಡರನ್ನು ಭೇಟಿಯಾದರು. ಆದರೆ, ಈ ಭೇಟಿಯು ಕೇರಳಂ ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದ್ದಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

▶10

ಪಶ್ಚಿಮ ಬಂಗಾಳ: 9ರಂದು ಸಿ.ಎಂ ಪ್ರಮಾಣವಚನ



ಕೋಲ್ಕತ್ತ (ಪಿಟಿಐ): ನೂತನ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭ ಇದೇ 9ರ ಶನಿವಾರ ನಡೆಯಲಿದೆ ಎಂದು ಪಶ್ಚಿಮ ಬಂಗಾಳ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಮಿಕ್ ಭಟ್ಟಾಚಾರ್ಯ ಬುಧವಾರ ತಿಳಿಸಿದ್ದಾರೆ.

ಮಧ್ಯ ಕೋಲ್ಕತ್ತದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಬೆಳಿಗ್ಗೆ 10 ಗಂಟೆಗೆ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಅಸ್ಸಾಂ: ಹಿಮಂತ ರಾಜೀನಾಮೆ 11ಕ್ಕೆ ಹೊಸ ಸರ್ಕಾರ ಅಸ್ತಿತ್ವಕ್ಕೆ

ಗುವಾಹಟಿ (ಪಿಟಿಐ): ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು ತಮ್ಮ ಸ್ಥಾನಕ್ಕೆ ಬುಧವಾರ ರಾಜೀನಾಮೆ ನೀಡಿದ್ದಾರೆ.

ಇದೇ 11ರ ನಂತರ ಬಿಜೆಪಿ ನೇತೃತ್ವದ ಹೊಸ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯುವ ಸಾಧ್ಯತೆ ಇದೆ.



ರಾಜ್ಯಪಾಲರಿಗೆ ರಾಜೀನಾಮೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಶರ್ಮಾ ಅವರು, 'ಅಸ್ಸಾಂನಲ್ಲಿ ಐತಿಹಾಸಿಕ ಗೆಲುವು ಸಾಧಿಸಿರುವುದರಿಂದ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಿದ್ದೇವೆ' ಎಂದು ಹೇಳಿದರು.

▶10



ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗದ ಮೋರಿಯ ಗೋಡೆಗೆ ಸ್ಟೀಲ್ ಮಿರರ್ ಅಳವಡಿಸಲಾಗಿದೆ

ಪ್ರಜಾವಾಣಿ ಚಿತ್ರ: ಅನೂಪ್ ರಾಘ .ಟಿ.

ಮೂತ್ರ ವಿಸರ್ಜನೆ ತಡೆಗೆ ಮೈಸೂರು ಪಾಲಿಕೆ ವಿಭಿನ್ನ ಕ್ರಮ

ಮೋರಿ ಗೋಡೆಗೆ 'ಕನ್ನಡಿ'

• ಶಿವಪ್ರಸಾದ್ ರೈ

ಮೈಸೂರು: ಸ್ವಚ್ಛತೆ ಕಾಪಾಡುವಂತೆ ಬುದ್ಧಿ ಮಾತು, ಸೂಚನಾ ಫಲಕ, ದಂಡಗಳಿಗೆ ಬಗ್ಗದ ಸಾರ್ವಜನಿಕರಿಗೆ ಪ್ರಾಯೋಗಿಕ ಪಾಠ ಹೇಳಲು ಮೈಸೂರು ಮಹಾನಗರ ಪಾಲಿಕೆಯು ಹೊಸ ದಾರಿ ಕಂಡುಕೊಂಡಿದೆ.

ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಮೋರಿಯ ಗೋಡೆಗೆ ಮೂತ್ರ ವಿಸರ್ಜನೆ ಮಾಡುವುದನ್ನು ತಪ್ಪಿಸಲು, 85 ಮೀಟರ್ ಉದ್ದಕ್ಕೆ ಸ್ಟೀಲ್ ಮಿರರ್‌ಗಳನ್ನು (ಕನ್ನಡಿ) ಅಳವಡಿಸಲಾಗಿದೆ. ಅವು ಒಡೆಯುವುದಿಲ್ಲ.

ಮೋರಿಗೆ ಅಡ್ಡಲಾಗಿ ಕಟ್ಟಿದ್ದ ಕಾಂಪೌಂಡ್‌ಗೆ ಸಾರ್ವಜನಿಕರು ಮೂತ್ರ ವಿಸರ್ಜಿಸಿ, ನಡೆಯಲು ಆಗದಷ್ಟು ದುರ್ನಾತ ಬೀರುತ್ತಿತ್ತು. ಸೂಚನಾ ಫಲಕ ಅಳವಡಿಸಿದರೆ, ಅದರ ಮೇಲೇ ಮೂತ್ರ ವಿಸರ್ಜಿಸುತ್ತಿದ್ದರು. ಸತತ ಪ್ರಯತ್ನದ ಬಳಿಕವೂ ಅಲ್ಲಿ ಸ್ವಚ್ಛತೆ ಕಾಪಾಡುವುದು ಪಾಲಿಕೆಗೆ ದೊಡ್ಡ ಸವಾಲಾಗಿತ್ತು.

ಪ್ರಸ್ತುತ 4 ಅಡಿ ಎತ್ತರದ ಸ್ಟೀಲ್ ಮಿರರ್ ಅಳವಡಿಸಿರುವುದರಿಂದ, ಅದರ ಮುಂಭಾಗ ನಡೆದು ಹೋಗುವವರ ಚಿತ್ರಣವು ಇನ್ನೊಂದು ಬದಿಯಲ್ಲಿ ನಡೆದುಕೊಂಡು ಹೋಗುವವರಿಗೂ ಕಾಣಿಸುವಂತಿದೆ. ಮೂತ್ರ ವಿಸರ್ಜಿಸುವವರು, ಪಾನ್ ಮಸಾಲ ಉಗಿಯುವವರು ಅಲ್ಲಿ ನಿಂತಾಗ ತಮ್ಮ ಮುಖವನ್ನೇ ಕಂಡು, ಇತರರಿಗೂ ಕಾಣಿಸುತ್ತದೆ ಎಂಬ ನಾಚಿಕೆಯಿಂದ ವಾಪಸು ತೆರಳುತ್ತಿದ್ದಾರೆ. ಪಾಲಿಕೆಯ ತಿರುಮಂತ್ರಕ್ಕೆ ನಾಗರಿಕರೂ ಭೇಷ್ ಎನ್ನುತ್ತಿದ್ದಾರೆ. ಆ ಜಾಗದಲ್ಲಿ ಮದ್ಯಪಾನಿಗಳ ಕಾಟವೂ ಹೆಚ್ಚಿತ್ತು.

ಸ್ಟೀಲ್ ಮಿರರ್ ಸುತ್ತ ಸ್ಟ್ರಿಪ್ ಲೈಟ್ (ಎಲ್‌ಇಡಿ ದೀಪ) ಅಳವಡಿಸಿರುವುದರಿಂದ ರಾತ್ರಿ ವೇಳೆಯೂ ಅಲ್ಲಿ ನಿಂತವರು ಯಾರೆಂದು ಇತರರಿಗೆ ತಿಳಿಯುತ್ತದೆ. ಈ ಉಪಾಯ ಸದ್ಯಕ್ಕೆ ಎಲ್ಲರ ಗಮನ ಸೆಳೆದಿದ್ದು, ಬಸ್‌ಗಾಗಿ ಕಾಯುತ್ತಿರುವ ಜನ ಬಂದು ವಿಡಿಯೊ ಚಿತ್ರೀಕರಿಸಿ ತೆರಳುತ್ತಿದ್ದಾರೆ.

'ಇಲ್ಲಿ ಪ್ರಯಾಣಿಕರನ್ನು ಬಸ್ ಹತ್ತಿಸಿಕೊಳ್ಳಲು ನಿಲ್ಲುತ್ತಿದ್ದವು. ಆದರೆ ಎದುರು ಜನರಿದ್ದಾರೆ ಎಂಬ ನಾಚಿಕೆಯೂ ಇಲ್ಲದೆ ಅನೇಕರು ಮೂತ್ರ ವಿಸರ್ಜಿಸುತ್ತಿದ್ದರು. ಸ್ಟೀಲ್ ಮಿರರ್ ಅಳವಡಿಸಿರುವುದರಿಂದ ಈಗ ಅವರೆಲ್ಲಾ ಗೋಡೆ ಹತ್ತಿರ ಸುಳಿಯುತ್ತಿಲ್ಲ. ದೂರದೂರಿನಿಂದ ಬರುವ ಪ್ರಯಾಣಿಕರಿಗೂ ಮೈಸೂರಿನ ಸ್ವಚ್ಛತೆಯ ಬಗ್ಗೆ ಅಭಿಮಾನ ಮೂಡಲು ಇದು ಸಹಕಾರಿ' ಎಂದು ಟ್ಯಾಕ್ಸಿ ಚಾಲಕ ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

'20 ಹಳದಿ ಸ್ಥಳಗಳ ಗುರುತು'

'ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿರುವ ಸುಮಾರು 20 ಸ್ಥಳಗಳನ್ನು ಹಳದಿ ಸ್ಥಳ (ಎಲ್ಲೋ ಸ್ಪಾಟ್) ಎಂದು ಗುರುತಿಸಿದ್ದೇವೆ. ಆರಂಭಿಕವಾಗಿ ₹8 ಲಕ್ಷದಿಂದ ₹9 ಲಕ್ಷ ವೆಚ್ಚದಲ್ಲಿ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗ ಸ್ಟೀಲ್ ಮಿರರ್ ಅಳವಡಿಸಿದ್ದೇವೆ. ಈ ಯೋಜನೆ ಪರಿಣಾಮಕಾರಿಯಾದರೆ, ಕೆ.ಆರ್ ಆಸ್ಪತ್ರೆ ಹಿಂಭಾಗದ ಗೋಡೆ, ಪುಲಕೇಶಿ ರಸ್ತೆ, ಲ್ಯಾಂಡ್ ಸ್ಟೋನ್ ಕಟ್ಟಡದ ಗೋಡೆ ಮುಂತಾದ ಕಡೆಯೂ ಸ್ಟೀಲ್ ಮಿರರ್ ಅಳವಡಿಸಲಿದ್ದೇವೆ' ಎಂದು ವಾಣಿ ವಿಲಾಸ ನೀರು ಸರಬರಾಜು ವಿಭಾಗದ ಎಇಇ ಮಹಮ್ಮದ್ ಮುಸ್ತಾಫ ಎ.ಎಂ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

> **ಶೌಚಾಲಯ ಕಟ್ಟಿಸಿದರೂ ರಸ್ತೆ ಬದಿ ಮೂತ್ರ ವಿಸರ್ಜಿಸುವವರು ಕಡಿಮೆಯಾಗಿಲ್ಲ. ಹೀಗಾಗಿ ಸ್ಟೀಲ್ ಮಿರರ್ ಅಳವಡಿಸಲು ನಿರ್ಧರಿಸಲಾಯಿತು**
>
> **ಸಿ.ಎಸ್. ಮಂಜು,** ಪಾಲಿಕೆ ಉಪ ಆಯುಕ್ತರು (ಅಭಿವೃದ್ಧಿ)

ಖಾಸಗಿ ಬೀಜ ಕಂಪನಿಗಳಿಗೆ ರೈತರ ಸಡ್ಡು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬಹುರಾಷ್ಟ್ರೀಯ ಕಂಪನಿಗಳ ಬಿತ್ತನೆ ಬೀಜಗಳಿಗೆ ಸಡ್ಡು ಹೊಡೆದಿರುವ ರೈತರು, ತಲೆಮಾರುಗಳಿಂದ ಸಂರಕ್ಷಿಸಿಕೊಂಡು ಬಂದಿದ್ದ ಸಾಂಪ್ರದಾಯಿಕ ತಳಿಗಳ ಬೀಜಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡಲು ಸಿದ್ಧತೆ ನಡೆಸಿದ್ದಾರೆ.

ಬಹುರಾಷ್ಟ್ರೀಯ ಕಂಪನಿಗಳು, ಖಾಸಗಿ ಸಂಸ್ಥೆಗಳು ಅಭಿವೃದ್ಧಿಪಡಿಸಿದ ಬಿತ್ತನೆ ಬೀಜಗಳ ನಿರಂತರ ವೈಫಲ್ಯ, ಅವುಗಳು ಸ್ಥಳೀಯ ವಾತಾವರಣಕ್ಕೆ ಹೊಂದಿಕೊಳ್ಳದೆ ಪ್ರಕೃತಿ ವಿಕೋಪಕ್ಕೆ ಬಹುಬೇಗ ತುತ್ತಾಗುತ್ತಿದ್ದರಿಂದ, ಬೆಳೆ ಹಾಗೂ ಆರ್ಥಿಕ ನಷ್ಟವನ್ನು ಪದೇ ಪದೇ ಅನುಭವಿಸಬೇಕಾಗುತ್ತಿತ್ತು. ರೈತರ ನೆರವಿಗೆ ನಿಲ್ಲಲು ನಿರ್ಧರಿಸಿದ್ದ ಕೃಷಿ ಇಲಾಖೆ, ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮುಂದಾಗಿತ್ತು. ಸ್ಥಳೀಯ ವಾತಾವರಣಕ್ಕೆ ಹೊಂದಿಕೊಂಡು ಅಧಿಕ ಇಳುವರಿ ನೀಡುವ ದೇಸಿ ತಳಿಗಳ ಬೀಜಗಳನ್ನು ಸಂರಕ್ಷಿಸಿಕೊಂಡು ಬಂದಿದ್ದ ರಾಜ್ಯದ ರೈತರನ್ನು ಆಹ್ವಾನಿಸಿ, ಚರ್ಚಿಸಿತ್ತು.

▶11



> **ಪ್ರಗತಿಪರ ರೈತರನ್ನು ಭೇಟಿ ಮಾಡಿದಾಗ ದೇಸಿ ತಳಿಗಳನ್ನು ಸಂರಕ್ಷಣೆ ಮಾಡಿರುವುದು ಗೊತ್ತಾಯಿತು. ತಕ್ಷಣ ಅವುಗಳನ್ನು ಪ್ರಯೋಗಕ್ಕೆ ಒಳಪಡಿಸಲು ವಿಜ್ಞಾನಿಗಳಿಗೆ ಸೂಚಿಸಲಾಗಿತ್ತು. ಇಂತಹ ಪ್ರಯತ್ನ ದೇಶದಲ್ಲೇ ಮೊದಲು**
>
> **ಎನ್.ಚಲುವರಾಯಸ್ವಾಮಿ,** ಕೃಷಿ ಸಚಿವ

₹1.30 ಕೋಟಿ ಪ್ರೋತ್ಸಾಹ ಧನ

ಕಠಿಣ ಪ್ರಯೋಗಗಳ ಮೂಲಕ ರಾಜ್ಯದ ಕೃಷಿ ವಿಜ್ಞಾನಿಗಳು ಆಯ್ಕೆ ಮಾಡಿರುವ ಸ್ಥಳೀಯ ತಳಿಗಳ ಬೀಜಗಳು ಭಾರತದ ಕೃಷಿ ಪರಂಪರೆಯ ಪ್ರಮುಖ ಅಂಗವಾಗಿದ್ದು, ಇಂತಹ ತಳಿಗಳನ್ನು ತಲೆಮಾರುಗಳಿಂದ ಸಂರಕ್ಷಿಸಿಕೊಂಡು ಬಂದಿದ್ದ ರೈತರಿಗೆ ಕೃಷಿ ಇಲಾಖೆ ಮೊದಲ ಹಂತದಲ್ಲಿ ₹1.30 ಕೋಟಿ ಪ್ರೋತ್ಸಾಹಧನ ನೀಡಿ ಗೌರವಿಸಿದೆ.

ಉತ್ತರ ಕನ್ನಡ, ಬೆಳಗಾವಿ, ಬೀದರ್, ಮಂಡ್ಯ, ಶಿವಮೊಗ್ಗ, ಚಾಮರಾಜನಗರ ಜಿಲ್ಲೆಯ ರೈತರು ಸಂರಕ್ಷಿಸಿದ ಬಹುತೇಕ ತಳಿಗಳು ಹವಾಮಾನ ವೈಪರೀತ್ಯದಲ್ಲೂ ಅಧಿಕ ಉತ್ಪಾದನಾ ಸಾಮರ್ಥ್ಯ ಹೊಂದಿವೆ. ಇಂತಹ ತಳಿಗಳನ್ನು ರಾಜ್ಯದ ಕೃಷಿ ಕ್ಷೇತ್ರಕ್ಕೆ ನೀಡಿದ ಹಲವರಲ್ಲಿ ಮಂಡ್ಯದ ಸಯ್ಯದ್ ಘನಿ ಖಾನ್, ದಕ್ಷಿಣ ಕನ್ನಡದ ಬಿ.ಕೆ.ದೇವರಾವ್, ಬೆಳಗಾವಿಯ ಶಂಕರ ಲಂಗಟಿ, ಉತ್ತರ ಕನ್ನಡದ ರಾಮಕೃಷ್ಣ ಭಟ್ ಅವರು ಮುಂಚೂಣಿಯಲ್ಲಿದ್ದಾರೆ. ಪ್ರತಿಯೊಬ್ಬರು ₹3 ಲಕ್ಷದಿಂದ ಸುಮಾರು ₹10 ಲಕ್ಷದವರೆಗೂ ಬಹುಮಾನ ಪಡೆದಿದ್ದಾರೆ.

'ಯುದ್ಧಾಂತ್ಯ: ಶೀಘ್ರ ಅಂತಿಮ ಒಪ್ಪಂದ'

ವಾಷಿಂಗ್ಟನ್: 'ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಇರಾನ್ ಜತೆಗೆ ನಡೆಯುತ್ತಿರುವ ಮಾತುಕತೆಯಲ್ಲಿ ಮಹತ್ತರ ಪ್ರಗತಿ ಕಂಡುಬಂದಿದೆ' ಎಂದು ಪಾಕಿಸ್ತಾನ ಬುಧವಾರ ಹೇಳಿಕೊಂಡಿವೆ.

ವಿವರ ▶8

ಅಹಮದಾಬಾದ್‌ನಲ್ಲಿ ಐಪಿಎಲ್ ಫೈನಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯವನ್ನು ಬೆಂಗಳೂರಿನಿಂದ ಅಹಮದಾಬಾದ್‌ಗೆ ಸ್ಥಳಾಂತರಿಸಲಾಗಿದೆ.

ಈ ಸಲದ ಟೂರ್ನಿಯ ಆರಂಭಕ್ಕೂ ಮುನ್ನ ಬೆಂಗಳೂರಿನಲ್ಲಿಯೇ ಪ್ಲೇಆಫ್ ಪಂದ್ಯ ಮತ್ತು ಫೈನಲ್ ಆಯೋಜನೆಯಾಗಲಿವೆ ಎಂದು ಹೇಳಲಾಗಿತ್ತು. ಆದರೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಬುಧವಾರ ಪ್ಲೇ ಆಫ್ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಮೇ 26ರಂದು ಧರ್ಮಶಾಲಾದಲ್ಲಿ ಮೊದಲ ಕ್ವಾಲಿಫೈಯರ್, ಎಲಿಮಿನೇಟರ್ ಮತ್ತು ಎರಡನೇ ಕ್ವಾಲಿಫೈಯರ್ ಪಂದ್ಯಗಳು ನವ ಚಂಡೀಗಡದಲ್ಲಿ ಆಯೋಜನೆಗೊಳ್ಳಲಿವೆ. ಮೇ 31ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಫೈನಲ್ ನಡೆಯಲಿದೆ.

'ಫೈನಲ್ ಪಂದ್ಯದ ಆತಿಥ್ಯವನ್ನು ಬೆಂಗಳೂರಿಗೆ ನೀಡಲು ಈ ಮೊದಲು ಯೋಜಿಸಲಾಗಿತ್ತು. ಆದರೆ ಕಾರಣಾಂತರಗಳಿಂದ ಸ್ಥಳಾಂತರಿಸಲಾಗಿದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ತಿಳಿಸಿದೆ.

ಫೈನಲ್ ಆಯೋಜನೆ ಕೈತಪ್ಪಿರುವ ಕುರಿತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಬೇಸರ ವ್ಯಕ್ತಪಡಿಸಿದೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಗುಡುಗುಸಹಿತ ಮಳೆ ಬರುವ ಸಾಧ್ಯತೆ ಇದೆ

‘ಎಲ್‌ನಿನೋ ಎದುರಿಸಲು ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ನಿನೋ ಪ್ರಭಾವವನ್ನು ಸಮರ್ಥವಾಗಿ ಎದುರಿಸಲು ಈಗಿನಿಂದಲೇ ಸಜ್ಜಾಗಬೇಕಿದೆ. ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುವ ಕೆರೆಗಳು, ಪಿಕ್-ಅಪ್ ಡ್ಯಾಂಗಳು ಮತ್ತು ಕಿಂಡಿ ಅಣೆಕಟ್ಟೆಗಳಲ್ಲಿ ಸಂಗ್ರಹವಾಗಿರುವ ನೀರು ಸೋರಿಕೆ ಆಗದಂತೆ ಎಚ್ಚರವಹಿಸಬೇಕು ಎಂದು ಸಣ್ಣ ನೀರಾವರಿ ಸಚಿವ ಎನ್‌.ಎಸ್‌.ಬೋಸರಾಜು ಸೂಚನೆ ನೀಡಿದ್ದಾರೆ.

ಎಲ್‌ನಿನೋ 2026ರ ಕಾರಣದಿಂದ ರಾಜ್ಯದಲ್ಲಿ ಎದುರಾಗ ಬಹುದಾದ ಜಲ ಸಂಕಷ್ಟವನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಜಲಭದ್ರತೆಯನ್ನು ಖಚಿತಪಡಿಸಲು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಮ್ಮಿಕೊಂಡಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕೆರೆಗಳು, ಅಣೆಕಟ್ಟೆಗಳು, ಜಲಾಶಯಗಳ ನಿರ್ವಹಣೆಯ ಸಂಪೂರ್ಣ ಉಸ್ತುವಾರಿಯನ್ನು ಕಾರ್ಯಪಾಲಕ ಎಂಜಿನಿಯರ್‌ಗಳು ವಹಿಸಿಕೊಳ್ಳಬೇಕು ಎಂದು ಅವರು ಸೂಚನೆ ನೀಡಿದರು.

ಸಭೆಯಲ್ಲಿ ಐಐಎಸ್‌ಸಿ ವಿಜ್ಞಾನಿಗಳು, ಕೆಎಸ್‌ಆರ್‌ಎಸ್‌ಎಸಿ, ಕೆಎಸ್‌ಎನ್‌ಡಿಎಂಸಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಅಧಿಕಾರಿಗಳು, ತಜ್ಞರ ಜೊತೆಗೆ ಸಣ್ಣ ನೀರಾವರಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್‌ಗಳು ಭಾಗವಹಿಸಿದ್ದರು.

ಸಭೆಯಲ್ಲಿ ಭಾಗವಹಿಸಿದ್ದ ತಜ್ಞರು, ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಎ.ಐ ಆಧರಿತ ಸ್ಮಾರ್ಟ್ ಭದ್ರತೆ

ವಿಮಾನ ಸುರಕ್ಷತೆಗಾಗಿ ಎ.ಐ ತಂತ್ರಜ್ಞಾನ ● ದೋಷ, ಹಾರಾಟ ವಿಳಂಬಕ್ಕೆ ಪರಿಹಾರ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂ.ಗ್ರಾಮಾಂತರ): ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ(ಕೆಐಎ) ಪ್ರಯಾಣಿಕರು ಹಾಗೂ ವಿಮಾನಗಳ ಸುರಕ್ಷತೆ ದೃಷ್ಟಿಯಿಂದ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧರಿತ ‘ಸ್ಮಾರ್ಟ್ ಏರ್‌ಸೈಡ್ ಸೇಫ್ಟಿ ಸಿಸ್ಟಂ’ (ಎಸ್‌ಎಎಸ್‌ಎಸ್) ವಿನೂತನ ವ್ಯವಸ್ಥೆ ಅಳವಡಿಸಲಾಗಿದೆ.

ಕೆಐಎ

ಹೆಚ್ಚುತ್ತಿರುವ ವಿಮಾನ ದಟ್ಟಣೆ ಸಮಯದಲ್ಲಿ ಅಪಘಾತ ಸಾಧ್ಯತೆ ಕಡಿಮೆಗೊಳಿಸಲು ಎ.ಐ ಆಧರಿತ ಈ ವಿನೂತನ ವ್ಯವಸ್ಥೆ ಮಹತ್ವದ ಹೆಜ್ಜೆಯಾಗಿದೆ.

ವಿಮಾನ ನಿಲ್ದಾಣದ ಏರ್‌ಸೈಡ್ ಪ್ರದೇಶದ ‘ಕ್ರಾಸ್ ಸರ್ವಿಸ್ ರಸ್ತೆ’ಗಳಲ್ಲಿ ವಿಮಾನ ಮತ್ತು ಸಿಬ್ಬಂದಿ ವಾಹನಗಳು ಒಂದೇ ಸಮಯದಲ್ಲಿ ಸಂಚರಿಸುತ್ತವೆ. ಹಿಂದೆ ಇಲ್ಲಿ ವಿಮಾನ ಮತ್ತು ವಾಹನ ದಟ್ಟಣೆಯನ್ನು ಸಿಬ್ಬಂದಿಯೇ ನಿರ್ವಹಿಸುತ್ತಿದ್ದರು. ಇದರಿಂದ ಕೆಲವೊಮ್ಮೆ ಮಾನವ ಸಹಜ ದೋಷದಿಂದ ವಿಮಾನಗಳ ಹಾರಾಟದಲ್ಲಿ ವಿಳಂಬವಾಗುತ್ತಿತ್ತು. ಹೊಸ ವ್ಯವಸ್ಥೆಯಿಂದ ಈ ಸಮಸ್ಯೆ ಪರಿಹಾರ ಆಗಲಿದೆ.

4.18 ಕೋಟಿ ಪ್ರಯಾಣಿಕರಿಗೆ ಸೇವೆ

2024–25ನೇ ಸಾಲಿನಲ್ಲಿ ವಿಮಾನ ನಿಲ್ದಾಣ 4.18 ಕೋಟಿಗೂ ಹೆಚ್ಚು ಪ್ರಯಾಣಿಕರಿಗೆ ಸೇವೆ ನೀಡಿದೆ. ದಕ್ಷಿಣ ಭಾರತದಲ್ಲಿ ಈ ಸಾಧನೆ ಮಾಡಿದ ಮೊದಲ ನಿಲ್ದಾಣ ಎಂಬ ಹೆಗ್ಗಳಿಕೆಯನ್ನು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪಡೆದಿದೆ. ದೇಶದ ಮೂರನೇ ಅತಿ ದೊಡ್ಡ ವಿಮಾನ ನಿಲ್ದಾಣವಾಗಿರುವ ಕೆಐಎ ಇತ್ತೀಚೆಗೆ ‘ಎಸಿಐ 5-ಸ್ಟಾರ್ ಏರ್‌ಪೋರ್ಟ್ ರೇಟಿಂಗ್’ ಗಳಿಸಿದೆ.

ಎ.ಐ ಹೇಗೆ ಕೆಲಸ ಮಾಡುತ್ತದೆ?

ಸ್ಮಾರ್ಟ್ ಏರ್‌ಸೈಡ್ ಸೇಫ್ಟಿ ಸಿಸ್ಟಮ್‌ನಲ್ಲಿ ಅಳವಡಿಸಲಾದ ಸ್ಮಾರ್ಟ್ ಕ್ಯಾಮೆರಾಗಳು ವಾಹನಗಳ ಚಲನೆಯನ್ನು ನಿಖರವಾಗಿ ಗಮನಿಸುತ್ತವೆ. ಯಾವುದೇ ಅಪಾಯದ ಸ್ಥಿತಿ ಕಂಡುಬಂದರೆ ತಕ್ಷಣ ಎಚ್ಚರಿಕೆ ನೀಡುತ್ತವೆ. ದಟ್ಟಣೆ ನಿಯಮ ಉಲ್ಲಂಘನೆ ನಡೆದರೆ ಕೂಡಲೇ ಅಧಿಕಾರಿಗಳಿಗೆ ಮಾಹಿತಿ ತಲುಪುತ್ತದೆ.

ಈ ಎಲ್ಲಾ ಮಾಹಿತಿ ಡಿಜಿಟಲ್ ರೂಪದಲ್ಲಿ ದಾಖಲಾಗುವುದರಿಂದ ಪಾರದರ್ಶಕತೆ ಹಾಗೂ ಕಾರ್ಯಕ್ಷಮತೆ ಹೆಚ್ಚಲಿದೆ. ಕತ್ತಲು ಅಥವಾ ಮಂಜು ಮುಸುಕಿದ ಸಂದರ್ಭಗಳಲ್ಲಿಯೂ ಈ ತಂತ್ರಜ್ಞಾನವು ಪರಿಣಾಮ ಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ವಿಮಾನ ಮತ್ತು ವಾಹನಗಳ ನಡುವೆ ಸುರಕ್ಷಿತ ಅಂತರವನ್ನು ಕಾಪಾಡುವ ಮೂಲಕ ಇದು ಮಾನವ ಸಹಜ ತಪ್ಪು ಗಳನ್ನು ತಡೆಯುತ್ತದೆ. ಇದರಿಂದ ವಿಮಾನ ಮತ್ತು ವಾಹನ ದಟ್ಟಣೆ ತಪ್ಪುತ್ತದೆ. ವಿಮಾನಗಳು ಸಮಯಕ್ಕೆ ಸರಿಯಾಗಿ ಹಾರಾಟ ನಡೆಸಲು ಸಹಾಯವಾಗಲಿದೆ.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏರ್‌ಸೈಡ್ ಪ್ರದೇಶದಲ್ಲಿ ವಾಹನ ಮತ್ತು ವಿಮಾನಗಳ ಸಂಚಾರವನ್ನು ನಿಯಂತ್ರಿಸುವ ಎ.ಐ ಆಧರಿತ ಸ್ಮಾರ್ಟ್ ಭದ್ರತಾ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿರುವ ದೃಶ್ಯ

ಸಾಂಸ್ಕೃತಿಕ ಮುನ್ನೋಟ

ಮಕ್ಕಳ ರಂಗ ಹಬ್ಬ ನಾಳೆಯಿಂದ



‘ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ’ ನಾಟಕ ದೃಶ್ಯ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಇದೇ 8ರಂದು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಮಕ್ಕಳ ರಂಗ ಹಬ್ಬವನ್ನು ಹಮ್ಮಿಕೊಂಡಿದೆ.

ಬೆಳಿಗ್ಗೆ 10.30ಕ್ಕೆ ಈ ರಂಗ ಹಬ್ಬಕ್ಕೆ ಚಾಲನೆ ದೊರೆಯಲಿದೆ. ಬೆಳಿಗ್ಗೆಯಿಂದ ರಾತ್ರಿವರೆಗೆ 10 ನಾಟಕಗಳು ಪ್ರದರ್ಶನ ಕಾಣಲಿವೆ. ಹನುಮಾಯನ, ಗೊಂಬೆ ರಾವಣ, ರಾತ್ರಿಯ ಗುಮ್ಮ, ಅಜ್ಜನ ಹೆಜ್ಜೆ ಜಾಡು, ತಿರುಕನ ಕನಸು, ಚಿಕ್ ಮಾರಿ ದೊಡ್ ಮಾರಿ, ಹಕ್ಕಿ ಹಾಡು, ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ, ಸವಣ್ಯಾಚಿ ಗಾಣಿ ಮತ್ತು ಸತ್ಯವಂತ ನಾಟಕಗಳನ್ನು ಮಕ್ಕಳು ಪ್ರದರ್ಶಿಸಲಿದ್ದಾರೆ.

ವಾದ್ಯ ಗಾನ ಸಂಭ್ರಮ

ಬೆಂಗಳೂರು: ಸಂಭ್ರಮ ಹವ್ಯಾಸಿ ಕಲಾ ಬಳಗವು ಇದೇ 10ರಂದು ಸಂಜೆ 5.30ಕ್ಕೆ ಸಜ್ಜನರಾವ್ ವೃತ್ತದ ಬಳಿಯಿರುವ ವಾಸವಿ ಹಾಸ್ಟೆಲ್ ಕಟ್ಟಡದಲ್ಲಿರುವ ಮಾನಂದಿ ಸಭಾಂಗಣದಲ್ಲಿ ವಾದ್ಯ ಗಾನ ಸಂಭ್ರಮ ಹಮ್ಮಿಕೊಂಡಿದೆ.

ಸತೀಶ್ ಹಂಪಿಹೊಳಿ ಅವರ ಪರಿಕಲ್ಪನೆ ಮತ್ತು ನಿರ್ದೇಶನದಲ್ಲಿ ಈ ಕಾರ್ಯಕ್ರಮ ಮೂಡಿಬರಲಿದೆ. ಬಾಲಾಜಿ, ಸಂಜೀವ್ ಕೊರ್ತಿ, ಎಂ.ಎನ್. ಸತ್ಯನಾರಾಯಣ, ಶ್ರೀನಿವಾಸ್ ಅನಂತರಾಮಯ್ಯ, ಶಿವಕುಮಾರ್ ಮಹಾಂತ್, ಗುರುರಾಜ ಹೊಳೆನರಸೀಪುರ, ಸ್ರೋತಸ್ವಿನಿ ಡಬೀರ್, ದೀಪಿಕಾ ಎಂ. ನಾಗರಾಜ್, ಸುತೇಜ್ ಆರ್. ಹರಿತ್ಸ, ರೋಹನ್ ಕುಮಾರ್, ಸುಹಾಸ್ ಎಸ್. ರಾವ್, ಸುಮೇಧ್ ಕಡೇಕಾರ್ ಪಾಲ್ಗೊಳ್ಳಲಿದ್ದಾರೆ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ನಿಧನ ವಾರ್ತೆ

ತಾಯಮ್ಮ



ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಎಚ್‌.ಡಿ.ರಮೇಶ್ ಅವರ ತಾಯಿ, ತುಂಗಾನಗರದ ನಿವಾಸಿ ತಾಯಮ್ಮ (69) ಅವರು ಬುಧವಾರ ಬೆಳಿಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರು ಪತಿ, ಇಬ್ಬರು ಪುತ್ರರು ಮತ್ತು ಕುಟುಂಬದವರನ್ನು ಅಗಲಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಹಾರೋಕೊಪ್ಪ ಗ್ರಾಮದಲ್ಲಿ ಬುಧವಾರ ಅಂತ್ಯ ಕ್ರಿಯೆ ನೆರವೇರಿತು.

ನೇಮಕಾತಿ ಪತ್ರ ವಿತರಣೆ

ಬೆಂಗಳೂರು: ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಉದ್ಯೋಗ ತರಬೇತಿ ಮತ್ತು ನಿಯುಕ್ತಿ ಕೇಂದ್ರದ ವತಿಯಿಂದ ಅರ್ಹ ಅಭ್ಯರ್ಥಿಗಳಿಗೆ ಏಜೈಲ್ ರೋಬೋಸ್ ಕಂಪನಿಯ ನೇಮಕಾತಿ ಪತ್ರವನ್ನು ವಿತರಿಸಲಾಯಿತು.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ನೂತನ ಶೈಕ್ಷಣಿಕ ವಿಭಾಗದಲ್ಲಿ ನಡೆದ ಸಮಾರಂಭದಲ್ಲಿ ಆಯ್ಕೆಯಾದ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳ ಒಟ್ಟು 45 ಅಭ್ಯರ್ಥಿಗಳ ಪೈಕಿ 34 ಮಂದಿ ಆದೇಶ ಪ್ರತಿಗಳನ್ನು ಸ್ವೀಕರಿಸಿದರು.

ಕುಲಪತಿ ಬಿ. ರಮೇಶ್ ಅವರು ಮಾತನಾಡಿ, ‘ಉತ್ತಮ ಶೈಕ್ಷಣಿಕ ಸಾಧನೆಯ ಮೂಲಕ ವೈಯಕ್ತಿಕ ಬದುಕಿನ ಭವಿಷ್ಯ ರೂಪಿಸಿಕೊಳ್ಳುವ ಜೊತೆಗೆ ಸಮಾಜದ ಸರ್ವತೋಮುಖ ಪ್ರಗತಿಗೆ ನೆರವಾಗಬೇಕು’ ಎಂದು ಹೇಳಿದರು.

ವಿಶ್ವವಿದ್ಯಾಲಯದ ಪ್ರಸಾರಾಂಗ ನಿರ್ದೇಶಕ ಪ್ರೊ.ಟಿ.ಎನ್. ತಾಂಡವಗೌಡ, ಕೌಶಲ ಅಭಿವೃದ್ಧಿ ಕೇಂದ್ರದ ನಿರ್ದೇಶಕರಾದ ಪ್ರೊ.ರಿತಿಕಾ ಸಿನ್ಹಾ, ಎತ್ನಸ್ ಟೆಕ್ನಾಲಜೀಸ್ ಸಿಇಒ ಬದರಿನಾಥ್, ನಿಯುಕ್ತಿ ಕೇಂದ್ರದ ಅಧಿಕಾರಿಗಳಾದ ನಬಿ.ಎ. ಹಾಗೂ ಹರ್ಷ ಉಪಸ್ಥಿತರಿದ್ದರು.

2ನೇ ದಿನವೂ ಚಾಲಕರ ಸಂಕಟ

ಪೀಣ್ಯ ಮೇಲ್ಸೇತುವೆ ಬಂದ್: ವಾಹನ ಸಂಚಾರ ಸಮಸ್ಯೆ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ-4ರ ‘ಪೀಣ್ಯ ಮೇಲ್ಸೇತುವೆ’ಗೆ ಹೊಸದಾಗಿ ಅಳವಡಿಸಿರುವ ಕೇಬಲ್‌ಗಳ ಸಾಮರ್ಥ್ಯ ಪರೀಕ್ಷೆಗೆಂದು ಮೇಲ್ಸೇತುವೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದ್ದು, ಎರಡನೇ ದಿನ ಬುಧವಾರವೂ ಚಾಲಕರು ಪರದಾಡಿದರು.

ಮೇ 8ರ ಬೆಳಿಗ್ಗೆ 11ರವರೆಗೂ ಕೆನ್ನಮೆಟಲ್ ವಿಡಿಯಾದ ಅಪ್ಪರ್ ರ‍್ಯಾಂಪ್‌ನಿಂದ ಎಸ್‌ಆರ್‌ಎಸ್ ಡೌನ್ ರ‍್ಯಾಂಪ್‌ವರೆಗೆ ಎರಡೂ ಕಡೆಯಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದ್ದು, ಬುಧವಾರ ಸಹ ಕೆಳರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ದಟ್ಟಣೆಯಲ್ಲಿ ಆಂಬುಲೆನ್ಸ್‌ಗಳು ಸಿಲುಕಿ ಮುಂದಕ್ಕೆ ಸಾಗಲು ಸಾಧ್ಯವಾಗದೇ ರೋಗಿಗಳು ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.



ಮೇಲ್ಸೇತುವೆ ಬಂದ್ ಆಗಿರುವ ಕಾರಣ ರಾಷ್ಟ್ರೀಯ ಹೆದ್ದಾರಿ–4ರಲ್ಲಿ ವಾಹನ ದಟ್ಟಣೆ

ಯಶವಂತಪುರ ರೈಲು ನಿಲ್ದಾಣದ ಬಳಿ, ಗೊರಗುಂಟೆಪಾಳ್ಯ, ಪೀಣ್ಯ, ಜಾಲಹಳ್ಳಿ ಕ್ರಾಸ್, ಎಂಟನೇ ಮೈಲಿ, ನಾಗಸಂದ್ರ ಹಾಗೂ ಮಂಜುನಾಥ್ ನಗರ ಮೆಟ್ರೊ ನಿಲ್ದಾಣದ ಟೋಲ್ ಬಳಿ ವಾಹನಗಳು ಮುಂದಕ್ಕೆ ಸಾಗಲು ಸಾಧ್ಯವಾಗದೇ ಸಾಲುಗಟ್ಟಿ ನಿಂತಿದ್ದವು.

ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿತ್ತು. ಹೆಸರಘಟ್ಟ ರಸ್ತೆಯ ಮೂಲಕ ವಾಹನಗಳು ಪೈಪ್‌ಲೈನ್ ರಸ್ತೆಗೆ ಬಂದು ಅಲ್ಲಿಂದ ಗಂಗಮ್ಮನಗುಡಿ, ಬಿಇಎಲ್ ವೃತ್ತದ ಮೂಲಕ ನಗರ ಪ್ರವೇಶಿಸುತ್ತಿದ್ದವು. ಅಲ್ಲಿಯೂ ಬೆಳಿಗ್ಗೆ ಹಾಗೂ ಸಂಜೆ ವಿಪರೀತ ದಟ್ಟಣೆ ಉಂಟಾಗಿ ದ್ವಿಚಕ್ರ ವಾಹನಗಳ ಸವಾರರು ಹಾಗೂ ವಾಹನಗಳ ಚಾಲಕರು ತೊಂದರೆ ಅನುಭವಿಸಿದರು.

ಅಗೆದ ರಸ್ತೆ: ಸವಾರರು ಹೈರಾಣ

● ರಂಗಸ್ವಾಮಿ ಕೆ.ಸಿ.

ಕೆಂಗೇರಿ: ಒಳಚರಂಡಿ ಪೈಪ್‌ಲೈನ್ ಕಾಮಗಾರಿಗೆ ಅಗೆದ ರಸ್ತೆಗಳನ್ನು ಸರಿಯಾಗಿ ಮುಚ್ಚದೆ ಹಾಗೆಯೇ ಬಿಟ್ಟಿರುವುದರಿಂದ ಹಲವೆಡೆ ಗುಂಡಿಗಳು ನಿರ್ಮಾಣವಾಗಿ ವಾಹನ ಸವಾರರು ಹಾಗೂ ಪಾದಚಾರಿಗಳು ಜೀವ ಕೈಯಲ್ಲಿ ಹಿಡಿದುಕೊಂಡು ಸಂಚರಿಸುವಂತಾಗಿದೆ.

ಕೆಂಗೇರಿ ಉಪನಗರ ಬಳಿಯ ರಾಬಿನ್ ಟಾಕೀಸ್ ಸರ್ಕಲ್‌ನಿಂದ ಬಂಡೇಮಠ ಕಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಬೆಂಗಳೂರು ಜಲಮಂಡಳಿ ನಡೆಸಿದ ಕಾಮಗಾರಿ ಮುಗಿದು ಹಲವು ದಿನಗಳು ಕಳೆದಿವೆ. ಆದರೆ, ಇದುವರೆಗೂ ಡಾಂಬರೀಕರಣ ಮಾಡದೇ ಇರುವುದರಿಂದ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ.

ಗುಂಡಿಗಳಲ್ಲಿ ಮಳೆ ನೀರು ತುಂಬಿಕೊಂಡು ವಾಹನ ಸವಾರರಿಗೆ ಗುಂಡಿ ಕಾಣದೇ ಅಪಘಾತಗಳು ಆಗುತ್ತಿವೆ. ಗುಂಡಿಗಳಿಂದ ವಾಹನ ಸಂಚಾರ ನಿಧಾನಗೊಂಡು ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ಒಣಗಿದಾಗ ದೂಳು, ಮಳೆ ಬಂದರೆ ಕೆಸರುಮಯವಾಗುವುದರಿಂದ ಸ್ಥಳೀಯ ನಿವಾಸಿಗಳು, ವ್ಯಾಪಾರಸ್ಥರು ಹೈರಾಣಾಗಿದ್ದಾರೆ.

ರಾಮೋಹಳ್ಳಿ ರೈಲ್ವೆ ಅಂಡರ್ ಪಾಸ್ ಕಾಮಗಾರಿ ಚಾಲನೆಯಲ್ಲಿದ್ದು, ರಾಮೋಹಳ್ಳಿ, ಚಂದ್ರಪ್ಪ ಸರ್ಕಲ್ ಸೇರಿದಂತೆ ಇನ್ನಿತರೆ ಗ್ರಾಮಗಳನ್ನು ತಲುಪಲು ಭಾರಿ ಗಾತ್ರದ ವಾಹನಗಳು ಸೇರಿದಂತೆ ಸಾವಿರಾರು ವಾಹನಗಳು ಇದೇ ಮಾರ್ಗದಲ್ಲಿ ಸಂಚರಿಸುತ್ತವೆ. ಹೀಗಾಗಿ ರಸ್ತೆಗಳು ಮತ್ತಷ್ಟು ಹದಗೆಟ್ಟು, ಜೀವಕ್ಕೆ ಸಂಚಕಾರ ತಂದೊಡ್ಡುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.



ಕೆಂಗೇರಿ ಉಪ ನಗರದಿಂದ ಬಂಡೇಮಠ ಕಡೆಗೆ ಹೋಗುವ ಮುಖ್ಯ ರಸ್ತೆಯನ್ನು ಅಗೆದು ಹಾಕಲಾಗಿದೆ



ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಿ ಕಾಮಗಾರಿ ನಡೆಸುವಂತೆ ಅಧಿಕಾರಿಗಳಿಗೆ ಎಸ್‌. ಮುನಿರಾಜು ಸೂಚಿಸಿದರು

ರಾಜಕಾಲುವೆ ಅಭಿವೃದ್ಧಿಗೆ ₹170 ಕೋಟಿ ಅನುದಾನ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ದಾಸರಹಳ್ಳಿ ಕ್ಷೇತ್ರದ ರಾಜಕಾಲುವೆಗಳ ಕಾಮಗಾರಿ ಅಭಿವೃದ್ಧಿಗೆ ಸರ್ಕಾರ ₹170 ಕೋಟಿ ಅನುದಾನ ನೀಡಿದೆ’ ಎಂದು ಶಾಸಕ ಎಸ್‌.ಮುನಿರಾಜು ತಿಳಿಸಿದರು.

ಡಿಫೆನ್ಸ್ ಕಾಲೊನಿ, ಕಾವೇರಿ ಬಡಾವಣೆ ಮತ್ತು ಧನಪಾಲ್ ಲೇಔಟ್ ಹತ್ತಿರದ ರಾಜಕಾಲುವೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ರಾಜಕಾಲುವೆಗಳ ತಡೆಗೋಡೆ ನಿರ್ಮಾಣ, ಅದರ ಮೇಲೆ ಫೆನ್ಸಿಂಗ್, ಒತ್ತುವರಿ ತೆರವುಗಳ ಕಾರ್ಯ ನಡೆಯಲಿದೆ. ರಾಜಕಾಲುವೆಗಳಿಗೆ ಯಾರೂ ಕಸ ಹಾಕದಂತೆ ನಿರ್ಮಾಣ ಮಾಡಿ ನೀರು ಸರಾಗವಾಗಿ ಹರಿಯುವಂತೆ ಗುಣಮಟ್ಟದ ಅಭಿವೃದ್ಧಿ ಕಾರ್ಯ ನಡೆಯಲಿದೆ’ ಎಂದು ತಿಳಿಸಿದರು.

‘ತಂತ್ರಜ್ಞಾನದಿಂದ ವೈದ್ಯಕೀಯ ಕ್ಷೇತ್ರದಲ್ಲಿ ಬದಲಾವಣೆ’

ಬೆಂಗಳೂರು: ‘ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಕ್ರಾಂತಿಕಾರಿ ಬದಲಾವಣೆ ತರುತ್ತಿದ್ದು, ರೋಗ ನಿರ್ಣಯದ ಜತೆಗೆ, ಚಿಕಿತ್ಸೆ ಮತ್ತು ರೋಗಿಗಳ ಆರೈಕೆಗೆ ತಂತ್ರಜ್ಞಾನ ಸಹಕಾರಿಯಾಗಿದೆ’ ಎಂದು ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ.ಬಿ.ಎಲ್. ಸುಜಾತಾ ರಾಥೋಡ್ ಅಭಿಪ್ರಾಯಪಟ್ಟರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಶುಶ್ರೂಷ ಕಾಲೇಜು ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

‘ಹೆಚ್ಚು ಪರಿಣಾಮಕಾರಿ ಚಿಕಿತ್ಸೆಗೆ ಎಐ ನೆರವಾಗುತ್ತಿದೆ. ಈ ಬದಲಾವಣೆಗೆ ಅನುಗುಣವಾಗಿ ತಾಂತ್ರಿಕ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕಿದೆ’ ಎಂದರು. ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ನಿರ್ದೇಶಕ ಡಾ. ಮದನ್ ಬಲ್ಲಾಳ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಟಿ. ನವೀನ್ ಮಾತನಾಡಿದರು.





‘ಮೂರೂ ಪಕ್ಷಗಳಿಂದ ಜನ ನೊಂದಿದ್ದಾರೆ’

ಪ್ರಜಾವಾಣಿ ವಾರ್ತೆ


ದುನಿಯಾ ವಿಜಯ್

ಬೆಂಗಳೂರು: ‘ರಾಜ್ಯದಲ್ಲಿ ಮೂರೂ ಪಕ್ಷಗಳಿಂದ ಜನ ನೊಂದಿದ್ದಾರೆ. ಈ ನೊಂದಿರುವವರು ಒಂದು ದಿನ ಗುಂಪಾದರೆ ಬದಲಾವಣೆ ಕೇಳುತ್ತಾರೆ. ತಮಿಳುನಾಡಿನಂತೆ ಒಂದು ದಿನ ಕರ್ನಾಟಕದಲ್ಲೂ ಆಗುತ್ತದೆ’ ಎಂದು ನಟ ದುನಿಯಾ ವಿಜಯ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತಮಿಳುನಾಡಿನಲ್ಲಿ ನಟ ವಿಜಯ್ ಗೆಲುವಿನ ಕುರಿತಂತೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕರ್ನಾಟಕದಲ್ಲಿ ಸ್ಟಾರ್ ಶಕ್ತಿಯೊಂದು ರಾಜಕೀಯ ಶಕ್ತಿಯಾಗಿ ಬೆಳೆಯುವುದು ಕಷ್ಟವಿದೆ. ತಮಿಳುನಾಡಿನಲ್ಲಿ ಬದಲಾವಣೆ ಬೇಕು ಎಂಬ ನಿರ್ಧಾರ ಮಾಡಬೇಕಾಗಿ ಬಂದಿತ್ತು. ನನಗೊಬ್ಬ ಹೊಸ ನಾಯಕ ಬೇಕು ಎಂಬ ಕ್ರಾಂತಿ ಅಲ್ಲಿ ಕಂಡಿದೆ’ ಎಂದರು.

‘ವೈಯಕ್ತಿಕವಾಗಿ ಕರ್ನಾಟಕದಲ್ಲೂ ಬದಲಾವಣೆ ಬೇಕು ಎಂದೆನಿಸಿದೆ. ಮೂರೂ ಪಕ್ಷಗಳು ಇಲ್ಲಿಯವರೆಗೆ ಮಾಡಿದ ಕೆಲಸಗಳಲ್ಲಿ ನನಗೆ ಕೆಲವು ಅಸಮಾಧಾನಗಳಿವೆ. ಇಂತಹವರಿಗೆ ಇರುವ ಒಂದೇ ದಾರಿ ಮತದಾನ. ಗುಡ್ಡಗಾಡು ಪ್ರದೇಶದಲ್ಲಿರುವ ವ್ಯಕ್ತಿಯಿಂದ ಹಿಡಿದು ಬೆಂಗಳೂರಿನಲ್ಲಿರುವವರಿಗೂ ಸಿಗಬೇಕಾದ ಎಲ್ಲಾ ಸೌಲಭ್ಯ ಸಿಗಬೇಕು. ಬದಲಾವಣೆ ಬೇಕು ಎಂದಾಗ ಜೆನ್‌–ಜಿಗಳೇ ಮುಖ್ಯ ಆಧಾರಸ್ತಂಭ’ ಎಂದು ಹೇಳಿದರು.

ರಾಷ್ಟ್ರೀಯ ಕಲಾ ಮೇಳಕ್ಕೆ ಚಾಲನೆ

ಕರ್ನಾಟಕ ಚಿತ್ರಕಲಾ ಪರಿಷತ್‌ನಿಂದ ಆಯೋಜನೆ
ದೇಶದ ವಿವಿಧ ಭಾಗಗಳ ಪ್ರಮುಖ ಕಲಾವಿದರು ಭಾಗಿ

ಪ್ರಮುಖ ಅಂಶಗಳು
- ಮೇಳದಲ್ಲಿ 76 ಮಳಿಗೆಗಳಲ್ಲಿ ಪ್ರದರ್ಶನ, ಮಾರಾಟ
- ಕಲಾಕೃತಿಗಳಿಗೆ ₹5 ಸಾವಿರದಿಂದ ₹2 ಲಕ್ಷದವರೆಗೂ ದರ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ ಆಯೋಜಿಸಿರುವ ಐದು ದಿನಗಳ 2ನೇ ಆವೃತ್ತಿಯ ನಮ್ಮ ಆರ್ಟ್ ಬೆಂಗಳೂರು ರಾಷ್ಟ್ರೀಯ ಕಲಾ ಮೇಳಕ್ಕೆ ಬುಧವಾರ ಚಾಲನೆ ದೊರೆಯಿತು.

ಕಿರ್ಲೋಸ್ಕರ್ ಸಿಸ್ಟಮ್ಸ್ ಪ್ರೈವೆಟ್ ಲಿಮಿಟೆಡ್ ಅಧ್ಯಕ್ಷೆ ಗೀತಾಂಜಲಿ ವಿಕ್ರಂ ಕಿರ್ಲೋಸ್ಕರ್ ಅವರು ಮೇಳವನ್ನು ಉದ್ಘಾಟಿಸಿ ಮಾತನಾಡಿ, ‘ಕಲಾವಿದರಿಗೆ ಸಮಾಜದ ಬೆಂಬಲ ಹೆಚ್ಚು ಬೇಕು. ಇದೇ ನಿಟ್ಟಿನಲ್ಲಿ ಚಿತ್ರಕಲಾ ಪರಿಷತ್ ಕಲಾವಿದರನ್ನು ಪ್ರೋತ್ಸಾಹಿಸುವ ಚಿತ್ರಸಂತೆ, ಮೇಳ, ಪ್ರದರ್ಶನ ನಿರಂತರವಾಗಿ ಆಯೋಜಿಸುತ್ತಿರುವುದು ಶ್ಲಾಘನೀಯ’ ಎಂದು ತಿಳಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್ ಮಾತನಾಡಿ, ‘ಪರಿಷತ್ ನಿರಂತರ ಚಟುವಟಿಕೆಗಳನ್ನು ಆಯೋಜಿಸುತ್ತಾ ಬರುತ್ತಿದ್ದು, ರಾಷ್ಟ್ರೀಯ ಕಲಾ ಮೇಳವನ್ನು ಎರಡನೇ ಬಾರಿಗೆ ರೂಪಿಸಿದೆ. ರಾಜರಾಜೇಶ್ವರಿ ನಗರದಲ್ಲಿ ಚಿತ್ರಕಲಾ ಪರಿಷತ್ ಅನ್ನು ವಿಶಾಲವಾಗಿ ರೂಪಿಸಿ ಅಲ್ಲಿ ಕೋರ್ಸ್ ಆರಂಭಿಸಲಾಗಿದೆ. ಸಂಜೆ ಕೋರ್ಸ್‌ಗೂ ಬೇಡಿಕೆಯಿದೆ’ ಎಂದು ತಿಳಿಸಿದರು.

ಚೆನ್ನೈನ ಕಲಾ ಇತಿಹಾಸಕಾರ ಅಶ್ರಫಿ ಭಗತ್, ಮುಂಬೈನ ಲುಮಿನಾ ಲರ್ನಿಂಗ್ ಸಂಸ್ಥೆಯ ರಾಹುಲ್ ಬಸ್ವಾನಿ ಉಪಸ್ಥಿತರಿದ್ದರು.



ಬೆಂಗಳೂರು ರಾಷ್ಟ್ರೀಯ ಕಲಾ ಮೇಳವನ್ನು ಗೀತಾಂಜಲಿ ವಿಕ್ರಮ್ ಕಿರ್ಲೋಸ್ಕರ್ ಉದ್ಘಾಟಿಸಿ ವೀಕ್ಷಣೆ ಮಾಡಿದರು. ಕೆ.ಜಿ.ರಾಘವನ್, ಬಿ.ಎಲ್. ಶಂಕರ್, ಶಶಿಧರ ರಾವ್ ಉಪಸ್ಥಿತರಿದ್ದರು (ಎಡಚಿತ್ರ) ರಾಷ್ಟ್ರೀಯ ಕಲಾ ಮೇಳವನ್ನು ಯುವಕ, ಯುವತಿಯರು ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ಪ್ರಮುಖ ಕಲಾವಿದರು ಭಾಗಿ: ಐದು ದಿನದ ರಾಷ್ಟ್ರೀಯ ಕಲಾಮೇಳದಲ್ಲಿ ದೇಶದ ಪ್ರಮುಖ ಕಲಾವಿದರೂ ಭಾಗಿಯಾಗಿದ್ದಾರೆ. ತಮಿಳುನಾಡು ಕುಂಭಕೋಣಂನ ಮನೋಹರನ್, ಸೇಲಂನ ಮೇಯಪ್ಪನ್, ಮಹಾರಾಷ್ಟ್ರದ ಸಂಜೀವ್ ಸಂಕಾಲ್, ಪಶ್ಚಿಮ ಬಂಗಾಳದ ಗೋಪಾಲ್ ನಾಸ್ಕರ್, ಸ್ವಪನ್ ರಾಯ್, ರಂಜಿತ್ ಸರ್ಕಾರ್ ತಮ್ಮ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇರಿಸಿದ್ದಾರೆ.

ಹಾವೇರಿಯ ಕರಿಯಪ್ಪ ಹಂಚಿನಮನಿ, ಮೈಸೂರಿನ ಕೆ.ಸಿ.ಮಹದೇವಶೆಟ್ಟಿ, ಧಾರವಾಡದ ರೇಣುಕಾ ಮಾರ್ಕಂಡೆ, ಚಿತ್ರದುರ್ಗ ವೀರೇಶ್ ಪಾಟೀಲ, ಬೆಂಗಳೂರಿನ ನವೀನ್ ಕುಶ್ವಾಹ, ಮೀನಾ ಗಣೇಶ್, ರೇಣುಕಾ ನಾಗರಾಜ್, ಪ್ರೀತಿ ಗಂಗಾತ್ರ, ಬೆಳಗಾವಿಯ ಬಾಲು ಸದಲಗೆ, ಉಡುಪಿಯ ಕಮಲ್ ಸಹಿತ ಹಲವರು ಭಾಗಿಯಾಗಿದ್ದಾರೆ. ಮೈಸೂರು ಶೈಲಿ ಕಲಾಕೃತಿಗಳು, ತಾವು ಕಂಡ ಪ್ರಕೃತಿ, ಗ್ರಾಮೀಣ ಜೀವನ, ಸಂಗೀತ ಲೋಕ, ತಮ್ಮೊಳಗಿನ ಭಾವನೆಗೆ ಕಲಾವಿದರು ಅಭಿವ್ಯಕ್ತಿ ನೀಡುವ ಪ್ರಯತ್ನ ಮಾಡಿದ್ದಾರೆ.

ಮಾರಾಟಕ್ಕೂ ಅವಕಾಶ: ಮೇಳದಲ್ಲಿ 76 ಮಳಿಗೆಗಳಿದ್ದು, ಒಂದೊಂದು ಕಡೆ 10ರಿಂದ 15 ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ಮಾರಾಟಕ್ಕೂ ಅವಕಾಶವಿದ್ದು, ₹5 ಸಾವಿರದಿಂದ ₹2 ಲಕ್ಷದವರೆಗೂ ದರ ನಿಗದಿಪಡಿಸಲಾಗಿದೆ. ವಿಭಿನ್ನ ಕಲಾಕೃತಿಗಳನ್ನು ವೀಕ್ಷಿಸಿದ ಕೆಲವರು ಖರೀದಿಯನ್ನು ಮಾಡಿದರು.

‘ಹಿಂದಿನ ಆವೃತ್ತಿಯ ಕಲಾ ಮೇಳದಲ್ಲಿ ಭಾಗಿಯಾಗಿದ್ದಾಗ ಒಳ್ಳೆಯ ಬೆಲೆಗೆ ಕಲಾಕೃತಿಗಳು ಮಾರಾಟವಾಗಿದ್ದವು. ಈ ಬಾರಿ ರಾಧಾಕೃಷ್ಣ, ಪ್ರಕೃತಿ ಮೇಲೆ ಹಲವು ಚಿತ್ರ ರಚಿಸಿದ್ದೇನೆ. ಈ ಬಾರಿಯೂ ಸ್ಪಂದನ ಚೆನ್ನಾಗಿದೆ ಎಂದು ಕೋಲ್ಕತ್ತದ ಗೋಪಾಲ ನಾಸ್ಕರ್ ತಿಳಿಸಿದರು.

ವಿಶಾಲ ಪ್ರದರ್ಶನ, ಮಳಿಗೆ ಕಡಿತ

ಕಳೆದ ಬಾರಿ ಮೇಳದಲ್ಲಿ 110 ಮಳಿಗೆಗಳನ್ನು ರೂಪಿಸಲಾಗಿತ್ತು. ಈ ಬಾರಿ ಮಳೆ ಕಾರಣದಿಂದ ಈ ಸಂಖ್ಯೆಯನ್ನು 76ಕ್ಕೆ ಇಳಿಸಲಾಗಿದೆ. ಆದರೆ, ಚಿತ್ರಕಲಾ ಪರಿಷತ್‌ನ ಒಂದು ಭಾಗದಲ್ಲಿ ಖಾಲಿಯಿದ್ದ ಜಾಗವನ್ನು ಬಳಸಿಕೊಂಡು ಅಲ್ಲಿಯೂ ಮಳಿಗೆ ರೂಪಿಸಿರುವುದರಿಂದ ಮೇಳ ವಿಶಾಲ ರೂಪ ಪಡೆದುಕೊಂಡಿದೆ. ಕಲಾಪ್ರಿಯರು ಮುಕ್ತ ವಾತಾವರಣದಲ್ಲಿ ಕಲಾಕೃತಿ ವೀಕ್ಷಿಸಲು ಅವಕಾಶ ಮಾಡಿಕೊಡಲಾಗಿದೆ. ಮೇ 10ರವರೆಗೆ ಬೆಳಿಗ್ಗೆ 10ರಿಂದ ಸಂಜೆ 7ರವರಗೆ ಮೇಳ ಇರಲಿದೆ.

ಸಂವಿಧಾನದಲ್ಲಿ ಭಾಷೆಗಳು ನಡೆದ ಹಾದಿ ದಾಖಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭಾರತದ ಸಂವಿಧಾನದಲ್ಲಿ ಭಾಷೆಗಳು ನಡೆದು ಬಂದ ಹಾದಿ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ‘ಸಂವಿಧಾನ ನುಡಿ ಸಂಹಿತೆ’ ಶೀರ್ಷಿಕೆಯಡಿ ಪುಸ್ತಕ ಸಿದ್ಧಪಡಿಸಿದ್ದು, ಭಾಷೆಗಳ ಕುರಿತು ಸಂವಿಧಾನ ಸಭೆಗಳಲ್ಲಿ ನಡೆದ ಚರ್ಚೆಗಳು ಸೇರಿ ಹಲವು ಸಂಗತಿಗಳನ್ನು ಇದು ಒಳಗೊಂಡಿದೆ.

ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಅವರು ಈ ಪುಸ್ತಕದ ಲೇಖಕರಾದರೆ, ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಪ್ರಧಾನ ಸಂಪಾದಕರಾಗಿದ್ದಾರೆ. ಈಗಾಗಲೇ ಈ ಪುಸ್ತಕದ ಸಾವಿರ ಪ್ರತಿಗಳು ಮುದ್ರಣಗೊಂಡಿದ್ದು, ಜನಾರ್ಪಣೆಗೆ ಸಜ್ಜಾಗಿದೆ. ಸಂವಿಧಾನವು ಭಾರತೀಯ ಭಾಷೆಗಳ ಬಗ್ಗೆ ಏನು ಹೇಳಿದೆ ಎನ್ನುವುದನ್ನು ತಿಳಿದುಕೊಳ್ಳಲು ಹಾಗೂ ಕನ್ನಡಿಗರಲ್ಲಿ ಭಾಷೆಯ ಕುರಿತ ತಪ್ಪು ತಿಳಿವಳಿಕೆ ಹೋಗಲಾಡಿಸಲು ಈ ಪುಸ್ತಕ ನೆರವಾಗಲಿದೆ.

ಈ ಕೃತಿಯಲ್ಲಿ ಒಂಬತ್ತು ಅಧ್ಯಾಯಗಳಿದ್ದು, ಭಾಷೆಗಳ ಕುರಿತು ಸಂವಿಧಾನ ಸಭೆಯಲ್ಲಿ ನಡೆದ ಚರ್ಚೆಗಳು, ಅಧಿಕೃತ ಭಾಷೆಗಳ ಆಯ್ಕೆ, ಭಾಷಾ ಆಯೋಗದ ಮಹತ್ವ, 1956ರ ರಾಜ್ಯಗಳ ಪುನರ್ ವಿಂಗಡಣಾ ಕಾಯ್ದೆ, ಭಾಷೆಗಳ ಕುರಿತು ಕೇಂದ್ರ ಹಾಗೂ ರಾಜ್ಯದ ಕಾಯ್ದೆಗಳ ಮಹತ್ವದ ಮಾಹಿತಿಯನ್ನೂ ಒಳಗೊಂಡಿದೆ.

ಚರ್ಚೆಗಳ ಉಲ್ಲೇಖ: ಭಾಷೆಗಳ ಕುರಿತು ಸಂವಿಧಾನ ಸಭೆಯಲ್ಲಿ ನಡೆದ ಚರ್ಚೆಗಳನ್ನು ವಿಸ್ತೃತವಾಗಿ ದಾಖಲಿಸಲಾಗಿದೆ. ಸಂವಿಧಾನ ಸಭೆಯಲ್ಲಿ ರಾಷ್ಟ್ರ ಭಾಷೆ ಬಗ್ಗೆ ವ್ಯಕ್ತವಾದ ಭಿನ್ನಾಭಿಪ್ರಾಯಗಳು, ಲಿಪಿ ಬಳಕೆ ಬಗೆಗಿನ ಗೊಂದಲಗಳ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಂದರ್ಭದಲ್ಲಿ ಮಾಡಿದ ಕೊನೆಯ ಭಾಷಣವೂ ಇಲ್ಲಿದೆ.

‘ಭಾಷಾ ಸವಾಲುಗಳು ಇಂದು ಹಿಂದೆಂದಿಗಿಂತಲೂ ಮುನ್ನಲೆಯಲ್ಲಿವೆ. ಏಕಭಾಷಾ, ದ್ವಿಭಾಷಾ, ತ್ರಿಭಾಷಾ ಸೂತ್ರಗಳನ್ನು ನಾವು ಹೆಚ್ಚು ಹೆಚ್ಚು ಚರ್ಚಿಸಿದ್ದೇವೆ. ದೇಶದ ಮೊದಲ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂ ಅವರು ಸಂವಿಧಾನ ಅಳವಡಿಕೆಯ ಕುರಿತಾದ ಚರ್ಚೆಯ ಸಂದರ್ಭದಲ್ಲಿ, ಒಕ್ಕೂಟ ವ್ಯವಸ್ಥೆಗೆ ಭಾಷಾ ಸ್ವಾತಂತ್ರ್ಯದ ಸ್ಪಷ್ಟ ದಿಕ್ಕನ್ನು ಕಲ್ಪಿಸಿದ್ದರು. ಭಾರತ ಸಂವಿಧಾನ ರಚನಾ ಸಭೆಯ ಸುದೀರ್ಘ ಚರ್ಚೆಗಳ ದಾಖಲೆಗಳು ಸ್ಪಷ್ಟ ಒಳನೋಟವನ್ನು ನಮಗೆ ದಕ್ಕಿಸುತ್ತವೆ’ ಎಂದು ಸಂತೋಷ ಹಾನಗಲ್ಲ ತಿಳಿಸಿದರು.

‘ಇಡೀ ಸಂವಿಧಾನದ ಸ್ಥೂಲ ಪರಿಚಯದೊಂದಿಗೆ ಭಾರತದ ಅಧಿಕೃತ ಭಾಷಾ ವಿವರಣೆಯನ್ನು ನೀಡುವ ಸಂವಿಧಾನದ 343ರಿಂದ 351ನೇ ವಿಧಿಗಳ ಕುರಿತಂತೆ ಸಮಗ್ರವಾಗಿ ಚರ್ಚಿಸಿ, ದಾಖಲೆಗಳ ಮೂಲಕವೇ ಇಂದಿನ ಪರಿಸ್ಥಿತಿಯನ್ನು ಸುಲಭವಾಗಿ ಮನಗಾಣಿಸುವ ಯತ್ನವನ್ನು ಮಾಡಿದ್ದೇನೆ’ ಎಂದು ಅಭಿಪ್ರಾಯಪಟ್ಟರು.



> ಸಂವಿಧಾನದ ಭಾಷಾ ಪ್ರಕ್ರಿಯೆಗಳು ಜನಜೀವನದ ಮೇಲೆ ಬೀರಿರುವ ಪರಿಣಾಮವನ್ನು ಸಮಗ್ರವಾಗಿ ಅರ್ಥೈಸಿಕೊಳ್ಳುವುದು ಇಂದು ಅತ್ಯಗತ್ಯ. ಈ ನಿಟ್ಟಿನಲ್ಲಿ ಸಂವಿಧಾನದಲ್ಲಿ ಭಾಷೆಗಳು ನಡೆದು ಬಂದ ಹಾದಿ ದಾಖಲಿಸಲಾಗಿದೆ
>
> **ಸಂತೋಷ ಹಾನಗಲ್ಲ,** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ

‘ನಿರೀಕ್ಷಿತ ವೇಗದಲ್ಲಿ ಬೆಳೆಯದ ಭಾಷೆ’

‘ಕನ್ನಡ ಭಾಷೆಯ ಕುರಿತು ಸಾಕಷ್ಟು ಕೆಲಸಗಳು ನಡೆಯುತ್ತಿದ್ದರೂ ನಿರೀಕ್ಷಿತ ವೇಗದಲ್ಲಿ ಕನ್ನಡ ಬೆಳೆಯುತ್ತಿಲ್ಲ. 1990ರ ನಂತರ ತೀವ್ರವಾಗಿ ಕಾಣಿಸಿಕೊಂಡ ಮಾರುಕಟ್ಟೆ ಕೇಂದ್ರಿತವಾದ ಜಾಗತೀಕರಣವು ರಾಷ್ಟ್ರಗಳು, ವ್ಯವಹಾರಗಳು ಮತ್ತು ವ್ಯಕ್ತಿಗಳು ಸಂಪರ್ಕ ಸಾಧಿಸುವ ವಿಧಾನಗಳನ್ನು ಸಂಪೂರ್ಣವಾಗಿ ಪರಿವರ್ತಿಸಿ ಸ್ಥಳೀಯ ಭಾಷೆಗಳನ್ನು ಮೂಲೆಗೆ ತಳ್ಳಿದೆ. 1971ರಿಂದ 2011ರ ಅಂಕಿಅಂಶಗಳನ್ನು ಗಮನಿಸಿದರೆ, ಕನ್ನಡ ಮಾತಾಡುವವರ ಸಂಖ್ಯೆಯು ಸರಾಸರಿ ಶೇ 3.75ರಷ್ಟು ಮಾತ್ರ ಏರಿಕೆ ಆಗಿದೆ’ ಎಂದು ಪುರುಷೋತ್ತಮ ಬಿಳಿಮಲೆ ತಿಳಿಸಿದರು.

‘ಈ ಬೆಳವಣಿಗೆ ಹಿಂದಿಯಲ್ಲಿ ಸರಾಸರಿ ಶೇ 46ರಷ್ಟಿದ್ದರೆ, ತಮಿಳಿನಲ್ಲಿ ಶೇ 6ಕ್ಕೆ ಏರಿಕೆಯಾಗಿದೆ. ತುಳು ಭಾಷೆಯು ಕನ್ನಡಕ್ಕಿಂತ ಮುಂದಿದ್ದು, ಶೇ 9ಕ್ಕೆ ಏರಿಕೆಯಾಗಿದೆ. ಈ ನಡುವೆ ಯುನೆಸ್ಕೋ ದೇಶದಲ್ಲಿ 172 ಭಾಷೆಗಳನ್ನು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದು ಗುರುತಿಸಿದೆ’ ಎಂದರು.

ಅಂಬಾರಿ ಆನೆ ‘ಅರ್ಜುನ’ನ ಸ್ಮಾರಕ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಹೆತ್ತೂರು (ಹಾಸನ): ನಾಡಹಬ್ಬ ಮೈಸೂರು ದಸರಾದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತ ಕನ್ನಡಿಗರ ಅಚ್ಚುಮೆಚ್ಚಿನ ಆನೆ ‘ಅರ್ಜುನ’ನ ಭವ್ಯ ಸ್ಮಾರಕವನ್ನು ಯಸಳೂರು ಸಮೀಪದ ದಬ್ಬಳಿಕಟ್ಟೆ ಅರಣ್ಯದಲ್ಲಿ ಬುಧವಾರ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ಲೋಕಾರ್ಪಣೆಗೊಳಿಸಿದರು.

2023ರ ಡಿಸೆಂಬರ್ 4ರಂದು ದಬ್ಬಳಿಕಟ್ಟೆ ಮೀಸಲು ಅರಣ್ಯದಲ್ಲಿ ಕಾಡಾನೆ ಸೆರೆಹಿಡಿಯುವ ಕಾರ್ಯಾಚರಣೆ ವೇಳೆ ಮದಗಜದೊಂದಿಗೆ ನಡೆದ ಕಾದಾಟದಲ್ಲಿ ಅರ್ಜುನ ಮೃತಪಟ್ಟಿತ್ತು. ಡಿಸೆಂಬರ್ 5ರಂದು ಅದೇ ಸ್ಥಳದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿತ್ತು. ಎರಡೂವರೆ ವರ್ಷಗಳ ನಂತರ ಅರ್ಜುನನ ಸಮಾಧಿಯ ಮೇಲೆಯೇ ನಿರ್ಮಿಸಲಾದ ಪ್ರತಿಕೃತಿ ಇದೀಗ ಲೋಕಾರ್ಪಣೆಯಾಗಿದೆ.

10 ಅಡಿ ಎತ್ತರ ಹಾಗೂ 13 ಅಡಿ ಉದ್ದವಿರುವ ಈ ಮೂರ್ತಿ, ಅರ್ಜುನನ ಮೂಲ ಸ್ವರೂಪವನ್ನೇ ಹೋಲುತ್ತದೆ. ಶಿಲ್ಪಿ ಧನಂಜಯ ಅವರು ಮೂರ್ತಿಯನ್ನು ವರ್ಷದ ಹಿಂದೆಯೇ ಕೆತ್ತಿದ್ದರು. ಆದರೆ ಸ್ಮಾರಕ ನಿರ್ಮಾಣ ಸ್ಥಳದಲ್ಲಿ ಮೂಲಸೌಕರ್ಯಗಳ ಕೊರತೆ ಇದ್ದುದರಿಂದ ಉದ್ಘಾಟನೆ ವಿಳಂಬವಾಗಿತ್ತು..

‘ಅರ್ಜುನನ ಸ್ಮಾರಕ ಭಾವನಾತ್ಮಕ ತಾಣವಾಗಿ ರೂಪುಗೊಂಡಿದೆ. ಸ್ಮಾರಕ ವೀಕ್ಷಿಸಲು ಸಾರ್ವಜನಿಕರಿಗೆ ವ್ಯವಸ್ಥೆ ಮಾಡಲಾಗುವುದು’ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ, ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಸಿಮೆಂಟ್ ಮಂಜು, ಸಿಸಿಎಫ್ ಏಡು ಕುಂಡಲ, ಡಿಸಿಎಫ್ ಸೌರಭ್ ಕುಮಾರ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಉಪಸ್ಥಿತರಿದ್ದರು.

> ಅರಣ್ಯ ಇಲಾಖೆ ಸಹಕಾರದೊಂದಿಗೆ ಅರ್ಜುನನ ಪ್ರತಿರೂಪ ನಿರ್ಮಿಸಲಾಗಿದೆ. ಅದರ ಸಹಜತೆಯನ್ನು ಎಲ್ಲರೂ ಮೆಚ್ಚಿದ್ದಾರೆ
>
> **ಧನಂಜಯ್** ಅರ್ಜುನನ ಮೂರ್ತಿ ನಿರ್ಮಿಸಿದ ಕಲಾವಿದ

> ಅರ್ಜುನನ ಕೊನೆ ಉಸಿರು ಇರುವವರೆಗೆ ಆರೈಕೆ ಮಾಡಿದ ನನ್ನನ್ನು ಸ್ಮಾರಕ ಉದ್ಘಾಟನೆ ಕಾರ್ಯಕ್ರಮಕ್ಕೆ ಆಹ್ವಾನಿಸದಿದ್ದುದು ದುಃಖದ ಸಂಗತಿ
>
> **ವಿನು,** ಅರ್ಜುನನ ಮಾವುತ


ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ದಬ್ಬಳಿಕಟ್ಟೆ ಅರಣ್ಯದಲ್ಲಿ ನಿರ್ಮಿಸಿರುವ ಅಂಬಾರಿ ಆನೆ ‘ಅರ್ಜುನ’ನ ಸ್ಮಾರಕವನ್ನು ಅರಣ್ಯ ಸಚಿವ ಈಶ್ವರ ಖಂಡ್ರೆ ಬುಧವಾರ ಲೋಕಾರ್ಪಣೆ ಮಾಡಿದರು

ಶುದ್ಧ ನೀರಿನ ಘಟಕ: ಸರಿ ಮಾಡಲು ಮನವಿ

ಕೆ.ಆರ್.ಪುರ: ಶುದ್ಧ ಕುಡಿಯುವ ನೀರಿನ ಘಟಕಗಳ ಸಮರ್ಪಕ ನಿರ್ವಹಣೆ ಆಗುತ್ತಿಲ್ಲ. ಸ್ವಚ್ಛತೆಯೂ ಇಲ್ಲ ಎಂದು ಜೆಡಿಎಸ್ ಪಕ್ಷದ ಕೆ.ಆರ್.ಪುರ ಘಟಕದ ಪದಾಧಿಕಾರಿಗಳು ದೂರಿದ್ದಾರೆ.

ಬೆಂಗಳೂರು ಪೂರ್ವ ವಲಯ ನಗರ ಪಾಲಿಕೆ ಜಂಟಿ ಆಯುಕ್ತೆ ಸುಧಾ ಅವರಿಗೆ ಮನವಿ ಸಲ್ಲಿಸಿರುವ ಪದಾಧಿಕಾರಿಗಳು, ‘ಕೆ.ಆರ್.ಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಘಟಕಗಳ ಸ್ವಚ್ಛತೆ ಮರೀಚಿಕೆಯಾಗಿದೆ. ಹತ್ತು ವರ್ಷಗಳ ಹಿಂದೆ ಗುತ್ತಿಗೆ ಪಡೆದು ನಡೆಸುತ್ತಿರುವ ಘಟಕಗಳನ್ನು ನವೀಕರಣಗೊಳಿಸಿಲ್ಲ. ಜನರಿಗೆ ಅಶುದ್ಧ ನೀರು ಸರಬರಾಜು ಮಾಡಿದರೂ ಅಧಿಕಾರಿಗಳು ಗಮನ ಹರಿಸುತ್ತಿಲ್ಲ’ ಎಂದು ದೂರಿದರು.

ಹಣವನ್ನು ಕೇವಲ ಉಳಿತಾಯ ಮಾಡಬೇಡಿ. ಅದನ್ನು ಹೂಡಿಕೆ ಮಾಡಿ, ಹೆಚ್ಚಿನ ಗಳಿಕೆಯ ಅವಕಾಶಗಳನ್ನು ಸೃಷ್ಟಿಸಿಕೊಳ್ಳಿ
ಅನಾಮಿಕ

ದುಡ್ಡಿನಂಥಾ ಮಾತು


ಮಾರುಕಟ್ಟೆಯಲ್ಲಿ ಬದಲಾವಣೆ: ತಲೆಬಿಸಿ ಇಲ್ಲದ ಹೂಡಿಕೆ ವಿಧಾನ

• ಹರೀಶ್ ಕೃಷ್ಣನ್

ಹಣಕಾಸು ಮಾರುಕಟ್ಟೆಗಳು ನಿಂತ ನೀರಿನಂತೆ ಅಲ್ಲ. ಒಂದು ಸಂದರ್ಭದಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳು ಹೆಚ್ಚಿನ ಲಾಭ ಕೊಡುತ್ತವೆ. ಇನ್ನೊಂದು ಸಂದರ್ಭದಲ್ಲಿ ತಯಾರಿಕಾ ವಲಯ, ಐ.ಟಿ. ಅಥವಾ ಔಷಧ ವಲಯದ ಷೇರುಗಳು ಹೆಚ್ಚಿನ ಲಾಭ ಕೊಡುತ್ತವೆ. ಬದಲಾವಣೆಯಲ್ಲಿನ ನಿರಂತರತೆಯು ಹೂಡಿಕೆದಾರರ ಮನಸ್ಸಿನಲ್ಲಿ ಮುಖ್ಯವಾದ, ಆದರೆ ಸರಳವಾದ ಪ್ರಶ್ನೆಯೊಂದನ್ನು ಮೂಡಿಸುತ್ತದೆ: 'ಇಂದು ಎಲ್ಲಿ ಹೂಡಿಕೆ ಮಾಡಬೇಕು' ಎಂಬುದು ಆ ಪ್ರಶ್ನೆ.

ವಾಸ್ತವ ಏನೆಂದರೆ, ಮಾರುಕಟ್ಟೆಗಳ ಕಾರ್ಯನಿರ್ವಹಣೆಯ ಸಹಜ ಭಾಗವಾಗಿ ಈ ಬಗೆಯ ಬದಲಾವಣೆಗಳು ಆಗುತ್ತಿರುತ್ತವೆ. ಆರ್ಥಿಕ ಪರಿಸ್ಥಿತಿ, ನೀತಿಗಳು, ಜಾಗತಿಕ ಅಂಶಗಳು ಬದಲಾವಣೆ ಕಂಡಂತೆಲ್ಲ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ವಲಯಗಳು ಆದ್ಯತೆ ಪಡೆಯುತ್ತವೆ. ಯಾವ ಸಂದರ್ಭದಲ್ಲಿ ಯಾವ ವಲಯಕ್ಕೆ ಆದ್ಯತೆ ಸಿಗುತ್ತದೆ ಎಂಬುದನ್ನು ಅತ್ಯಂತ ನಿಖರವಾಗಿ ಅಂದಾಜಿಸುವುದು ಬಹಳ ಸವಾಲಿನ ಕೆಲಸ. ಹಾಗೆ ಮಾಡುವಾಗ ಹಲವು ಬಾರಿ ಅವಕಾಶಗಳು ತಪ್ಪಿಹೋಗುತ್ತವೆ. ಈ ಹಿನ್ನೆಲೆಯಲ್ಲಿ, ದೀರ್ಘಾವಧಿ ಹೂಡಿಕೆದಾರರಿಗೆ ವಲಯವಾರು ಆವರ್ತನ (sectoral rotation) ವಿಧಾನವು ಮಹತ್ವದ್ದಾಗುತ್ತದೆ.

ವಲಯವಾರು ಆವರ್ತನ ಅಂದರೇನು: ಹೂಡಿಕೆದಾರ ತೆಗೆದುಕೊಳ್ಳುವ ರಿಸ್ಕ್‌ಗೆ ಪ್ರತಿಯಾಗಿ ಎಲ್ಲಿ ಹೆಚ್ಚಿನ ಲಾಭ ಇರುವಂತೆ ಕಾಣುತ್ತದೆ ಎಂಬುದರ ಆಧಾರದಲ್ಲಿ ಬಂಡವಾಳವನ್ನು ಒಂದು ವಲಯದಿಂದ ಇನ್ನೊಂದು ವಲಯದ ಕಡೆ ಹರಿಸುವುದು ವಲಯವಾರು ಆವರ್ತನ. ಆರ್ಥಿಕತೆಯ ಪುನಶ್ಚೇತನದ ಅವಧಿಯಲ್ಲಿ ಬೆಳವಣಿಗೆಯ ನಿರೀಕ್ಷೆಗಳು ಸುಧಾರಿಸುವ ಕಾರಣದಿಂದಾಗಿ ಬಂಡವಾಳ ಸರಕುಗಳು, ವಾಹನ, ಹಣಕಾಸು ವಲಯಗಳು ಇನ್ನುಳಿದ ವಲಯಗಳಿಗಿಂತ ಹೆಚ್ಚಿನ ಸಾಧನೆ ತೋರಬಹುದು. ಆದರೆ ಅನಿಶ್ಚಿತತೆ ಹೆಚ್ಚಿರುವ ಹೊತ್ತಿನಲ್ಲಿ ಫಾರ್ಮಾ ಅಥವಾ ಐ.ಟಿ ಸೇವೆಗಳ ವಲಯವು ಉತ್ತಮ ಸಾಧನೆ ತೋರಬಹುದು. ಆದರೆ ಈ ಬಗೆಯ ಬದಲಾವಣೆಗಳನ್ನು ಮುನ್ನಂದಾಜಿಸುವುದು ಬಹಳ ಕಷ್ಟದ ಕೆಲಸ.



ಕಲೆ: ಸಂತೋಷ್ ಸಸಿಹಿತ್ಲು

ಕಳೆದ ಕೆಲವು ವರ್ಷಗಳಲ್ಲಿ ಇಂತಹ ಬದಲಾವಣೆಗಳು ಹಲವು ಬಾರಿ ಆಗಿವೆ. ನೀತಿಗಳಲ್ಲಿನ ಬದಲಾವಣೆ, ಜಾಗತಿಕ ಮಟ್ಟದಲ್ಲಿ ಸರಕುಗಳ ಬೆಲೆಯಲ್ಲಿನ ವ್ಯತ್ಯಾಸ, ಬಡ್ಡಿ ದರದಲ್ಲಿನ ಏರಿಳಿತಗಳು ಇದಕ್ಕೆ ಕಾರಣ. ವೈಯಕ್ತಿಕ ಹೂಡಿಕೆದಾರರ ಪಾಲಿಗೆ ಇಂತಹ ಬದಲಾವಣೆಗಳ ಮೇಲೆ ಗಮನ ಇರಿಸುವುದು, ಬದಲಾವಣೆಗಳಿಗೆ ಅನುಗುಣವಾಗಿ ಹೂಡಿಕೆ ಮಾಡುವುದು ಸಂಕೀರ್ಣ ಕೆಲಸ. ಈ ಕೆಲಸ ಮಾಡಬೇಕು ಎಂದಾದರೆ ಬದಲಾವಣೆಗಳನ್ನು ನಿಖರವಾಗಿ ಗುರುತಿಸಬೇಕಾಗುತ್ತದೆ ಹಾಗೂ ಸಮಯಕ್ಕೆ ಸರಿಯಾಗಿ ಹೂಡಿಕೆ ಮಾಡಬೇಕಾಗುತ್ತದೆ. ಇದು ಸುಲಭದಲ್ಲಿ ಆಗುವುದಲ್ಲ.

ಈ ಬದಲಾವಣೆಗಳೆಲ್ಲ ಯಾವಾಗ ಆಗುತ್ತವೆ ಎಂಬುದನ್ನು ಅಂದಾಜಿಸುತ್ತ ಇರುವ ಬದಲು, ಬದಲಾವಣೆಗಳಿಗೆ ಅನುಗುಣವಾಗಿ ತಾವಾಗಿಯೇ ಬದಲಾಗುವ ಪೋರ್ಟ್‌ಫೋಲಿಯೊ ರೂಪಿಸಿಕೊಳ್ಳುವುದು ವಾಸ್ತವಕ್ಕೆ ಹೆಚ್ಚು ಹತ್ತಿರವಾದ ವಿಧಾನ ಆಗುತ್ತದೆ. ವಲಯವಾರು ಬದಲಾವಣೆಗೆ ಹೊಂದಿಕೊಳ್ಳುವ ಹೂಡಿಕೆ ತಂತ್ರವು, ಲಭ್ಯ ಬಂಡವಾಳವನ್ನು ಆಗುತ್ತಿರುವ ಬದಲಾವಣೆಗಳಿಗೆ ಹಾಗೂ ಮಾರುಕಟ್ಟೆ ಪರಿಸ್ಥಿತಿಗಳಿಗೆ ಅನುಗುಣವಾಗಿ ಬೇರೆ ಬೇರೆ ವಲಯಗಳಲ್ಲಿ ಹಂಚಿಕೆ ಮಾಡುವುದಕ್ಕೆ ಗಮನ ನೀಡುತ್ತದೆ.

ಈ ವಿಧಾನವು ಈಗಿನ ಮಾರುಕಟ್ಟೆ ಸ್ಥಿತಿಯಲ್ಲಿ ಹೆಚ್ಚು ಸಂಗತವಾಗುತ್ತದೆ. ಭಾರತದ ಬೆಳವಣಿಗೆಗೆ ಇಂಬು ನೀಡುತ್ತಿರುವ ಮೂಲಸೌಕರ್ಯಗಳ ಮೇಲಿನ ಹೂಡಿಕೆ, ಕಾರ್ಪೊರೇಟ್ ಕಂಪನಿಗಳ ಹಣಕಾಸಿನ ಸ್ಥಿತಿ ಉತ್ತಮವಾಗುತ್ತಿರುವುದು ಮುಂದುವರಿದಿದೆ. ಆದರೆ ಇದೇ ಹೊತ್ತಿನಲ್ಲಿ ಬಡ್ಡಿ ದರ, ಕರೆನ್ಸಿ ಮೌಲ್ಯದ ಏರಿಳಿತ, ಜಾಗತಿಕ ಸಂಘರ್ಷಗಳು ಅಲ್ಪಾವಧಿಯಲ್ಲಿ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರುತ್ತಿವೆ. ಇದರಿಂದಾಗಿ ಹೂಡಿಕೆಯು ಬೇರೆ ಬೇರೆ ವಲಯಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹರಡಿಹೋಗುತ್ತಿದೆ. ಹೀಗಾಗಿ ಒಂದು ಕಡೆ ಹೂಡಿಕೆ ಮಾಡಿ, ಅದನ್ನು ದೀರ್ಘ ಅವಧಿಗೆ ಹಾಗೇ ಬಿಡುವ ತಂತ್ರವು ಹೆಚ್ಚು ಆಕರ್ಷಕವಾಗಿ ಕಾಣುತ್ತಿಲ್ಲ.

ಫ್ಲೆಕ್ಸಿಕ್ಯಾಪ್ ತಂತ್ರದ ಪಾತ್ರ: ಫ್ಲೆಕ್ಸಿಕ್ಯಾಪ್ ಹೂಡಿಕೆಯ ವಿನ್ಯಾಸ ಹೇಗಿರುತ್ತದೆ ಎಂದರೆ, ಅದು ವಲಯವಾರು ಆವರ್ತನಕ್ಕೆ ಬಹಳ ಸೂಕ್ತವಾಗಿ ಹೊಂದಾಣಿಕೆ ಆಗುತ್ತದೆ. ಈ ಹೂಡಿಕೆ ತಂತ್ರವು ಬೇರೆ ಬೇರೆ ವಲಯಗಳಲ್ಲಿ ಹಣ ತೊಡಗಿಸಲು ಬದ್ಧವಾಗಿರುತ್ತದೆ, ಮಾರುಕಟ್ಟೆ ಬಂಡವಾಳ ಆಧಾರಿತವಾಗಿಯೂ ಹಣವನ್ನು ತೊಡಗಿಸುತ್ತಿರುತ್ತದೆ. ಇಂತಹ ತಂತ್ರವನ್ನು ಅನುಸರಿಸುವಾಗ ಪೋರ್ಟ್‌ಫೋಲಿಯೊಗಳು ಮೊದಲೇ ತೀರ್ಮಾನ ಆಗಿರುವ ಹಂಚಿಕೆಯ ಮಿತಿಗೆ ಒಳಪಟ್ಟಿರುವುದಿಲ್ಲ. ಅದರ ಬದಲಿಗೆ ಅವು ಬದಲಾಗುತ್ತಿರುವ ಪರಿಸ್ಥಿತಿಗೆ ಅನುಗುಣವಾಗಿ ತಾವೂ ಬದಲಾಗುತ್ತವೆ.

ಉದಾಹರಣೆಗೆ ಹೇಳುವುದಿದ್ದರೆ, ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವಲಯದಲ್ಲಿ ಹೂಡಿಕೆಗೆ ಅವಕಾಶಗಳು ಸೃಷ್ಟಿಯಾದಾಗ, ಆ ವಲಯಗಳಿಗೆ ಹೂಡಿಕೆಯನ್ನು ಅಳೆದು-ತೂಗಿ ಹೆಚ್ಚು ಮಾಡಬಹುದು. ಅದೇ ಸಂದರ್ಭದಲ್ಲಿ ಲಾರ್ಜ್‌ಕ್ಯಾಪ್ ಕಂಪನಿಗಳಲ್ಲಿಯೂ ಹಣದ ಹೂಡಿಕೆಯನ್ನು ಉಳಿಸಿಕೊಂಡು, ಒಟ್ಟು ಹೂಡಿಕೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಬಹುದು. ಇಲ್ಲಿ ಮುಖ್ಯ ಗುರಿಯು ಉತ್ತಮ ಗುಣಮಟ್ಟದ, ಬಹಳ ಸ್ಥಿರವಾದ ಪ್ರಮಾಣದಲ್ಲಿ ವರಮಾನ ಹೆಚ್ಚಳವನ್ನು ಸಾಧಿಸುವ, ಹೆಚ್ಚಿನ ಗಳಿಕೆಯನ್ನು ಹೊಂದಿರುವ, ಏರಿಳಿತಗಳ ಸಂದರ್ಭದಲ್ಲಿ ಮಾರುಕಟ್ಟೆ ಪಾಲನ್ನು ಹೆಚ್ಚು ಮಾಡಿಕೊಳ್ಳುವ ಸಾಮರ್ಥ್ಯ ತೋರುವ ಕಂಪನಿಗಳನ್ನು ಗುರುತಿಸುವುದಾಗಿರುತ್ತದೆ. ಇಂಥದ್ದೊಂದು ಹೂಡಿಕೆ ತಂತ್ರವು ಹೂಡಿಕೆದಾರರಿಗೆ ಹೊಸ ಅವಕಾಶಗಳ ಲಾಭವನ್ನು ಪಡೆದುಕೊಳ್ಳಲು ಅನುವು ಮಾಡಿಕೊಡುತ್ತದೆ.

ಸಣ್ಣ ಹೂಡಿಕೆದಾರರ ಪೈಕಿ ಬಹುತೇಕರಿಗೆ ವಲಯವಾರು ಬದಲಾವಣೆಗಳನ್ನು ಸಕ್ರಿಯವಾಗಿ ಗಮನಿಸುತ್ತ ಇರುವುದು ಹಾಗೂ ತಮ್ಮ ಪೋರ್ಟ್‌ಫೋಲಿಯೊವನ್ನು ಆ ಬದಲಾವಣೆಗಳಿಗೆ ಅನುಗುಣವಾಗಿ ಮರುಹೊಂದಿಸಿಕೊಳ್ಳುವುದು ವಾಸ್ತವದಲ್ಲಿ ಕಷ್ಟದ ಕೆಲಸವಾಗಬಹುದು. ಇಲ್ಲಿ ಮ್ಯೂಚುವಲ್ ಫಂಡ್‌ಗಳ ಮೂಲಕ ಹೂಡಿಕೆ ಮಾಡುವುದು ಪ್ರಯೋಜನಕ್ಕೆ ಬರುತ್ತದೆ.

ವೃತ್ತಿಪರರಿಂದ ನಿರ್ವಹಣೆ ಕಾಣುವ ಫಂಡ್‌ಗಳು, ಅದರಲ್ಲೂ ಮುಖ್ಯವಾಗಿ ಸಂದರ್ಭಕ್ಕೆ ಅನುಗುಣವಾಗಿ ಹೂಡಿಕೆಯನ್ನು ಹಂಚಿಕೆ ಮಾಡುವ ಫಂಡ್‌ಗಳು, ತಮ್ಮ ವಲಯವಾರು ಹಂಚಿಕೆ ಹಾಗೂ ಮಾರುಕಟ್ಟೆ ಬಂಡವಾಳದ ಗಾತ್ರ ಆಧಾರಿತ ಹಂಚಿಕೆಯನ್ನು ಕಾಲಕಾಲಕ್ಕೆ ಬದಲಾಯಿಸುತ್ತಿರುತ್ತವೆ. ಮಾರುಕಟ್ಟೆಯಲ್ಲಿನ ಬದಲಾವಣೆಗೆ ಸರಿಹೊಂದುವಂತೆ ಅವೂ ಬದಲಾವಣೆ ತಂದುಕೊಳ್ಳುತ್ತ ಇರುತ್ತವೆ. ಈ ಫಂಡ್‌ಗಳ ಕಾರಣದಿಂದಾಗಿ ಹೂಡಿಕೆದಾರರಿಗೆ, ತಮ್ಮ ಪೋರ್ಟ್‌ಫೋಲಿಯೊ ತಾವೇ ಮರುಹೊಂದಾಣಿಕೆ ಮಾಡುವ ಅಗತ್ಯವಿಲ್ಲದೆ, ಬದಲಾವಣೆಗಳನ್ನು ತಾವಾಗಿಯೇ ಗಮನಿಸುತ್ತ ಇರುವ ಅಗತ್ಯ ಇಲ್ಲದೆ, ಹೊಸ ಅವಕಾಶಗಳ ಲಾಭ ಪಡೆಯಲು ಸಾಧ್ಯವಾಗುತ್ತದೆ. ಏರಿಳಿತಗಳ ಸಂದರ್ಭಗಳಲ್ಲಿ ಶಿಸ್ತು ಪಾಲನೆ ವಲಯವಾರು ಆವರ್ತನವು ಹೊಸ ಅವಕಾಶಗಳನ್ನು ಸೃಷ್ಟಿಸಿಕೊಡುವುದರ ಜೊತೆಯಲ್ಲೇ, ಕೆಲವು ಅಪಾಯಗಳನ್ನೂ ಹೊಂದಿದೆ. ಕೆಲವು ವಲಯಗಳು ಉತ್ತಮ ಗಳಿಕೆ ನೀಡಿ ಆದ ನಂತರದಲ್ಲಿ ಅವುಗಳ ಮೇಲೆ ಹೂಡಿಕೆ ಮಾಡುವುದು ಅಥವಾ ಅವುಗಳಲ್ಲಿ ಅಲ್ಪಪ್ರಮಾಣದ ಇಳಿಕೆ ಕಂಡುಬಂದಾಗ ಹೂಡಿಕೆ ಹಿಂಪಡೆದುಕೊಳ್ಳುವುದು ಒಳ್ಳೆಯ ಫಲಿತಾಂಶ ನೀಡುವುದಿಲ್ಲ.

ಶಿಸ್ತಿನ ಹೂಡಿಕೆಯು ಅಲ್ಪಾವಧಿಯ ಸಂಕಥನಗಳಿಗೆ ಕಿವಿಗೊಡುವ ಕೆಲಸ ಮಾಡುವುದಿಲ್ಲ. ಅದರ ಬದಲಿಗೆ ಅದು ಹಂತ ಹಂತವಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತದೆ, ಉತ್ತಮ ಮೌಲ್ಯಕ್ಕೆ ಲಭ್ಯವಿರುವ ಷೇರುಗಳಲ್ಲಿ ಹಣ ತೊಡಗಿಸುತ್ತದೆ ಹಾಗೂ ಕಂಪನಿಯ ಗುಣಮಟ್ಟಕ್ಕೆ ಆದ್ಯತೆ ನೀಡುತ್ತದೆ. ಅದರ ಜೊತೆಯಲ್ಲೇ, ಮಾರುಕಟ್ಟೆಯಲ್ಲಿ ಹೂಡಿಕೆಗೆ ಸೂಕ್ತ ಸಮಯ ಯಾವುದು ಎಂಬುದನ್ನು ಕಾಯುತ್ತ ಕೂರುವ ಬದಲು, ಹೆಚ್ಚಿನ ಅವಧಿಗೆ ಹೂಡಿಕೆ ಮುಂದುವರಿಸುವುದು ಸೂಕ್ತ ಎಂಬುದನ್ನು ಇದು ಗುರುತಿಸುತ್ತದೆ. ವ್ಯವಸ್ಥಿತವಾದ ಹಾಗೂ ಶಿಸ್ತುಬದ್ಧವಾದ ಹೂಡಿಕೆಯು ಅಸ್ಥಿರತೆಯ ಹಂತಗಳನ್ನು ದಾಟಿ ಮುನ್ನಡೆಯಲು ಸಹಾಯ ಮಾಡುತ್ತದೆ. ಮಾರುಕಟ್ಟೆಯಲ್ಲಿ ಹೊಸ ಬಗೆಯಲ್ಲಿ ಏರಿಳಿತಗಳು ಬರುತ್ತಲೇ ಇರುತ್ತವೆ. ಹೂಡಿಕೆದಾರರ ಗುರಿ ಬದಲಾವಣೆಗಳನ್ನು ಮುನ್ನಂದಾಜಿಸುತ್ತ ಇರುವುದಲ್ಲ; ಬದಲಿಗೆ ಅವರ ಕೆಲಸವು ಆ ಬದಲಾವಣೆಗಳಿಗೆ ಸಿದ್ಧರಾಗಿ ಇರುವುದು. ಉತ್ತಮ ಕಂಪನಿಗಳಲ್ಲಿ ಹಣ ತೊಡಗಿಸುವುದು, ಅದರ ಜೊತೆಯಲ್ಲೇ ಹೊಸ ಅವಕಾಶಗಳನ್ನು ಬಾಚಿಕೊಳ್ಳಲು ಸಿದ್ಧತೆ ಇರುವುದು ಹೆಚ್ಚು ಸೂಕ್ತವಾದ ಕ್ರಮವಾಗುತ್ತದೆ.

ದೀರ್ಘಾವಧಿಯಲ್ಲಿ ಈ ಬಗೆಯ ಶಿಸ್ತು ಹಾಗೂ ಹೊಂದಾಣಿಕೆಯ ಸ್ವಭಾವವು ಹೂಡಿಕೆದಾರರಿಗೆ ಮಾರುಕಟ್ಟೆಯ ಏರಿಳಿತಗಳನ್ನು ಹೆಚ್ಚು ಚೆನ್ನಾಗಿ ನಿಭಾಯಿಸಲು ಸಹಾಯ ಮಾಡುತ್ತದೆ.

ಲೇಖಕ ಆದಿತ್ಯ ಬಿರ್ಲಾ ಸನ್‌ಲೈಫ್ ಎಎಂಸಿಯ ಈಕ್ವಿಟಿ ವಿಭಾಗದ ಮುಖ್ಯ ಹೂಡಿಕೆ ಅಧಿಕಾರಿ

ಹೊಂದಾಣಿಕೆಯ ಮಹತ್ವ

ಬೇರೆ ಬೇರೆ ವಲಯಗಳಲ್ಲಿ ಹಾಗೂ ಬೇರೆ ಬೇರೆ ಗಾತ್ರದ ಕಂಪನಿಗಳಲ್ಲಿ ಹೂಡಿಕೆ ಮಾಡುವ ಹೊಂದಾಣಿಕೆಯ ಮನೋಭಾವ ಹೊಂದಿರುವುದು ಈಗಿನ ಬದಲಾವಣೆಗಳನ್ನು ದಾಟಿ ಮುಂದೆ ಸಾಗಲು ಅವಕಾಶ ಮಾಡಿಕೊಡುವ ಮುಖ್ಯವಾದ ಅಂಶ.

ಇತಿಹಾಸವನ್ನು ಗಮನಿಸಿದರೆ, ಲಾರ್ಜ್ ಕ್ಯಾಪ್ ವಲಯದ ಕಂಪನಿಗಳು ತಮ್ಮ ದೃಢವಾದ ಹಣಕಾಸಿನ ಸ್ಥಿತಿ ಹಾಗೂ ಉತ್ತಮ ವರಮಾನದ ಸಾಧ್ಯತೆಯಿಂದಾಗಿ ಅನಿಶ್ಚಿತ ಸಂದರ್ಭಗಳಲ್ಲಿ ಹೆಚ್ಚು ಸ್ಥಿರತೆಯನ್ನು ನೀಡಿರುವುದು ಕಂಡುಬರುತ್ತದೆ. ಅರ್ಥ ವ್ಯವಸ್ಥೆಯು ಹಿಗ್ಗುವ ಅವಧಿಗಳಲ್ಲಿ ಬೆಳವಣಿಗೆಯ ಸಾಧ್ಯತೆ ಹೆಚ್ಚು ಇರುವ ಕಾರಣಕ್ಕೆ ಮತ್ತು ರಿಸ್ಕ್ ತೆಗೆದುಕೊಳ್ಳುವ ಮನೋಭಾವ ಹೂಡಿಕೆದಾರರಲ್ಲಿ ಹೆಚ್ಚಿರುವ ಕಾರಣಕ್ಕೆ ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವಲಯದ ಕಂಪನಿಗಳು ಹೆಚ್ಚಿನ ಗಳಿಕೆ ತಂದುಕೊಟ್ಟಿವೆ. ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವಲಯದ ಆಯ್ದ ಕೆಲವು ಕಂಪನಿಗಳಲ್ಲಿ ವರಮಾನ ಹೆಚ್ಚಳದ ಸಾಧ್ಯತೆ ಇರುವುದನ್ನು ಈಚಿನ ಕೆಲವು ಸೂಚನೆಗಳು ಹೇಳುತ್ತಿವೆ. ಅದರಲ್ಲೂ ಮುಖ್ಯವಾಗಿ, ತಯಾರಿಕೆ, ಬಂಡವಾಳ ವೆಚ್ಚ ಮತ್ತು ಗ್ರಾಹಕರಿಂದ ಹೆಚ್ಚಿನ ಪ್ರಮಾಣದಲ್ಲಿ ಖರೀದಿಯಾಗುವ ಸರಕುಗಳ ವಲಯದ ಕಂಪನಿಗಳಲ್ಲಿ ಇದು ಜಾಸ್ತಿ ಇದೆ. ಆದರೆ ಮಾರುಕಟ್ಟೆಯಲ್ಲಿನ ಕೆಲವು ಕಂಪನಿಗಳ ಷೇರು ಮೌಲ್ಯವು ತೀರಾ ದುಬಾರಿ ಆಗಿರುವುದು, ಎಲ್ಲವನ್ನೂ ಖರೀದಿಸಲು ಆಗದು, ಖರೀದಿಯನ್ನೂ ಅಳೆದು ತೂಗಿ ಮಾಡಬೇಕು ಎಂಬುದನ್ನು ಹೇಳುತ್ತಿದೆ.

ಇವೆಲ್ಲವೂ ಒತ್ತಿಹೇಳುವುದು ಮಾರುಕಟ್ಟೆ ಬಂಡವಾಳ ಆಧಾರಿತ ಹೂಡಿಕೆಯಿಂದ ಆಚೆಗೆ ಗಮನ ಹರಿಸಬೇಕಾದುದರ ಅಗತ್ಯವನ್ನು. ಅಂದರೆ, ಎದುರಾಗುತ್ತಿರುವ ಅವಕಾಶಗಳನ್ನು ಆಧರಿಸಿ ಹೂಡಿಕೆದಾರರು ತಮ್ಮ ಪೋರ್ಟ್‌ಫೋಲಿಯೊ ಅನ್ನು ಬೇರೆ ಬೇರೆ ವಲಯಗಳಲ್ಲಿ ಮರುಹೊಂದಾಣಿಕೆ ಮಾಡುತ್ತ ಇರಬೇಕು. ಇದೇ ಸಂದರ್ಭದಲ್ಲಿ ಅವರು ಮೂಲ ಹೂಡಿಕೆಯಲ್ಲಿ ಶಿಸ್ತು, ಸ್ಥಿರತೆಯನ್ನು ಕಾಪಾಡಿಕೊಳ್ಳಬೇಕು.


366 ಐಪಿಒ: ₹1.9 ಲಕ್ಷ ಕೋಟಿ ಸಂಗ್ರಹ

2025-26ರ ಆರ್ಥಿಕ ವರ್ಷದಲ್ಲಿ ವಿವಿಧ ವಲಯಗಳಿಗೆ ಸೇರಿದ ಕಂಪನಿಗಳ 366 ಐಪಿಒಗಳು (ಸಾರ್ವಜನಿಕ ಷೇರು ಹಂಚಿಕೆ) ಬಿಡುಗಡೆ ಆಗಿವೆ. ಈ ಐಪಿಒ ಮೂಲಕ ಕಂಪನಿಗಳು ಒಟ್ಟು ₹1.9 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ. ಇದು 2024–25ರ ಆರ್ಥಿಕ ವರ್ಷದಲ್ಲಿ ಸಂಗ್ರಹ ಆಗಿದ್ದ ಬಂಡವಾಳದ ಮೊತ್ತಕ್ಕೆ ಹೋಲಿಸಿದರೆ ಶೇ 9.5ರಷ್ಟು ಅಧಿಕ.

109 ಐಪಿಒಗಳು ₹1.7 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿದ್ದರೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಸ್‌ಎಂಇ) ವಿಭಾಗವು 257 ಐಪಿಒಗಳ ಮೂಲಕ ₹11,588 ಕೋಟಿ ಸಂಗ್ರಹಿಸಿವೆ. ಕಳೆದ ಆರ್ಥಿಕ ವರ್ಷದಲ್ಲಿ ಐಪಿಒ ಮೂಲಕ ₹1.88 ಲಕ್ಷ ಕೋಟಿ, ಆರ್‌ಇಐಟಿಎಸ್ ₹9,300 ಕೋಟಿ, ಇನ್ವಿಟ್ಸ್ ಮೂಲಕ ₹21,026 ಕೋಟಿ ಬಂಡವಾಳ ಸಂಗ್ರಹಿಸಲಾಗಿದೆ.

ವಲಯವಾರು ಐಪಿಒ ಮೂಲಕ ಬಂಡವಾಳ ಸಂಗ್ರಹ

(ಕೋಟಿಗಳಲ್ಲಿ)



ಜಾಗತಿಕ ಮಟ್ಟದಲ್ಲಿ ಭಾರತಕ್ಕೆ 2ನೇ ಸ್ಥಾನ

ಮಾರ್ಚ್ 31ಗಳಿನಲ್ಲಿ ದೇಶದಲ್ಲಿ ಒಟ್ಟು 20 ಐಪಿಒಗಳು ಬಿಡುಗಡೆ ಆಗಿದ್ದು, ಜಾಗತಿಕ ಮಟ್ಟದಲ್ಲಿ 2ನೇ ಸ್ಥಾನ ಪಡೆದಿದೆ. ಇದೇ ಅವಧಿಯಲ್ಲಿ ಚೀನಾ ಅಗ್ರ ಸ್ಥಾನದಲ್ಲಿದ್ದು, 38 ಐಪಿಒ ಆಗಿವೆ. ದಕ್ಷಿಣ ಕೊರಿಯಾ (9), ಅಮೆರಿಕ (6), ತೈವಾನ್ ಮತ್ತು ಜಪಾನ್ ತಲಾ 5, ಆಸ್ಟ್ರೇಲಿಯಾ (4), ಜರ್ಮನಿ (3) ಮತ್ತು ಇತರೆ ರಾಷ್ಟ್ರಗಳಲ್ಲಿ 23 ಐಪಿಒ ಬಿಡುಗಡೆ ಆಗಿವೆ.

ಆಧಾರ: ಸೆಬಿ ಏಪ್ರಿಲ್ 30ಗಳ ಬುಲೆಟಿನ್

ಮಾಹಿತಿ ಸಂಗ್ರಹ
ಗಂಜಿ ಆದಿಶೇಷ

ಮಹೀಂದ್ರ ಆ್ಯಂಡ್ ಮಹೀಂದ್ರ

ಬ್ರೋಕರೇಜ್ ಮಾತು

ವಾಹನ ತಯಾರಿಕಾ ಕಂಪನಿ ಮಹೀಂದ್ರ ಆ್ಯಂಡ್ ಮಹೀಂದ್ರದ ಷೇರಿನ ಮೌಲ್ಯ ₹3,963ಕ್ಕೆ ತಲುಪಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್ ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕಂಪನಿಯ ತೆರಿಗೆ ನಂತರದ ಲಾಭವು (ಪಿಎಟಿ) ನಿರೀಕ್ಷೆಗಿಂತ ಜಾಸ್ತಿ ಆಗಿದೆ. ಪ್ರಯಾಣಿಕ ಮತ್ತು ಕೃಷಿ ವಾಹನಗಳ ಮಾರಾಟದಲ್ಲಿನ ಏರಿಕೆಯಿಂದ ಹೆಚ್ಚಿನ ವರಮಾನ ದಾಖಲಾಗಿದೆ.

ವರಮಾನದಲ್ಲಿ ಶೇ 26ರಷ್ಟು ಹೆಚ್ಚಳವಾಗಿದ್ದು, ₹39,500 ಕೋಟಿಯಷ್ಟಾಗಿದೆ. 2031ರ ವೇಳೆಗೆ ಕಂಪನಿಯು 6 ಹೊಸ ಐಸಿಇ ಎಂಜಿನ್ ಚಾಲಿತ ಎಸ್‌ಯುವಿ ಮತ್ತು 3 ಬಿಇವಿ ಮಾದರಿಯ ವಾಹನಗಳನ್ನು ಬಿಡುಗಡೆ ಮಾಡುವ ಮೂಲಕ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲಿದೆ. 2026–27ರಿಂದ 2030–31ರವರೆಗೆ ಕಂಪನಿಯು ಒಟ್ಟು 10 ಐಸಿಇ ಎಂಜಿನ್ ಎಸ್‌ಯುವಿಗಳನ್ನು ಬಿಡುಗಡೆ ಮಾಡಲು ಯೋಜಿಸಿದೆ.

ಹೊಸ ವಾಹನಗಳ ಬಿಡುಗಡೆ ಮತ್ತು ಗ್ರಾಹಕರು ವಾಹನಗಳನ್ನು ಖರೀದಿಸಲು ಮುಂದಾಗುತ್ತಿರುವುದರಿಂದ ಕಂಪನಿಯ ವಾಹನಗಳ ಮಾರಾಟವು ಪ್ರಸಕ್ತ ಆರ್ಥಿಕ ವರ್ಷವೂ ಹೆಚ್ಚಳವಾಗುವ ನಿರೀಕ್ಷೆ ಇದೆ.

ಟ್ರ್ಯಾಕ್ಟರ್, ಯುಟಿಲಿಟಿ ವಾಹನ ಮತ್ತು ಎಲ್‌ಸಿವಿ ವಾಹನಗಳಿಗೆ ಉತ್ತಮ ಬೇಡಿಕೆ ಇದೆ ಎಂದು ತಿಳಿಸಿದೆ.

2025–26ರಿಂದ 2027–28ರವರೆಗೆ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 15ರಷ್ಟಾಗಲಿದೆ. ಇದೇ ಅವಧಿಯಲ್ಲಿ ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 12 ಮತ್ತು ತೆರಿಗೆ ನಂತರದ ಲಾಭ ಶೇ 13ರಷ್ಟಾಗುವ ಅಂದಾಜಿದೆ ಎಂದು ಬ್ರೋಕರೇಜ್ ಸಂಸ್ಥೆ ತಿಳಿಸಿದೆ.

ಬುಧವಾರದ ವಹಿವಾಟಿನ ಅಂತ್ಯಕ್ಕೆ ಮಹೀಂದ್ರ ಆ್ಯಂಡ್ ಮಹೀಂದ್ರ ಷೇರಿನ ಮೌಲ್ಯವು ₹3,300 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಇಂಗ್ಲಿಷ್

ಪಿಯುಸಿ ಪರೀಕ್ಷೆ ದಿಕ್ಸೂಚಿ — Biology

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

Unit-1 Prose : A Hero

14) Which place in the room did Swami think was safe, compact and reassuring?
Ans: Swami felt that the place under the bench is compact, safe and re-assuring.

15) Swami touched…………..in the room instead of granny. (Fill in the blank appropriately)
Ans: the wooden leg of the bench
Expl: Swami saw frightening dream of tiger chasing him and he is unable to escape. Swami put his hand out to touch reassuring granny's presence at his side, as was his habit; instead he touched the wooden leg of the bench as he was alone in office room.

16) Swami saw a moving creature in the room. Was it……………. (Fill in the blank)
(a) his shadow , (b) a scorpion , (c) a man. ?
Ans: (c) A man?

17) Who cried, "Aiyo! Something has bitten me?"
Ans: The burglar bitten by Swami cried in agony with a thundering cry, "Aiyo! Something has bitten me".

18) Who did father, cook and a servant stumble upon?
Ans: The father of Swami, their servant and cook stumbled on the burglar who lay with a bleeding ankle amidst the furniture in the office room.

19) Why were congratulations showered on Swami?
Ans: Swami was showered with congratulations as he helped the police to arrest one of the most notorious house breakers of the district by biting into his flesh.

20) Do you think Swami really wanted to join the police? If not, what did he want to be?
Ans: No. Swami did not want to join the police force.
Swami had quite made up his mind to become an engine driver, railway guard or a bus conductor later in life. He agreed to police inspector's invitation to join police only out of politeness.

21. Did Swami muster up courage to sleep alone after the burglar's incident?
Ans: No, Swami did not muster courage to sleep alone after burglar's incident. He pretended to sleep at his usual place beside granny at 7.30 pm much before the return of his father.

22. Who supported Swami?
Ans: Swami's mother supported him by showing her anger against his father. She asked Swami's father to let him sleep where he likes and need not risk his life again.

23. A report about a boy in the newspaper was an unexpected event in Swami's life. Justify.
Ans: The report generated a difference of opinion between Swami and his father. Swami felt it may not be a boy but a strong grown up man, who could fight with tiger. But his father was angry about Swami questioning the veracity of news report and also for emphasizing more on strength of person than courage to fight a tiger. Hence Swami's father challenged him to prove his courage by sleeping alone in the office room. This was a frightening proposal for twelve years old Swami who was habituated to sleep beside his granny. This was an unexpected event in Swami's life.

24. Swami made a comment on the newspaper report. Was he right? How did his view differ from that of his father?
Ans: When Swami's father read the report of the courage of young boy who faced a tiger bravely, Swami did not agree with his father. Swami felt it may not be a boy but a strong grown up man, who could fight with tiger.
Swami's father was angry about Swami questioning the veracity of news report and also for emphasizing more on strength of person than courage to fight a tiger. Given age of Swami being approximately 12 years his experience compared to his father's was small, he is right in his comment.

25. What desperate attempts did Swami make to escape from his father?
Ans: When his father challenged Swami to sleep alone in his office room that night, Swami tried various attempts to escape. Swami first tried to change the subject by talking loudly and enthusiastically about another matter, but his father was not diverted. Then Swami tiptoed into the bed beside his granny, pulled the blanket over his face and pretended to sleep by snoring. When his father started making him shift to room, Swami threw a look of appeal at his mother to save him. His mother's appeal to allow him sleep in the hall was rejected by his father. Swami's repeated his request of not shifting saying that there may be scorpions behind the law books since the room is dusty.
Thus Swami desperately tried to escape from his father proposition.

26. Why did Swami conclude that his father's proposition was frightful?
Ans: Swami was habituated to sleep beside his granny in the passage and any change in this practice kept him trembling and awake all night. Hence he concluded his father's proposition was frightful.

27. As the night advanced, Swami felt that something terrible would happen to him. What would it be? How would it happen?
Ans: As the night advanced and the silence in the house deepened, Swami's heart began beating faster and he felt something terrible would happen to him. Swami remembered stories of devils and ghosts. Every moment he expected devils to come up and carry him away; there was the instance of his old friend in fourth class who suddenly disappeared and was said to have been carried off by a ghost to Siam or Nepal.

28. There was absolute silence in the room. In spite of, some noises reached Swami's ears. What were they?
Ans: In spite of absolute silence, Swami was able to hear ticking off the clock, rustle of the trees, snoring sounds and vague insects humming.

29. Narrate Swami's dreadful experience when he was lying under the bench
Ans: In sleep under the bench Swami was racked with nightmares. A tiger was chasing him. His feet stuck to the ground. He desperately tried to escape but his feet would not move; the tiger was at his back, and he could hear its claws scratch the ground; it became louder with every moment. Swami tried open eyes but his eye lids would not open and nightmare continued. Swami groaned in despair.

(Contd……..)

REPRODUCTION
Reproduction in flowering plants

8. What will become to the ovules and the ovary in a flower after fertilization?
Ans:- Ovules become the seeds and the ovary forms the fruit after fertilization.

9. Write a difference between the pollination and fertilization.
Ans:- Pollination is the transfer of the pollen grains from anther to the stigma of a flower and fertilization is the fusion of male and female gametes.

10. Differentiate between the pollen grain and the ovule.
Ans:- Pollen grains are produced by the anthers and they contain male germ cells and ovules are produced by the ovary and they contain female germ cells.

11. State the difference between unisexual and bisexual flowers.
Ans:- Unisexual flowers possess either male or female reproductive organs.
Bisexual flowers possess both male and female reproductive organs.

12. What is receptacle?
Ans:- The base of a flower to which all the parts of a flower are attached is called a receptacle.

13. What are sepals?
Ans:- The green, leaf like parts in the outermost circle of a flower are sepals. All the sepals taken together are called calyx. The function of sepals (or calyx) is to protect the flower in its initial stages when it is in the form of a bud.

Extra informative question:
1. Vegetative propagation is the term given to any asexual means of starting new plants. New plants are obtained from the parts of old plants like stems, roots and leaves, without the help of any reproductive organ. Some plants growers have developed artificial methods of vegetative propagation like cutting, layering and grafting which are used in agriculture and horticulture.

Q: i) Name the method of vegetative propagation in Rose and Jasmine plant.
ii) "Vegetative propagation produces better plants with higher yield in ornamental crops." To justify the statement give four reasons.
Ans:- i) Grafting in Rose and Layering in Jasmine.
ii) a) It is cheaper, easier and more rapid method of propagation.
b) Better quality of plants can be maintained.
c) Produce seeds with prolonged period of dormancy.
d) Traits or characters of the parent plant are preserved.

2. Give the step by step description of the sexual reproduction taking place in plants.
Ans:- The sexual reproduction in plants takes place in the following steps –
(a) The male organ of the flower called 'stamen' makes the male gametes (male sex cells) of the plant. These male gametes are present in pollen grains.
(b) The female organ of the flower called 'carpel' makes the female gametes (female sex cells) of the plant. These female gametes are present in ovules. These gametes are also called ova, egg cells or just eggs.
(c) The male gametes are present in pollen grains fertilise the female gametes are present in ovules.
(d) The fertilised egg cells grow within ovules and become seeds.
e) Seeds produce new plants on germination.

Fill in the blanks by choosing the appropriate word/words from those given in the bracket.
(Pollen grain, Microsporogenesis, Micropyle, Tapetum, Vallisneria)

1. The process of formation of microspores from a pollen mother cell through meiosis is called ________
Ans:- microsporogenesis

2. ________ is the innermost wall layer of microsporangium.
Ans:- Tapetum

3. Embryo sac is to ovule as ______ is to an anther.
Ans:- pollen grain

4. The opening of the angiosperm ovule where the integument is absent is known as ________.
Ans:- the micropyle

5. ________ is an example for water pollinated plant.
Ans:- Vallisneria **(or *Hydrilla, Zostera*)**

Answer the following :-

1. Mention some of the differences between the Apocarpous and Syncarpous Ovary.
Ans:-

Apocarpous Ovary	*Syncarpous Ovary*
The ovary is formed from a single free carpel.	The ovary is formed from fusion of two or more carpels.
The flower bears one to several free pistils.	The flower bears a single pistil.
Ovary is unilocular.	Ovary can be uni or multilocular.
It occurs only in primitive families.	It occurs in most of the families.
Fruit is simple in uni-carpelled flowers or aggregate in poly-carpelled flowers.	The fruit is generally simple.

2. Mention the two types of self – pollination.
Ans:- The two types of self – pollination are:-
a) Autogamy b) Geitonogamy

3. What is Autogamy?

(Contd…)

ರೈಲಿನಲ್ಲಿ ಗಲಾಟೆ: ಇಬ್ಬರಿಗೆ ಚಾಕು ಇರಿತ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ರೈಲಿನಲ್ಲಿ ಸೀಟಿನ ವಿಷಯಕ್ಕೆ ಸಂಬಂಧಿಸಿ ಪ್ರಯಾಣಿಕರ ನಡುವೆ ಬುಧವಾರ ಗಲಾಟೆಯಾಗಿ, ಚಾಕು ಇರಿತದಿಂದ ಇಬ್ಬರು ಗಾಯಗೊಂಡರು. ಗಾಯಗೊಂಡ ತುಮಕೂರು ಮೂಲದ ಶಿವಕುಮಾರ್ ಮತ್ತು ರೈಲ್ವೆ ಗೇಟ್ ಕೀಪರ್ ಕುಮಾರ್ ಅವರನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೈಸೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ 'ರಾಜ-ರಾಣಿ' ರೈಲಿನಲ್ಲಿ ಘಟನೆ ನಡೆದಿದೆ. ಸುಬಾನ್ ಖುರೇಷಿ, ಶೋಯಬ್, ವಾಸಿಮ್ ಹಲ್ಲೆ ನಡೆಸಿದ ಆರೋಪಿಗಳು. ಅವರು ಕುಟುಂಬಸ್ಥರೊಂದಿಗೆ ಪ್ರಯಾಣಿಸುತ್ತಿದ್ದರು.

ಸೀಟಿಗಾಗಿ ಜಗಳ ನಡೆಯುತ್ತಿದ್ದುದನ್ನು ಪ್ರಶ್ನಿಸಲು ಹೋದ ಶಿವಕುಮಾರ್ ಅವರಿಗೆ ಆರೋಪಿಗಳು ಚಾಕುವಿನಿಂದ ಇರಿದರು. ಪ್ರಾಣ ರಕ್ಷಿಸಿಕೊಳ್ಳಲು ಅವರು ಮದ್ದೂರು ಬಳಿಯ ಚನ್ನೇಗೌಡನದೊಡ್ಡಿ ಬಳಿ ರೈಲಿನ ಚೈನ್ ಅನ್ನು ಎಳೆದರು. ಪರಾರಿಯಾಗಲು ಯತ್ನಿಸಿದ ಆರೋಪಿಗಳನ್ನು ಹಿಡಿಯಲು ಹೋದ ಗೇಟ್ ಕೀಪರ್ ಕುಮಾರ್ ಅವರಿಗೂ ಚಾಕು ಇರಿತವಾಗಿದೆ. ಸುತ್ತಮುತ್ತಲಿನ ಜನ ಆರೋಪಿಗಳನ್ನು ಹಿಡಿದು ಥಳಿಸಿ, ಪೊಲೀಸರಿಗೆ ಒಪ್ಪಿಸಿದರು.

ಅಪಹರಿಸಿ ಸುಲಿಗೆ: ಇಬ್ಬರ ಸೆರೆ

ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯ: ಭೇಟಿಗೆಂದು ಕರೆಸಿಕೊಂಡು ಕೃತ್ಯ

ಪ್ರಜಾವಾಣಿ ವಾರ್ತೆ


ದರ್ಶನ್


ರಾಜೇಶ್

ಬೆಂಗಳೂರು: ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯವಾಗಿದ್ದ ಯುವಕನನ್ನು ಭೇಟಿಗೆಂದು ಕರೆಸಿಕೊಂಡು ಹಣ ದೋಚಿ, ಹಲ್ಲೆ ನಡೆಸಿದ್ದ ಇಬ್ಬರನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದರ್ಶನ್(19) ಹಾಗೂ ರಾಜೇಶ್ (19) ಬಂಧಿತರು. 27 ವರ್ಷದ ಸಿವಿಲ್ ಎಂಜಿನಿಯರ್ ನೀಡಿರುವ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಇಬ್ಬರನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಇಬ್ಬರು ಬಾಲಕರೂ ಭಾಗಿ ಆಗಿದ್ದು, ಅವರ ವಿರುದ್ಧವೂ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಮೂರು ವರ್ಷಗಳಿಂದ ಡೇಟಿಂಗ್ ಆ್ಯಪ್ ಬಳಸುತ್ತಿದ್ದ ದೂರುದಾರ ಯುವಕನಿಗೆ ಆರೋಪಿಗಳು ಪರಿಚಯ ಆಗಿದ್ದರು. ಸ್ನೇಹದ ಬಳಿಕ ಪರಸ್ಪರ ನಂಬರ್ ವಿನಿಮಯ ಮಾಡಿಕೊಂಡಿದ್ದರು. ಮುಖಾಮುಖಿ ಮಾಡಲು ನಿರ್ಧರಿಸಿದ್ದರು. ಮೇ 1ರಂದು ಯಲಹಂಕ ವ್ಯಾಪ್ತಿಯ ಪಾಲನಹಳ್ಳಿ ಗೇಟ್ ಬಳಿಗೆ ಬರುವಂತೆ ದೂರುದಾರರಿಗೆ ಆರೋಪಿಗಳು ಹೇಳಿದ್ದರು. ಅದರಂತೆ ದೂರುದಾರ ಭೇಟಿಗೆ ತೆರಳಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

ಅಪರಾಧ ಸುದ್ದಿ

'ಮಾತನಾಡುವ ನೆಪದಲ್ಲಿ ದೂರುದಾರನನ್ನು ಆರೋಪಿಗಳು ಕಾರಿಗೆ ಹತ್ತಿಸಿಕೊಂಡಿದ್ದರು. ಬಳಿಕ, ಮೊಬೈಲ್ ಕಸಿದುಕೊಂಡು ಪಾಸ್‌ವರ್ಡ್ ಹೇಳುವಂತೆ ಒತ್ತಾಯಿಸಿದ್ದರು. ಹೇಳದಿದ್ದಾಗ ದೂರುದಾರನ ಮೇಲೆ ಹಲ್ಲೆ ನಡೆಸಿದ್ದರು. ಅದಾದ ಮೇಲೆ ಫೋನ್ ಪೇಯಿಂದ ₹16 ಸಾವಿರ ವರ್ಗಾವಣೆ ಮಾಡಿಸಿಕೊಂಡಿದ್ದರು. ಬಳಿಕ, ದೂರುದಾರನನ್ನು ನಿರ್ಜನ ಪ್ರದೇಶದಲ್ಲಿ ಬಿಟ್ಟು ಪರಾರಿ ಆಗಿದ್ದರು. ನಂತರ, ಸ್ನೇಹಿತನಿಗೆ ಸಂತ್ರಸ್ತ ಕರೆ ಮಾಡಿ ಆತನ ಸಹಾಯದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದರು. ಬಳಿಕ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

ಆರೋಪಿಗಳು ಈ ಹಿಂದೆಯೂ ಇದೇ ಆ್ಯಪ್ ಮೂಲಕ ಕನಿಷ್ಠ ಎಂಟು ಮಂದಿಗೆ ಸುಲಿಗೆ ಮಾಡಿರುವ ಮಾಹಿತಿ ಸಿಕ್ಕಿದೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸ್ನಾನದ ವಿಡಿಯೊ ಚಿತ್ರೀಕರಣ: ಬಂಧನ

ಯುವತಿ ಸ್ನಾನ ಮಾಡುತ್ತಿರುವ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದ ಆರೋಪಿಯನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

23 ವರ್ಷದ ಯುವತಿ, ಸಾಫ್ಟ್‌ವೇರ್ ಎಂಜಿನಿಯರ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬುಧವಾರ ಬೆಳಿಗ್ಗೆ 9.30ರ ಸುಮಾರಿಗೆ ಸ್ನಾನ ಮಾಡುತ್ತಿದ್ದಾಗ, ಪಕ್ಕದ ಕಟ್ಟಡದಿಂದ ಯಾರೊ ಒಬ್ಬ ಮೊಬೈಲ್ ಫೋನ್ ಮೂಲಕ ವಿಡಿಯೊ ಮಾಡುತ್ತಿದ್ದ. ಅದನ್ನು ಗಮನಿಸಿ ಕಿರುಚಿದ್ದೆ. ಆ ವ್ಯಕ್ತಿ ಮೊಬೈಲ್ ಸಮೇತ ಓಡಿ ಹೋಗಿದ್ದ ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದರು.

ಮಹದೇವಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಸ್ಥಳ ಪರಿಶೀಲನೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ ಎಂದು ಮೂಲಗಳು ಹೇಳಿವೆ.

6 ದಿನದಲ್ಲಿ 50 ಕೆ.ಜಿ ಗಾಂಜಾ ಕಳ್ಳಸಾಗಣೆ

ಪ್ರಜಾವಾಣಿ ವಾರ್ತೆ

ಪ್ರಮುಖ ಅಂಶಗಳು
- ಬ್ಯಾಂಕಾಕ್‌ನಿಂದ ಗಾಂಜಾ ಕಳ್ಳಸಾಗಣೆ ವ್ಯಾಪಕ
- ಬುಧವಾರ ಮೂವರಿಂದ 13 ಕೆ.ಜಿ ಗಾಂಜಾ ವಶ
- ಚೆಕ್–ಇನ್ ಬ್ಯಾಗ್‌ಗಳಲ್ಲಿ ಅಡಗಿಸಿ ಕಳ್ಳಸಾಗಣೆ

ದೇವನಹಳ್ಳಿ: ಇಲ್ಲಿ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಳೆದ ಆರು ದಿನಗಳಲ್ಲಿ ಕಸ್ಟಮ್ಸ್ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಕಳ್ಳಸಾಗಣೆ ಮಾಡುತ್ತಿದ್ದ 50 ಕೆ.ಜಿಗೂ ಅಧಿಕ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ.

ಬ್ಯಾಂಕಾಕ್‌ನಿಂದ ಗಾಂಜಾ ಕಳ್ಳಸಾಗಣೆ ಹೆಚ್ಚಿದ್ದು, ಮೇ ತಿಂಗಳಲ್ಲಿ ಬೀಗಿ ತಪಾಸಣೆಯಲ್ಲಿರುವ ಕಸ್ಟಮ್ಸ್ ಅಧಿಕಾರಿಗಳು ಕೇವಲ 6 ದಿನದಲ್ಲಿಯೇ 50 ಕೆ.ಜಿಗೂ ಅಧಿಕ ಗಾಂಜಾವನ್ನು ಜಪ್ತಿ ಮಾಡಿದ್ದಾರೆ. ಬಹುತೇಕ ಪ್ರಕರಣಗಳಲ್ಲಿ ಬ್ಯಾಂಕಾಕ್‌ನಿಂದ ಬಂದ ಪ್ರಮಾಣಿಕರೇ ಆರೋಪಿಗಳಾಗಿದ್ದಾರೆ. ಎಲ್ಲ ಪ್ರಕರಣಗಳಲ್ಲಿಯೂ ಬ್ಯಾಂಕಾಕ್‌ನಿಂದಲೇ ಹೈಡ್ರೋಪೋನಿಕ್ ಗಾಂಜಾವೂ ಕಳ್ಳಸಾಗಣೆಯಾಗುತ್ತಿರುವ ಬಗ್ಗೆ ತೀವ್ರ ನಿಗಾ ವಹಿಸಲಾಗಿದೆ.



ಬುಧವಾರವೂ ಕಸ್ಟಮ್ಸ್ ಅಧಿಕಾರಿಗಳು ಮೂವರು ಪ್ರಯಾಣಿಕರಿಂದ 12.96 ಕೆ.ಜಿ ಹೈಡ್ರೋಪೋನಿಕ್ ಗಾಂಜಾವನ್ನು ವಶಪಡಿಸಿಕೊಂಡಿದ್ದು, ಮೂವರನ್ನು ಬಂಧಿಸಿದ್ದಾರೆ.

₹13 ಕೋಟಿಯ ಗಾಂಜಾ ವಶ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸೋಮವಾರ ತಡರಾತ್ರಿ ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಕಸ್ಟಮ್ಸ್ ಅಧಿಕಾರಿಗಳು ಒಟ್ಟು ₹13.17ಕೋಟಿ ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ವಶಕ್ಕೆ ಪಡೆದಿದ್ದಾರೆ. ಈ ಮೂರು ಪ್ರಕರಣಗಳಲ್ಲಿ ಒಟ್ಟು ಐವರು ಪ್ರಯಾಣಿಕರನ್ನು ಬಂಧಿಸಲಾಗಿದೆ.

ಸಂಶಯಾಸ್ಪದವಾಗಿ ವರ್ತಿಸುತ್ತಿದ್ದ ಬ್ಯಾಂಕಾಕ್‌ನಿಂದ ಬಂದಿದ್ದ ಇಬ್ಬರು ಪ್ರಯಾಣಿಕರ ಲಗೇಜ್ ಬ್ಯಾಗ್ ತಪಾಸಣೆ ನಡೆಸಿದಾಗ ₹2.75 ಕೋಟಿ ಮೌಲ್ಯದ 7.86 ಕೆ.ಜಿ ಗಾಂಜಾ ಪತ್ತೆಯಾಗಿದೆ.

ಬೇರೆ ಬೇರೆ ವಿಮಾನಗಳಲ್ಲಿ ಬಂದಿಳಿದ ಇಬ್ಬರು ಪ್ರಯಾಣಿಕರು ಒಳಉಡುಪು ಮತ್ತು ಚೆಕ್-ಇನ್ ಬ್ಯಾಗ್‌ಗಳಲ್ಲಿ ಅಡಗಿಸಿಕೊಂಡು ಸಾಗಿಸಲು ಯತ್ನಿಸಿದ 26.62 ಕೆ.ಜಿ ಗಾಂಜಾವನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ವಶಪಡಿಸಿಕೊಂಡ ಗಾಂಜಾ ಮೌಲ್ಯ ₹9.31 ಕೋಟಿ.

ಬ್ಯಾಂಕಾಕ್‌ನಿಂದ ಬಂದ ಮತ್ತೊಬ್ಬ ಪ್ರಯಾಣಿಕರ ಬ್ಯಾಗ್‌ನಲ್ಲಿ ₹1.11 ಕೋಟಿ ಮೌಲ್ಯದ ₹3.18 ಕೆ.ಜಿ ಗಾಂಜಾ ಪತ್ತೆಹಚ್ಚಲಾಗಿದೆ. ಐವರ ವಿರುದ್ಧ ಮಾದಕ ವಸ್ತುಗಳ ನಿಷೇಧ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಬ್ಯಾಂಕಾಕ್‌ನಿಂದ ಬಂದ ಮೂವರು ಪ್ರಯಾಣಿಕರನ್ನು ತಪಾಸಣೆ ನಡೆಸಿದಾಗ ಲಗೇಜ್ ಮತ್ತು ಚೆಕ್–ಇನ್ ಬ್ಯಾಗ್‌ಗಳಲ್ಲಿ ಅಡಗಿಸಿ ಕಳ್ಳಸಾಗಣೆ ಪತ್ತೆಯಾಗಿದೆ. ವಶಕ್ಕೆ ಪಡೆದ ಗಾಂಜಾದ ಮೌಲ್ಯ ₹4.53 ಕೋಟಿ ಎಂದು ಅಂದಾಜಿಸಲಾಗಿದೆ.

ಮೂವರು ಪ್ರಯಾಣಿಕರ ವಿರುದ್ಧ ಮಾದಕ ವಸ್ತುಗಳ ನಿಷೇಧ ಕಾಯಿದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿ, ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಜೆ.ಪಿ.ನಗರದಲ್ಲಿ ನಿರ್ಮಾಣವಾಗಿರುವ 'ಬ್ರಿಡ್ಜ್ ಹೆಲ್ತ್ ಮಲ್ಟಿಸ್ಪೆಷಾಲಿಟಿ ಕ್ಲಿನಿಕ್' ಅನ್ನು ಸಂಸದ ತೇಜಸ್ವಿ ಸೂರ್ಯ ಅವರು ಬುಧವಾರ ಉದ್ಘಾಟಿಸಿದರು. ಬ್ರಿಡ್ಜ್ ಹೆಲ್ತ್‌ನ ಕ್ಲಿನಿಕಲ್ ಮುಖ್ಯಸ್ಥೆ ಡಾ.ಧನ್ಯಾ ಪ್ರಭು ರಾಮದಾಸ್, ನಿರ್ದೇಶಕಿ ಶೀಬಾ ಡಿ ಮೆಲ್ಲೊ, ನಿರ್ದೇಶಕ ಕೆ.ಸಿ. ಗಣೇಶ್ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕರಣ್ ವರ್ಮಾ ಉಪಸ್ಥಿತರಿದ್ದರು

ಪ್ರಜಾವಾಣಿ ಚಿತ್ರ

'ಗೋವು, ಒಂಟೆ ವಧೆ ಮೇಲೆ ನಿಗಾ ಇಡಿ'

ಬೆಂಗಳೂರು: 'ನಗರ ಜಿಲ್ಲೆಯಲ್ಲಿ ಗೋವು, ಒಂಟೆ ಅಕ್ರಮ ಸಾಗಣೆ ಅಥವಾ ಹತ್ಯೆ ಮಾಡಿದಲ್ಲಿ ಏಳು ವರ್ಷ ಜೈಲು, ಹಾಗೂ ₹10 ಲಕ್ಷವರೆಗೆ ದಂಡ ವಿಧಿಸಲಾಗುವುದು' ಎಂದು ಜಿಲ್ಲಾಧಿಕಾರಿ ಜಿ.ಜಗದೀಶ ಎಚ್ಚರಿಕೆ ನೀಡಿದ್ದಾರೆ.

ಬಕ್ರೀದ್ ಸಂದರ್ಭದಲ್ಲಿ ಒಂಟೆ, ಗೋವುಗಳ ಅಕ್ರಮ ಸಾಗಣೆ ಮತ್ತು ಹತ್ಯೆ ಮಾಡುವುದನ್ನು ತಡೆಗಟ್ಟುವ ಬಗ್ಗೆ ಬುಧವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಜಿಲ್ಲೆಗೆ ಬರುವ ಸಾಗಣೆ ವಾಹನಗಳ ತಪಾಸಣೆ ನಡೆಸಿ ಗೋವು, ಒಂಟೆಗಳ ಅಕ್ರಮ ಸಾಗಣೆ ಕಂಡುಬಂದಲ್ಲಿ ಮುಲಾಜಿಲ್ಲದೇ ಕಾನೂನು ಕ್ರಮ ಜರುಗಿಸಬೇಕು' ಎಂದು ಪೊಲೀಸ್ ಮತ್ತು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

'ವಶಪಡಿಸಿಕೊಂಡ ಗೋವುಗಳನ್ನು ಪಶುಪಾಲನಾ ಇಲಾಖೆ ಸಹಯೋಗದೊಂದಿಗೆ ಗೋಶಾಲೆಗಳಿಗೆ ಸಾಗಿಸಿ ಸುರಕ್ಷಿತವಾಗಿ ನೋಡಿಕೊಳ್ಳಬೇಕು. ಒಂಟೆ/ ಗೋಹತ್ಯೆ ಕಂಡುಬಂದಲ್ಲಿ ನಗರ ಪಾಲಿಕೆಗಳ ಸಹಾಯವಾಣಿ 1533ಕ್ಕೆ ಕರೆ ಮಾಡಿ ದೂರು ನೀಡಬಹುದು. ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು' ಎಂದು ತಿಳಿಸಿದರು.

ಮೈಸೂರು ರಸ್ತೆ (ಕುಂಬಳಗೂಡು), ತುಮಕೂರು ರಸ್ತೆ (ಎಕ್ಸಿಬಿಷನ್ ಕೇಂದ್ರ) ಮಾಗಡಿ ರಸ್ತೆ (ತಾವರೆಕೆರೆ), ಹೊಸೂರು ರಸ್ತೆ (ಅತ್ತಿಬೆಲೆ), ಹಳೆ ಮದ್ರಾಸ್ ರಸ್ತೆ (ಹೊಸಕೋಟೆ ಹತ್ತಿರ) ಸಹಿತ 10 ತಪಾಸಣಾ ಕೇಂದ್ರ ಸಾರಿಗೆ ಇಲಾಖೆಯೊಂದಿಗೆ ನಿರ್ಮಿಸಿ, ಮೂರು ಪಾಳಿಗಳಲ್ಲಿ ಕಾರ್ಯನಿರ್ವಹಿಸಬೇಕು. ಪ್ರಾಣಿ ವಧೆಯಿಂದ ಉತ್ಪತ್ತಿಯಾಗುವ ತ್ಯಾಜ್ಯವನ್ನು ನಿಯಮಾನುಸಾರ ನಿರ್ವಹಣೆ ಮಾಡಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪಶುಪಾಲನಾ ಇಲಾಖೆ ಉಪನಿರ್ದೇಶಕ ಡಾ. ಪರಮೇಶ್ವರ್, ಜಿಬಿಎ ಉಪನಿರ್ದೇಶಕ ಡಾ. ಚಂದ್ರಯ್ಯ ಉಪಸ್ಥಿತರಿದ್ದರು.

ದೊಡ್ಡಬಳ್ಳಾಪುರ: ಎರಡನೇ ಮದುವೆಗೆ ಒಪ್ಪದ ಕಾರಣ ಬೆಂಕಿ ಹಚ್ಚಿದ್ದ ಸಖ

ಕಾರಿನಲ್ಲಿದ್ದ ಅಸ್ಥಿಪಂಜರ ಉಪನ್ಯಾಸಕಿಯದ್ದು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಜಿಂಕೆಬಚ್ಚಹಳ್ಳಿ ಸಮೀಪ ಐದು ದಿನಗಳ ಹಿಂದೆ ಸುಟ್ಟು ಕರಕಲಾಗಿದ್ದ ಕಾರಿನಲ್ಲಿ ಪತ್ತೆಯಾಗಿದ್ದ ಅಸ್ಥಿಪಂಜರ ದೇವನಹಳ್ಳಿಯ ಖಾಸಗಿ ಕಾಲೇಜಿನ ಅತಿಥಿ ಉಪನ್ಯಾಸಕಿಯದ್ದು ಎಂದು ಪತ್ತೆಹಚ್ಚಲಾಗಿದೆ.

ಮೃತರನ್ನು ಸರೋಜಾ(40) ಅವರದ್ದು ಎಂದು ಗುರುತಿಸಲಾಗಿದೆ.

ಫೇಸ್‌ಬುಕ್ ಮೂಲಕ ಪರಿಚಯವಾಗಿದ್ದ ಯಲಹಂಕ ತಾಲ್ಲೂಕಿನ ಮಾರಸಂದ್ರ ನಿವಾಸಿ ರಾಮಾಂಜಿನಪ್ಪ ಅವರೊಂದಿಗೆ ಸರೋಜಾ ಅವರಿಗೆ ವಿವಾಹೇತರ ಸಂಬಂಧ ಇತ್ತು.

ಮೇ 2ರಂದು ಗೆಳೆಯ ರಾಮಾಂಜಿನಪ್ಪ ಸರೋಜಾ ಅವರನ್ನು ಕಾರಿನಲ್ಲಿ ಕರೆದೊಯ್ದು ಮದುವೆಗೆ ಪೀಡಿಸಿದ್ದ. ಒಪ್ಪದ ಸರೋಜಾಗೆ ಬೆಂಕಿ ಹಚ್ಚಿ ಪರಾರಿಯಾಗಿದ್ದ. ಮಾರನೇ ದಿನ ಬಿಡದಿ ಬಳಿ ರೈಲಿನಡಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಚಂದ್ರಕಾಂತ್ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದೇವನಹಳ್ಳಿಯಲ್ಲಿ ವಾಸವಾಗಿದ್ದ ಸರೋಜಾ ಅವರಿಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ಪತಿ ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುತ್ತಿದ್ದಾರೆ.


ಜಿಂಕೆಬಚ್ಚಹಳ್ಳಿ ಸಮೀಪ ಸುಟ್ಟು ಹೋಗಿದ್ದ ಕಾರು

ರಾಮಾಂಜಿನಪ್ಪ ಅವರಿಗೂ ಮದುವೆಯಾಗಿ, ಒಬ್ಬ ಮಗಳಿದ್ದಾಳೆ. ದಂಪತಿಯ ನಡುವೆ ಹೊಂದಾಣಿಕೆ ಇರಲಿಲ್ಲ. ರಾಮಾಂಜಿನಪ್ಪ, ಪತ್ನಿಯಿಂದ ಪ್ರತ್ಯೇಕವಾಗಿದ್ದರು. ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದ ಸರೋಜಾ ಅವರೊಂದಿಗೆ ಅವರು ಗೆಳೆತನ ಬೆಳೆಸಿದ್ದರು. ಮುಂದೆ ಇದು ಇಬ್ಬರ ಮಧ್ಯೆ ವಿವಾಹೇತರ ಸಂಬಂಧಕ್ಕೆ ದಾರಿ ಮಾಡಿಕೊಟ್ಟಿತ್ತು.

ಹುಷಾರಿಲ್ಲ, ಆಸ್ಪತ್ರೆಗೆ ಹೋಗುವುದಾಗಿ ಗಂಡನಿಗೆ ಹೇಳಿದ ಸರೋಜಾ ಮೇ 2ರಂದು ಬಸ್ ಹತ್ತಿದ್ದರು. ಮಾರ್ಗ ಮಧ್ಯ ಬಸ್ ಇಳಿದು ರಾಮಾಂಜಿನಪ್ಪ ಅವರೊಂದಿಗೆ ದೊಡ್ಡಬಳ್ಳಾಪುರದತ್ತ ಪ್ರಯಾಣ ಬೆಳೆಸಿದ್ದರು.

ಕಾರಿನಲ್ಲಿ ಹೊರಟ ಇಬ್ಬರೂ ಮಾರಸಂದ್ರ ಮಾರ್ಗವಾಗಿ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿನ ಜಿಂಕೆಬಚ್ಚನಹಳ್ಳಿಯ ನಿರ್ಜನ ಪ್ರದೇಶಕ್ಕೆ ಬಂದಿದ್ದಾರೆ. ಮದುವೆ ಸಂಬಂಧ ಇಬ್ಬರ ಮಧ್ಯೆ ಮಾತುಕತೆ ನಡೆದಿದೆ. ಸರೋಜಾ ವಿವಾಹಕ್ಕೆ ನಿರಾಕರಿಸಿದ್ದರಿಂದ ಕಾರಿಗೆ ಬೆಂಕಿ ಹಚ್ಚಿದ ರಾಮಾಂಜಿನಪ್ಪ ಪರಾರಿಯಾಗಿದ್ದ.

ಈ ವೇಳೆ ರಾಮಾಂಜಿನಪ್ಪ ಅವರ ಬಟ್ಟೆಗೂ ಬೆಂಕಿ ತಗುಲಿತ್ತು. ದೂರದ ನೀಲಗಿರಿ ತೋಪಿನಲ್ಲಿ ಶರ್ಟ್, ಮೊಬೈಲ್ ಬಿಟ್ಟು ಪರಾರಿಯಾಗಿದ್ದರು. ಇತ್ತ ಕಾರಿನೊಂದಿಗೆ ಸರೋಜಾ ಸುಟ್ಟು ಕರಕಲಾಗಿದ್ದರು.

ರಾಮಾಂಜಿನಪ್ಪ ತಂದ ಕಾರು ಅವರ ಪಕ್ಕದ ಮನೆಯ ಸುರೇಶ್ ಎಂಬುವರಿಗೆ ಸೇರಿದ್ದು. ಆರೋಗ್ಯ ಸರಿ ಇಲ್ಲ ಆಸ್ಪತ್ರೆಗೆ ಹೋಗಬೇಕು ಎಂದು ನೆಪ ಹೇಳಿ ಕಾರು ಪಡೆದುಕೊಂಡಿದ್ದರು. ಕಾರಿಗೆ ಬೆಂಕಿ ಬಿದ್ದ ತಕ್ಷಣವೇ ಅದರ ಮಾಲೀಕ ಸುರೇಶ್ ಮೊಬೈಲ್‌ಗೆ 'ಕಾರಿಗೆ ಬೆಂಕಿ ತಗುಲಿದೆ' ಎಂದು ಲೊಕೇಶನ್ ಸಹಿತ ಜಿಪಿಎಸ್ ಸಂದೇಶ ಹೋಗಿದೆ.

ಸ್ಥಳಕ್ಕೆ ಬಂದ ಸುರೇಶ್ ಪರಿಶೀಲನೆ ಮಾಡಿದಾಗ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಕಾರು, ಕಾರಿನ ಒಳಗಡೆ ಮಹಿಳೆ ಶವ ಪತ್ತೆಯಾಗಿತ್ತು. ರಾಮಾಂಜಿನಪ್ಪ ತನ್ನ ಕಾರು ದುರುಪಯೋಗಪಡಿಸಿಕೊಂಡ ಬಗ್ಗೆ ಪ್ರಕರಣ ದಾಖಲಿಸಿದ್ದರು.

ಪೊಲೀಸರು ರಾಮಾಂಜಿನಪ್ಪ ಹುಡುಕಾಟ ಆರಂಭಿಸಿದ್ದರು. ಅದೇ ದಿನ ತಡರಾತ್ರಿ ಆತ ಬಿಡದಿ ಬಳಿ ರೈಲಿಗೆ ತಲೆಕೊಟ್ಟು ಆತ್ಮಹತ್ಯೆಗೆ ಶರಣಾಗಿದ್ದ. ಸ್ಥಳದಲ್ಲಿ ಮತದಾರರ ಗುರುತಿನ ಕಾರ್ಡ್ ಪತ್ತೆಯಾಗಿದ್ದರಿಂದ ರೈಲ್ವೆ ಪೊಲೀಸರು ದೊಡ್ಡಬಳ್ಳಾಪುರ ಪೊಲೀಸರಿಗೆ ಮಾಹಿತಿ ನೀಡಿದ್ದರು ಎಂದು ಎಸ್.ಪಿ ಚಂದ್ರಕಾಂತ್ ತಿಳಿಸಿದರು.

ಲಾರಿಗೆ ಡಿಕ್ಕಿ: ವ್ಯಕ್ತಿ ಸಾವು

ಮಹದೇವಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಿಂತಿದ್ದ ಕಾಂಕ್ರೀಟ್ ಮಿಶ್ರಣ ಮಾಡುವ ಲಾರಿಗೆ ದ್ವಿಚಕ್ರ ವಾಹನ ಡಿಕ್ಕಿಯಾಗಿ, ಸವಾರ ಚಂಡೀಗಢದ ರೋಷನ್ ಕನ್ವರ್(26) ಮೃತಪಟ್ಟಿದ್ದಾರೆ.

ಖಾಸಗಿ ಕಂಪನಿಯಲ್ಲಿ ಕೆಲಸ ಮುಗಿಸಿಕೊಂಡ ಬುಧವಾರ ಮುಂಜಾನೆ ಕಗ್ಗದಾಸಪುರದಲ್ಲಿ ಇರುವ ಮನೆಗೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ಹೊರ ವರ್ತುಲ ರಸ್ತೆಯ ದೊಡ್ಡನೆಕ್ಕುಂದಿ ಬಳಿಯ ಹೋಟೆಲ್ ಎದುರು ಅಪಘಾತ ಸಂಭವಿಸಿದೆ. ಯಾವುದೇ, ಸೂಚನಾ ಫಲಕವನ್ನು ಇಡದೇ ಕಾಂಕ್ರೀಟ್ ಮಿಶ್ರಣ ಲಾರಿಯನ್ನು ರಸ್ತೆಬದಿಯಲ್ಲಿ ನಿಲುಗಡೆ ಮಾಡಲಾಗಿತ್ತು. ಲಾರಿ ನಿಲುಗಡೆ ಮಾಡಿರುವುದು ರೋಷನ್ ಕನ್ವರ್ ಗಮನಕ್ಕೆ ಬಂದಿರಲಿಲ್ಲ. ಮನೆಗೆ ತಲುಪಲು ವೇಗವಾಗಿ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದರು. ಲಾರಿಗೆ ಡಿಕ್ಕಿಯಾದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ ರೋಷನ್ ಕನ್ವರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.


ಯುವತಿಗೆ ಲೈಂಗಿಕ ಕಿರುಕುಳ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತನೊಂದಿಗೆ ರಾತ್ರಿ ವಾಯುವಿಹಾರಕ್ಕೆ ಹೋಗುತ್ತಿದ್ದ ಯುವತಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪಿಯನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

22 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಆಕಾಶ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ದೂರುದಾರೆ ಹಾಗೂ ಅವರ ಸ್ನೇಹಿತ ಮೇ 2ರಂದು ರಾತ್ರಿ 10 ಗಂಟೆ ಸುಮಾರಿಗೆ ಎಂಎಸ್‌ಆರ್ ನಗರದ 3ನೇ ಕ್ರಾಸ್ ರಸ್ತೆಯಲ್ಲಿ ವಾಯುವಿಹಾರ ಮಾಡುತ್ತಿದ್ದರು. ಈ ವೇಳೆ ಕಪ್ಪು ಬಣ್ಣದ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿ, ಯುವತಿಯ ಮೈಕೈ ಮುಟ್ಟಿ ಪರಾರಿಯಾಗಿದ್ದ. ಆರೋಪಿಯ ದ್ವಿಚಕ್ರ ವಾಹನದ ನಂಬರ್ ಅನ್ನು ಅಸ್ಪಷ್ಟವಾಗಿ ಗಮನಿಸಿದ್ದ ಯುವತಿ ಸದಾಶಿವನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು.



ಪ್ರಕರಣ ದಾಖಲಿಸಿಕೊಂಡು ಘಟನಾ ಸ್ಥಳದ ಸುತ್ತಮುತ್ತಲಿನ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜೀವ್ ಗಾಂಧಿ ವಿ.ವಿ ಕಾರ್ಯಕ್ರಮದಲ್ಲಿ ಗೆಹಲೋತ್ ಅಭಿಮತ


'ಹೋಮಿಯೋಪಥಿ ಒಂದು ಶಕ್ತಿಶಾಲಿ ಪದ್ಧತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಹೋಮಿಯೋಪಥಿ ಒಂದು ಶಕ್ತಿಶಾಲಿ ಮತ್ತು ಜನಪ್ರಿಯ ವೈದ್ಯಕೀಯ ಪದ್ಧತಿಯಾಗಿ ಗುರುತಿಸಿಕೊಳ್ಳುತ್ತಿದೆ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಭಿಪ್ರಾಯಪಟ್ಟರು.

ಹೋಮಿಯೋಪಥಿ ಫೌಂಡೇಷನ್ ಸಹಯೋಗದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ನಗರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಹೋಮಿಯೋಪಥಿ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶದಲ್ಲಿ ಲಕ್ಷಾಂತರ ಜನರು ಈ ಪದ್ಧತಿಯ ಪ್ರಯೋಜನ ಪಡೆಯುತ್ತಿದ್ದಾರೆ. ಆಯುಷ್ ಸಚಿವಾಲಯವು ಅಗತ್ಯ ಪ್ರೋತ್ಸಾಹ ನೀಡುತ್ತಿದೆ. ರಾಜ್ಯದಲ್ಲಿ ಉತ್ತಮ ಗುಣಮಟ್ಟದ ವೈದ್ಯಕೀಯ ಶಿಕ್ಷಣ, ಸಮರ್ಪಿತ ವೈದ್ಯರು ಮತ್ತು ಸಂಶೋಧನೆಯಿಂದಾಗಿ ಹೋಮಿಯೋಪಥಿ ವಿಧಾನವು ಬೆಳವಣಿಗೆ ಹೊಂದುತ್ತಿದೆ' ಎಂದರು.



ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಗೌರವಿಸಲಾಯಿತು. ಡಾ. ಭಗವಾನ್ ಬಿ.ಸಿ., ಡಾ. ಬಿ.ಟಿ. ರುದ್ರೇಶ್ ಮತ್ತು ಸಿ.ಕೆ. ರಾಮಮೂರ್ತಿ ಉಪಸ್ಥಿತರಿದ್ದರು

'ವೈದ್ಯಕೀಯ ವಿಜ್ಞಾನವು ಬಹಳ ಮುಂದುವರಿದಿದ್ದರೂ, ಜೀವನಶೈಲಿ ಆಧಾರಿತ ಕಾಯಿಲೆಗಳು, ಮಾನಸಿಕ ಒತ್ತಡ ಮತ್ತು ದೀರ್ಘಕಾಲದ ಕಾಯಿಲೆಗಳು ಹೆಚ್ಚುತ್ತಿವೆ. ಈ ಸಮಯದಲ್ಲಿ, ಹೋಮಿಯೋಪಥಿಯ ಸಮಗ್ರ ಚಿಕಿತ್ಸಾ ವಿಧಾನವು ಸಮತೋಲಿತ ಮತ್ತು ಶಾಶ್ವತ ಆರೋಗ್ಯದ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ' ಎಂದರು.

ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ., 'ರೋಗಕ್ಕೆ ಚಿಕಿತ್ಸೆಯನ್ನು ಮಾತ್ರ ನೀಡದೆ, ಅದರ ಮೂಲ ಹುಡುಕುವ ಕೆಲಸವನ್ನು ಹೋಮಿಯೋಪಥಿ ಮಾಡುತ್ತದೆ. ಹೀಗಾಗಿ, ಈ ಚಿಕಿತ್ಸಾ ಪದ್ಧತಿಯಲ್ಲಿ ಶಿಕ್ಷಣವನ್ನು ಬಲಪಡಿಸುವುದು ಹಾಗೂ ಅದನ್ನು ಮುಖ್ಯ ಆರೋಗ್ಯ ವ್ಯವಸ್ಥೆಯೊಂದಿಗೆ ಜೋಡಿಸುವುದು ವಿಶ್ವವಿದ್ಯಾಲಯದ ಬದ್ಧತೆಯಾಗಿದೆ' ಎಂದು ಹೇಳಿದರು.

ಕರ್ನಾಟಕ ಹೋಮಿಯೋಪಥಿ ಮಂಡಳಿಯ ಅಧ್ಯಕ್ಷ ಡಾ.ಬಿ.ಟಿ. ರುದ್ರೇಶ್, 'ಶೇ 50ರಷ್ಟು ರೋಗಗಳಿಗೆ ಔಷಧಗಳು ಅಗತ್ಯವಿರುವುದಿಲ್ಲ. ಬದಲಾಗಿ, ಪ್ರೀತಿ, ಕಾಳಜಿ, ಸ್ನೇಹ ಮತ್ತು ಕರುಣೆ ಅಗತ್ಯ. ನೂರಾರು ವರ್ಷಗಳ ನಂತರವೂ ಹೋಮಿಯೋಪಥಿ ಇಂದು ನಮ್ಮ ನಡುವೆ ಇದ್ದು, ಭಾರತದ ಬಹು ನಂಬಿಕೆಯ ವೈದ್ಯಪದ್ಧತಿಯಾಗಿ ನಮ್ಮನ್ನು ಕಾಯುತ್ತಿದೆ' ಎಂದರು. ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ, ವೈದ್ಯಕೀಯ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ವಿಶ್ವವಿದ್ಯಾಲಯದ ಕುಲಸಚಿವ ಅರ್ಜುನ್ ಒಡೆಯರ್, ಮೌಲ್ಯಮಾಪನ ಕುಲಸಚಿವ ಡಾ. ರಿಯಾಜ್ ಭಾಷ ಎಸ್., ಹಣಕಾಸು ಅಧಿಕಾರಿ ಬಿ.ಕೆ. ಗಂಗಾಧರ ಉಪಸ್ಥಿತರಿದ್ದರು.

ಗೌನ್ ಇಲ್ಲದೇ ವಕೀಲೆ ಹಾಜರು ನ್ಯಾಯಪೀಠ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌನ್ ಧರಿಸದೇ ನ್ಯಾಯಪೀಠದ ಮುಂದೆ ಹಾಜರಾಗಿ ವಾದ ಮಂಡಿಸಲು ಮುಂದಾದ ಕಿರಿಯ ವಕೀಲೆಯೊಬ್ಬರನ್ನು ರಜಾಕಾಲದ ಹೈಕೋರ್ಟ್ ಪೀಠ ತರಾಟೆಗೆ ತೆಗೆದುಕೊಂಡಿತು.

ನಿರೀಕ್ಷಣಾ ಜಾಮೀನು ಕೋರಿದ್ದ ಅರ್ಜಿಯೊಂದನ್ನು ತುರ್ತಾಗಿ ವಿಚಾರಣೆ ನಡೆಸುವಂತೆ ಕೋರಿ ಕಿರಿಯ ವಕೀಲೆಯೊಬ್ಬರು ರಜಾಕಾಲದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ಪೀಠದ ಮುಂದೆ ಮೆಮೊ ಸಲ್ಲಿಸಲು ಮುಂದಾದರು.

ವಕೀಲೆ ಗೌನ್ ಧರಿಸದೇ ಇರುವುದನ್ನು ಗಮನಿಸಿದ ನ್ಯಾ. ಶ್ರೀಶಾನಂದ ಅವರು, 'ನಿಮ್ಮ ಗೌನ್ ಎಲ್ಲಿ? ಗೌನ್ ಇಲ್ಲದೇ ನ್ಯಾಯಪೀಠದ ಎದುರು ಹಾಜರಾಗಲು ನಿಮಗೆಷ್ಟು ಧೈರ್ಯ?' ಎಂದು ಕಿಡಿಕಾರಿದರು.



'ಏನು ಗೌನ್ ಆಫೀಸಿನಲ್ಲೇ ಬಿಟ್ಟು ಬಂದ್ರಾ? ನಿಮ್ಮ ಹಿರಿಯ ವಕೀಲರು ಯಾರು? ನಿಮ್ಮ ಸನ್ನದು ಯಾವಾಗ ನೋಂದಣಿ ಆಗಿದೆ? ಕೋರ್ಟ್ ಅಂದರೆ ತಮಾಷೆ ಎಂದುಕೊಂಡಿದ್ದೀರಾ?' ಎಂದು ಅಸಮಾಧಾನ ವ್ಯಕ್ತಪಡಿಸಿ, 'ನೋಂದಣಿ ರದ್ದು ಮಾಡಲು ವಕೀಲರ ಪರಿಷತ್‌ಗೆ ತಿಳಿಸಿ' ಎಂದು ಕೋರ್ಟ್ ಅಧಿಕಾರಿಗೆ ಸೂಚಿಸಿದರು.

ಕಡೆಗೆ ವಕೀಲೆಯ ಬೇಷರತ್ ಕ್ಷಮೆಯನ್ನು ಮನ್ನಿಸಿ ತುರ್ತು ವಿಚಾರಣೆಗೆ ಕೋರಿದ್ದ ಮೆಮೊವನ್ನು ಆಧರಿಸಿ ಅರ್ಜಿ ವಿಚಾರಣೆಯನ್ನು ಇದೇ 7ಕ್ಕೆ ನಿಗದಿಪಡಿಸಲು ನಿರ್ದೇಶಿಸಿದರು.

ಸಂಸತ್ತಿಗೆ ನಿರ್ದೇಶಿಸಬಹುದೇ?: ಸುಪ್ರೀಂ

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತರು (ಸಿಇಸಿ) ಮತ್ತು ಇತರ ಚುನಾವಣಾ ಆಯುಕ್ತರ (ಇಸಿ) ನೇಮಕಾತಿ ಕಾರ್ಯವಿಧಾನಗಳನ್ನು ನಿಯಂತ್ರಿಸಲು ಕಾನೂನು ರೂಪಿಸುವಂತೆ ಸಂಸತ್ತಿಗೆ ನ್ಯಾಯಾಲಯ ನಿರ್ದೇಶಿಸಬಹುದೇ ಎಂದು ಸುಪ್ರೀಂ ಕೋರ್ಟ್ ಬುಧವಾರ ಪ್ರಶ್ನಿಸಿತು.



ಸಿಇಸಿ ಮತ್ತು ಇ.ಸಿಗಳ ನೇಮಕ ಸಮಿತಿಯಿಂದ ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಅವರನ್ನು ಹೊರಗಿಟ್ಟಿರುವ 2023ರ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಅಂತಿಮ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠ ಈ ಹೇಳಿಕೆ ನೀಡಿದೆ.

ಅರ್ಜಿಗಳ ಪರ ವಕೀಲರು ಮತ್ತು ಸರ್ಕಾರಿ ವಕೀಲರ ವಾದ, ಪ್ರತಿವಾದವನ್ನು ಪೀಠ ಆಲಿಸಿತು. ಈ ಕುರಿತು ವಿಚಾರಣೆ ಗುರುವಾರವು ಮುಂದುವರಿಯಲಿದೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ರಾಜ್ಯ ಮಿಡ್‌ವೈಫ್ರಿ ತರಬೇತಿ ಸಂಸ್ಥೆ ಹಮ್ಮಿಕೊಂಡಿದ್ದ ಕಾರ್ಯಕ್ರಮ

24 ಮಂದಿಗೆ ಪ್ರಸೂತಿ ಶುಶ್ರೂಷೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿವಿಲಾಸ ಆಸ್ಪತ್ರೆಯಲ್ಲಿ ರಾಜ್ಯ ಮಿಡ್ ವೈಫ್ರಿ ತರಬೇತಿ ಸಂಸ್ಥೆ ಹಮ್ಮಿಕೊಂಡಿದ್ದ 18 ತಿಂಗಳ ಪ್ರಸೂತಿ ಶುಶ್ರೂಷೆ ತರಬೇತಿಯನ್ನು 24 ಅಭ್ಯರ್ಥಿಗಳು ಪೂರ್ಣಗೊಳಿಸಿದ್ದಾರೆ.

ತರಬೇತಿ ಪಡೆದ ಅಭ್ಯರ್ಥಿಗಳಿಗೆ ಪ್ರಮಾಣಪತ್ರಗಳನ್ನು ಪ್ರದಾನ ಮಾಡಲಾಯಿತು.

ಈ ವೇಳೆ ಮಾತನಾಡಿದ ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸವಿತಾ ಸಿ., 'ಕೇಂದ್ರ ಸರ್ಕಾರವು 2019ರಲ್ಲಿ 'ನರ್ಸ್ ಪ್ರಾಕ್ಟಿಶ್ನರ್ ಮಿಡ್‌ವೈಫ್ರಿ ಎಜುಕೇಟರ್ಸ್' (ಎನ್‌ಪಿಎಂಇ) ತರಬೇತಿ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಸಹಜ ಹಾಗೂ ಸುರಕ್ಷಿತ ಹೆರಿಗೆ, ತಾಯಿ ಮತ್ತು ನವಜಾತ ಶಿಶುಗಳ ಆರೈಕೆ ಬಗ್ಗೆ ಈ ತರಬೇತಿ ತಿಳಿಸಿಕೊಡಲಿದೆ. ಹೆರಿಗೆ ಮತ್ತು ಪ್ರಸವೋತ್ತರ ಅವಧಿಯಲ್ಲಿ ಉತ್ತಮ ಗುಣಮಟ್ಟ, ಗೌರವಯುತ ಮತ್ತು ಮಹಿಳಾ ಕೇಂದ್ರಿತ ಆರೈಕೆ ನೀಡುವ ಗುರಿಯನ್ನು ಈ ತರಬೇತಿ ಹೊಂದಿದೆ' ಎಂದು ಹೇಳಿದರು.


ಕಾರ್ಯಕ್ರಮದಲ್ಲಿ ಪ್ರಸೂತಿ ಶುಶ್ರೂಷೆ ತರಬೇತಿ ಪಡೆದ ಅಭ್ಯರ್ಥಿಗಳೊಂದಿಗೆ ಡಾ. ಸವಿತಾ, ಡಾ. ಸಂತೋಷ್, ಡಾ. ಆಶೋಕ್ ದೇವೂರ್, ಶ್ರೀಕಾಂತ್ ಪುಲಾರಿ, ಮಡಿವಾಳಪ್ಪ ನಾಗರಹಳ್ಳಿ, ಸಾರಾ ಕಾಕ್ಸನ್, ಭೀಮರಾಯ ಉಪಸ್ಥಿತರಿದ್ದರು

'ಅಭ್ಯರ್ಥಿಗಳಿಗೆ ಮೊದಲ 12 ತಿಂಗಳು ವಾಣಿವಿಲಾಸ ಆಸ್ಪತ್ರೆಯಲ್ಲಿಯೇ ಲಿಖಿತ ಮತ್ತು ಪ್ರಾಯೋಗಿಕ ತರಬೇತಿ ನೀಡಲಾಯಿತು. ಉಳಿದ 6 ತಿಂಗಳು ರಾಜ್ಯದ ನಿಗದಿತ ಮಿಡ್‌ವೈಫ್ರಿ ಕೇಂದ್ರದಲ್ಲಿ ತರಬೇತಿ ಒದಗಿಸಲಾಯಿತು' ಎಂದು ಹೇಳಿದರು.

ಸ್ಥಾನಿಕ ವೈದ್ಯಾಧಿಕಾರಿ ಡಾ. ಸಂತೋಷ್ ಪ್ರಭಾ, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗದ ಮುಖ್ಯಸ್ಥ ಡಾ. ಅಶೋಕ್ ದೇವೂರ್, ಕರ್ನಾಟಕ ರಾಜ್ಯ ಶುಶ್ರೂಷಕ ಪರಿಷತ್ತಿನ ರಿಜಿಸ್ಟ್ರಾರ್ ಶ್ರೀಕಾಂತ್ ಪುಲಾರಿ, ಕರ್ನಾಟಕ ರಾಜ್ಯ ಶುಶ್ರೂಷಕ ಪರೀಕ್ಷಾ ಮಂಡಳಿ ಕಾರ್ಯದರ್ಶಿ ಮಡಿವಾಳಪ್ಪ ನಾಗರಹಳ್ಳಿ, ಆಸ್ಟ್ರಿಕ್ ಫೌಂಡೇಷನ್‌ನ ಸಾರಾ ಕಾಕ್ಸನ್, ಕಾರ್ಯಕ್ರಮ ವ್ಯವಸ್ಥಾಪಕ ಭೀಮರಾಯ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು


ಪುರುಷೋತ್ತಮ ಬಿಳಿಮಲೆ

'ನಾವು ರಂಗದವ್ರು' ನಾಟಕ ಪ್ರದರ್ಶನ: ಅತಿಥಿಗಳು: ಜೋಗತಿ ಮಂಜಮ್ಮ, ಪುರುಷೋತ್ತಮ ಬಿಳಿಮಲೆ, ಸುಂದರ್‌ರಾಜ್, ವೈ.ವಿ. ಗುಂಡುರಾವ್, ಮಾಲತೇಶ್ ಬಡಿಗೇರ್, ಬಸವರಾಜ್ ಮಾಲಗತ್ತಿ, ಆಯೋಜನೆ: ರಂಗದವ್ರು ತಂಡ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6.30

ರಾಸಾಯನ ವಿಜ್ಞಾನ ವಿಭಾಗದಿಂದ 'ಕೆಮೋತ್ಸವ-2026': ಉದ್ಘಾಟನೆ: ಬಿ. ರಮೇಶ್, ಅತಿಥಿಗಳು: ಎ. ನವೀನ್ ಜೋಸೆಫ್, ರಮೇಶ್ ಬಿ.ಕೆ., ಎಂ.ವಿ. ವಿಜಯಲಕ್ಷ್ಮಿ, ಆಯೋಜನೆ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10

ಪದವೀಕರಣ ಸಮಾರಂಭ: ಅತಿಥಿ: ಕೊಟ್ರಸ್ವಾಮಿ ಎಂ., ಅಧ್ಯಕ್ಷತೆ: ಬಿ.ಸಿ. ನಾಗೇಂದ್ರ ಕುಮಾರ್, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಮಧ್ಯಾಹ್ನ 2.30

ಶ್ರೀ ಯೋಗಿ ಅವರ 'ದಿ ವಾಂಡರರ್ ಹೂ ಓನ್ಸ್ ದಿ ವರ್ಲ್ಡ್' ಪುಸ್ತಕ ಬಿಡುಗಡೆ: ಆಯೋಜನೆ: ಪೆಂಗ್ವಿನ್ ಬುಕ್ಸ್, ಸ್ಥಳ: ಆಟಾ ಗಲಾಟ ಇಂದಿರಾನಗರ, ಸಂಜೆ 5

ಆರ್. ಮಂಜುನಾಥ್ ಚವಾಣ್, ಸೌಮ್ಯ ಮಂಜುನಾಥ್ ಚವಾಣ್ ಅವರ 'ನಾದಯೋಗಿ–ಡಾ. ರಾಜಕುಮಾರ್' ಪುಸ್ತಕ ಬಿಡುಗಡೆ: ಅತಿಥಿಗಳು: ಲಕ್ಷ್ಮೀ ಗೋವಿಂದರಾಜ್, ಪೂರ್ಣಿಮಾ ರಾಮ್‌ಕುಮಾರ್, ಮನೋಹರ್ ನಾಯ್ಡು, ಲಹರಿ ವೇಲು, ರಾಕ್‌ಲೈನ್ ವೆಂಕಟೇಶ್, ಆಯೋಜನೆ: ಟೋಟಲ್ ಕನ್ನಡ, ಸ್ಥಳ: ಡಾ. ರಾಜಕುಮಾರ್ ಭವನ, ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ, ನಂ. 5, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 5

ಸಂಗೀತ ಕಛೇರಿ: ವೀಣಾ ವಾದನ: ಸುಮಾ ಸುಧೀಂದ್ರ, ಸಿತಾರ್: ಶಫೀಕ್ ಖಾನ್, ಪಿಟೀಲು: ಶ್ರೀನಿಧಿ ಮತ್ತೂರು, ಮೃದಂಗ: ಅನಂತಕೃಷ್ಣ ಶರ್ಮಾ, ಖಂಜೀರಾ: ಗುರು ಪ್ರಸನ್ನ, ಕೀ–ಬೋರ್ಡ್: ಆರ್. ಅರ್ಜುನ್ ಸಂಭಾಷಿವನ್, ಆರ್. ನಾರಾಯಣನ್, ಪಿಟೀಲು: ಅಚ್ಯುತ್ ರಾವ್, ಮೃದಂಗ: ಜಿ.ಎಸ್. ನಾಗರಾಜ್, ಘಟ: ಟಿ.ಎನ್. ರಮೇಶ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.15ರಿಂದ


ಡಾ.ಸುಮಾ ಸುಧೀಂದ್ರ

ಹರಿದಾಸ ವೈಭವ: ಗಾಯನ: ಅಪರ್ಣಾ ಆನಂದ್, ಪಿಟೀಲು: ಸೀತಾರಾಮ್ ಗೋಪಿನಾಥ್, ಮೃದಂಗ: ಆರ್.ಕೆ.ಎಸ್. ಮುರಳಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

ದಾಸವಾಣಿ: ಗಾಯನ: ಲಾವಣ್ಯ ವೆಂಕಟೇಶ್, ಪಿಟೀಲು: ವಿಘ್ನೇಶ್, ಮೃದಂಗ: ರಾಹುಲ್ ಬೆಟ್ಟ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಬಿಸಿಲ ಬೇಗೆ: ರಕ್ತದಾನಕ್ಕೆ ಕರಿನೆರಳು

ರಕ್ತದ ಕೊರತೆ ಎದುರಿಸುತ್ತಿರುವ ಕೇಂದ್ರಗಳು ನಡೆಯದ ರಕ್ತದಾನ ಶಿಬಿರ

• ವರುಣ ಹೆಗಡೆ



ಸಂಗ್ರಹಿಸಿಟ್ಟಿರುವ ರಕ್ತ

ಬೆಂಗಳೂರು: ನಗರದಲ್ಲಿ ಬೇಸಿಗೆ ಧಗೆಯು ಈ ಬಾರಿ ರಕ್ತದಾನ ಶಿಬಿರಗಳಿಗೂ ತಟ್ಟಿದ್ದು, ದಾನಿಗಳ ಕೊರತೆಯಿಂದಾಗಿ ಅಗತ್ಯ ಪ್ರಮಾಣದಲ್ಲಿ ರಕ್ತ ಹೊಂದಿಸಲು ರಕ್ತ ನಿಧಿ ಕೇಂದ್ರಗಳು ಪರದಾಡುತ್ತಿವೆ.

ಶಾಲಾ–ಕಾಲೇಜುಗಳಿಗೆ ರಜೆ ಇರುವುದರಿಂದ, ಐಟಿ–ಬಿಟಿ ಕಂಪನಿಗಳು ಹೈಬ್ರಿಡ್ ಮಾದರಿಯಲ್ಲಿ (ವಾರದಲ್ಲಿ ಕೆಲ ದಿನ ಮನೆಯಿಂದಲೇ ಕಚೇರಿ ಕೆಲಸ) ಕಾರ್ಯನಿರ್ವಹಿಸುತ್ತಿರುವುದರಿಂದ ರಕ್ತದಾನ ಶಿಬಿರಗಳಿಗೆ ಹಿನ್ನಡೆಯಾಗಿದೆ. ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳವಾದ ಕಾರಣದಿಂದಲೂ ದಾನಿಗಳು ರಕ್ತದಾನಕ್ಕೆ ಆಸಕ್ತಿ ತೋರುತ್ತಿಲ್ಲ. ನಗರದ ಕೆಲವೆಡೆ ನಡೆಯುತ್ತಿರುವ ರಕ್ತದಾನ ಶಿಬಿರಗಳಿಗೂ ಸ್ವಯಂಪ್ರೇರಿತರಾಗಿ ರಕ್ತ ನೀಡಲು ಜನರು ಬರುತ್ತಿಲ್ಲ. ಇದರಿಂದಾಗಿ ರಕ್ತದ ಬೇಡಿಕೆ ಮತ್ತು ಪೂರೈಕೆ ನಡುವೆ ಶೇ 50ರಷ್ಟು ವ್ಯತ್ಯಾಸ ಉಂಟಾಗಿದೆ.

ನಗರದಲ್ಲಿ ಈ ಬಾರಿ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳವಾಗುತ್ತಿದ್ದು, ಮಧ್ಯಾಹ್ನದ ಅವಧಿಯಲ್ಲಿ ಹೊರಗಡೆ ಓಡಾಟ ಕಷ್ಟಸಾಧ್ಯವಾಗುತ್ತಿದೆ. ಕಳೆದ ತಿಂಗಳು ಬಹುತೇಕ ದಿನಗಳು ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು. ಸಾಮಾನ್ಯಕ್ಕಿಂತ ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚು ವರದಿಯಾಗುತ್ತು. ಈ ತಿಂಗಳು ನಗರದ ಕೆಲವೆಡೆ ಮಳೆಯಾದ ಕಾರಣ, ಗರಿಷ್ಠ ಉಷ್ಣಾಂಶ ವಾರದಿಂದ 34 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ಮಧ್ಯಾಹ್ನದ ಅವಧಿಯಲ್ಲಿ ಅತಿಯಾದ ಬಿಸಿಲಿನಿಂದಾಗಿ ಮಕ್ಕಳು ಸೇರಿ ವಿವಿಧ ವಯೋಮಾನದವರಿಗೆ ನಿರ್ಜಲೀಕರಣದಂತಹ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತಿವೆ. ಇದರಿಂದಾಗಿ ಜನರು ರಕ್ತನಿಧಿ ಕೇಂದ್ರಗಳ ಮನವಿಗಳನ್ನು ತಿರಸ್ಕರಿಸುತ್ತಿದ್ದಾರೆ.

ಪೂರೈಕೆಯಲ್ಲಿ ವ್ಯತ್ಯಯ: ಐಟಿ–ಬಿಟಿ ಕಂಪನಿಗಳು ಸಹ ರಕ್ತದಾನ ಶಿಬಿರಗಳನ್ನು ನಡೆಸಲು ಆಸಕ್ತಿ ತೋರದ ಕಾರಣ, ರಕ್ತನಿಧಿ ಕೇಂದ್ರಗಳಿಂದ ಆಸ್ಪತ್ರೆಗಳಿಗೆ ಪೂರೈಕೆಯಾಗುತ್ತಿದ್ದ ರಕ್ತದಲ್ಲಿಯೂ ವ್ಯತ್ಯಯವಾಗುತ್ತಿದೆ. ಪ್ರಮುಖ ರಕ್ತ ನಿಧಿ ಸಂಸ್ಥೆಯಾದ ಭಾರತೀಯ ರೆಡ್ ಕ್ರಾಸ್ ಸೊಸೈಟಿ ನಗರದ ವಿವಿಧ ಆಸ್ಪತ್ರೆಗಳಿಗೆ ರಕ್ತ ಪೂರೈಕೆ ಮಾಡುತ್ತಿದೆ. ಕೆಲ ದಿನಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ರಕ್ತ ಸಂಗ್ರಹವಾಗದಿದ್ದರಿಂದ, ಲಭ್ಯತೆಯ ಆಧಾರದಲ್ಲಿ ಕೇಂದ್ರವು ಆಸ್ಪತ್ರೆಗಳಿಗೆ ರಕ್ತವನ್ನು ಒದಗಿಸುತ್ತಿದೆ. ಪ್ರತಿ ತಿಂಗಳು 3 ಸಾವಿರ ಯೂನಿಟ್‌ವರೆಗೂ ರಕ್ತವನ್ನು ಸಂಗ್ರಹಿಸುತ್ತಿದ್ದ ಕೇಂದ್ರ, ಕಳೆದ ತಿಂಗಳು 2.5 ಸಾವಿರ ಯೂನಿಟ್ ರಕ್ತವನ್ನು ಸಂಗ್ರಹಿಸಿದೆ. ಈ ತಿಂಗಳ ಮೊದಲ ಐದು ದಿನಗಳಲ್ಲಿ ಕೇವಲ 100 ಯೂನಿಟ್ ಸಂಗ್ರಹಿಸಿದ್ದು, ಶಿಬಿರಗಳು ನೋಂದಣಿಯಾಗಿಲ್ಲ.

‘ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳದಿಂದಾಗಿ ಜನರು ರಕ್ತದಾನಕ್ಕೆ ಮುಂದೆ ಬರುತ್ತಿಲ್ಲ. ಐಟಿ ಕಂಪನಿಗಳು ರಕ್ತ ದಾನ ಶಿಬಿರಗಳನ್ನು ನಡೆಸಲು ಆಸಕ್ತಿ ತೋರುತ್ತಿಲ್ಲ. ಇದರಿಂದಾಗಿ ರಕ್ತದಾನ ಶಿಬಿರಗಳಿಗೆ ಹಿನ್ನಡೆಯಾಗಿ, ರಕ್ತದ ಕೊರತೆ ಎದುರಾಗುತ್ತಿದೆ. ಸದ್ಯ ಇರುವುದರಲ್ಲೇ ನಿರ್ವಹಣೆ ಮಾಡುತ್ತಿದ್ದೇವೆ. ಬೇಡಿಕೆಯಷ್ಟು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ. ಯುವಜನರು ರಕ್ತದಾನದಂತಹ ಸಮಾಜಸೇವೆಗೆ ಹೆಚ್ಚಿನ ಒಲವು ತೋರಬೇಕು’ ಎಂದು ಭಾರತೀಯ ರೆಡ್ ಕ್ರಾಸ್ ಸೊಸೈಟಿ ಕರ್ನಾಟಕ ಶಾಖೆಯ ರಕ್ತದಾನ ಶಿಬಿರದ ಸಂಯೋಜಕ ಮಂಜುನಾಥ್ ತಿಳಿಸಿದರು.

‘ಶಾಲಾ–ಕಾಲೇಜುಗಳು ಹಾಗೂ ಕಾರ್ಪೊರೇಟ್ ಕಂಪನಿಗಳು ಈ ಮೊದಲಿನಂತೆ ಶಿಬಿರಗಳಿಗೆ ಸ್ಪಂದಿಸುತ್ತಿಲ್ಲ. ರಕ್ತ ದಾನದಿಂದ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಮನವರಿಕೆ ಮಾಡಲು ಪ್ರಯತ್ನಿಸಿದರೂ, ಯುವಜನರು ರಕ್ತ ದಾನಕ್ಕೆ ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ’ ಎಂದು ಲಯನ್ಸ್ ರಕ್ತನಿಧಿಯ ಪ್ರತಿನಿಧಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಮೊಬೈಲ್ ವ್ಯಾನ್ ಬಳಕೆ

ರಕ್ತ ನಿಧಿ ಕೇಂದ್ರಗಳು ಮೊಬೈಲ್ ವ್ಯಾನ್‌ಗಳ ನೆರವಿನಿಂದಲೂ ನಗರದ ವಿವಿಧೆಡೆ ತೆರಳಿ, ರಕ್ತ ಸಂಗ್ರಹಕ್ಕೆ ಪ್ರಯತ್ನಿಸುತ್ತಿವೆ. ಭಾರತೀಯ ರೆಡ್ ಕ್ರಾಸ್ ಸೊಸೈಟಿ ಕರ್ನಾಟಕ ಶಾಖೆಯು ಎರಡು ವ್ಯಾನ್‌ಗಳನ್ನು ಹೊಂದಿದೆ. ರಾಷ್ಟ್ರೋತ್ಥಾನ ರಕ್ತ ಕೇಂದ್ರವೂ ಈ ರೀತಿ ವಾಹನ ಹೊಂದಿದ್ದು, 8–10 ಜನ ದಾನಿಗಳು ಇರುವ ಕಡೆಯೂ ತೆರಳಿ ರಕ್ತ ಸಂಗ್ರಹಿಸಲು ಮುಂದಾಗಿದೆ.

ಥಲಸ್ಸೇಮಿಯಾ ರೋಗಿಗಳಿಗೆ ಸಮಸ್ಯೆ

ರಾಷ್ಟ್ರೋತ್ಥಾನ ರಕ್ತ ಕೇಂದ್ರವು ಸಂಕಲ್ಪ್ ಇಂಡಿಯಾ ಫೌಂಡೇಷನ್‌ನ ಸಹಯೋಗದಲ್ಲಿ ‘ಸಂರಕ್ಷ’ ಥಲಸ್ಸೇಮಿಯಾ ಡೇ ಕೇರ್ ಸೆಂಟರ್ ನಡೆಸುತ್ತಿದೆ. ಈ ಕೇಂದ್ರದಲ್ಲಿ ಥಲಸ್ಸೇಮಿಯಾದಿಂದ ಬಳಲುತ್ತಿರುವ ಮಕ್ಕಳನ್ನು ಆರೈಕೆ ಮಾಡಲಾಗುತ್ತಿದೆ. ಸದ್ಯ 390 ಮಕ್ಕಳು ಈ ಕೇಂದ್ರದಲ್ಲಿದ್ದು, ಅವರಿಗೆ ನಿಯಮಿತವಾಗಿ ರಕ್ತ ಒದಗಿಸಬೇಕಿದೆ. ಆದರೆ, ರಕ್ತದಾನ ಶಿಬಿರಗಳು ನಡೆಯದ ಕಾರಣ ಆ ಮಕ್ಕಳಿಗೂ ರಕ್ತ ಒದಗಿಸುವುದು ಕಷ್ಟಸಾಧ್ಯವಾಗಿದ್ದು, ಕೇಂದ್ರವು ದಾನಿಗಳನ್ನು ಸಂಪರ್ಕಿಸುತ್ತಿದೆ.

‘ರಕ್ತ ದಾನ ಶಿಬಿರಗಳು ನಡೆಯದ ಪರಿಣಾಮ ರಕ್ತ ಸಂಗ್ರಹಿಸಲು ಕಷ್ಟ ಪಡುತ್ತಿದ್ದೇವೆ. ನಿತ್ಯ 120 ಯೂನಿಟ್ ರಕ್ತ ಅಗತ್ಯವಿದೆ. ಕಾಯಂ ದಾನಿಗಳನ್ನು ಸಂಪರ್ಕಿಸಿ, ಮನವಿ ಮಾಡಿಕೊಳ್ಳುತ್ತಿದ್ದೇವೆ. ಆದರೂ ಅಗತ್ಯ ಪ್ರಮಾಣದ ರಕ್ತವನ್ನು ಸಂಗ್ರಹಿಸಿ, ಒದಗಿಸುವುದು ಸವಾಲಾಗಿದೆ’ ಎಂದು ರಾಷ್ಟ್ರೋತ್ಥಾನ ರಕ್ತನಿಧಿ ಕೇಂದ್ರದ ಅಧಿಕಾರಿ ರಾಧಾ ತಿಳಿಸಿದರು.

ರಾಷ್ಟ್ರೋತ್ಥಾನ ರಕ್ತನಿಧಿ ಕೇಂದ್ರದ ಸಂಪರ್ಕ ಸಂಖ್ಯೆ: 080 26608870 ಅಥವಾ 9945299369

ಭಾರತೀಯ ರೆಡ್ ಕ್ರಾಸ್ ಕರ್ನಾಟಕ ಶಾಖೆಯ ಸಂಪರ್ಕ ಸಂಖ್ಯೆ: 080 22268435 ಅಥವಾ 22264205

ಸಂಕ್ಷಿಪ್ತ ಸುದ್ದಿ

ಸರಣಿ ಅಪಘಾತ: 10 ಮಂದಿಗೆ ಗಾಯ



ಕ್ರೇನ್ ಸಹಾಯದಿಂದ ಲಾರಿ ತೆರವು ಮಾಡಲಾಯಿತು

ನೆಲಮಂಗಲ: ಬೆಂಗಳೂರು–ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ಸಂಜೆ ಸರಣಿ ಅಪಘಾತ ಸಂಭವಿಸಿದ್ದು, 10 ಮಂದಿ ಗಾಯಗೊಂಡಿದ್ದಾರೆ.

ತಾಲ್ಲೂಕಿನ ದಾಬಸ್‌ಪೇಟೆ ಅಂಚೆಮನೆ ಗೇಟ್ ಬಳಿ, ಬೈಕ್ ಸೇರಿದಂತೆ ಆರು ವಾಹನಗಳ ನಡುವೆ ಸರಣಿ ಅಪಘಾತ ಸಂಭವಿಸಿದೆ.

ಬೈಕ್, ಎರಡು ಕಾರು, ಲಾರಿ, ಬಸ್, ಬೊಲೆರೊ ಜೀಪಿನ ನಡುವೆ ಅಪಘಾತ ಸಂಭವಿಸಿದೆ. ಡಿಕ್ಕಿಯ ರಭಸಕ್ಕೆ ಬಣ್ಣದ ಡಬ್ಬಿಗಳನ್ನು ತುಂಬಿದ್ದ ಬೊಲೆರೊ ಹೆದ್ದಾರಿಯಲ್ಲಿ ಪಲ್ಟಿಯಾಗಿತ್ತು. ಗಾಯಗೊಂಡವರನ್ನು ನೆಲಮಂಗಲದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಅಪಘಾತದಿಂದ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಕ್ರೇನ್ ಬಳಸಿ ಹೆದ್ದಾರಿ ಮಧ್ಯದಲ್ಲಿ ನಿಂತಿದ್ದ ಲಾರಿಯನ್ನು ತೆರವು ಮಾಡಲಾಗಿದೆ.

‘ವಂದೇ ಮಾತರಂಗೆ ಅಗೌರವ: ಶಿಕ್ಷಾರ್ಹ ಅಪರಾಧ’

ನವದೆಹಲಿ (ಪಿಟಿಐ): ‘ವಂದೇ ಮಾತರಂ’ ರಾಷ್ಟ್ರ ಗೀತೆಗೆ ಅಗೌರವ ತೋರುವುದು ಶಿಕ್ಷಾರ್ಹ ಅಪರಾಧ ಎಂದು ಪರಿಗಣಿಸಲು ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ರಾಷ್ಟ್ರೀಯ ಘನತೆಯ ಅಪಮಾನ ತಡೆ ಕಾಯ್ದೆ- 1971ಕ್ಕೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ. ತಿದ್ದುಪಡಿಯು ‘ಜನಗಣ ಮನ’ ರಾಷ್ಟ್ರ ಗೀತೆಗೆ ನೀಡುವ ಶಾಸನಬದ್ಧ ರಕ್ಷಣೆಯನ್ನು ‘ವಂದೇ ಮಾತರಂ’ ಗೀತೆಗೂ ನೀಡುತ್ತದೆ.

ಸಾತನೂರು ಗ್ರಾಮ ಪಂಚಾಯಿತ್: ಮಾನಸ ಅಧ್ಯಕ್ಷೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಸಾತನೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಮಾನಸ.ಬಿ.ಆರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಮಾನಸ

ಸುಜಾತಾ ಎಸ್. ಎಲ್. ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಒಟ್ಟು 11 ಸದಸ್ಯರನ್ನು ಹೊಂದಿರುವ ಪಂಚಾಯಿತಿಯಲ್ಲಿ ಮಾನಸ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾದರು.

ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಸಂಬಂಧಿಸಿದಂತೆ ಜೆಜೆಎಂ ಯೋಜನೆಯಡಿ ಸಾತನೂರು ಮತ್ತು ಶ್ರೀನಿವಾಸಪುರದಲ್ಲಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದ್ದು, ಹೊಸಹಳ್ಳಿಯಲ್ಲಿ ಅಂತಿಮ ಹಂತದಲ್ಲಿದೆ. ಕಾಮಗಾರಿ ಪೂರ್ಣಗೊಂಡ ತಕ್ಷಣ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗುವುದು ಎಂದು ಮಾನಸ ತಿಳಿಸಿದರು.

ನೂತನ ಪಂಚಾಯಿತಿ ಕಟ್ಟಡ ನಿರ್ಮಾಣ, ರಸ್ತೆ ಹಾಗೂ ಚರಂಡಿ ಅಭಿವೃದ್ಧಿ, ಕಸದ ಸಮಸ್ಯೆ ನಿವಾರಣೆ ಮತ್ತು ನೈರ್ಮಲ್ಯ ಕಾಪಾಡುವಂತಹ ಮೂಲಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಹೇಳಿದರು.

ಬೈಕ್ ಡಿಕ್ಕಿ: ಬಿಎಂಟಿಸಿ ಮೆಕ್ಯಾನಿಕ್ ಸಾವು


ಕನಕಪುರ: ಊರ ಹಬ್ಬದ ಊಟ ಮುಗಿಸಿ ಬೈಕ್‌ನಲ್ಲಿ ಗ್ರಾಮಕ್ಕೆ ವಾಪಸ್ ಆಗುತ್ತಿದ್ದ ಬಿಎಂಟಿಸಿ ಮೆಕ್ಯಾನಿಕ್ ಕೋಡಿಹಳ್ಳಿ ರಸ್ತೆಯ ಪ್ಲಾಂಟೇಶನ್ ಬಳಿ ಬುಧವಾರ ಸಂಜೆ ಸಂಭವಿಸಿದ ಅಪಘಾತದಲ್ಲಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿ ಚುಂಚಿ ಕಾಲೋನಿಯ ನಿವಾಸಿ ಮಹೇಶ್ (42) ಮೃತ ವ್ಯಕ್ತಿ. ಅವರು ಬೆಂಗಳೂರಿನಲ್ಲಿ ಬಿಎಂಟಿಸಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ.

ಬುಧವಾರ ತಮ್ಮ ಗ್ರಾಮದಿಂದ ಬೈಕಿನಲ್ಲಿ ಸ್ವಾಮಿರಾಜ್ ಜೊತೆ ಬೆಟ್ಟಳ್ಳಿ ಪಕ್ಕದ ಅರಗಾಡು ಗ್ರಾಮದಲ್ಲಿ ನಡೆದ ಊರ ಹಬ್ಬಕ್ಕೆ ಹೋಗಿ ಊಟ ಮುಗಿಸಿ ವಾಪಸ್ ಗ್ರಾಮಕ್ಕೆ ಹೋಗುತ್ತಿದ್ದಾಗ ಕೋಡಿಹಳ್ಳಿ ಪ್ಲಾಂಟೇಶನ್ ಬಳಿ ಎರಡು ಬೈಕ್ ಗಳ ಮುಖಾಮುಖಿ ಡಿಕ್ಕಿಯಲ್ಲಿ ಮಹೇಶ್ ತಲೆಗೆ ತೀವ್ರ ಪೆಟ್ಟಾಗಿ ಅತಿಯಾದ ರಕ್ತಸ್ರಾವದಿಂದ ಸ್ಥಳದಲ್ಲಿ ಸಾವನಪ್ಪಿದರು. ಹಿಂಬದಿಯ ಸವಾರ ಸ್ವಾಮೀರಾಜ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೋಡಿಹಳ್ಳಿ ಪೊಲೀಸರು ಶವವನ್ನು ಕನಕಪುರ ಸಾರ್ವಜನಿಕ ಆಸ್ಪತ್ರೆಗೆ ಸ್ಥಳಾಂತರಿಸಿದರು.

ಸುವೇಂದು ಆಪ್ತನ ಕೊಲೆ



ಗುಂಡಿನ ದಾಳಿಯಿಂದ ಕಾರಿನ ಗಾಜು ಒಡೆದ ದೃಶ್ಯ –ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ಆಪ್ತ ಸಹಾಯಕ ಚಂದ್ರನಾಥ್ ರಥ್ ಅವರನ್ನು ಉತ್ತರ 24 ಪರಗಣ ಜಿಲ್ಲೆಯಲ್ಲಿ ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಿದ್ದಾರೆ. ಇದರಿಂದ ಈ ಭಾಗದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ರಥ್ ಅವರು ಕೋಲ್ಕತ್ತದಿಂದ ತಮ್ಮ ಫ್ಲಾಟ್‌ಗೆ ಕಾರಿನಲ್ಲಿ ಹಿಂತಿರುಗುತ್ತಿದ್ದಾಗ ಮಧ್ಯಮ್‌ಗ್ರಾಮ್ ಪ್ರದೇಶದ ಜೆಸ್ಸೋರ್ ರಸ್ತೆಯ ದೊಹರಿಯಾ ಬಳಿ ಈ ಘಟನೆ ನಡೆದಿದೆ. ದುಷ್ಕರ್ಮಿಗಳು ಹತ್ತಿರದಿಂದ ಗುಂಡಿನ ದಾಳಿ ನಡೆಸಿ, ಸ್ಥಳದಿಂದ ಪರಾರಿಯಾಗಿದ್ದಾರೆ.

ಪ್ರಾಥಮಿಕ ಮಾಹಿತಿ ಪ್ರಕಾರ, ಮೋಟಾರ್ ಸೈಕಲ್‌ಗಳಲ್ಲಿ ಬಂದಿದ್ದ ದುಷ್ಕರ್ಮಿಗಳು ಕಾರನ್ನು ಅಡ್ಡಗಟ್ಟಿ, ಹತ್ತಿರದಿಂದ ಗುಂಡುಗಳನ್ನು ಹಾರಿಸಿದ್ದಾರೆ. ಮೊದಲು ಮುಂಭಾಗದ ವಿಂಡ್‌ಶೀಲ್ಡ್‌ಗೆ ಗುಂಡು ಹಾರಿಸಿ, ಬಳಿಕ ಮುಂದಿನ ಸೀಟಿನಲ್ಲಿ ಕುಳಿತಿದ್ದ ರಥ್ ಮೇಲೆ ಪದೇ ಪದೇ ಗುಂಡು ಹಾರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಚಂದ್ರನಾಥ್ ರಥ್

ಈ ದಾಳಿಯಲ್ಲಿ ಗಂಭೀರ ಗಾಯಗೊಂಡ ಚಂದ್ರನಾಥ್ ಅವರನ್ನು ಖಾಸಗಿ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ವೈದ್ಯರು ಅವರನ್ನು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು ಎಂದು ಮೂಲಗಳು ತಿಳಿಸಿವೆ.

ಹಲವು ಗುಂಡುಗಳು ರಥ್ ಅವರ ಎದೆಗೆ ತಗುಲಿ, ಅತಿಯಾದ ರಕ್ತಸ್ರಾವವಾಗಿ ಅವರು ಮೃತಪಟ್ಟಿದ್ದಾರೆ. ಕಾರಿನಲ್ಲಿದ್ದ ಮತ್ತೊಬ್ಬ ವ್ಯಕ್ತಿಗೂ ಗಾಯಗಳಾಗಿದ್ದು, ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಸುವೇಂದು ಅಧಿಕಾರಿ ಸೇರಿದಂತೆ ಬಿಜೆಪಿಯ ಹಲವು ಹಿರಿಯ ನಾಯಕರು ಸ್ಥಳಕ್ಕೆ ಭೇಟಿ ನೀಡಿ, ಆಸ್ಪತ್ರೆಗೆ ತೆರಳಿದರು.

ಈ ಘಟನೆಯ ಸುದ್ದಿ ತ್ವರಿತವಾಗಿ ಹರಡಿದ್ದು, ಪೊಲೀಸರು ಹೆಚ್ಚುವರಿ ಪೊಲೀಸ್ ತುಕಡಿಯನ್ನು ನಿಯೋಜಿಸುವ ಮೂಲಕ ಬಿಗಿ ಭದ್ರತೆ ಕಲ್ಪಿಸಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದು, ತನಿಖೆ ಆರಂಭಿಸಿದ್ದಾರೆ.

‘ನಾವು ಶಾಂತಿಯನ್ನು ಬೋಧಿಸುತ್ತಿದ್ದರೆ, ಟಿಎಂಸಿಯವರು ಅತಿದೊಡ್ಡ ಪ್ರಮಾದ ಮಾಡಿದ್ದಾರೆ’ ಎಂದು ಹೊಸದಾಗಿ ಆಯ್ಕೆಯಾದ ಬಿಜೆಪಿ ಶಾಸಕಿ ತರುಣ್‌ಜ್ಯೋತಿ ತಿವಾರಿ ಕಿಡಿಕಾರಿದ್ದಾರೆ.

‘ಅಹಂ ಬಿಡಿ, ಆತ್ಮವಿಶ್ವಾಸ ಬೆಳೆಸಿಕೊಳ್ಳಿ’

ಪ್ರಜಾವಾಣಿ ವಾರ್ತೆ



ಎಪಿಎಸ್‌ನಲ್ಲಿ ಆಯೋಜಿಸಿದ್ದ ಕಾಲೇಜು ದಿನಾಚರಣೆಯಲ್ಲಿ ಕಲಾವಿದ ಶ್ರೀನಿವಾಸಪ್ರಭು ಅವರನ್ನು ಸನ್ಮಾನಿಸಲಾಯಿತು

ಬೆಂಗಳೂರು: ‘ನಾನೇ ಎಂಬ ಅಹಂಭಾವವನ್ನು ಬಿಟ್ಟು ಗುರಿ ಸಾಧನೆಯೆಡೆಗೆ ಗಮನ ನೀಡಿದಾಗ ಬದುಕಿನಲ್ಲಿ ಯಶಸ್ಸು ಸಾಧಿಸಬಹುದು’ ಎಂದು ರಂಗಕರ್ಮಿ ಶ್ರೀನಿವಾಸಪ್ರಭು ತಿಳಿಸಿದರು.

ನಗರದ ಎನ್‌ಆರ್ ಕಾಲೊನಿಯಲ್ಲಿರುವ ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜಿನಲ್ಲಿ(ಎಪಿಎಸ್) ಬುಧವಾರ ಆಯೋಜಿಸಿದ್ದ ಕಾಲೇಜು ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಅಹಂಕಾರ ಎನ್ನುವುದು ಎರಡು ಅಲಗಿನ ಖಡ್ಗ ಇದ್ದ ಹಾಗೆ. ಇದರಲ್ಲಿ ಹೊರಗಿನ ಅಲಗು ಪ್ರಸಿದ್ಧಿಯನ್ನು ಕತ್ತರಿಸಿದರೆ, ಒಳಗಿನದ್ದು ಪಾವಿತ್ರ್ಯ ನಾಶ ಮಾಡುತ್ತದೆ. ಅಹಂಕಾರಕ್ಕಿಂತ ಆತ್ಮವಿಶ್ವಾಸ ಜತೆಗಿದ್ದರೆ ವಿದ್ಯಾರ್ಥಿಗಳ ಬದುಕು ಹಸನಾಗಲಿದೆ’ ಎಂದು ಹೇಳಿದರು.

ಎ.ಪಿ.ಎಸ್ ವಿಶ್ವಸ್ಥ ಸಂಸ್ಥೆಯ ಅಧ್ಯಕ್ಷ ವಿಷ್ಣುಭರತ್ ಆಲ್ಲಂಪಲ್ಲಿ ಮಾತನಾಡಿ, ‘ಪ್ರತಿಯೊಬ್ಬರಿಗೆ ಪದವಿ ಶಿಕ್ಷಣ ಬಹುಮುಖ್ಯ. ಅದರಲ್ಲೂ ವೃತ್ತಿಪರ ಕೋರ್ಸ್‌ಗಳ ಕಡೆ ಗಮನ ನೀಡಬೇಕು. ಚಾರ್ಟರ್ಡ್ ಅಕೌಂಟೆಂಟ್ ಕೋರ್ಸ್ ಆಯ್ಕೆ ಮಾಡಿಕೊಂಡರೂ ಬದುಕಿನಲ್ಲಿ ಬದಲಾವಣೆಗೆ ದಾರಿ ಮಾಡಿಕೊಡಲಿದೆ’ ಎಂದು ಸಲಹೆ ನೀಡಿದರು.

ಸಂಸ್ಥೆಯ ಪದಾಧಿಕಾರಿಗಳಾದ ಎ.ಪ್ರಕಾಶ್, ಪಿ.ಕೃಷ್ಣಸ್ವಾಮಿ, ಎ.ಆರ್. ಮಂಜುನಾಥ್, ಪ್ರಾಂಶುಪಾಲ ಬಿ.ಪರಮೇಶ್, ಕನ್ನಡ ವಿಭಾಗದ ಮುಖ್ಯಸ್ಥ ಕೆ.ಎಂ.ವೆಂಕಟೇಶಯ್ಯ, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಎಸ್. ಭಾಗ್ಯಲಕ್ಷ್ಮೀ, ದೈಹಿಕ ಶಿಕ್ಷಣ ನಿರ್ದೇಶಕ ಎಂ.ಶಂಕರ್ ಉಪಸ್ಥಿತರಿದ್ದರು.

ಸಾಂಸ್ಕೃತಿಕ ಸ್ಪರ್ಧೆ ಮತ್ತು ಕ್ರೀಡೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣಪತ್ರವನ್ನು ಗಣ್ಯರು ವಿತರಣೆ ಮಾಡಿದರು.

ವಿಂಡ್ ಟನಲ್ ಜಂಕ್ಷನ್: ಅಧಿಕಾರಿಗಳಿಗೆ ಮಹೇಶ್ವರ್ ರಾವ್ ಸೂಚನೆ

3 ತಿಂಗಳಲ್ಲಿ ಅಂಡರ್‌ಪಾಸ್ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ವಿಮಾನ ನಿಲ್ದಾಣ ರಸ್ತೆಯ ವಿಂಡ್ ಟನಲ್ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ಕಾಮಗಾರಿಯನ್ನು ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಮೂರು ತಿಂಗಳೊಳಗಾಗಿ ಪೂರ್ಣಗೊಳಿಸಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಹಳೆ ವಿಮಾನ ನಿಲ್ದಾಣ ರಸ್ತೆಯ ಯು.ಆರ್. ರಾವ್ ಉಪಗ್ರಹ ಕೇಂದ್ರದ ಬಳಿಯಿರುವ ವಿಂಡ್ ಟನಲ್ ಜಂಕ್ಷನ್‌ಗೆ ಬುಧವಾರ ಭೇಟಿ ನೀಡಿ ಅವರು ಪರಿಶೀಲನೆ ನಡೆಸಿದರು.

ಈ ರಸ್ತೆಯು ಹೆಚ್ಚಿನ ಸಂಚಾರ ದಟ್ಟಣೆಯುಳ್ಳ ಪ್ರದೇಶವಾಗಿರುವುದರಿಂದ ಹೆಚ್ಚುವರಿ ಯಂತ್ರೋಪಕರಣಗಳನ್ನು ಬಳಸಿಕೊಂಡು, ಮೂರು ಪಾಳಿಗಳಲ್ಲಿ ಕಾಮಗಾರಿ ನಡೆಸಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.

ಸಂಚಾರ ಪೊಲೀಸ್ ವಿಭಾಗವು ಕಾಮಗಾರಿಗೆ ಅನುಮತಿ ನೀಡಿದ್ದು, ಎಚ್‌ಎಎಲ್ ಕಡೆಯಿಂದ ನಗರದೊಳಗೆ ಬರುವ ರಸ್ತೆ ಭಾಗದಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿದೆ. ಈ ಭಾಗದಲ್ಲಿ ಇರುವ ಜಲಮಂಡಳಿ ಪೈಪ್‌ಲೈನ್, ಕೇಬಲ್ ಸೇರಿದಂತೆ ಇತರೆ ಉಪಯುಕ್ತತೆಗಳನ್ನು ಸಮಾನಾಂತರವಾಗಿ ಸ್ಥಳಾಂತರಿಸಿ ಕಾಮಗಾರಿ ನಿರ್ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ವಿಂಡ್ ಟನಲ್ ಜಂಕ್ಷನ್‌ನಲ್ಲಿ ₹19 ಕೋಟಿ ವೆಚ್ಚದಲ್ಲಿ 300 ಮೀಟರ್ ಉದ್ದದ ಅಂಡರ್‌ಪಾಸ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಎರಡೂ ಬದಿಗಳಲ್ಲಿ 7.5 ಮೀಟರ್ ಅಗಲದ ಆರು ಪಥಗಳಿರಲಿವೆ. ಆರ್‌ಸಿಸಿ ಗೋಡೆ ನಿರ್ಮಾಣ, ಸರ್ವಿಸ್ ರಸ್ತೆ ನಿರ್ಮಾಣ ಹಾಗೂ ಮಧ್ಯಭಾಗದಲ್ಲಿ ಅಳವಡಿಸುವ ಬಾಕ್ಸ್‌ಗಳ ತಯಾರಿಕೆ ಸೇರಿದಂತೆ ಶೇ 60 ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದು ಕಾರ್ಯಪಾಲಕ ಎಂಜಿನಿಯರ್ ಮಾಹಿತಿ ನೀಡಿದರು.

ಅಂಡರ್‌ಪಾಸ್ ಕಾಮಗಾರಿ ನಡೆಯುವ ಅವಧಿಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಆಗದಂತೆ ಜಂಕ್ಷನ್‌ನ ಎರಡೂ ಬದಿಗಳಲ್ಲಿರುವ ರಕ್ಷಣಾ, ಇಸ್ರೊ, ಎನ್‌ಎಎಲ್ ಇಲಾಖೆ ಹಾಗೂ ಖಾಸಗಿ ಜಾಗಗಳಲ್ಲಿ ತಾತ್ಕಾಲಿಕ ರಸ್ತೆಗಳನ್ನು ನಿರ್ಮಿಸಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದರು.

ಹಳೆ ವಿಮಾನ ನಿಲ್ದಾಣ ರಸ್ತೆಯ ಎ.ಎಸ್.ಇ ಜಂಕ್ಷನ್ ನಿಂದ ಹೋಪ್ ಫಾರ್ಮ್ ಜಂಕ್ಷನ್‌ವರೆಗಿನ 17 ಕಿ.ಮೀ. ಉದ್ದದ ಮಾರ್ಗವನ್ನು ಮೂರು ಕೆಳಸೇತುವೆಗಳನ್ನು ಒಳಗೊಂಡಂತೆ ಸಮಗ್ರವಾಗಿ ಅಭಿವೃದ್ಧಿಪಡಿಸಲು 2015ರಲ್ಲಿ ಕಾರ್ಯಾದೇಶ ನೀಡಲಾಗಿತ್ತು. ಅದರಂತೆ, 2022ರಲ್ಲಿ ಕುಂದಲಹಳ್ಳಿ ಜಂಕ್ಷನ್ ಹಾಗೂ 2023ರಲ್ಲಿ ಸುರಂಜನ್ ದಾಸ್ ಜಂಕ್ಷನ್‌ನಲ್ಲಿ ಕೆಳಸೇತುವೆ ಕಾಮಗಾರಿಗಳು ಪೂರ್ಣಗೊಂಡು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಯಿತು. ವಿಂಡ್ ಟನಲ್ ಜಂಕ್ಷನ್‌ನ ಕಾಮಗಾರಿಗೆ ಸಂಚಾರ ಪೊಲೀಸ್ ವಿಭಾಗದಿಂದ ಅನುಮತಿ ಲಭ್ಯವಾಗದ ಕಾರಣ ವಿಳಂಬವಾಗಿತ್ತು ಎಂದು ಮಾಹಿತಿ ನೀಡಿದರು.

ಇ.ಸಿ. ವೈಖರಿ ಆತಂಕಕಾರಿ: ಜಮಾಅತೆ ಇಸ್ಲಾಮೀ ಹಿಂದ್

ಬೆಂಗಳೂರು: ‘ಚುನಾವಣಾ ಆಯೋಗದ (ಇ.ಸಿ) ಕಾರ್ಯವೈಖರಿಯ ಬಗ್ಗೆ ಪ್ರಶ್ನೆಗಳು ಎದ್ದಿವೆ. ದೇಶದ ಪ್ರಮುಖ ಪ್ರಜಾಸತ್ತಾತ್ಮಕ ಸಂಸ್ಥೆಯ ಘನತೆಗೆ ಕುಂದುಂಟಾಗಿದೆ’ ಎಂದು ಜಮಾಅತೆ ಇಸ್ಲಾಮೀ ಹಿಂದ್ ಕರ್ನಾಟಕ ರಾಜ್ಯ ಸಲಹಾ ಸಮಿತಿ ಹೇಳಿದೆ.

ಸಮಿತಿಯ ಅಧ್ಯಕ್ಷ ಮುಹಮ್ಮದ್ ಸಾದ್ ಬೆಳಗಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ರಾಜ್ಯ ಘಟಕದ ವಾರ್ಷಿಕ ಸಭೆಯಲ್ಲಿ ಈಬಗ್ಗೆ ಆತಂಕ ವ್ಯಕ್ತವಾಗಿದೆ. ದೇಶದಲ್ಲಿ ಬೆಳೆಯುತ್ತಿರುವ ಫ್ಯಾಸಿಸ್ಟ್ ಶಕ್ತಿಗಳ ಪ್ರಭಾವ ಹೆಚ್ಚುತ್ತಿದೆ. ಇತ್ತೀಚೆಗೆ ನಡೆದ 5 ರಾಜ್ಯಗಳ ಚುನಾವಣೆಯ ಫಲಿತಾಂಶವು ಆತಂಕವನ್ನು ಉಂಟು ಮಾಡಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

ದೇಶದ ಜಾತ್ಯತೀತ ಸ್ವರೂಪ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಉಳಿಸಲು ನಾಗರಿಕ ಸಮಾಜ ಹೋರಾಟ ನಡೆಸುತ್ತಿದೆ. ಈ ಹೋರಾಟವನ್ನು ಇನ್ನಷ್ಟು ತಾಳ್ಮೆ ಮತ್ತು ಧೈರ್ಯದೊಂದಿಗೆ ಮುಂದುವರಿಸಬೇಕು ಎಂದು ನಿರ್ಣಯಿಸಲಾಯಿತು.

ಕರ್ನಾಟಕದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯು ಆಶಾದಾಯಕವಾಗಿದೆ. ರಾಜ್ಯದಲ್ಲಿ ನಡೆದ ಉಪ ಚುನಾವಣೆಯಲ್ಲಿ ಜಾತ್ಯತೀತ ಅಭ್ಯರ್ಥಿಗಳ ಗೆಲುವು ಇದಕ್ಕೆ ಸಾಕ್ಷಿಯಾಗಿದೆ. ಆದರೆ, ಚುನಾವಣಾ ಸಂದರ್ಭದಲ್ಲಿ ಮುಸ್ಲಿಂ ರಾಜಕೀಯ ಪ್ರತಿನಿಧಿಗಳಲ್ಲಿ ಕಂಡುಬಂದ ಒಗ್ಗಟ್ಟಿನ ಕೊರತೆ ಮತ್ತು ದೂರದೃಷ್ಟಿಯ ಅಭಾವ ಕಳವಳಕಾರಿಯಾಗಿದೆ. ಇಂಥ ವಿಷಯಗಳಲ್ಲಿ ಸಮುದಾಯದ ಸಂಯುಕ್ತ ವೇದಿಕೆಗಳು ಮತ್ತು ಧಾರ್ಮಿಕ ಮುಖಂಡರು ಇನ್ನಷ್ಟು ಸಕಾರಾತ್ಮಕ ಹಾಗೂ ಪರಿಣಾಮಕಾರಿ ಪಾತ್ರವನ್ನು ವಹಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ಜಿಬಿಎ ಕಂದಾಯ ವಿಶೇಷ ಆಯುಕ್ತರಿಂದ ಮಾಹಿತಿ

ಇ–ಖಾತಾ ತಿದ್ದುಪಡಿಗೆ ಅವಕಾಶ

ಪ್ರಜಾವಾಣಿ ವಾರ್ತೆ



ಮುನೀಶ್ ಮೌದ್ಗಿಲ್

ಬೆಂಗಳೂರು: ಇ-ಖಾತಾದಲ್ಲಿ ಆಸ್ತಿಯ ಕೆಲವು ವಿವರಗಳನ್ನು ಆನ್‌ಲೈನ್‌ನಲ್ಲಿ ಮಾಲೀಕರೇ ತಿದ್ದುಪಡಿ ಮಾಡಿಕೊಳ್ಳುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ಮಾಹಿತಿ ನೀಡಿದರು.

ಬುಧವಾರ ನಡೆದ ಕಾರ್ಯಾಗಾರದಲ್ಲಿ ಅರ್ಜಿಗಳ ಪ್ರಕ್ರಿಯೆ ಮತ್ತು ಅನುಮೋದನಾ ವಿಧಾನಗಳಲ್ಲಿ ಮಾಡಲಾದ ಪರಿಷ್ಕರಣೆಗಳ ಕುರಿತು ಅಧಿಕಾರಿಗಳಿಗೆ ತಿಳಿಸಿ, ಆಸ್ತಿ ಮಾಲೀಕರಿಗೆ ಸಣ್ಣಪುಟ್ಟ ತಿದ್ದುಪಡಿಗಳಿಗೆ ಅವಕಾಶ ನೀಡಿರುವುದರಿಂದ ಅವರು ಪಾಲಿಕೆಗಳ ಕಚೇರಿಗಳಿಗೆ ಭೇಟಿ ನೀಡುವ ಅಗತ್ಯ ಕಡಿಮೆಯಾಗುತ್ತದೆ ಎಂದರು.


ತಪ್ಪಾಗಿ ಸಲ್ಲಿಸಿದ ಇ-ಖಾತಾ ಅರ್ಜಿಗಳನ್ನು ಹಿಂತೆಗೆದುಕೊಳ್ಳಲು ನಾಗರಿಕರಿಗೆ ಅವಕಾಶ ನೀಡುವ ವ್ಯವಸ್ಥೆ ಪರಿಚಯಿಸಲಾಗಿದೆ. ಇದರಿಂದ ಪ್ರಕ್ರಿಯೆಯಲ್ಲಿನ ಅಡಚಣೆಗಳು ಕಡಿಮೆಯಾಗುತ್ತವೆ ಮತ್ತು ಹೆಚ್ಚಿನ ಸೌಕರ್ಯ ದೊರೆಯುತ್ತದೆ’ ಎಂದು ತಿಳಿಸಿದರು.

ನಗರದಲ್ಲಿ ಸುಮಾರು 13.05 ಲಕ್ಷ ಎಸ್‌ಎಎಸ್ ಐಡಿ ಆಧಾರಿತ ಆಸ್ತಿಗಳೊಂದಿಗೆ ಸಂಬಂಧಿಸಿದ ನಾಗರಿಕರು ಈಗ ಸುಲಭವಾಗಿ ತಮ್ಮ ಇ-ಖಾತಾ ಪ್ರಮಾಣಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಂತಿಮ ಇ-ಖಾತಾಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಇದರಿಂದ ಹಸ್ತಚಾಲಿತ ನಡೆಯುವ ಪ್ರಕ್ರಿಯೆಗಳ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ ಎಂದು ಹೇಳಿದರು.

‘ವಹಿವಾಟು/ನೋಂದಣಿಗೆ ಸಿದ್ಧ’ ಎಂದು ಗುರುತಿಸಲಾದ ಆಸ್ತಿಗಳಿಗೆ ಸ್ವಯಂಮಾನ್ಯತೆ ಮತ್ತು ಅನುಮೋದನೆ ಸೌಲಭ್ಯವನ್ನು ಪರಿಚಯಿಸಲಾಗಿದೆ. ಇದಕ್ಕಾಗಿ ಋಣಭಾರ ಪ್ರಮಾಣ ಪತ್ರ (ಇಸಿ) ಅಪ್‌ಲೋಡ್ ಮತ್ತು ಪರಿಶೀಲನೆ ಆಧಾರವಾಗಿರುತ್ತದೆ. ಇದರಿಂದ ಆಸ್ತಿ ವಹಿವಾಟು ಪ್ರಕ್ರಿಯೆ ವೇಗಗೊಳ್ಳುತ್ತದೆ ಎಂದರು.

ಇ-ಖಾತಾ ಅರ್ಜಿ ಮತ್ತು ಅನುಮೋದನಾ ಪ್ರಕ್ರಿಯೆಯನ್ನು ಸರಳ, ಪಾರದರ್ಶಕ ಮತ್ತು ಬಳಕೆದಾರ ಸ್ನೇಹಿಯಾಗಿ ರೂಪಿಸಲಾಗಿದೆ. ಡಿಜಿಟಲ್ ಆಡಳಿತ, ದಕ್ಷತೆ ಮತ್ತು ನಾಗರಿಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವುದಕ್ಕೆ ಆಡಳಿತ ಬದ್ಧವಾಗಿದೆ ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಐದು ನಗರ ಪಾಲಿಕೆಗಳ ಎಲ್ಲ ವಲಯಗಳ ಜಂಟಿ ಆಯುಕ್ತರು, ಕಂದಾಯ ಇಲಾಖೆಯ ಜಂಟಿ ಆಯುಕ್ತರು, ಉಪ ಆಯುಕ್ತರು, ಕಂದಾಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಡಾ.ರಾಜ್‌ಕುಮಾರ್ ಸಮಾಧಿ ಸ್ಥಳಕ್ಕೆ ರಾಜ್ಯ ಸರ್ಕಾರ ಜಾಗ ನೀಡಿದ್ದ ವಿಚಾರವಾಗಿ ನಟ ಚೇತನ್ ನೀಡಿದ್ದ ಹೇಳಿಕೆ ಖಂಡಿಸಿ ‘ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘ’ದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಚೇತನ್ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಡಾ.ರಾಜ್‌ಕುಮಾರ್ ಸಮಾಧಿ ಸ್ಥಳಕ್ಕೆ ಸರ್ಕಾರ ನೀಡಿದ್ದ ಜಾಗದ ವಿಚಾರವಾಗಿ ನಟ ಚೇತನ್ ನೀಡಿರುವ ಹೇಳಿಕೆ ಖಂಡಿಸಿ ‘ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿಗಳ ಸಂಘ’ದ ಸದಸ್ಯರು, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ ಪ್ರತಿಭಟನಕಾರರು ಚೇತನ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು. ‘ಅಣ್ಣಾವ್ರ ಬಗ್ಗೆ ಮಾತನಾಡಲು ನಿಮಗೆ ಎಷ್ಟು ಧೈರ್ಯ’ ಎಂದು ಆಕ್ರೋಶ ಹೊರ ಹಾಕಿದರು. ಚೇತನ್ ವಿರುದ್ಧ ಘೋಷಣೆ ಕೂಗಿದರು.

ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಮಾತನಾಡಿ, ‘ಕನ್ನಡದ ಹೋರಾಟದಲ್ಲಿ ನಾನು ಯಾವತ್ತೂ ರಾಜಿ ಆಗಿಲ್ಲ. ಕನ್ನಡದ ಹೋರಾಟಕ್ಕೆ ಶಕ್ತಿ ಮತ್ತು ಸ್ಫೂರ್ತಿಯೇ ರಾಜ್‌ಕುಮಾರ್ ಅವರು. ಚೇತನ್ ನನ್ನ ವಿರುದ್ಧ ದೂರು ನೀಡಿದ್ದಾರೆ. ಅದಕ್ಕೆ ಹೆದರಿ ಹೋರಾಟ ಕೈಬಿಡುವ ಪ್ರಶ್ನೆಯೇ ಇಲ್ಲ. ಅಣ್ಣಾವ್ರ ಪರವಾಗಿ ಹೋರಾಡಿ ಜೈಲಿಗೆ ಹೋದೆ ಎಂಬ ಹೆಮ್ಮೆಯೂ ನನಗೆ ಇರುತ್ತದೆ’ ಎಂದು ಹೇಳಿದರು. ನಿರ್ಮಾಪಕ ಎಂ.ನರಸಿಂಹಲು, ಎನ್.ಎಂ. ಸುರೇಶ್ ಸೇರಿದಂತೆ ಹಲವು ಗಣ್ಯರು ಭಾಗಿ ಆಗಿದ್ದರು.

ಪಿ.ಎಂ–ಉಷಾ ಯೋಜನೆಯಡಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ₹100 ಕೋಟಿ ಅನುದಾನ

ಐದು ವಸ್ತುಸಂಗ್ರಹಾಲಯಗಳ ನವೀಕರಣ

ಪ್ರಜಾವಾಣಿ ವಾರ್ತೆ



ಉದ್ದೇಶಿತ ಕನ್ನಡ ವಿಭಾಗದ ವಸ್ತು ಸಂಗ್ರಹಾಲಯದ ನೀಲನಕ್ಷೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿರುವ ಐದು ವಸ್ತು ಸಂಗ್ರಹಾಲಯಗಳನ್ನು ₹1 ಕೋಟಿ ವೆಚ್ಚದಲ್ಲಿ ನವೀಕರಣ ಮಾಡಲಾಗುತ್ತಿದೆ. ಡಿಜಿಟಲ್ ಕಲಿಕೆಗೆ ಬೇಕಾಗಿರುವ ಮೂಲಸೌಲಭ್ಯಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ.

ಕೇಂದ್ರ ಶಿಕ್ಷಣ ಸಚಿವಾಲಯದ ‘ಪ್ರಧಾನ ಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ’ (ಪಿಎಂ–ಉಷಾ) ಯೋಜನೆಯಡಿ ‘ವಿಶ್ವವಿದ್ಯಾಲಯಗಳಲ್ಲಿ ಬಹು ಶಿಸ್ತೀಯ ಶಿಕ್ಷಣ ಮತ್ತು ಸಂಶೋಧನೆ’ (ಎಂಇಆರ್‌ಯು) ಅಡಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ₹100 ಕೋಟಿ ಅನುದಾನ ಬಿಡುಗಡೆಯಾಗಿದೆ. ಇದರಲ್ಲಿ ₹1 ಕೋಟಿ ವೆಚ್ಚದಲ್ಲಿ ಈ ಐದು ವಸ್ತು ಸಂಗ್ರಹಾಲಯಗಳನ್ನು ನವೀಕರಣಗೊಳಿಸುವ ಕೆಲಸಗಳು ನಡೆಯುತ್ತಿವೆ.

ವಿಶ್ವವಿದ್ಯಾಲಯದ ಪ್ರಾಣಿ ವಿಜ್ಞಾನ, ಭೂವಿಜ್ಞಾನ, ಸಸ್ಯ ವಿಜ್ಞಾನ, ಇತಿಹಾಸ ಹಾಗೂ ಕನ್ನಡ ವಿಭಾಗಗಳಲ್ಲಿರುವ ವಸ್ತು ಸಂಗ್ರಹಾಲಯಗಳ ಉನ್ನತೀಕರಿಸಲಾಗುತ್ತಿದೆ. ಇಲ್ಲಿರುವ ಐತಿಹಾಸಿಕ, ಶೈಕ್ಷಣಿಕ ವಸ್ತುಗಳನ್ನು ಸಂರಕ್ಷಿಸಲಾಗುತ್ತದೆ.

‘ಜಾಗತಿಕ ವಸ್ತು ಸಂಗ್ರಹಾಲಯದ ಮಾನದಂಡಗಳಿಗೆ ಅನುಗುಣವಾಗಿ ಯೋಜನೆ ರೂಪಿಸಿ, ಕಾಮಗಾರಿ ನಡೆಸಲಾಗುತ್ತಿದೆ. ಇತಿಹಾಸ ಹಾಗೂ ಕನ್ನಡ ವಿಭಾಗದಲ್ಲಿರುವ ಪ್ರಾಚ್ಯ ವಸ್ತುಗಳನ್ನು ಸೂಕ್ತ ರೀತಿಯಲ್ಲಿ ಶೇಖರಿಸಿ ಇಡಲಾಗುತ್ತದೆ. ಕಟ್ಟಡದ ನವೀಕರಣ ಕಾಮಗಾರಿಗಳು ಪ್ರಾರಂಭವಾಗಿದೆ. ಪಾರಂಪರಿಕ ಕಟ್ಟಡದ ಮೂಲ ವಾಸ್ತುಶಿಲ್ಪಕ್ಕೆ ಚ್ಯುತಿ ಬರದಂತೆ ನವೀಕರಣ ಕಾಮಗಾರಿ ನಡೆಸಲಾಗುತ್ತಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ಎಂ. ಜಯಕರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕನ್ನಡ ವಿಭಾಗದ ವಸ್ತು ಸಂಗ್ರಹಾಲಯದಲ್ಲಿರುವ ಸುಮಾರು 10 ಸಾವಿರ ಹಳೆಯ ಕನ್ನಡ ಹಸ್ತಪ್ರತಿಗಳು ಮತ್ತು ಲಿಪಿಗಳನ್ನು ಡಿಜಿಟಲೀಕರಣ ಮಾಡಲಾಗುತ್ತದೆ. ಇವುಗಳ ಸಂರಕ್ಷಣೆಗೆ ಆದ್ಯತೆ ನೀಡಲಾಗುತ್ತಿದೆ. ಇವು ವಿದ್ವಾಂಸರು, ಸಂಶೋಧಕರು ಮತ್ತು ಭಾಷಾ ತಜ್ಞರು ಸೇರಿದಂತೆ ವಿದ್ಯಾರ್ಥಿಗಳಿಗೆ ಸಹಾಯಕವಾಗಲಿದೆ’ ಎಂದರು.

‘ಸಸ್ಯವಿಜ್ಞಾನ ವಸ್ತು ಸಂಗ್ರಹಾಲಯದಲ್ಲಿರುವ ಹರ್ಬೇರಿಯಂ ಶೀಟ್‌ಗಳ, ಸಸ್ಯ ಮಾದರಿಗಳನ್ನು ಇಡಲು ರ್‍ಯಾಕ್‌ಗಳನ್ನು ಮಾಡಿಸಲಾಗುತ್ತಿದೆ. ಭೂವಿಜ್ಞಾನ ವಸ್ತು ಸಂಗ್ರಹಾಲಯದಲ್ಲಿರುವ ಶಿಲಾ ಮಾದರಿಗಳು, ಪಳೆಯುಳಿಕೆಗಳು, ಖನಿಜಗಳು ಸಂಗ್ರಹಗಳನ್ನು ಸಂರಕ್ಷಿಸಿ, ಪ್ರದರ್ಶಿಸಲಾಗುತ್ತದೆ’ ಎಂದು ವಿವರಿಸಿದರು.

ಈ ವಸ್ತು ಸಂಗ್ರಹಾಲಯಗಳಲ್ಲಿ ಕೇವಲ ಹಳೆಯ ವಸ್ತುಗಳನ್ನು ಪ್ರದರ್ಶಿಸುವ ಸ್ಥಳವನ್ನಾಗಿ ಮಾಡದೆ, ತಂತ್ರಜ್ಞಾನ ಮತ್ತು ಸಂವಾದಾತ್ಮಕ ಅನುಭವಗಳ ಮೂಲಕ ಸಂದರ್ಶಕರನ್ನು ಆಕರ್ಷಿಸುವ ಕೇಂದ್ರಗಳನ್ನಾಗಿ ಪರಿವರ್ತಿಸಲಾಗುತ್ತದೆ’ ಎಂದು ಪಿಎಂ ಉಷಾ ಯೋಜನೆಯ ಸಂಯೋಜಕ ಅಶೋಕ್ ಡಿ. ಹಂಜಗಿ ತಿಳಿಸಿದರು.

‘ಕಲಾಕೃತಿಗಳು ಮತ್ತು ವಸ್ತುಗಳನ್ನು ಕೇಂದ್ರಿಕರಿಸಲು ಆಧುನಿಕ ಎಲ್‌ಇಡಿ ದೀಪಗಳನ್ನು ಬಳಸಲಾಗುತ್ತದೆ. ಇದು ವಸ್ತುಗಳಿಗೆ ಹಾನಿಯಾಗದಂತೆ ರಕ್ಷಿಸುತ್ತದೆ. ವಸ್ತು ಸಂಗ್ರಹಾಲಯಗಳು ಕೇವಲ ಪ್ರದರ್ಶನಕ್ಕಷ್ಟೇ ಅಲ್ಲದೆ, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಕಲಿಕಾ ಕೇಂದ್ರಗಳಾಗಿ ಕಾರ್ಯನಿರ್ವಹಿಸಲಿವೆ’ ಎಂದರು.

ಮುಖ್ಯಾಂಶಗಳು

- 10 ಸಾವಿರ ಕನ್ನಡ ಹಸ್ತಪ್ರತಿಗಳ ಡಿಜಿಟಲೀಕರಣ
- ಸಂದರ್ಶಕರನ್ನು ಆಕರ್ಷಿಸುವ ಕೇಂದ್ರಗಳನ್ನಾಗಿ ಪರಿವರ್ತನೆ
- ಐತಿಹಾಸಿಕ, ಶೈಕ್ಷಣಿಕ ವಸ್ತುಗಳ ಸಂರಕ್ಷಣೆ

ಬೋಧನಾ ಪ್ರಕ್ರಿಯೆಗಳನ್ನು ಬಲಪಡಿಸಲು ಸಹಾಯಕ: ಕುಲಪತಿ



ಎಸ್.ಎಂ. ಜಯಕರ

‘ಬೋಧನೆ ಮತ್ತು ಅಧ್ಯಯನ ಪ್ರಕ್ರಿಯೆಗಳನ್ನು ಬಲಪಡಿಸಲು ವಸ್ತು ಸಂಗ್ರಹಾಲಯಗಳು ಸಹಾಯಕವಾಗಿವೆ. ಇದರ ಜತೆಗೆ ಉನ್ನತ ಮಟ್ಟದ ಸಂಶೋಧನೆಗೆ ಬೆಂಬಲ ನೀಡುತ್ತವೆ ಮತ್ತು ವಿಭಾಗೀಯ ಸಂಗ್ರಹಾಲಯಗಳನ್ನು ಶೈಕ್ಷಣಿಕ ಹಾಗೂ ಸಾರ್ವಜನಿಕ ಜ್ಞಾನ ಕೇಂದ್ರಗಳಾಗಿ ಬದಲಾಯಿಸಲಾಗುತ್ತದೆ. ಅಮೂಲ್ಯವಾದ ವೈಜ್ಞಾನಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ವಸ್ತುಗಳನ್ನು ಸಂರಕ್ಷಿಸಲಾಗುತ್ತದೆ’ ಎಂದು ಎಸ್.ಎಂ. ಜಯಕರ ತಿಳಿಸಿದರು.

ಭೂಮಾಪಕನ ವಿರುದ್ಧ ಕ್ರಿಮಿನಲ್ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಜಾಗವನ್ನೂ ಸೇರಿಸಿ ಅಕ್ರಮವಾಗಿ ಪೋಡಿ ಮಾಡಿಕೊಟ್ಟಿರುವ ದೂರಿನ ಮೇಲೆ ಯಲಹಂಕ ತಾಲ್ಲೂಕು ಪರವಾನಗಿ ಭೂಮಾಪಕ ಟಿ.ಕೆ.ಎಲ್. ಪ್ರಕಾಶ್, ಅರ್ಜಿದಾರ ಬಲರಾಮ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.

‘ತಾಲ್ಲೂಕಿನ ಕೋತಿಹೊಸಹಳ್ಳಿ ಗ್ರಾಮದಲ್ಲಿ ಸ.ನ 13/1 ರಲ್ಲಿ 1 ಎಕರೆ 19 ಗುಂಟೆ ಜಮೀನನ್ನು ತತ್ಕಾಲ್ ಪೋಡಿ ಅಳತೆ ಮಾಡಿಕೊಡಲು ಅರ್ಜಿ ಸಲ್ಲಿಸಿದ ಬಲರಾಮ್ ಅವರೊಂದಿಗೆ ಶಾಮೀಲಾಗಿ ಸ್ಥಳದಲ್ಲಿ ಪಾಲಿಕೆ ಕಟ್ಟಡ ಮತ್ತು ಆಟದ ಮೈದಾನ ಇದ್ದರೂ ಪ್ರಕಾಶ್ ಪರಿಗಣಿಸಿಲ್ಲ. ಅದನ್ನೂ ಅರ್ಜಿದಾರರ ಪರವಾಗಿ ಮಾಡಿಕೊಟ್ಟಿದ್ದಾರೆ’ ಎಂದು ಯಲಹಂಕ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಡಾವಣೆ ನಕ್ಷೆ ಅನುಮೋದಿಸುವ ಸಂದರ್ಭದಲ್ಲಿ ಉದ್ಯಾನಕ್ಕೆಂದು 33 ಗುಂಟೆ ಸಿಎ ನಿವೇಶನ ಜಮೀನನ್ನು ಕಾಯ್ದಿರಿಸಿದೆ. ಆನಂತರ ಈ ಜಾಗವನ್ನು ಸಹಕಾರ ನಗರ ಕ್ಲಬ್‌ಗೆ 30 ವರ್ಷ ಅವಧಿಗೆ ಗುತ್ತಿಗೆ ನೀಡಿದೆ. ಆ ಜಾಗವನ್ನೂ ಸೇರಿಸಿ ಅಕ್ರಮವಾಗಿ ಪೋಡಿ ಮಾಡಿರುವ ಬಗ್ಗೆ ಕಾನೂನು ಕ್ರಮ ಜರುಗಿಸುವಂತೆ ತಕರಾರು ಅರ್ಜಿ ಸಲ್ಲಿಸಲಾಗಿತ್ತು’ ಎಂದು ಹೇಳಿದ್ದಾರೆ.

‘ದೂರು ಆಧರಿಸಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತರು ಇಲಾಖಾ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದಾಗ ಅಕ್ರಮ ಬಯಲಾಗಿದೆ. ಬಳಿಕ, ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಸೆಕ್ಷನ್ 192(ಎ)ರ ಅಡಿಯಲ್ಲಿ ಕೊಡಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಶಾಸಕರಾಗಿ ಜೀವರಾಜ್ ಪ್ರಮಾಣ

ಕೋರ್ಟ್ ತಡೆ ನೀಡಿದರೆ ರಾಜೇಗೌಡರಿಗೆ ಮತ್ತೆ ಪ್ರಮಾಣ: ಯು.ಟಿ. ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ 2023ರ ಚುನಾವಣೆಯ ಅಂಚೆ ಮತಗಳ ಮರು ಎಣಿಕೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿಯ ಡಿ.ಎನ್. ಜೀವರಾಜ್ ಅವರು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಸಮ್ಮುಖದಲ್ಲಿ ಶಾಸಕರಾಗಿ ಪ್ರಮಾಣ ಸ್ವೀಕರಿಸಿದರು.

ಬುಧವಾರ ನಡೆದ ಈ ಕಾರ್ಯಕ್ರಮದಲ್ಲಿ ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ಇದ್ದರು. ಜೀವರಾಜ್ ಅವರು ಶೃಂಗೇರಿ ಶಾರದಾಂಬೆಯ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು.

ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಯು.ಟಿ. ಖಾದರ್, 'ಫಲಿತಾಂಶಕ್ಕೆ ಒಂದು ವೇಳೆ ಕೋರ್ಟ್ ತಡೆ ನೀಡಿದರೆ, ಜೀವರಾಜ್ ಶಾಸಕ ಸ್ಥಾನ ರದ್ದಾಗುತ್ತದೆ. ರಾಜೇಗೌಡರಿಗೇ ಪುನಃ ಪ್ರಮಾಣ ವಚನ ಬೋಧಿಸಬೇಕಾಗುತ್ತದೆ' ಎಂದು ತಿಳಿಸಿದರು.

'ಜೀವರಾಜ್ ಅವರಿಗೆ ಪ್ರಮಾಣ ನೀಡುವಂತೆ ರಾಜ್ಯಪಾಲರು ಸೂಚನೆ ನೀಡಿದರೇ ಹೊರತು, ನಿರ್ದೇಶನ ನೀಡಲಿಲ್ಲ. ಬಿಜೆಪಿ ನಾಯಕರು ದೂರು ನೀಡಿದ ಕಾರಣ ಅವರು ಸೂಚನೆ ನೀಡಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಸ್ಪಷ್ಟಪಡಿಸಿದರು.

'ಒಬ್ಬ ಅಭ್ಯರ್ಥಿ ಗೆದ್ದಿದ್ದಾನೆ ಎಂದು ಚುನಾವಣಾ ಆಯೋಗ ಪ್ರಮಾಣಪತ್ರ ನೀಡಿದರೆ, ಅವರಿಗೆ ಶಾಸಕರಾಗಿ ಪ್ರಮಾಣ ನೀಡಲೇಬೇಕಾಗುತ್ತದೆ. ನಾವು ಸಂವಿಧಾನಬದ್ಧವಾಗಿ ಜೀವರಾಜ್ ಅವರಿಗೆ ಪ್ರಮಾಣ ವಚನ ಬೋಧಿಸಿದ್ದೇವೆ. ತಡ ಮಾಡಿಲ್ಲ. ನಮ್ಮ ಮೇಲೆ ಒತ್ತಡ ಹೇರಿ ಪ್ರಕ್ರಿಯೆಯನ್ನು ತಡೆಯಲೂ ಆಗುವುದಿಲ್ಲ' ಎಂದು ಖಾದರ್ ತಿಳಿಸಿದರು.

ರಾಜ್ಯಪಾಲರಿಗೆ ದೂರು ನೀಡಿದ್ದ ಬಿಜೆಪಿ: ಅಂಚೆ ಮತಗಳ ಮರು ಎಣಿಕೆಯಲ್ಲಿ ಜೀವರಾಜ್ ಅವರು ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಅವರಿಗಿಂತ 52 ಮತ ಹೆಚ್ಚು ಗಳಿಸಿದ್ದರಿಂದ ವಿಜೇತ ಎಂದು ಘೋಷಿಸಿ ಚುನಾವಣಾ ಆಯೋಗ ಪ್ರಮಾಣ ಪತ್ರವನ್ನು ನೀಡಿತ್ತು. ರಾಜ್ಯಪತ್ರದಲ್ಲೂ ಅದನ್ನು ಪ್ರಕಟಿಸಲಾಗಿತ್ತು.

'ಚುನಾವಣಾ ಆಯೋಗ ಪ್ರಮಾಣ ಪತ್ರ ನೀಡಿ, ರಾಜ್ಯ ಸರ್ಕಾರ ರಾಜ್ಯ ಪತ್ರದಲ್ಲಿ ಪ್ರಕಟಿಸಿದ್ದರೂ ಸಭಾಧ್ಯಕ್ಷ ಯು.ಟಿ.ಖಾದರ್ ಪ್ರಮಾಣ ವಚನ ನೀಡಲು ತಡ ಮಾಡುತ್ತಿದ್ದಾರೆ' ಎಂದು ಆರೋಪಿ ಬಿಜೆಪಿ ನಾಯಕರು ರಾಜ್ಯಪಾಲರಿಗೆ ಮಂಗಳವಾರ ದೂರು ನೀಡಿದ್ದರು. ತಕ್ಷಣವೇ ಪ್ರಮಾಣ ವಚನ ನೀಡುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪತ್ರ ಬರೆದು ಸೂಚಿಸಿದರು. ಇದಕ್ಕೆ ಪತ್ರದ ಮೂಲಕ ಉತ್ತರ ನೀಡಿದ ಸಭಾಧ್ಯಕ್ಷ ಖಾದರ್, ತಾವು ಮಂಗಳೂರಿನಲ್ಲಿ ಇದ್ದ ಕಾರಣ ಮಂಗಳವಾರ ಬೆಂಗಳೂರಿನಲ್ಲಿ ಲಭ್ಯ ಇರಲಿಲ್ಲ. ಉದ್ದೇಶ ಪೂರ್ವಕವಾಗಿ ತಡ ಮಾಡಿಲ್ಲ. ಇನ್ನೂ ಇಬ್ಬರು ಉಪಚುನಾವಣೆಯಲ್ಲಿ ಗೆದ್ದಿರುವ ಕಾರಣ ಒಟ್ಟಿಗೆ ಪ್ರಮಾಣ ಕೊಡಿಸುವ ಉದ್ದೇಶವಿತ್ತು ಎಂದು ತಿಳಿಸಿದ್ದಾರೆ. ಆ ಬಳಿಕ ಖಾದರ್ ಅವರು ಪ್ರಮಾಣ ವಚನ ಸ್ವೀಕರಿಸಲು ಹಾಜರಾಗುವಂತೆ ಜೀವರಾಜ್ ಅವರನ್ನು ಆಹ್ವಾನಿಸಿದರು.

ಕಾಂಗ್ರೆಸ್‌ನಿಂದ ಮತ ಕಳವು: ಅಶೋಕ

'ಕಳೆದ ಮೂರು ವರ್ಷದಲ್ಲಿ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನಿಂದ ಮತ ಕಳವು ಆಗಿರುವುದು ಬಯಲಿಗೆ ಬಂದಿದೆ. ಅದನ್ನು ಒಪ್ಪಿಕೊಳ್ಳದೇ ಬಿಜೆಪಿ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸ್ಟ್ರಾಂಗ್ ರೂಮ್‌ನಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇರುತ್ತದೆ. ಅಲ್ಲಿ ಪೊಲೀಸರ ಕಾವಲು ಇರುತ್ತದೆ. ಇವೆಲ್ಲದರ ಕಣ್ಣುತಪ್ಪಿಸಿ ಮತಪತ್ರಗಳನ್ನು ತಿರುಚುವುದಕ್ಕೆ ಬಿಜೆಪಿಗೆ ಸಾಧ್ಯವಿಲ್ಲ. ಕಾಂಗ್ರೆಸ್ ಈ ರೀತಿ ಆರೋಪ ಮಾಡುತ್ತಿರುವುದು ಹೇಡಿತನದ ಪರಮಾವಧಿ' ಎಂದು ಟೀಕಿಸಿದರು.



ಶೃಂಗೇರಿ ಶಾಸಕರಾಗಿ ಡಿ.ಎನ್.ಜೀವರಾಜ್ ಅವರು ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು, ಸಭಾಧ್ಯಕ್ಷ ಯು.ಟಿ.ಖಾದರ್, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಉಪಸ್ಥಿತರಿದ್ದರು

'ನ್ಯಾಯಾಲಯದಲ್ಲಿ ಸಿಕ್ಕ ನ್ಯಾಯ'

'2023ರ ಚುನಾವಣೆಯಲ್ಲಿ ಮತಗಳ ಎಣಿಕೆ ಮುಗಿದ ತಕ್ಷಣವೇ ಅಂಚೆ ಮತಗಳ ಎಣಿಕೆಯಲ್ಲಿನ ಲೋಪದ ಬಗ್ಗೆ ನನ್ನ ಏಜೆಂಟರು ಎರಡು ದೂರು ದಾಖಲಿಸಿದ್ದರು. ಅದನ್ನು ಮಾನ್ಯ ಮಾಡದ ಕಾರಣ ನ್ಯಾಯಾಲಯದ ಮೆಟ್ಟಿಲು ಹತ್ತಬೇಕಾಯಿತು. ನ್ಯಾಯಾಲಯದ ಮೂಲಕ ನ್ಯಾಯ ಸಿಕ್ಕಿದೆ' ಎಂದು ಶಾಸಕ ಡಿ.ಎನ್.ಜೀವರಾಜ್ ತಿಳಿಸಿದರು.

'ಅಂಚೆ ಮತಗಳ ಎಣಿಕೆಯನ್ನು ಆರಂಭದಲ್ಲಿ ಮಾಡುವುದರ ಬದಲು ಕೊನೆಯಲ್ಲಿ ಮಾಡಿದ್ದರು. ಅಸಿಂಧುಗೊಂಡಿದ್ದ ಮತಪತ್ರಗಳ ಕಂತೆಯನ್ನು ರಾಜೇಗೌಡರಿಗೆ ವರ್ಗಾಯಿಸಲಾಗಿತ್ತು. ಆ ಬಗ್ಗೆಯೇ ನಮ್ಮ ಏಜೆಂಟರು ದೂರು ಕೊಟ್ಟಿದ್ದರು. ಅಧಿಕಾರಿಗಳು ನಮ್ಮ ದೂರಿಗೆ ಬೆಲೆ ನೀಡಲಿಲ್ಲ. ಅಷ್ಟರೊಳಗೆ ರಾಜೇಗೌಡರಿಗೆ ಪ್ರಮಾಣ ಪತ್ರ ಕೊಟ್ಟು ಕಳುಹಿಸಿ ಬಿಟ್ಟರು. ಮತ ಎಣಿಕೆ ಪ್ರಕ್ರಿಯೆ ಕುರಿತ ವಿಡಿಯೊ ದೃಶ್ಯಾವಳಿ ನೀಡುವಂತೆ ಕೋರಿದಾಗ, ನ್ಯಾಯಾಲಯ ಕೇಳಿದರೆ ಮಾತ್ರ ನ್ಯಾಯಾಲಯಕ್ಕೇ ಸಲ್ಲಿಸುವುದಾಗಿ ಚುನಾವಣಾ ಆಯೋಗ ತಿಳಿಸಿತ್ತು' ಎಂದರು.

'ಅತ್ಯಂತ ಭದ್ರತೆ ಹೊಂದಿದ ಸ್ಟ್ರಾಂಗ್ ರೂಮ್‌ಗೆ ಮಾಜಿ ಶಾಸಕನಾದ ನಾನು ಹೋಗಿ ಮತ ಪತ್ರಗಳನ್ನು ತಿರುಚಲು ಸಾಧ್ಯವೇ? ಹತಾಶೆಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನಬಂದಂತೆ ಮಾತನಾಡುತ್ತಿದ್ದಾರೆ' ಎಂದು ದೂರಿದರು.

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'ಹೈಕಮಾಂಡ್ ಹೇಳಿದಂತೆ ಕೇಳುವೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಹೈಕಮಾಂಡ್ ಮಾತನ್ನಷ್ಟೇ ನಾನು ಕೇಳುವುದು, ಅವರು ಹೇಳಿದರೆ ಐದು ವರ್ಷವೂ ಮುಖ್ಯಮಂತ್ರಿ ಆಗಿರುತ್ತೇನೆ' ಎಂದು ಸಿದ್ದರಾಮಯ್ಯ ಬುಧವಾರ ಹೇಳಿದರು.

ಇಲ್ಲಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, 'ನೀವೇ ಇರಿ ಎಂದರೆ ಇರುತ್ತೇನೆ. ಹೈಕಮಾಂಡ್ ತೀರ್ಮಾನಿಸಲಿದೆ. ಬೇರೆ ಯಾರೇ ಏನೇ ಹೇಳಿದರೂ ಅದು ವೈಯಕ್ತಿಕ ಅಭಿಪ್ರಾಯ' ಎಂದರು.

'ರಾಹುಲ್ ಗಾಂಧಿ ಅವರು ನನ್ನನ್ನು ಈವರೆಗೂ ನವದೆಹಲಿಗೆ ಕರೆದಿಲ್ಲ. ಕರೆದರೆ ಹೋಗುತ್ತೇನೆ. ನಾನಾಗಿ ಹೋಗಬೇಕಾದಲ್ಲಿ ಅವರು ಸಮಯ ಕೊಟ್ಟಾಗ ಹೋಗುತ್ತೇನೆ. ಸಂಪುಟ ಪುನರ್‌ರಚನೆಯೋ, ವಿಸ್ತರಣೆಯೊ ಎಂದು ಅವರ ಜೊತೆ ಚರ್ಚಿಸಿ ತೀರ್ಮಾನಿಸುತ್ತೇನೆ. ಯಾವಾಗ ಕರೆಯುತ್ತಾರೊ ಗೊತ್ತಿಲ್ಲ' ಎಂದರು.

'ಸಿ.ಎಂ ಕುರ್ಚಿಯ ಚರ್ಚೆ ವಿಚಾರಕ್ಕೆ, ಗೊಂದಲಕ್ಕೆ ತೆರೆಬೀಳುತ್ತದೆಯೇ' ಎಂಬ ಪ್ರಶ್ನೆಗೆ, 'ಹೈಕಮಾಂಡ್ ತೀರ್ಮಾನಿಸಬೇಕು, ಅದರಂತೆ ನಡೆದುಕೊಳ್ಳುತ್ತೇನೆ' ಎಂದರು.

'ನೀವೇ ಐದು ವರ್ಷ ಪೂರ್ಣಗೊಳಿಸುವ ಆತ್ಮವಿಶ್ವಾಸ ಇದೆಯೇ' ಎಂಬ ಪ್ರಶ್ನೆಗೆ, 'ಹೈಕಮಾಂಡ್ ಹೇಳಿದಂತೆ ಕೇಳುತ್ತೇನಷ್ಟೆ. ಏನೇನೋ ಪ್ರಶ್ನೆ ಕೇಳಿದರೆ, ಅದಕ್ಕೆಲ್ಲ ಉತ್ತರ ಕೊಡಕ್ಕಾಗಲ್ಲ' ಎಂದು ಗರಂ ಆದರು.

'ಸರ್ಕಾರ ಹಾಗೂ ನಮ್ಮ ಕಾರ್ಯಕ್ರಮಗಳನ್ನು ಜನ ಮೆಚ್ಚಿದ್ದಾರೆ. ಇಲ್ಲದಿದ್ದರೆ ಆಗ ಮೂರು, ಈಗ ಎರಡು ಉಪ ಚುನಾವಣೆ ಗೆಲ್ಲುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ವಿರೋಧ ಪಕ್ಷದವರು ಚುನಾವಣೆ ತಂತ್ರಗಾರಿಕೆ ಮಾಡುವುದಿಲ್ಲ, ಕುತಂತ್ರ ಮಾಡ್ತಾರಷ್ಟೆ. ಶೀಘ್ರದಲ್ಲೇ ನಾವು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನೂ ಮಾಡುತ್ತೇವೆ' ಎಂದರು.

ಬಿಜೆಪಿಯಿಂದ ಕ್ರಿಮಿನಲ್ ಸಂಚು: 'ಶೃಂಗೇರಿಯ ಕ್ಷೇತ್ರದ ಚುನಾವಣೆ ಮತ ಎಣಿಕೆ ವಿಚಾರದಲ್ಲಿ ಬಿಜೆಪಿ ಕ್ರಿಮಿನಲ್ ಸಂಚು ನಡೆಸಿದೆ. ರಾಜೇಗೌಡರಿಗೆ ಬಂದಿದ್ದ ಹಾಗೂ ಅರ್ಹವಾಗಿದ್ದ 255 ಮತಗಳನ್ನು ಅನರ್ಹಗೊಳಿಸಲಾಗಿದೆ. ಹೀಗಾಗಿ, ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು' ಎಂದರು.

ಕರೆದಾಗ ದೆಹಲಿಗೆ ಹೋಗುತ್ತೇವೆ– ಡಿಕೆಶಿ

ಬೆಂಗಳೂರು: 'ಮುಖ್ಯಮಂತ್ರಿ ಮತ್ತು ನಾನು ಅವರು (ಹೈಕಮಾಂಡ್) ಕರೆದಾಗ ದೆಹಲಿಗೆ ಹೋಗುತ್ತೇವೆ. ಕರೆಯದೇ ಹೋಗುವುದು ಸರಿಯಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ದೆಹಲಿಗೆ ತೆರಳುವ ವಿಚಾರವಾಗಿ ಸುದ್ದಿಗಾರರು ಕೇಳಿದಾಗ, 'ಅವರು ಕರೆಯುತ್ತಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಾತ್ಯತೀತ ತತ್ವ ಉಳಿಯಲು ತೀರ್ಮಾನ: 'ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಬೇಕು, ಜಾತ್ಯತೀತ ಶಕ್ತಿಗಳು ಒಂದಾಗಿ ಇರಬೇಕು ಎಂಬ ಕಾರಣಕ್ಕೆ ತಮಿಳುನಾಡಿನಲ್ಲಿ ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷಕ್ಕೆ ಬೆಂಬಲ ನೀಡಲು ಕಾಂಗ್ರೆಸ್ ತೀರ್ಮಾನಿಸಿದೆ' ಎಂದು ತಿಳಿಸಿದರು.

'ಎಐಡಿಎಂಕೆ ಮತ್ತು ಬಿಜೆಪಿಯವರು ಎಷ್ಟೇ ಒತ್ತಡ ಹಾಕಿದರೂ ಟಿವಿಕೆಯವರು ಮೈತ್ರಿ ಮಾಡಿಕೊಳ್ಳಲಿಲ್ಲ. ತಮಿಳುನಾಡಿನ ಜನರ ಹಿತಕ್ಕಾಗಿ ನಮ್ಮ ಪಕ್ಷ ಈ ತೀರ್ಮಾನ ತೆಗೆದುಕೊಂಡಿದೆ' ಎಂದರು.

'ದಾವಣಗೆರೆ ಗೆಲುವಿನ ಶ್ರೇಯ ಜಮೀರ್‌ಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಡಿಪಿಐ ಪಡೆದಿರುವ ಶೇ 100ರಷ್ಟು ಮತಗಳು ಕಾಂಗ್ರೆಸ್‌ನವೇ ಆಗಿವೆ. ತಪ್ಪು ಸರಿಪಡಿಸದಿದ್ದರೆ ಮತ್ತೆ ಅನಾಹುತ ಆಗಲಿದೆ' ಎಂದು ಕಾಂಗ್ರೆಸ್‌ನಿಂದ ಅಮಾನತುಗೊಂಡಿರುವ ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಎಚ್ಚರಿಕೆ ನೀಡಿದರು.



ಅಬ್ದುಲ್ ಜಬ್ಬಾರ್

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಶಾಮನೂರು ಶಿವಶಂಕರಪ್ಪ ಅವರು ಇದ್ದಾಗಲೇ ನಾವು ಟಿಕೆಟ್ ಕೇಳಿದ್ದೆವು. ಅವರ ನಿಧನದ ನಂತರವೂ ಕೇಳಿದ್ದೇವೆ. ಅದಕ್ಕೆ ಇಷ್ಟೆಲ್ಲಾ ಆಗಿದೆ. ಮುಂದೆ ಎಲ್ಲ ಸರಿ ಹೋಗಬಹುದು. ಸರಿ ಮಾಡಲು ಅವಕಾಶವಿದೆ' ಎಂದರು.

'ಗೆಲುವಿನ ಶ್ರೇಯ ಸಚಿವ ಜಮೀರ್ ಅಹಮದ್‌ಗೆ ಸೇರಬೇಕು. ದಾವಣಗೆರೆಯಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಮನೆಯಲ್ಲಿ ಜಮೀರ್ ಸುದ್ದಿಗೋಷ್ಠಿ ನಡೆಸಿ ಸಮರ್ಥ್‌ಗೆ ಮತ ಹಾಕುವಂತೆ ಮನವಿ ಮಾಡಿದ್ದರಿಂದ ಗೆಲ್ಲಲು ಸಾಧ್ಯವಾಯಿತು. ಇಲ್ಲದೇ ಇದ್ದಿದ್ದರೆ ಚುನಾವಣಾ ಚಿತ್ರಣವೇ ಬದಲಾಗುತ್ತಿತ್ತು' ಎಂದು ಹೇಳಿದರು.

'ಗೆಲುವಿನ ಅಂತರ ಕಡಿಮೆಯಾಗಲಿದೆ. ಆದರೆ, ಕಾಂಗ್ರೆಸ್ ಗೆಲ್ಲಲಿದೆ ಎಂದು ಫಲಿತಾಂಶಕ್ಕೂ ಮೊದಲೇ ಹೇಳಿದ್ದೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಟಿಕೆಟ್ ಕೊಡದ ಕಾರಣಕ್ಕೆ ಮುಸ್ಲಿಮರು ಬೇಸರಗೊಂಡಿದ್ದರು. ಗೆಲುವಿನ ಅಂತರ ಕಡಿಮೆಯಾಗಲು ಇದೇ ಕಾರಣ' ಎಂದರು.

'ನನ್ನನ್ನು ಪಕ್ಷದಿಂದ ಅಮಾನತುಗೊಳಿಸಿರುವುದು ಮಾಧ್ಯಮಗಳಿಂದಷ್ಟೇ ತಿಳಿದು ಬಂದಿದೆ. ಇದುವರೆಗೆ ಯಾವುದೇ ನೋಟಿಸ್ ಬಂದಿಲ್ಲ. ನೋಟಿಸ್ ಬಂದಿದ್ದರೆ ಉತ್ತರ ಕೊಡುತ್ತಿದ್ದೆ. ಪಕ್ಷ ಕ್ರಮ ತೆಗೆದುಕೊಂಡಿರುವುದು ಸರಿಯಾಗಿದೆ ಎಂದು ಮುಖ್ಯಮಂತ್ರಿ ಕೂಡಾ ಹೇಳಿದ್ದಾರಂತೆ. ಕ್ರಮ ತೆಗೆದುಕೊಂಡಿರುವುದು ಸರಿಯೇ ಎನ್ನುವುದನ್ನು ಅವರು ಒಮ್ಮೆ ಇಲ್ಲಿಗೆ ಬಂದು ನೋಡಲಿ' ಎಂದು ಆಗ್ರಹಿಸಿದರು.

'ಮತ ಕೊಡಬಾರದು ಎಂದು ಒಮ್ಮೆ ಜನ ತೀರ್ಮಾನಿಸಿದರೆ ಕೊಡುವುದಿಲ್ಲ. ಬೇರೆಯವರನ್ನು ಒಳ್ಳೆಯವರಾ, ಕೆಟ್ಟವರಾ ಎಂದೂ ನೋಡುವುದಿಲ್ಲ. ಕ್ಷೇತ್ರಕ್ಕೆ ಜಮೀರ್ ಹೋದ ಕಾರಣ ಅಸಮಾಧಾನ ಸರಿ ಹೋಗಿತ್ತು. ಸೋಲುವ ಕ್ಷೇತ್ರವನ್ನು ನಾವು ಗೆದ್ದಿದ್ದೇವೆ' ಎಂದರು.

'ನಿರ್ಧಾರದ ಬಗ್ಗೆ ಮಾತನಾಡಲ್ಲ'

'ದಾವಣಗೆರೆಯ ಚುನಾವಣೆಗೆ ಸಂಬಂಧಿಸಿದಂತೆ ಮುಸ್ಲಿಂ ನಾಯಕರ ಅಮಾನತು ಹಿಂದಕ್ಕೆ ಪಡೆಯುವ ಬಗ್ಗೆ ಏನೂ ಮಾತನಾಡುವುದಿಲ್ಲ. ಪಕ್ಷ ಈ ತೀರ್ಮಾನ ತೆಗೆದುಕೊಂಡಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 'ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯನ್ನು (ನಸೀರ್ ಅಹಮದ್) ಕೈಬಿಡಬೇಕಾದಾಗ ಮುಖ್ಯಮಂತ್ರಿ ಮಾತನಾಡಿದ್ದರು. ಮುಖ್ಯಮಂತ್ರಿಗೆ ತಮ್ಮದೇ ಆದ ಮಾಹಿತಿ ಇರುತ್ತದೆ' ಎಂದರು.

'ಪಕ್ಷ ಕೆಲವು ಜವಾಬ್ದಾರಿ ನೀಡಿತ್ತು. ಅದನ್ನು ಸರಿಯಾಗಿ ನಿಭಾಯಿಸಲಿಲ್ಲ. ಅದಕ್ಕೆ ಅವರನ್ನು (ನಸೀರ್ ಅಹಮದ್) ಸ್ಥಾನದಿಂದ ಇಳಿಸಲಾಯಿತು. ಜಬ್ಬಾರ್ ತಾವಾಗಿಯೇ ರಾಜೀನಾಮೆ ನೀಡಿದ್ದರು. ಅದನ್ನು ಅಂಗೀಕರಿಸಿದ್ದೇವೆ ಅಷ್ಟೇ' ಎಂದರು.

'ಭೋವಿ ಸಮುದಾಯದ ಬೇಡಿಕೆ ಈಡೇರಿಕೆ'

ಎಸ್‌.ಜಿ.ಸಿದ್ಧರಾಮಯ್ಯಗೆ 'ಕಾಯಕಯೋಗಿ ಸಿದ್ಧರಾಮೇಶ್ವರ ಪ್ರಶಸ್ತಿ' ಪ್ರದಾನ

ಪ್ರಜಾವಾಣಿ ವಾರ್ತೆ

ಮೈಸೂರು: 'ಶೋಷಿತ, ಅವಕಾಶ ವಂಚಿತ ಯಾವುದೇ ಸಮುದಾಯಕ್ಕೂ ಅನ್ಯಾಯವಾಗಲು ಬಿಡುವುದಿಲ್ಲ. ಭೋವಿ ಸಮುದಾಯದ ಎಲ್ಲ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕವಾಗಿ ಶ್ರಮಿಸುವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಭರವಸೆ ನೀಡಿದರು.

ಇಲ್ಲಿನ ಕಲಾಮಂದಿರದಲ್ಲಿ ನಡೆದ ಸಿದ್ಧರಾಮೇಶ್ವರ ಜಯಂತಿಯಲ್ಲಿ ವಿಮರ್ಶಕ ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಅವರಿಗೆ 'ಕಾಯಕಯೋಗಿ ಸಿದ್ಧರಾಮೇಶ್ವರ ಪ್ರಶಸ್ತಿ' ಪ್ರದಾನ ಮಾಡಿದ ಅವರು ಮಾತನಾಡಿದರು.

'ಎಡಗೈ ಜಾತಿಗಳಿಗೆ ಶೇ 5.25, ಬಲಗೈ ಜಾತಿಗಳಿಗೆ ಶೇ 5.25, ಭೋವಿ, ಕೊರಮ, ಕೊರಚ, ಲಂಬಾಣಿ, ಅಲೆಮಾರಿ ಸಮುದಾಯಗಳಿಗೆ ಶೇ 4.5 ಒಳಮೀಸಲಾತಿ ಹಂಚಿಕೆ ಮಾಡಿ, ಸಚಿವ ಸಂಪುಟದಲ್ಲಿ ಅನುಮೋದಿಸಲಾಗಿದೆ. 1931ರ ನಂತರ ಇದೀಗ ಜಾತಿ ಜನಗಣತಿ ನಡೆಯುತ್ತಿದ್ದು, ವರದಿ ಬಂದ ನಂತರ ಮತ್ತೊಂದು ಬಾರಿ ಚರ್ಚಿಸೋಣ' ಎಂದರು.

'ಭೋವಿ ಸಮುದಾಯ ಭವನಗಳಿಗೆ ಜಾಗ, ಅನುದಾನ ಸೇರಿ ವಿವಿಧ ಬೇಡಿಕೆಗಳನ್ನು ಸರ್ಕಾರ ಪರಿಶೀಲಿಸಲಿದೆ. ವಿಧಾನಪರಿಷತ್ ಸದಸ್ಯ ಸ್ಥಾನ ನೀಡುವ ಬಗ್ಗೆ ಹೈಕಮಾಂಡ್ ಜೊತೆ ಚರ್ಚಿಸಲಾಗುವುದು' ಎಂದರು.

ಪ್ರಶಸ್ತಿ ಸ್ವೀಕರಿಸಿದ ವಿಮರ್ಶಕ ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಮಾತನಾಡಿ, 'ಅಸಮಾನತೆಯ ವೈದಿಕ ಧರ್ಮವನ್ನು ನೇರವಾಗಿ ಎದುರಿಸಿ, ತಿರಸ್ಕರಿಸಿದ್ದು ಲಿಂಗಾಯತ ಧರ್ಮ ಮಾತ್ರ. ಅದನ್ನು ದಕ್ಷಿಣ ಕರ್ನಾಟಕಕ್ಕೆ ತಂದವರು ಸಿದ್ಧರಾಮೇಶ್ವರ' ಎಂದರು



ಸಮಾರಂಭದಲ್ಲಿ ವಿಮರ್ಶಕ ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಅವರಿಗೆ 'ಕಾಯಕಯೋಗಿ ಸಿದ್ಧರಾಮೇಶ್ವರ ಪ್ರಶಸ್ತಿ'ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ಎಂ.ಡಿ.ಸುದರ್ಶನ, ಕೆ.ಹರೀಶ್‌ಗೌಡ, ಡಾ.ಡಿ.ತಿಮ್ಮಯ್ಯ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಎಂ.ರಾಮಪ್ಪ, ಶಿವರಾಜ್ ಎಸ್‌.ತಂಗಡಗಿ, ಅನಿಲ್ ಚಿಕ್ಕಮಾದು, ಡಾ.ಯತೀಂದ್ರ ಸಿದ್ದರಾಮಯ್ಯ, ಜೆ.ಮಂಜುನಾಥ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕಾಯಕದ ಗ್ಯಾರಂಟಿ ಕೊಡಿ: ಸಿದ್ಧರಾಮೇಶ್ವರ ಸ್ವಾಮೀಜಿ

'ಕಲ್ಲು ಒಡೆದು ಬದುಕು ಕಟ್ಟಿಕೊಂಡಿರುವ ಭೋವಿ ಸಮುದಾಯಕ್ಕೆ ಕಾಯಕದ ಗ್ಯಾರಂಟಿಯನ್ನು ಕೊಡಬೇಕು. ಉಳಿದ ಎಲ್ಲ ಗ್ಯಾರಂಟಿಗಳಿಗೆ ಖಜಾನೆಯನ್ನು ತುಂಬಿಸುವ ಕೆಲಸವನ್ನು ಸಮುದಾಯ ಮಾಡಲಿದೆ' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

'ಅಬಕಾರಿ ಇಲಾಖೆಯ ಬೊಕ್ಕಸ ತುಂಬಿಸುವವರು ನಮ್ಮವರೇ ಆಗಿದ್ದಾರೆ. ಕಲ್ಲು ಗಣಿಗಾರಿಕೆಗೆ ರಾಜ್ಯದಾದ್ಯಂತ ಅನುಮತಿ ಕೊಟ್ಟರೆ ಕುಲವೃತ್ತಿಯ ಸ್ವ ಉದ್ಯೋಗ ಸಿಗುತ್ತದೆ. ಸಮುದಾಯದವರೊಬ್ಬರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಿ, ವಿಶ್ವವಿದ್ಯಾಲಯವೊಂದಕ್ಕೆ ಕುಲಪತಿ ನೇಮಿಸಿ' ಎಂದು ಕೋರಿದರು.

ಲಂಚ: ಬಂಧನ

ಕೊಪ್ಪಳ: ಗ್ರಾಮ ಪಂಚಾಯಿತಿಯಲ್ಲಿ ಖಾತಾ ದಾಖಲಾತಿ ಮಾಡಿಕೊಡಲು ಲಂಚಕ್ಕೆ ಬೇಡಿಕೆಯಿಟ್ಟದ್ದ ಇಬ್ಬರನ್ನು ತಾಲ್ಲೂಕಿನ ಕೋಳೂರು ಗ್ರಾಮ ಪಂಚಾಯಿತಿಯಲ್ಲಿ ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಗ್ರಾ.ಪಂ. ನಿವೃತ್ತ ಕಾರ್ಯದರ್ಶಿ ಎಂ. ಜ್ಞಾನೇಶ್ವರಯ್ಯ ಜಮೀನು ಪರಿವರ್ತಿಸಿದ ದಾಖಲೆ ಕೇಳಿದ್ದರು. ಅದಕ್ಕೆ ಕೋಳೂರು ಗ್ರಾ.ಪಂ.ನ ಕಾರ್ಯದರ್ಶಿ ಮರಿಯಪ್ಪ ಮಡಿವಾಳರ ಹಾಗೂ ಬಿಲ್ ಕಲೆಕ್ಟರ್ ನಾಗರಾಜ ಬಡಿಗೇರ ₹75 ಸಾವಿರ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಲಂಚ ಪಡೆಯಲು ಸಹಕರಿಸಿದ ದಿನಗೂಲಿ ನೌಕರ ಮಾರುತಿ ಮೈನಳ್ಳಿ ಎಂಬಾತನನ್ನೂ ಬಂಧಿಸಲಾಗಿದೆ.

ಆರ್ಟ್ ಆಫ್ ಲಿವಿಂಗ್‌ಗೆ 10ರಂದು ಮೋದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಭಾನುವಾರ (ಮೇ 10) 'ದಿ ಆರ್ಟ್ ಆಫ್ ಲಿವಿಂಗ್'ನ 45ನೇ ವಾರ್ಷಿಕೋತ್ಸವ ಮತ್ತು ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ 70ನೇ ಜನ್ಮದಿನ ಕಾರ್ಯಕ್ರಮ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿಯಾಗಲಿದ್ದಾರೆ.

ವಾರ್ಷಿಕೋತ್ಸವದ ಅಂಗವಾಗಿ ಸಂಸ್ಥೆಯು ಹಲವು ದಿನಗಳ ಕಾರ್ಯಕ್ರಮ ಹಮ್ಮಿಕೊಂಡಿದೆ. ಮೇ 10ರಂದು ಪ್ರಧಾನಿ ಈ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ. ಆರ್ಟ್ ಆಫ್ ಲಿವಿಂಗ್‌ನ ಆವರಣದಲ್ಲಿ ನಿರ್ಮಿಸಲಾಗಿರುವ ನೂತನ ಧ್ಯಾನ ಮಂದಿರವನ್ನು ಉದ್ಘಾಟಿಸಲಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ವಾರ್ಷಿಕೋತ್ಸವದ ಅಂಗವಾಗಿ ಜಾಗತಿಕ ನಾಯಕತ್ವ ಕುರಿತ ಚರ್ಚೆ ಮತ್ತು ಸಂವಾದ ಏರ್ಪಡಿಸಲಾಗಿದೆ. ಸಂಸ್ಥೆಯು 182 ದೇಶಗಳಲ್ಲಿ ಅಸ್ತಿತ್ವದಲ್ಲಿದ್ದು, ಅಷ್ಟೂ ದೇಶಗಳ ಸಂಸ್ಕೃತಿಯನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಗಳು ನಡೆಯಲಿವೆ. ಭಾರತದ 450ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿರುವವರಿಗೆ ಗೌರವ ಸಲ್ಲಿಸಲಾಗುತ್ತದೆ ಎಂದು ಮಾಹಿತಿ ನೀಡಿದೆ.

ತಿಂಗಳಾಂತ್ಯದವರೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸರ್ಕಾರದ ಪ್ರತಿನಿಧಿಗಳು, ಅಧಿಕಾರಿಗಳು, ರೈತರು, ವೃತ್ತಿಪರರು, ಗೃಹಿಣಿಯರು, ವಿದ್ಯಾರ್ಥಿಗಳು ಸೇರಿ ಸಮಾಜದ ಎಲ್ಲ ಸ್ತರಗಳ ಜನರು ಭಾಗಿಯಾಗಲಿದ್ದಾರೆ. ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ವಿದೇಶಿ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದೆ.



ಧ್ಯಾನ ಮಂದಿರ

'ಪ್ರತಿಯೊಬ್ಬರ ಮುಖದಲ್ಲೂ ಮುಗುಳ್ನಗೆಯನ್ನು ಕಾಣುವುದೇ ಆರೋಗ್ಯವಂತ ಸಮಾಜದ ಲಕ್ಷಣ. ನಲವತ್ತೈದು ವರ್ಷಗಳಿಂದ ನಾವು ಈ ಗುರಿ ತಲುಪುವತ್ತ ಕಾರ್ಯಪ್ರವೃತ್ತರಾಗಿದ್ದೇವೆ. ಅದರ ಭಾಗವಾಗಿ ಈ ಕಾರ್ಯಕ್ರಮ ನಡೆಯಲಿದೆ' ಎಂದು ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ಹೇಳಿದ್ದಾರೆ.

ಪ್ರಧಾನಿ ಅಭಿನಂದಿಸಲು ರಾಜ್ಯ ಬಿಜೆಪಿ ಸಜ್ಜು

ಮೇ 10ರಂದು ರಾಜ್ಯಕ್ಕೆ ಬರುತ್ತಿರುವ ಪ್ರಧಾನಿ ಮೋದಿ ಅವರಿಗೆ ಬೆಂಗಳೂರಿನಲ್ಲಿ ಅಭಿನಂದನಾ ಸಭೆ ಹಮ್ಮಿಕೊಳ್ಳಲು ಬಿಜೆಪಿ ಉದ್ದೇಶಿಸಿದೆ.

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೆರಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಗೆದ್ದಿದೆ. ಈ ಕಾರಣದಿಂದ ಅಭಿನಂದನಾ ಸಭೆ ಏರ್ಪಡಿಸಲು ಪಕ್ಷ ತಯಾರಿ ನಡೆಸಿದೆ.

ಆ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲು ಬುಧವಾರ ಪೂರ್ವಭಾವಿ ಸಭೆ ನಡೆಯಿತು. ವಿಧಾನಸಭೆ ವಿಪಕ್ಷದ ನಾಯಕ ಆರ್.ಅಶೋಕ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಶಾಸಕರಾದ ಸಿ.ಎನ್.ಅಶ್ವತ್ಥನಾರಾಯಣ, ಕೆ. ಗೋಪಾಲಯ್ಯ, ಎಸ್.ಆರ್.ವಿಶ್ವನಾಥ್, ಮುನಿರಾಜು, ಸಿ.ಕೆ. ರಾಮಮೂರ್ತಿ ಸಭೆಯಲ್ಲಿ ಭಾಗವಹಿಸಿದ್ದರು.

ಹುಣಸೂರಿನ ಬ್ರಾಹ್ಮಣರ ಬೀದಿಯ ಲಕ್ಷ್ಮಿನರಸಿಂಹ ದೇಗುಲದಲ್ಲಿ ಕಾರ್ಯಕ್ರಮ

ದಲಿತ– ಬ್ರಾಹ್ಮಣ ಸಹಪಂಕ್ತಿ ಭೋಜನ

ಪ್ರಜಾವಾಣಿ ವಾರ್ತೆ

ಹುಣಸೂರು (ಮೈಸೂರು ಜಿಲ್ಲೆ): ಅಸ್ಪೃಶ್ಯತೆ ನಿರ್ಮೂಲನೆಗಾಗಿ ನಗರದ ಬ್ರಾಹ್ಮಣರ ಬೀದಿಯಲ್ಲಿರುವ ಲಕ್ಷ್ಮಿನರಸಿಂಹ ಸ್ವಾಮಿ ದೇವಾಲಯದ ಆವರಣದಲ್ಲಿ ಮಂಗಳವಾರ ದಲಿತರೊಂದಿಗೆ ಸಹಪಂಕ್ತಿ ಭೋಜನವನ್ನು ಬ್ರಾಹ್ಮಣ ಸಮಾಜದಿಂದ ಹಮ್ಮಿಕೊಳ್ಳಲಾಯಿತು.

ಬ್ರಾಹ್ಮಣರ ಬೀದಿಯ ಗುರುರಾಜ್ ಕುಟುಂಬ ಹಾಗೂ ಇತರ ಪ್ರಮುಖರು ದೇವಸ್ಥಾನದ ಆವರಣಕ್ಕೆ ಸೀಮಿತವಾಗಿದ್ದ ದಲಿತರನ್ನು ದೇವಾಲಯದ ಒಳಪ್ರವೇಶ ಮಾಡಿಸಿ ಮಂಗಳಾರತಿಯನ್ನು ಕೊಟ್ಟು ಸಹಪಂಕ್ತಿ ಭೋಜನಕ್ಕೆ ಆಹ್ವಾನಿಸಿದರು.

ದೇವಸ್ಥಾನದ ಆಡಳಿತ ಮಂಡಳಿ, ದಲಿತ ಸಂಘರ್ಷ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ತಾಲ್ಲೂಕು ಆಡಳಿತ ಸಾಕ್ಷಿಯಾಯಿತು. ಬ್ರಾಹ್ಮಣರು ಖಾದ್ಯಗಳನ್ನು ತಯಾರಿಸಿದರೆ, ದಲಿತ ಮುಖಂಡ ಊಟವನ್ನು ಬಡಿಸಿದರು.

ತಹಶೀಲ್ದಾರ್ ಮಂಜುನಾಥ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ, 'ಅಸ್ಪೃಶ್ಯತೆ, ಜಾತೀಯತೆಯು ಅನಿಷ್ಟ ಪದ್ಧತಿ. ಸಹಪಂಕ್ತಿ ಭೋಜನದ ಮೂಲಕ ಸಾಮಾಜಿಕ ಬದಲಾವಣೆಗೆ ಮುನ್ನುಡಿ ಬರೆಯಲಾಗಿದೆ' ಎಂದರು.

ಬ್ರಾಹ್ಮಣ ಸಮಾಜದ ಗುರುರಾಜ್ ಮಾತನಾಡಿ, 'ದಲಿತರನ್ನು ಬ್ರಾಹ್ಮಣ ಮತ್ತು ಇತರ ಸಮುದಾಯವು ದೂರವಿಟ್ಟಿದ್ದರಿಂದ ಕಳೆದುಕೊಂಡಿದ್ದೇ ಜಾಸ್ತಿ. ಸೋದರ ಸಂಬಂಧಿಗಳಾದ ದಲಿತರನ್ನು ಒಟ್ಟುಗೂಡಿಸಿಕೊಂಡು ಅಸ್ಪೃಶ್ಯತೆ ನಿರ್ಮೂಲನೆ ಮಾಡುವುದು ಅವಶ್ಯ' ಎಂದರು.

ದಸಂಸ ರಾಜ್ಯ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಮಾತನಾಡಿ, 'ಮುಜರಾಯಿ ದೇವಸ್ಥಾನವಾದರೂ ಸೀಮಿತ ಸ್ಥಳದವರೆಗೆ ಪ್ರವೇಶವಿತ್ತು. ಯಾವ ಸಮುದಾಯು ನಮ್ಮನ್ನು ದೂರವಿಟ್ಟಿತ್ತೋ ಅದೇ ಸಮುದಾಯದ ಪ್ರಗತಿಪರರು ಇಂದು ದೇಗುಲಕ್ಕೆ ಪ್ರವೇಶ ಕಲ್ಪಿಸಿ, ಸಹಪಂಕ್ತಿ ಭೋಜನ ಮಾಡಿಸುತ್ತಿರುವುದು ಆಶ್ಚರ್ಯ ತಂದಿದೆ, ಆತ್ಮ ಗೌರವವನ್ನೂ ಹೆಚ್ಚಿಸಿದೆ' ಎಂದರು.



ಹುಣಸೂರಿನ ಬ್ರಾಹ್ಮಣರ ಬೀದಿಯಲ್ಲಿ ದಲಿತ– ಬ್ರಾಹ್ಮಣ ಸಹಪಂಕ್ತಿ ಭೋಜನ ಕಾರ್ಯಕ್ರಮ ಮಂಗಳವಾರ ನಡೆಯಿತು

ಸಾಮಾಜಿಕ ದಾರ್ಶನಿಕ ಬಿ.ಎಸ್.ಯಡಿಯೂರಪ್ಪ

ಯಡಿಯೂರಪ್ಪ ಕೇವಲ ಒಂದು ಹೆಸರಲ್ಲ; ಅದೊಂದು ರಾಜಕೀಯ ಸಂಘರ್ಷದ ಕಥೆ. ಕರ್ನಾಟಕದ ಮಣ್ಣಿನ ಶಕ್ತಿಯನ್ನು ವಿಧಾನಸೌಧದ ಗದ್ದುಗೆಯವರೆಗೆ ಕೊಂಡೊಯ್ದು, ಸದಾ ಜನಮನದ ನಾಡಿಮಿಡಿತಕ್ಕೆ ಸ್ಪಂದಿಸುವ ನೈಜ ಜನನಾಯಕ...


ಲೇಖನ: ರೇಣುಕಾಚಾರ್ಯ, ಬಿಜೆಪಿ ಹಿರಿಯ ಮುಖಂಡರು.

ಕರ್ನಾಟಕದ ರಾಜಕೀಯ ಇತಿಹಾಸವನ್ನು ಗಮನಿಸಿದರೆ, ನಾಡನ್ನಾಳಿದ ಪ್ರತಿಯೊಬ್ಬ ಮುಖ್ಯಮಂತ್ರಿಯೂ ತಮ್ಮದೇ ಆದ ವಿಶಿಷ್ಟ ಛಾಪನ್ನು ಒತ್ತಿ ಹೋಗಿದ್ದಾರೆ. ದೇವರಾಜ ಅರಸು ಅವರು ಭೂ ಸುಧಾರಣೆ ಮತ್ತು ಸಾಮಾಜಿಕ ನ್ಯಾಯದ ಮೂಲಕ ಹೊಸ ಕ್ರಾಂತಿ ಮಾಡಿದರೆ, ರಾಮಕೃಷ್ಣ ಹೆಗಡೆಯವರು ಮೌಲ್ಯಾಧಾರಿತ ರಾಜಕಾರಣಕ್ಕೆ ಭದ್ರ ಬುನಾದಿ ಹಾಕಿದರು. ದೇವೇಗೌಡರು ನೀರಾವರಿ ಯೋಜನೆಗಳ ತಜ್ಞರಾಗಿ ಗುರುತಿಸಿಕೊಂಡರೆ, ಎಸ್.ಎಂ.ಕೃಷ್ಣ ಅವರು ಬೆಂಗಳೂರನ್ನು ಜಾಗತಿಕ ಭೂಪಟದಲ್ಲಿ ನಿಲ್ಲಿಸಿದ ಆಧುನಿಕತೆಯ ಪ್ರತೀಕ. ಸಿದ್ದರಾಮಯ್ಯನವರು ಅನ್ನ-ಭಾಗ್ಯದಂತಹ ಯೋಜನೆಗಳ ಮೂಲಕ 'ಭಾಗ್ಯಗಳ ರೂವಾರಿ' ಎನಿಸಿಕೊಂಡರು. ಈ ಮಹಾನ್ ನಾಯಕರ ಸಾಲಿನಲ್ಲಿ ಬಿ.ಎಸ್. ಯಡಿಯೂರಪ್ಪ ಅವರ ಸ್ಥಾನ ಎಲ್ಲಿ? ಅವರ ವಿಶಿಷ್ಟ ಅಗ್ಗಳಿಕೆ ಏನು? ಎಂಬ ಪ್ರಶ್ನೆಗೆ ಸಿಗುವ ಉತ್ತರ: 'ಅವರು ಕೇವಲ ರಾಜಕಾರಣಿಯಲ್ಲ, ಬದಲಿಗೆ ಸಮುದಾಯದ ನಾಡಿಮಿಡಿತ ಅರಿತ ಒಬ್ಬ ಸಾಮಾಜಿಕ ದಾರ್ಶನಿಕ'



ಯಡಿಯೂರಪ್ಪ ಅವರ ರಾಜಕೀಯ ಜೀವನದ ಅತ್ಯಂತ ಶ್ರೇಷ್ಠ ಮೈಲಿಗಲ್ಲು ಎಂದರೆ ಅದು 'ಕೃಷಿ ಬಜೆಟ್'. ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ, ಬಜೆಟ್ ಎಂದರೆ ಕೇವಲ ಅಂಕಿ-ಅಂಶಗಳ ಆಟವಾಗಿತ್ತು. ಆದರೆ, ರೈತನ ಬದುಕನ್ನು ನೀತಿ ನಿರೂಪಣೆಯ ಕೇಂದ್ರ ಬಿಂದುವನ್ನಾಗಿ ಮಾಡಬೇಕೆಂಬ ಅವರ ದಾರ್ಶನಿಕ ಚಿಂತನೆ 'ಪ್ರತ್ಯೇಕ ಕೃಷಿ ಬಜೆಟ್'ಗೆ ನಾಂದಿ ಹಾಡಿತು. ದೇಶದಲ್ಲೇ ಮೊದಲ ಬಾರಿಗೆ ರೈತರಿಗಾಗಿ ಪ್ರತ್ಯೇಕ ಆಯವ್ಯಯ ಮಂಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇದು ಕೇವಲ ಒಂದು ಆರ್ಥಿಕ ಕ್ರಮವಾಗಿರಲಿಲ್ಲ; ಬದಲಿಗೆ ದೇಶದ ಬೆನ್ನೆಲುಬಾದ ರೈತನಿಗೆ ನೀಡಿದ ಗೌರವ ಮತ್ತು ಆತನನ್ನು ಆಡಳಿತದ ಮುಖ್ಯವಾಹಿನಿಗೆ ತಂದ ದಿಟ್ಟ ನಡೆಯಾಗಿತ್ತು.

ಸಮಾಜದ ಅರ್ಧದಷ್ಟಿರುವ ಮಹಿಳೆಯರ ಮತ್ತು ಹೆಣ್ಣುಮಕ್ಕಳ ಏಳಿಗೆಯಾಗದ ಹೊರತು ರಾಜ್ಯದ ಅಭಿವೃದ್ಧಿ ಅಸಾಧ್ಯ ಎಂಬುದನ್ನು ಅವರು ಮನಗಂಡಿದ್ದರು. ಆ ನಿಟ್ಟಿನಲ್ಲಿ ಜಾರಿಗೆ ತಂದ 'ಭಾಗ್ಯಲಕ್ಷ್ಮಿ' ಯೋಜನೆ ಬಡ ಕುಟುಂಬದ ಹೆಣ್ಣುಮಕ್ಕಳ ಪಾಲಿಗೆ ಆಶಾಕಿರಣವಾಯಿತು. ಹುಟ್ಟಿದ ಹೆಣ್ಣುಮಗುವಿನ ಹೆಸರಿನಲ್ಲಿ ಬಾಂಡ್ ನೀಡುವುದರ ಮೂಲಕ ಭವಿಷ್ಯದ ಭದ್ರತೆಯನ್ನು ಖಚಿತಪಡಿಸಿದರು.



ಇನ್ನು ಗ್ರಾಮೀಣ ಭಾಗದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡಲು ಅವರು ಜಾರಿಗೆ ತಂದ 'ಉಚಿತ ಸೈಕಲ್ ವಿತರಣೆ' ಯೋಜನೆ ಒಂದು ಸಂಚಲನವನ್ನೇ ಸೃಷ್ಟಿಸಿತು. ಇಂದು ಹಳ್ಳಿ-ಹಳ್ಳಿಗಳಲ್ಲಿ ಸೈಕಲ್ ತುಳಿಯುತ್ತಾ ಶಾಲೆಗೆ ಹೋಗುವ ಹೆಣ್ಣುಮಕ್ಕಳ ಮುಖದ ನಗುವಿನಲ್ಲಿ ಯಡಿಯೂರಪ್ಪ ಅವರ ಸಾಮಾಜಿಕ ದೃಷ್ಟಿಕೋನ ಸಾಕಾರಗೊಂಡಿದೆ.

ಯಡಿಯೂರಪ್ಪ ಅವರ ದೃಷ್ಟಿಯಲ್ಲಿ ಅಭಿವೃದ್ಧಿ ಎಂದರೆ ಕೇವಲ ರಸ್ತೆ, ಸೇತುವೆಗಳ ನಿರ್ಮಾಣವಲ್ಲ; ಅದು ಪ್ರತಿಯೊಂದು ಸಮುದಾಯದ ಏಳಿಗೆಯೂ ಹೌದು. ರಾಜ್ಯದ ವಿವಿಧ ಮಠಮಾನ್ಯಗಳಿಗೆ ಅನುದಾನ ನೀಡುವುದರ ಮೂಲಕ ಶಿಕ್ಷಣ ಮತ್ತು ಅನ್ನದಾಸೋಹದಂತಹ ಸಾಮಾಜಿಕ ಕಾರ್ಯಗಳಿಗೆ ಬೆನ್ನೆಲುಬಾಗಿ ನಿಂತರು. ತುಳಿತಕ್ಕೆ ಒಳಗಾದ ಸಮುದಾಯಗಳ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಿ, ಕಟ್ಟಕಡೆಯ ಮನುಷ್ಯನಿಗೂ ಸರ್ಕಾರದ ಸವಲತ್ತುಗಳು ತಲುಪುವಂತೆ ನೋಡಿಕೊಂಡರು. ಅವರ ಈ ಸಮಗ್ರ ದೃಷ್ಟಿಕೋನ ಅವರನ್ನು ಜಾತಿ-ಧರ್ಮಗಳ ಆಚೆಗೆ ಒಬ್ಬ ಜನನಾಯಕನಾಗಿ ರೂಪಿಸಿತು.

ಒಬ್ಬ ಸಾಮಾನ್ಯ ರಾಜಕಾರಣಿ ಕೇವಲ ಮುಂದಿನ ಚುನಾವಣೆಯ ಬಗ್ಗೆ ಯೋಚಿಸುತ್ತಾನೆ. ಆದರೆ ಒಬ್ಬ ದಾರ್ಶನಿಕ ಮುಂದಿನ ಪೀಳಿಗೆಯ ಬಗ್ಗೆ ಯೋಚಿಸುತ್ತಾನೆ. ಯಡಿಯೂರಪ್ಪ ಅವರು ಜಾರಿಗೆ ತಂದ ಯೋಜನೆಗಳು ಕೇವಲ ತಾತ್ಕಾಲಿಕ ಲಾಭಕ್ಕಾಗಿರಲಿಲ್ಲ. ಕೃಷಿ ನೀತಿಗಳಿರಲಿ, ಮೂಲಸೌಕರ್ಯ ಇರಲಿ ಅಥವಾ ಸಾಮಾಜಿಕ ಭದ್ರತೆಯ ಯೋಜನೆಗಳಿರಲಿ, ಅವೆಲ್ಲವೂ ರಾಜ್ಯದ ಭವಿಷ್ಯದ ಬುನಾದಿಯನ್ನು ಭದ್ರಗೊಳಿಸುವ ಉದ್ದೇಶವನ್ನು ಹೊಂದಿದ್ದವು.

ಬಿ.ಎಸ್. ಯಡಿಯೂರಪ್ಪ ಅವರನ್ನು ಕೇವಲ ಒಬ್ಬ ಪಕ್ಷದ ನಾಯಕನಾಗಿ ಅಥವಾ ನಾಲ್ಕು ಬಾರಿ ಮುಖ್ಯಮಂತ್ರಿಯಾದ ವ್ಯಕ್ತಿಯಾಗಿ ನೋಡುವುದು ಪೂರ್ಣ ಚಿತ್ರಣವಾಗಲಾರದು. ಅವರು ಆಡಳಿತದ ವ್ಯವಸ್ಥೆಯಲ್ಲಿ ರೈತ, ಮಹಿಳೆ ಮತ್ತು ಶ್ರಮಿಕ ವರ್ಗವನ್ನು ಕೇಂದ್ರ ಸ್ಥಾನಕ್ಕೆ ತಂದವರು. ತಮ್ಮ ಹೋರಾಟದ ಹಾದಿಯಲ್ಲಿ ಅವರು ಕಂಡುಕೊಂಡ ಅನುಭವಗಳನ್ನು ಜನಪರ ಯೋಜನೆಗಳಾಗಿ ಪರಿವರ್ತಿಸಿದ ರೀತಿ ಅನನ್ಯ. ಹೀಗಾಗಿಯೇ, ಕರ್ನಾಟಕದ ರಾಜಕೀಯ ಗಗನದಲ್ಲಿ ಯಡಿಯೂರಪ್ಪ ಅವರು ಸಾಮಾಜಿಕ ದಾರ್ಶನಿಕ ಎಂಬ ಅನ್ವರ್ಥ ನಾಮದೊಂದಿಗೆ ಸದಾ ಹೊಳೆಯುತ್ತಾರೆ.

ಯಡಿಯೂರಪ್ಪ ಅಂದ್ರೆ ಇಷ್ಟೇನಾ ಅಂದ್ರೆ, ಇಲ್ಲ. ರಾಜಕೀಯ ಸಂಘಟನೆಯ ಸಂದರ್ಭದಲ್ಲೂ ಅವರದ್ದು ವಿಶಿಷ್ಟ ವ್ಯಕ್ತಿತ್ವ. ಹಾಗೆ ನೋಡಿದರೆ, ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕೆಲವರು ಕೇವಲ ಅಧಿಕಾರ ನಡೆಸಿ ನಿರ್ಗಮಿಸುತ್ತಾರೆ, ಆದರೆ ಇನ್ನು ಕೆಲವರು ತಾವೇ ಒಂದು ರಾಜಕೀಯ ಋತುವಾಗಿ ಬದಲಾಗುತ್ತಾರೆ. ಬಿ.ಎಸ್.ಯಡಿಯೂರಪ್ಪ ಅವರು ಎರಡನೇ ಸಾಲಿಗೆ ಸೇರಿದವರು. ಅವರನ್ನು ಕೇವಲ 'ಮಾಜಿ ಮುಖ್ಯಮಂತ್ರಿ' ಎಂದು ಕರೆಯುವುದು ಅವರ ಸುದೀರ್ಘ ಸಂಘಟನಾ ಶಕ್ತಿ ಮತ್ತು ಜನಸಾಮಾನ್ಯರ ಮೇಲಿರುವ ಅವರ ಪ್ರಭಾವಕ್ಕೆ ಮಾಡುವ ಅಪೂರ್ಣ ನ್ಯಾಯವಾದೀತು.

ಬಿಎಸ್.ಯಡಿಯೂರಪ್ಪ ಎನ್ನುವ ಶಕ್ತಿ!

ಯಡಿಯೂರಪ್ಪರವರ ವಿಶೇಷತೆ ಇರುವುದು ಕೇವಲ ಅವರು ಅಧಿಕಾರ ಹಿಡಿದ ರೀತಿಯಲ್ಲಲ್ಲ. ಬದಲಾಗಿ ಅಧಿಕಾರವಿಲ್ಲದಿದ್ದಾಗಲೂ ರಾಜಕೀಯದ ದಿಕ್ಕನ್ನು ನಿಯಂತ್ರಿಸುವ ಅವರ ಅಪ್ರತಿಹತ ಶಕ್ತಿಯಲ್ಲಿ. ಅವರು ಪುಸ್ತಕದ ಪುಟಗಳಲ್ಲಿ ಸಿದ್ಧಾಂತಗಳನ್ನು ಓದಿ ಬೆಳೆದ ನಾಯಕರಲ್ಲ. ರಸ್ತೆಯ ಧೂಳು, ಹಳ್ಳಿಗಳ ಬಡತನ, ರೈತರ ಆಕ್ರೋಶ ಮತ್ತು ಪಕ್ಷದೊಳಗಿನ ಸವಾಲುಗಳ ನಡುವೆ ಪಳಗಿದವರು. ಅವರ ಭಾಷೆಯಲ್ಲಿ ಅಲಂಕಾರಿಕ ಮೆರುಗು ಇಲ್ಲದಿರಬಹುದು, ಆದರೆ ಮಣ್ಣಿನ ಮಗನ ಅಧಿಕಾರಯುತ ಧ್ವನಿಯಿದೆ. ಅವರ ಮಾತಿನಲ್ಲಿ ಮಹಾನಗರದ ಸುಗಂಧಕ್ಕಿಂತ ಹೆಚ್ಚಾಗಿ ಬೆವರಿನ ಘಮವಿದೆ. ಯಡಿಯೂರಪ್ಪ ಎಂದರೆ ಜಿದ್ದಿನ ಇನ್ನೊಂದು ಹೆಸರು. ಹೊಸದಿಲ್ಲಿಯ ಹೈಕಮಾಂಡ್ ಸಂಸ್ಕೃತಿಗಿಂತಲೂ 'ನೆಲದ ನೆನಪೇ' ನಿಜವಾದ ಶಕ್ತಿ ಎಂದು ನಂಬಿದವರು ಅವರು. ಅಧಿಕಾರದ ಸಿಂಹಾಸನಕ್ಕಿಂತಲೂ ಸಂಘಟನೆಯ ಅಡಿಪಾಯಕ್ಕೆ ರಕ್ತ ಮಾಂಸ ಕೊಟ್ಟವರು. ಹೀಗಾಗಿಯೇ, ಅವರು ಅಧಿಕಾರದಲ್ಲಿದ್ದಾಗ ರಾಜನಂತೆ ಕಂಡರೆ, ಅಧಿಕಾರದಿಂದ ಹೊರಗಿದ್ದಾಗ ಒಂದು ಅಜೇಯ ಶಕ್ತಿಯಾಗಿ ಗೋಚರಿಸುತ್ತಾರೆ. ಅವರ ಬಂಡಾಯದ ಗುಣ ಮತ್ತು ಯಾವುದಕ್ಕೂ ಬಗ್ಗದ ಅವರ ಜಿದ್ದೇ ಅವರನ್ನು ರಾಜಕಾರಣದ ಅನಿವಾರ್ಯತೆಯನ್ನಾಗಿ ಮಾಡಿದೆ.

ಅವರ ರಾಜಕಾರಣದ ಮೂಲಧಾತುಗಳಲ್ಲಿ ರೈತ, ಹಸಿವು ಮತ್ತು ಹಳ್ಳಿಯ ಬದುಕು ಅಡಗಿದೆ. 'ಮಣ್ಣಿನಿಂದ ಬಂದ, ಮಣ್ಣನ್ನೇ ಮಾತಾಡಿಸುವ' ಈ ನಾಯಕ ಕರ್ನಾಟಕದ ಜನಮನದಲ್ಲಿ ಒಂದು ಅಪ್ರತಿಹತ ಧ್ವನಿಯಾಗಿ ಉಳಿದಿದ್ದಾರೆ. ತಾಳ್ಮೆ ಮತ್ತು ಜಿದ್ದನ್ನು ಏಕಕಾಲಕ್ಕೆ ಹೊತ್ತು ಸಾಗುವ ಅವರ ಶೈಲಿ ಅಪರೂಪದ್ದು. ಯಡಿಯೂರಪ್ಪ ಕೇವಲ ಒಂದು ಹೆಸರಲ್ಲ; ಅದೊಂದು ರಾಜಕೀಯ ಸಂಘರ್ಷದ ಕಥೆ. ಕರ್ನಾಟಕದ ಮಣ್ಣಿನ ಶಕ್ತಿಯನ್ನು ವಿಧಾನಸೌಧದ ಗದ್ದುಗೆಯವರೆಗೆ ಕೊಂಡೊಯ್ದು, ಸದಾ ಜನಮನದ ನಾಡಿಮಿಡಿತಕ್ಕೆ ಸ್ಪಂದಿಸುವ ನೈಜ ಜನನಾಯಕ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ವ್ಯಕ್ತಿತ್ವ ಸಾಧನೆ ಹೊಸಯುಗದ ಬೀಜಮಂತ್ರ.

–ರಂ.ಶ್ರೀ. ಮುಗಳಿ

ಸಂಪಾದಕೀಯ

ಪ್ರತಿರೋಧದ ‘ಮಮತಾ ಮಾದರಿ’ ರಾಜಕಾರಣಕ್ಕೆ ಒದಗಿರುವ ಬಿಕ್ಕಟ್ಟು

ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ಸೋಲಿಗೆ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಪ್ರತಿಕ್ರಿಯಿಸುತ್ತಿರುವ ರೀತಿ ತೀವ್ರ ಆಕ್ರೋಶ, ಅಸಮಾಧಾನದಿಂದ ಕೂಡಿದೆ. ಈ ಪ್ರತಿಕ್ರಿಯೆಯು ಚುನಾವಣಾ ಪ್ರಚಾರ ಸಮಯದಲ್ಲಿನ ವೈಷಮ್ಯಕ್ಕಿಂತಲೂ ಹೆಚ್ಚು ಕಟುವಾಗಿದೆ. ಸೋಲನ್ನು ಒಪ್ಪಿಕೊಳ್ಳಲು ನಿರಾಕರಿಸಿರುವ ಅವರು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿದ್ದಾರೆ. ಚುನಾವಣೆ ನ್ಯಾಯಬದ್ಧವಾಗಿ ನಡೆದಿಲ್ಲ, ತಮ್ಮ ಸೋಲಿನ ಹಿಂದೆ ಪಿತೂರಿ ಇದೆ ಎಂದು ಆರೋಪಿಸಿದ್ದಾರೆ. ಚುನಾವಣೆಯ ಸೋಲಿನ ನಂತರವೂ ಮುಖ್ಯಮಂತ್ರಿಯೊಬ್ಬರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿರುವುದು ಇದೇ ಮೊದಲ ಬಾರಿಗೆ ಉದ್ಭವಿಸಿರುವ ರಾಜಕೀಯ ಸನ್ನಿವೇಶವಾಗಿದೆ. ಸಾಂವಿಧಾನಿಕ ವ್ಯಾಪ್ತಿಗೆ ಸಂಬಂಧಿಸಿದಂತೆಯೂ ಈ ಪರಿಸ್ಥಿತಿ ಹೊಸತಾಗಿದೆ. ಸಾಂವಿಧಾನಿಕ ಉದ್ದೇಶ ಮತ್ತು ಪ್ರಜಾಸತ್ತಾತ್ಮಕ ಸಂಪ್ರದಾಯಗಳ ನಡುವಿನ ವ್ಯತ್ಯಾಸ ಈ ಪರಿಸ್ಥಿತಿಯಲ್ಲಿ ಅಡಕವಾಗಿದೆ. ಪರಾಭವಗೊಂಡಿರುವ ಮುಖ್ಯಮಂತ್ರಿ ರಾಜೀನಾಮೆ ನೀಡಲೇಬೇಕೆಂದು ಸಂವಿಧಾನ ಒತ್ತಾಯಿಸುವುದಿಲ್ಲ. ಹೊಸ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕರಿಸುವವರೆಗೂ ನಿರ್ಗಮಿಸುವ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಬಹುದಷ್ಟೇ. ಹಾಗಾಗಿ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಒಪ್ಪದಿರುವ ಮಮತಾ ಅವರ ನಿರ್ಧಾರವನ್ನು ಕಾನೂನಿನ ಅನ್ವಯ ತಪ್ಪೆಂದು ಹೇಳುವುದು ಸಾಧ್ಯವಿಲ್ಲ. ಆದರೆ, ಅದು ಪ್ರಜಾಸತ್ತಾತ್ಮಕವಾಗಿ ಅಸಮಂಜಸವಾದುದು.



ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡದಿರುವ ಮಮತಾ ನಿರ್ಧಾರ ಹತಾಶೆ ಮಾತ್ರವಾಗಿರದೆ, ರಾಜಕಾರಣ ತನ್ನ ಮೂಲ ಮಾದರಿಗಳಿಂದ ದೂರ ಸರಿಯುತ್ತಿರುವ ಸಂಕೇತವಾಗಿದೆ.

ಕಾನೂನುಬದ್ಧತೆ ಎನ್ನುವುದು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ವರ್ಣಮಾಲೆ ಇದ್ದಂತೆ. ಅದರ ನಿಜವಾದ ಅರ್ಥವು, ಚುನಾವಣೆಯ ಮೂಲಕ ಔಪಚಾರಿಕವಾಗಿ ವ್ಯಕ್ತವಾಗುವ ಫಲಿತಾಂಶ ಹಾಗೂ ಜನಪ್ರಿಯ, ಸಾಂಪ್ರದಾಯಿಕ ಮಾರ್ಗಗಳ ಮೂಲಕ ಅನೌಪಚಾರಿಕವಾಗಿ ವ್ಯಕ್ತವಾಗುವ ಆದೇಶಗಳ ಆಶಯಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುವುದರಲ್ಲಿದೆ. ಒಂದುವೇಳೆ, ರಾಜೀನಾಮೆ ನೀಡದಿರುವ ನಿರ್ಧಾರಕ್ಕೆ ಅವರು ಅಂಟಿಕೊಂಡಿದ್ದೇ ಆದಲ್ಲಿ ಸಂವಿಧಾನವು ತನ್ನ ಇರುವಿಕೆಯನ್ನು ತನ್ನದೇ ಆದ ರೀತಿಯಲ್ಲಿ ವ್ಯಕ್ತಪಡಿಸುತ್ತದೆ. ಅವರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಬಹುದಾಗಿದೆ, ಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸಬಹುದಾಗಿದೆ ಇಲ್ಲವೇ ಇನ್ನೂ ಕಠಿಣ ಕ್ರಮವನ್ನು ಕೈಗೊಳ್ಳಬಹುದಾಗಿದೆ. ಇದರ ಪರಿಣಾಮವಾಗಿ ರೂಪುಗೊಳ್ಳುವ ಪ್ರಹಸನವು ಕಾನೂನುಬದ್ಧ ಆಗಿರುವುದಕ್ಕಿಂತಲೂ ಹೆಚ್ಚು ನಾಟಕೀಯ ಆಗಿರುತ್ತದೆ. ಮಮತಾ ಬ್ಯಾನರ್ಜಿ ಅವರು ತಮ್ಮನ್ನು ಪ್ರಕ್ರಿಯೆ ಮತ್ತು ಕಾರ್ಯವಿಧಾನಗಳನ್ನು ಅನುಸರಿಸುವ ವ್ಯಕ್ತಿಯಾಗಿ ಬಿಂಬಿಸಿಕೊಳ್ಳುವುದಕ್ಕಿಂತಲೂ ಮಿಗಿಲಾಗಿ, ಬಂಡಾಯದ ರಾಜಕೀಯ ಬಣ್ಣಗಳಲ್ಲಿ ಪ್ರದರ್ಶಿಸಿಕೊಳ್ಳಲು ಬಯಸುವ ನಾಯಕಿಯಾಗಿದ್ದಾರೆ.

ಚುನಾವಣಾ ಫಲಿತಾಂಶದ ನಂತರ ಮಮತಾ ಅವರು ತೆಗೆದುಕೊಂಡಿರುವ ಕಠಿಣ ನಿಲುವು, ರಾಜಕಾರಣವು ತನ್ನ ಪರಿಚಿತ ಪ್ರತಿರೋಧ ಮತ್ತು ಹಕ್ಕು ಸಾಧನೆಯ ಮಾದರಿಗಳಿಂದ ದೂರ ಸರಿಯುತ್ತಿರುವುದನ್ನು ಸೂಚಿಸುವಂತಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಬಿಕ್ಕಟ್ಟಿನಲ್ಲಿರುವ ಸನ್ನಿವೇಶ ಇಂದಿನದು. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಿಂದಾಗಿ ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಮತದಾರರ ಒಳಗೊಳ್ಳುವಿಕೆಯ ಬಗ್ಗೆ ಉದ್ಭವಿಸಿರುವ ಗಂಭೀರ ಪ್ರಶ್ನೆಗಳಿಗೆ ಇನ್ನೂ ಉತ್ತರಗಳು ದೊರೆತಿಲ್ಲ. ಚುನಾವಣಾ ಆಯೋಗದ ಮೇಲೆ ಕರಿನೆರಳು ಆವರಿಸಿದೆ ಹಾಗೂ ನ್ಯಾಯಾಂಗವು ಪರಿಹಾರ ಮತ್ತು ಮಾರ್ಗದರ್ಶನ ನೀಡಲು ಸಮರ್ಥವಾಗಿದೆಯೇ ಎನ್ನುವುದರ ಬಗ್ಗೆ ಶಂಕೆ ವ್ಯಕ್ತವಾಗಿದೆ. ನ್ಯಾಯಬದ್ಧ ಆಗಿರುವುದನ್ನು ಕೇಂದ್ರ ಸರ್ಕಾರ ಬಹಳ ಹಿಂದೆಯೇ ನಿಲ್ಲಿಸಿದೆ ಹಾಗೂ ಸರ್ಕಾರಿ ಸಂಸ್ಥೆಗಳನ್ನು ಬಳಸಿಕೊಂಡು ವಿರೋಧ ಪಕ್ಷಗಳನ್ನು ನಿರ್ಮೂಲನಗೊಳಿಸಲು ಹಾಗೂ ರಾಜಕೀಯವಾಗಿ ತನ್ನನ್ನು ಶಾಶ್ವತಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಬಂಡಾಯ, ಭಾವೋದ್ರೇಕ ಮತ್ತು ಬೀದಿ ರಂಪವನ್ನು ತಮ್ಮ ರಾಜಕೀಯ ಬೆಳವಣಿಗೆಯ ಬಂಡವಾಳ ಆಗಿಸಿಕೊಂಡಿರುವ ಮಮತಾ ಬ್ಯಾನರ್ಜಿ ಅವರ ಸದ್ಯದ ‘ಧಿಕ್ಕಾರ’ವನ್ನು ವೈಯಕ್ತಿಕ ನಿರಾಶೆಯ ರೂಪದಲ್ಲಷ್ಟೇ ನೋಡಲು ಸಾಧ್ಯವಿಲ್ಲ. ಅದು, ವಿರೋಧ ಪಕ್ಷದ ರಾಜಕಾರಣದ ಮೇಲೆ ಹೇರಲಾದ ಬಿಕ್ಕಟ್ಟಾಗಿದೆ; ವ್ಯಾಪಕ ನೆಲೆಯಲ್ಲಿ ನೋಡುವುದಾದರೆ, ಶುಭಸೂಚಕವಲ್ಲದ ಈ ಬೆಳವಣಿಗೆಯು ಸಮಕಾಲೀನ ರಾಜಕಾರಣಕ್ಕೆ ಒದಗಿರುವ ಬಹು ದೊಡ್ಡ ಬಿಕ್ಕಟ್ಟಿನ ಸಂಕೇತವೂ ಆಗಿದೆ. ಅಧಿಕಾರವನ್ನು ಅಡ್ಡದಾರಿಯಲ್ಲಿ ಕಬಳಿಸುವವರನ್ನು ಮಮತಾ ಅಣಕ ಮಾಡುತ್ತಿದ್ದಾರೆ. ಇದು ಆತಂಕಕಾರಿಯಾದ ಸಂಕೇತವಾಗಿದೆ. ಆಡಳಿತದಲ್ಲಿ ಇರುವಂತೆ ರಾಜಕಾರಣದಲ್ಲೂ ಕೆಲವು ನಿಗದಿತ ಪ್ರಕ್ರಿಯೆಗಳಿರುತ್ತವೆ. ಅವು ವಿಫಲವಾದಾಗ ವ್ಯವಸ್ಥೆಯು ಅನಪೇಕ್ಷಿತ ದಾಳಿಗೆ ಒಳಗಾಗುತ್ತದೆ.

ಚಾಟಿ

ಬಿಡಿಯಾಗಿ ಮತ್ತು ಇಡಿಯಾಗಿ



ನಾನಿರುವ ಬಡಾವಣೆಯಲ್ಲಿ ಅತಿ ಹೆಚ್ಚು ಇರುವುದು ಔಷಧಿ ಅಂಗಡಿಗಳು, ನರ್ಸಿಂಗ್ ಹೋಂಗಳು ನಂತರ ದೇವಸ್ಥಾನಗಳು ಮತ್ತು ವೈನ್ ಶಾಪುಗಳು. ಕೊನೆಯದಾಗಿ ಶಾಲೆಗಳು. ಇದು ಬಿಡಿಯಾಗಿ ಹೇಗೋ ಇಡಿಯಾಗಿ ಭಾರತದ ಚಿತ್ರವೂ ಇರಬಹುದು.

ಸವಿತಾ ನಾಗಭೂಷಣ, ಕವಯಿತ್ರಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಸತ್ಯ ಒಪ್ಪಿಕೊಳ್ಳದೆ, ಶೃಂಗೇರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಮತಗಳನ್ನು ತಿದ್ದಲಾಗಿದೆ ಎಂಬ ವಿತಂಡವಾದ ಪ್ರದರ್ಶಿಸುತ್ತಿದ್ದಾರೆ. ಅಂತಹ ಸಂಶಯವಿದ್ದರೆ ಇವರದೇ ಸರ್ಕಾರ ಇರುವಾಗ ಮರುಎಣಿಕೆಗೆ ಮೊದಲೇ ಏಕೆ ಆಕ್ಷೇಪ ಎತ್ತಲಿಲ್ಲ?

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಸೋಮವಾರ, 7-5-2001

• ಕಾಂಗ್ರೆಸ್‌ಗೆ ದಳ (ಎಸ್) ಬೆಂಬಲ: ಸಿದ್ದರಾಮಯ್ಯ

ಬೆಂಗಳೂರು, ಮೇ 6– ‘ಭಾರತೀಯ ಜನತಾ ಪಕ್ಷವನ್ನು ಅಧಿಕಾರದಿಂದ ದೂರವಿಡಲು ಪಟ್ಟಣ ಪ್ರದೇಶಗಳ ಸ್ಥಳೀಯ ಸಂಸ್ಥೆಗಳಲ್ಲಿ ಬಹುಮತ ಪಡೆಯದ ಕಡೆ ಕಾಂಗ್ರೆಸ್‌ಗೆ ನಮ್ಮ ಪಕ್ಷ ಬೆಂಬಲ ನೀಡುತ್ತದೆ’ ಎಂದು ಜನತಾದಳ (ಎಸ್) ರಾಜ್ಯ ಘಟಕದ ಅಧ್ಯಕ್ಷ ಸಿದ್ದರಾಮಯ್ಯ ಅವರು ಹೇಳಿದರು.

‘ಕಾಂಗ್ರೆಸ್‌ಗಿಂತಲೂ ಹೆಚ್ಚು ಅಪಾಯಕಾರಿಯಾದ ಹಾಗೂ ಜಾತಿವಾದಿ ಪಕ್ಷವಾದ ಬಿಜೆಪಿಯನ್ನು ಅಧಿಕಾರದಿಂದ ದೂರವಿರಿಸಬೇಕೆಂಬ ದೃಷ್ಟಿಯಿಂದ ನಮ್ಮ ಪಕ್ಷ ಕಾಂಗ್ರೆಸ್‌ಗೆ ಬೆಂಬಲ ನೀಡುತ್ತದೆ’ ಎಂದು ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

• ತೆಹಲ್ಕಾ ಡಾಟ್‌ಕಾಂ ಸಂಪಾದಕನ ಹತ್ಯೆ ಯತ್ನ ವಿಫಲ: 6 ಬಂಧನ

ನವದೆಹಲಿ, ಮೇ 6 (ಯುಎಐ): ತೆಹಲ್ಕಾ ಡಾಟ್‌ಕಾಂ ಸಂಪಾದಕ ತರುಣ್ ತೇಜ್‌ಪಾಲ್ ಅವರನ್ನು ಹತ್ಯೆ ಮಾಡುವ ಐಎಸ್‌ಐ ಯತ್ನವನ್ನು ದೆಹಲಿ ಪೊಲೀಸರು ವಿಫಲಗೊಳಿಸಿದ್ದಾರೆ. ಈ ಸಂಬಂಧ ಆರು ಮಂದಿಯನ್ನು ಬಂಧಿಸಲಾಗಿದೆ.

75 ವರ್ಷಗಳ ಹಿಂದೆ

ಸೋಮವಾರ, 7-5-1951

• ವಿಮಾನ ಅಪಘಾತದಲ್ಲಿ ಬೆಂಗಳೂರಿನವರ ಮರಣ

ಮದರಾಸ್, ಮೇ 6– ಬೆಂಗಳೂರಿನ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ರೇಡಿಯೋ ಆಫೀಸರಾಗಿದ್ದರೆಂದು ಹೇಳಲಾಗಿರುವ ರಾಜಾರಾವ್ ಎಂಬುವರು ನಡೆಸುತ್ತಿದ್ದ ಎಲ್‌–ವಿ–ವಿಮಾನವೊಂದು ಚಿಂಗಲ್ ಪೇಟೆಗೆ ಏಳು ಮೈಲಿ ದೂರದ ಕುರಂಬಕ್ಕಂ ಬಳಿ ಅಪಘಾತಕ್ಕೀಡಾಗಿ ರಾಜಾರಾಯರೂ, ವಿಮಾನದಲ್ಲಿದ್ದ ಇನ್ನೊಬ್ಬರೂ ಮೃತರಾದರೆಂದು ಇಲ್ಲಿಗೆ ಸುದ್ದಿ ಬಂದಿದೆ.

• ಬಿ.ಟಿ.ಸಿ ಬಸ್ಸುಗಳಿಗೆ ಸ್ತ್ರೀ ಕಂಡಕ್ಟರುಗಳು

ಬೆಂಗಳೂರು, ಮೇ 6– ಇನ್ನು 4–5 ದಿನಗಳಲ್ಲಿ ಕೆಲವು ಬಿ.ಟಿ.ಸಿ ಬಸ್ಸುಗಳು ಸ್ತ್ರೀ ಕಂಡಕ್ಟರುಗಳೊಡನೆ ಓಡಾಡುವುವು.

ಸುಮಾರು 15 ಸ್ತ್ರೀ ಕಂಡಕ್ಟರುಗಳನ್ನು ನೇಮಿಸಿಕೊಳ್ಳಲು ಬಿ.ಟಿ.ಸಿ ಕಂಪನಿ ನಿರ್ಧರಿಸಿದೆಯೆಂದೂ, ನಾಳೆಯಿಂದ 3–4 ದಿನ ಶಿಕ್ಷಣ ಪಡೆದ ನಂತರ ಕ್ರಮವಾಗಿ ಕೆಲವು ಲೈನುಗಳ ಮೇಲೆ ಹಾಜರಾಗುವರೆಂದೂ ತಿಳಿದುಬಂದಿದೆ.

ಹೊಸ ಚರಿತ್ರೆ ಮತ್ತು ಜೈತ್ರಯಾತ್ರೆ



ವಿಶ್ಲೇಷಣೆ

ಬಿ.ಎಸ್. ಅರುಣ್

ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಫಲಿತಾಂಶ ನಿಸ್ಸಂಶಯವಾಗಿ ಹೊಸ ಇತಿಹಾಸ ಸೃಷ್ಟಿಯ ವಿದ್ಯಮಾನ. ಮಮತಾ ಬ್ಯಾನರ್ಜಿ ವಿರುದ್ಧದ ಬಿಜೆಪಿ ಗೆಲುವು, ಆ ಪಕ್ಷದ ಜೈತ್ರಯಾತ್ರೆಯ ಮುಂದುವರಿಕೆಯಾಗಿದೆ. ತಮಿಳುನಾಡಿನಲ್ಲಿ ನಟ ವಿಜಯ್, ಎಂಜಿಆರ್ ಅವರಿಗೂ ಸಾಧ್ಯವಾಗದ ಸಾಧನೆ ಮಾಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ರಾಜಕೀಯ ಸುನಾಮಿ, ತಮಿಳುನಾಡಿನಲ್ಲಿ ಅದು ಭೌಗೋಳಿಕ ಪಲ್ಲಟ (tectonic shift). ಪೂರ್ವದ ರಾಜ್ಯದಲ್ಲಿ ತೃಣಮೂಲ ಕಾಂಗ್ರೆಸ್ ಅನ್ನು ಬಿಜೆಪಿ ಗುಡಿಸಿ ಹಾಕಿದ್ದರೆ, ದಕ್ಷಿಣದ ರಾಜ್ಯದಲ್ಲಿ ಚಿತ್ರನಟ ಮತ್ತು ರಾಜಕಾರಣಕ್ಕೆ ಹೊಸಬರಾದ ಜೋಸೆಫ್ ವಿಜಯ್ ದ್ರಾವಿಡ ಪಕ್ಷವಾದ ಡಿಎಂಕೆಯನ್ನು ಮಣಿಸಿದ್ದಾರೆ, ಸಂಚಲನಾತ್ಮಕ ಜಯ ಸಾಧಿಸಿದ್ದಾರೆ.

ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶಕ್ಕೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಎದ್ದುಕಾಣಿಸುವ ಈ ಎರಡು ಫಲಿತಾಂಶಗಳು ಇತಿಹಾಸ ಸೃಷ್ಟಿಗಿಂತ ಕಡಿಮೆಯೇನಲ್ಲ. ಮಮತಾ ಬ್ಯಾನರ್ಜಿ ಅವರ 15 ವರ್ಷಗಳ ಆಳ್ವಿಕೆಯನ್ನು ಬಿಜೆಪಿ ಅಂತ್ಯಗೊಳಿಸಿದ್ದರೆ, ಡಿಎಂಕೆ ನಾಯಕ ಸ್ಟಾಲಿನ್ ಅವರ ಎರಡನೇ ಅವಧಿಯ ಆಸೆಗೆ ಯುವ ಐಕಾನ್ ತಣ್ಣೀರೆರಚಿದ್ದಾರೆ. ತಮ್ಮ ಪಕ್ಷಗಳ ಸೋಲು ಸಾಲದೆಂಬಂತೆ, ಹಾಲಿ ಇಬ್ಬರೂ ಮುಖ್ಯಮಂತ್ರಿಗಳು ಈ ಹಿಂದೆ ತಮ್ಮ ಪಕ್ಷದಲ್ಲೇ ಇದ್ದು ಹೊರಗೆ ಹೋದವರ ವಿರುದ್ಧ ಸ್ವಕ್ಷೇತ್ರಗಳಲ್ಲಿ ಪರಾಭವಗೊಂಡಿದ್ದಾರೆ.

ಈ ಎರಡು ರಾಜಕೀಯ ಪಲ್ಲಟಗಳಿಗೆ ಕಾರಣ ವೇನು? ಇದು ಎರಡು ರಾಜ್ಯಗಳ ಹೊಸ ಅಧ್ಯಾಯಗಳನ್ನು ಬರೆದ ವಿವಿಧ ಅಂಶಗಳ ಸಂಯೋಜನೆಯಾಗಿದೆ. ಪಶ್ಚಿಮ ಬಂಗಾಳದಲ್ಲಿ, ಮಮತಾ ಅವರು ‘ಬೀದಿ ಹೋರಾಟಗಾರ್ತಿ’ ಎಂದು ಹೆಸರಾಗಿದ್ದರೂ, ತಳಮಟ್ಟದ ವಾಸ್ತವಗಳೊಂದಿಗೆ ಸಂಪರ್ಕ ಕಳೆದುಕೊಂಡಿದ್ದರೆನ್ನಿಸುತ್ತದೆ. 2011ರ ಮೊದಲ ಗೆಲುವಿನಿಂದಲೂ ಮಹಿಳಾಶಕ್ತಿ ಅವರ ಬೆನ್ನಿಗಿತ್ತು ಮತ್ತು ಆ ನಾರೀಶಕ್ತಿಗಾಗಿ ಮಮತಾ ಹಲವಾರು ಯೋಜನೆಗಳನ್ನು ಘೋಷಿಸಿದ್ದರು. ಆದರೆ, ಈ ಬಾರಿ ಮಹಿಳಾ ಮತಬ್ಯಾಂಕ್‌ನಲ್ಲಿ ಬಿರುಕು ಕಾಣಿಸಿದೆ. ಆರ್.ಜಿ. ಕರ್ ಕಾಲೇಜಿನ ಕಿರಿಯ ವೈದ್ಯೆಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಸೇರಿದಂತೆ ಮಹಿಳೆಯರ ಮೇಲಿನ ಕಿರುಕುಳದ ಮೂರು ಘಟನೆಗಳು, ಮಹಿಳೆಯರಲ್ಲಿ ಅಸುರಕ್ಷತೆಯನ್ನೂ ಆಕ್ರೋಶವನ್ನೂ ಮೂಡಿಸಿದ್ದವು. ಕೈಗಾರಿಕೀಕರಣದ ಕೊರತೆಯಿಂದಾಗಿ ಉಂಟಾದ ನಿರುದ್ಯೋಗವು ಯುವಕರನ್ನು ಬಿಜೆಪಿಯತ್ತ ಸೆಳೆಯಿತು.

ಹಿಂದುತ್ವ ಮತ್ತು ಬಾಂಗ್ಲಾದೇಶಿಗಳ ಅಕ್ರಮ ವಲಸೆಯ ಮೇಲೆ ಬಿಜೆಪಿಯ ಪಟ್ಟುಬಿಡದ ಗಮನ ಹಾಗೂ ಟಿಎಂಸಿ ಸರ್ಕಾರ ಅಕ್ರಮ ವಲಸಿಗರಿಗೆ ಬೆಂಬಲ ನೀಡುತ್ತಿದೆ ಎಂಬ ಆರೋಪ ಜನರಲ್ಲಿ ಅನುರಣಿಸಿತು. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಭಾರೀ ವಿವಾದ ಸೃಷ್ಟಿಸಿತು ಮತ್ತು ಲಕ್ಷಾಂತರ ಮತದಾರರನ್ನು ಉದ್ದೇಶಪೂರ್ವಕವಾಗಿ ಕೈಬಿಡಲಾಗಿದೆ ಎಂದು ಟಿಎಂಸಿ ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ನಡೆಸಿತು. ಆದರೆ, ‘ಎಸ್‌ಐಆರ್’ನ ನಿಜವಾದ ಪರಿಣಾಮ ಇನ್ನೂ ತಿಳಿದುಬಂದಿಲ್ಲ.

ಪಕ್ಷದ ಕಾರ್ಯಕರ್ತರ ಭ್ರಷ್ಟಾಚಾರ, ‘ಕಟ್‌–ಮನಿ’ ಹಾವಳಿ ಮತ್ತು 2023ರ ಪಂಚಾಯತ್ ಚುನಾವಣೆಗಳಲ್ಲಿ ಕಂಡುಬಂದ ಭೀಕರ ಹಿಂಸಾಚಾರ ಸೇರಿದಂತೆ ನಿರಂತರ ಹಿಂಸಾತ್ಮಕ ರಾಜಕೀಯವು ಟಿಎಂಸಿಯ ಪತನಕ್ಕೆ ಕಾರಣವಾಯಿತು. ಪಶ್ಚಿಮ ಬಂಗಾಳದ ಗಡಿಯನ್ನು ಪ್ರವೇಶಿಸಲು ದೃಢಸಂಕಲ್ಪ ಮಾಡಿದ್ದ ಬಿಜೆಪಿ, ಚುನಾವಣೆಗೆ ಹಲವು ತಿಂಗಳುಗಳ ಮೊದಲೇ ಪೂರ್ಣ ಶಕ್ತಿಯೊಂದಿಗೆ ಕಣಕ್ಕಿಳಿದಿತ್ತು. ವಾಸ್ತವವಾಗಿ, ಇದರ ಸಿದ್ಧತೆ 2019ರ ಲೋಕಸಭೆ ಚುನಾವಣೆಯ ಬೆನ್ನಲ್ಲೇ ಆರಂಭವಾಗಿತ್ತು. ಅದರ ಫಲಿತಾಂಶ ಈಗ ಕಣ್ಣ ಮುಂದಿದೆ: 2016ರಲ್ಲಿ ಬರೀ 3 ಸ್ಥಾನ ಗಳಿಸಿದ್ದ ಬಿಜೆಪಿಯ ಬಲ, 2021ರಲ್ಲಿ 77ಕ್ಕೆ ಏರಿ, ಈಗ 294 ಸದಸ್ಯ ಬಲದ ವಿಧಾನಸಭೆಯಲ್ಲಿ 207ಕ್ಕೆ ಜಿಗಿದಿದೆ (ಒಂದು ಸ್ಥಾನದಲ್ಲಿ ಮರುಮತದಾನ ಬಾಕಿಯಿದೆ).

ತಮಿಳುನಾಡಿನಲ್ಲಿ, ಸ್ಟಾಲಿನ್ ಅವರ ಆಡಳಿತವು ಉತ್ತಮವಾಗಿದೆ ಎಂದು ಪರಿಗಣಿತವಾಗಿದ್ದರೂ ಮತ್ತು ಯಾವುದೇ ಆಡಳಿತ ವಿರೋಧಿ ಅಲೆ ಇಲ್ಲದಿದ್ದರೂ, ಮತದಾರರು– ವಿಶೇಷವಾಗಿ ಯುವಜನರು– ಚಲನಚಿತ್ರ ತಾರೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಸ್ಟಾಲಿನ್ ಅವಧಿಯಲ್ಲಿ ತಮಿಳುನಾಡು ಸ್ಥಿರ ಪ್ರಗತಿಯನ್ನು ಕಂಡಿತು, ಕೈಗಾರಿಕೀಕರಣವನ್ನು ಮುಂದುವರಿಸಿತು ಮತ್ತು ಕಾನೂನು ಸುವ್ಯವಸ್ಥೆಯಲ್ಲಿ ಉತ್ತಮ ದಾಖಲೆ ಹೊಂದಿತ್ತು. ಆದಾಗ್ಯೂ, ಒಕ್ಕೂಟ ವ್ಯವಸ್ಥೆಯ ಮೇಲಿನ ಅತಿಯಾದ ಗಮನ, ಕೇಂದ್ರ ವಿರೋಧಿ ನಿಲುವು, ಹಿಂದೂಗಳ ವಿರುದ್ಧವಾಗಿ ಅಲ್ಪಸಂಖ್ಯಾತರನ್ನು ಬೆಂಬಲಿಸುವ ಪಕ್ಷದ ಧೋರಣೆ, ಇತ್ಯಾದಿಗಳು ಮತದಾರರನ್ನು ಕೆರಳಿಸಿರಬಹುದು. ಆದರೂ, ತಮಿಳುನಾಡು ಯುಗಗಳಿಂದಲೂ ಕೋಮುಸೌಹಾರ್ದ ಮತ್ತು ಜಾತ್ಯತೀತತೆಗೆ ಹೆಸರುವಾಸಿಯಾಗಿದೆ.

ಕಾರಣ ಏನೇ ಇರಲಿ, ವಿಜಯ್ ಅವರ ಬಿರುಗಾಳಿಯು ದ್ರಾವಿಡ ಪಕ್ಷಗಳ 59 ವರ್ಷಗಳ ನಿರಂತರ ಆಳ್ವಿಕೆಯನ್ನು ಕೊನೆಗೊಳಿಸಿದೆ. ಕುತೂಹಲಕಾರಿ ಸಂಗತಿಯೆಂದರೆ, ವಿಜಯ್ ತಾವು ದ್ರಾವಿಡ ಸಂಸ್ಕೃತಿಯ ಪರ ಎಂದು ಹೇಳಿಕೊಂಡರೂ, ತಮ್ಮ ಪಕ್ಷಕ್ಕೆ ಅದರ ಹೆಸರನ್ನು ಇಟ್ಟಿಲ್ಲ. ಬದಲಾಗಿ, ಎಲ್ಲ ತಮಿಳರನ್ನು ಪ್ರತಿನಿಧಿಸುತ್ತೇವೆ ಎಂಬ ಅರ್ಥ ಬರುವಂತೆ ‘ತಮಿಳು’ (ತಮಿಳಗ ವೆಟ್ರಿ ಕಳಗಂ) ಎಂಬ ಹೆಸರನ್ನು ಬಳಸಿದ್ದಾರೆ. 69 ಸಿನಿಮಾಗಳ ನಾಯಕ ವಿಜಯ್ ಸಾಂಪ್ರದಾಯಿಕ ಪ್ರಚಾರಶೈಲಿಯನ್ನು ಕೈಬಿಟ್ಟು, ಮತದಾರರನ್ನು ತಲಪಲು ಸಾಮಾಜಿಕ ಮಾಧ್ಯಮಗಳನ್ನು ಹೆಚ್ಚು ಅವಲಂಬಿಸಿದ್ದರು, ಅದು ಅಂತಿಮವಾಗಿ ಯಶಸ್ವಿಯಾಯಿತು.

51 ವರ್ಷದ ಈ ನಟ ಇದುವರೆಗೆ ಮಾಧ್ಯಮಗಳಿಂದ ದೂರವಿದ್ದಾರೆ ಮತ್ತು ಒಂದೇ ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿಲ್ಲ. ಅವರು ಸಮಾಜದ ವಿವಿಧ ವರ್ಗಗಳಿಗೆ ಹಲವಾರು ಕಲ್ಯಾಣ ಯೋಜನೆಗಳನ್ನು ಘೋಷಿಸಿದ್ದಾರೆ. ಆದರೆ, ಇವುಗಳ ಅನುಷ್ಠಾನವನ್ನು ರಾಜ್ಯದ ಬಜೆಟ್‌ನಲ್ಲಿ ಪೂರೈಸುವುದು ಅಸಾಧ್ಯ ಎಂದು ಹಲವರು ಹೇಳುತ್ತಿದ್ದಾರೆ. ವಿವಿಧ ವಿಷಯಗಳ ಬಗ್ಗೆ ತಮ್ಮ ನಿಲುವು ಏನು ಎನ್ನುವುದನ್ನು ಅವರಿನ್ನೂ ಸ್ಪಷ್ಟಪಡಿಸಿಲ್ಲ. ಮೊದಲ ಪ್ರಯತ್ನದಲ್ಲೇ ಶೇ 34.9ರಷ್ಟು ಮತಗಳನ್ನು ಪಡೆಯುವ ಮೂಲಕ ವಿಜಯ್ ಅಮೋಘ ಸಾಧನೆ ಮಾಡಿದ್ದಾರೆ. ಇದು ತಮಿಳು ಐಕಾನ್ ಎಂಜಿಆರ್ ಅವರಿಗೂ ಸಾಧ್ಯವಾಗಿರಲಿಲ್ಲ. ಮೊದಲ ಬಾರಿಗೆ, ಅಲ್ಪಸಂಖ್ಯಾತ ಸಮುದಾಯದ ಸದಸ್ಯರೊಬ್ಬರು ತಮಿಳುನಾಡಿನಲ್ಲಿ ಯಾರೂ ಮಾಡದ ಸಾಧನೆ ಮಾಡಿದ್ದಾರೆ. ಎಲ್ಲರನ್ನೂ ಒಟ್ಟಾಗಿ ಕರೆದೊಯ್ಯುವುದಾಗಿ ಅವರು ಆಗಾಗ ಹೇಳುತ್ತಿದ್ದಾರೆ; ದೇವಸ್ಥಾನ, ಚರ್ಚ್ ಮತ್ತು ಮಸೀದಿಗಳಿಗೆ ಭೇಟಿ ನೀಡುತ್ತಿದ್ದಾರೆ. ನಟನ ಮುಂದಿನ ನಡೆ ಕುತೂಹಲಕರವಾಗಿದೆ. ಆಡಳಿತಾತ್ಮಕ ಅನುಭವದ ಸಂಪೂರ್ಣ ಕೊರತೆಯಿರುವ ಅವರಿಗೆ ರಾಜ್ಯದ ವ್ಯವಹಾರಗಳನ್ನು ನಿರ್ವಹಿಸುವುದು ಒಂದು ದೊಡ್ಡ ಸವಾಲಾಗಿದೆ. ಅದರಲ್ಲೂ ಮತದಾರರ ನಿರೀಕ್ಷೆಗಳು ತುಂಬಾ ಹೆಚ್ಚಿರುವಾಗ ಆಡಳಿತದ ಸವಾಲು ಸುಲಭವಲ್ಲ.

ಪ್ರಸ್ತುತ ಚುನಾವಣೆಯು ದೇಶದಾದ್ಯಂತ ಬಿಜೆಪಿಯ ಪ್ರಭಾವ ಮತ್ತಷ್ಟು ವಿಸ್ತಾರಗೊಂಡಿರುವುದನ್ನು ಪ್ರತಿಬಿಂಬಿಸುತ್ತದೆ. ಪಕ್ಷವು ಈಗ ನೇರವಾಗಿ ಮತ್ತು ಎನ್‌ಡಿಎ ಪಾಲುದಾರರೊಂದಿಗೆ ಒಕ್ಕೂಟದ 21 ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಇದರ ವ್ಯಾಪ್ತಿಯು ಪಶ್ಚಿಮದ ಗುಜರಾತ್‌ನಿಂದ ಪೂರ್ವದ ಪಶ್ಚಿಮ ಬಂಗಾಳದವರೆಗೆ ಮತ್ತು ಈಶಾನ್ಯದ ಬಹುತೇಕ ಎಲ್ಲ ರಾಜ್ಯಗಳಿಗೆ ಹರಡಿದೆ. ಉತ್ತರ ಭಾರತ ಮತ್ತು ಮಧ್ಯ ಭಾರತದ ರಾಜ್ಯಗಳಲ್ಲೂ ಬಿಜೆಪಿ ಅಧಿಕಾರದಲ್ಲಿದೆ. ಭೌಗೋಳಿಕವಾಗಿ, ಸುಮಾರು ಶೇ 78ರಷ್ಟು ಜನಸಂಖ್ಯೆಯನ್ನು ಮತ್ತು ಭಾರತದ ಶೇ 72ರಷ್ಟು ಭೂಪ್ರದೇಶವನ್ನು ಬಿಜೆಪಿ ಆವರಿಸಿಕೊಂಡಿದೆ.

ಇದಕ್ಕೆ ವ್ಯತಿರಿಕ್ತವಾಗಿ, ಎರಡು ಪ್ರಬಲ ಪ್ರಾದೇಶಿಕ ಪಕ್ಷಗಳಾದ ಡಿಎಂಕೆ ಮತ್ತು ಟಿಎಂಸಿ ಸೋಲಿನ ನಂತರ ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟವು ದುರ್ಬಲಗೊಂಡಿದೆ. ಕೇರಳದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್‌ಗೆ ಅಲ್ಪ ಆಶಾವಾದ ಮೂಡಿದೆ. ಸಮನ್ವಯದ ಸಂಪೂರ್ಣ ಕೊರತೆ, ಪಶ್ಚಿಮ ಬಂಗಾಳ, ದೆಹಲಿ, ಪಂಜಾಬ್ ಮುಂತಾದ ರಾಜ್ಯಗಳಲ್ಲಿ ಮೈತ್ರಿಕೂಟದ ಪಾಲುದಾರರ ವಿರುದ್ಧ ಕಾಂಗ್ರೆಸ್ ಸ್ಪರ್ಧೆ, ರಾಹುಲ್ ಗಾಂಧಿಯಂತಹ ಕಾಂಗ್ರೆಸ್ ನಾಯಕರು ಸ್ಟಾಲಿನ್ ಮತ್ತು ತೇಜಸ್ವಿ ಯಾದವ್ ಅವರಂತಹ ಪ್ರಾದೇಶಿಕ ನಾಯಕರೊಂದಿಗೆ ವೇದಿಕೆ ಹಂಚಿಕೊಳ್ಳಲು ನಿರಾಕರಿಸಿದ್ದು ಅಥವಾ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಗಳೆಂದು ಘೋಷಿಸದಿದ್ದುದು ಮೈತ್ರಿಕೂಟದ ಹಿನ್ನಡೆಗೆ ಕಾರಣವಾಯಿತು. ಈ ಬಾರಿಯ ಚುನಾವಣೆಯಲ್ಲಿ ‘ಇಂಡಿಯಾ’ ಮೈತ್ರಿಕೂಟದ ಅನೇಕ ಉನ್ನತ ನಾಯಕರು ಪಶ್ಚಿಮ ಬಂಗಾಳಕ್ಕೆ ಹೋಗಿ ಟಿಎಂಸಿ ಪರ ಪ್ರಚಾರ ಮಾಡಿದರು; ಆದರೆ, ಅಲ್ಲಿ ಬಹುತೇಕ ಅಸ್ತಿತ್ವದಲ್ಲೇ ಇಲ್ಲದ ಕಾಂಗ್ರೆಸ್ ಪರವಾಗಿ ಪ್ರಚಾರ ಮಾಡಲಿಲ್ಲ.

ಕೇರಳದಲ್ಲಿನ ಸೋಲು ದೇಶದಲ್ಲಿ ಎಡರಂಗದ ಆಡಳಿತದ ಅಂತ್ಯವನ್ನೂ ಸೂಚಿಸುತ್ತಿದೆ. ನಿರ್ಗಮಿತ ಸಿಎಂ ಪಿಣರಾಯಿ ವಿಜಯನ್ ಅವರಿಗೆ ಈಗಾಗಲೇ 80 ವರ್ಷ ವಯಸ್ಸಾಗಿರುವುದರಿಂದ, ರಾಜ್ಯದ ಎಡರಂಗದ ನಾಯಕತ್ವದ ಬಗ್ಗೆ ಪ್ರಶ್ನಾರ್ಥಕ ಚಿಹ್ನೆ ಮೂಡಿದೆ. ಪಕ್ಷವನ್ನು ಮುನ್ನಡೆಸಲು ಸಿಪಿಎಂ ತನ್ನ ಉತ್ತರಾಧಿಕಾರಿ ಆಯ್ಕೆ ಮಾಡಬೇಕಾಗಿದೆ.

ಪ್ರಸ್ತುತ ಚುನಾವಣೆಯು ಕುಟುಂಬ ರಾಜಕಾರಣಕ್ಕೆ ಭಾರೀ ಪೆಟ್ಟು ನೀಡಿದೆ. ಮಮತಾ, ಸ್ಟಾಲಿನ್ ಮತ್ತು ಅಸ್ಸಾಂನಲ್ಲಿ ಗೌರವ್ ಗೊಗೊಯ್ ಅವರ ಸೋಲು ಈ ಪ್ರವೃತ್ತಿಯನ್ನು ಸೂಚಿಸುತ್ತಿದೆ. ಮತದಾರರು ಮತ್ತು ಪಕ್ಷದ ಕಾರ್ಯಕರ್ತರು ಕುಟುಂಬ ರಾಜಕಾರಣದಿಂದ ಬೇಸತ್ತಿರಬಹುದು. ಆದರೆ, ಈ ಟ್ರೆಂಡ್‌ಗೆ ಕರ್ನಾಟಕದ ಉಪಚುನಾವಣೆ ಅಪವಾದವಾಗಿದೆ. ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ್ ಕೂದಲೆಳೆಯ ಅಂತರದಲ್ಲಿ ಗೆದ್ದಿದ್ದಾರೆ. ಅವರ ತಂದೆ ಮಂತ್ರಿ, ತಾಯಿ ಸಂಸದೆ. ಬಾಗಲಕೋಟೆಯಲ್ಲಿ ದಿವಂಗತ ಎಚ್.ವೈ. ಮೇಟಿ ಅವರ ಸ್ಥಾನಕ್ಕೆ ಅವರ ಪುತ್ರ ಉಮೇಶ ಮೇಟಿ ಆಯ್ಕೆಯಾಗುವ ಮೂಲಕ ರಾಜ್ಯದಲ್ಲಿ ಕುಟುಂಬ ರಾಜಕಾರಣ ಸದ್ಯಕ್ಕಂತೂ ಅಬಾಧಿತವಾಗಿದೆ.

ಲೇಖಕ: ಹಿರಿಯ ಪತ್ರಕರ್ತ



ವಾಚಕರ ವಾಣಿ

ಪುಸ್ತಕ ಸಂಸ್ಕೃತಿಗಾಗಿ ಹೋರಾಟ ಅಗತ್ಯ

ರಾಜ್ಯ ಸರ್ಕಾರವು ಕಳೆದೆರಡು ವರ್ಷಗಳಿಂದ ಪುಸ್ತಕಗಳನ್ನು ಖರೀದಿಸುತ್ತಿಲ್ಲ. ಇದರಿಂದ ಪ್ರಕಾಶಕರು, ಲೇಖಕರು ಹಾಗೂ ಓದುಗರಿಗೆ ಅನ್ಯಾಯವಾಗುತ್ತಿದೆ. ಈ ಬಗ್ಗೆ ಸಚಿವರು, ಆಯುಕ್ತರು, ಪ್ರಧಾನ ಕಾರ್ಯದರ್ಶಿ ಅವರನ್ನು ಹಲವು ಬಾರಿ ಭೇಟಿ ಯಾಗಿ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಸಗಟು ಖರೀದಿ, ರಾಜಾರಾಂ ಮೋಹನ್ ರಾಯ್ ಯೋಜನೆ, ಪರಿಶಿಷ್ಟ ಜಾತಿ ಮತ್ತು ಗಿರಿಜನ ಯೋಜನೆಯಡಿ ಪುಸ್ತಕಗಳ ಖರೀದಿ ನಿಂತುಹೋಗಿದೆ. ಸಾರ್ವಜನಿಕರಿಗೆ ಪುಸ್ತಕ ರೂಪದಲ್ಲಿ ಜ್ಞಾನ ಹಂಚುತ್ತಿರುವ ಲೇಖಕರಿಗೂ, ಪ್ರಕಾಶಕರಿಗೂ, ಪುಸ್ತಕ ಸಂಸ್ಕೃತಿಗೂ ಅಪಚಾರ ಎಸಗುತ್ತಿರುವ ಸರ್ಕಾರದ ಕ್ರಮ ಪ್ರಶ್ನಾರ್ಹ. ಓದುಗರು, ಲೇಖಕರು, ಪ್ರಕಾಶಕರು ತಾವು ಪ್ರಕಟಿಸಿರುವ ಪುಸ್ತಕಗಳ ಜೊತೆಗೆ ಆಗಮಿಸಿ ವಿಧಾನಸೌಧದ ಮುಂದೆ ಧರಣಿ ಕುಳಿತು ‘ಪುಸ್ತಕ ಸಂಸ್ಕೃತಿ’ ಉಳಿಸುವ ಹೋರಾಟ ನಡೆಸುವುದು ಅನಿವಾರ್ಯವಾಗಿದೆ. ಇದಕ್ಕೆ ಅವಕಾಶ ನೀಡದೆ ಖರೀದಿಸಬೇಕಿದೆ.

ನಿಡಸಾಲೆ ಪುಟ್ಟಸ್ವಾಮಯ್ಯ, ಬೆಂಗಳೂರು

ಉಚಿತ ಯೋಜನೆ: ದೇಶದ ಪ್ರಗತಿಗೆ ಕುತ್ತು

ಎಲ್ಲಾ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಗೆಲ್ಲಲು ಉಚಿತ ಯೋಜನೆಗಳಿಗೆ ಜೋತುಬಿದ್ದಿವೆ. ಕರ್ನಾಟಕದಲ್ಲಿ ಪಂಚ ಗ್ಯಾರಂಟಿಗೆ ಸಾಕಷ್ಟು ಹಣ ಖರ್ಚಾಗುತ್ತಿದೆ. ಈಗ ತಮಿಳುನಾಡಿನಲ್ಲಿ ಹೆಚ್ಚು ಸ್ಥಾನ ಪಡೆದಿರುವ ಟಿವಿಕೆ ಪಕ್ಷವೂ ಉಚಿತ ಯೋಜನೆಗಳ ಭರಪೂರ ಭರವಸೆ ನೀಡಿದೆ. ಇಂಥ ಯೋಜನೆಗಳು ಬಡವರ್ಗದವರ ಪರವಾಗಿದ್ದರೆ ತೊಂದರೆಯಿಲ್ಲ; ಆದರೆ, ಇವು ದೇಶದ ಆರ್ಥಿಕತೆಯ ಮೇಲೂ ಪರಿಣಾಮ ಬೀರುತ್ತವೆ. ಬಡವಿದ್ಯಾರ್ಥಿಗಳಿಗೆ ಉಚಿತ ವೈದ್ಯಕೀಯ ಶಿಕ್ಷಣ, ಸರ್ಕಾರಿ ಆಸ್ಪತ್ರೆಗಳಲ್ಲಿ ಎಲ್ಲರಿಗೂ ಉಚಿತ ವೈದ್ಯಕೀಯ ಸೌಲಭ್ಯ ನೀಡುವಂತಹ ಯೋಜನೆ ಜಾರಿಗೊಳಿಸುವುದು ಒಳಿತು. ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುವಂತಹ ಯೋಜನೆಗಳಿಂದ ಭವಿಷ್ಯದಲ್ಲಿ ಆರ್ಥಿಕ ಹಾನಿ ತಪ್ಪಿದ್ದಲ್ಲ.

ಡಿ.ವಿ. ಸಂಜಯ್, ಚಿಕ್ಕಮಗಳೂರು

ವಿದ್ಯಾರ್ಥಿ ಚುನಾವಣೆ: ಅಲಕ್ಷ್ಯ ಬೇಡ

ವಿದ್ಯಾರ್ಥಿ ಸಂಘದ ಚುನಾವಣೆಗಳು ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವಾಗಿವೆ. ಈ ಚುನಾವಣೆಗಳನ್ನು ನಿರ್ಬಂಧಿಸುವುದರಿಂದ ವಿದ್ಯಾರ್ಥಿಗಳ ಧ್ವನಿಯನ್ನು ಮೌನಗೊಳಿಸಿದಂತಾಗುತ್ತದೆ. ದೆಹಲಿ ವಿಶ್ವವಿದ್ಯಾಲಯ ಸೇರಿದಂತೆ ಹಲವು ಸಂಸ್ಥೆಗಳು ವಿದ್ಯಾರ್ಥಿ ಚುನಾವಣೆಗಳ ಮೂಲಕ ನಾಯಕತ್ವ ಬೆಳೆಸುತ್ತಿವೆ. ಸಮಸ್ಯೆಗಳ ಹೆಸರಿನಲ್ಲಿ ಚುನಾವಣೆ ಸ್ಥಗಿತಗೊಳಿಸುವುದು ಪರಿಹಾರ ಅಲ್ಲ. ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿನ ವಿದ್ಯಾರ್ಥಿ ಸಂಘದ ಚುನಾವಣೆಗಳಿಗೆ ಸಂಬಂಧಿಸಿದಂತೆ ಲಿಂಗ್ಡೋ ಸಮಿತಿಯು ಸ್ಪಷ್ಟ ಮಾರ್ಗಸೂಚಿ ನೀಡಿದೆ. ಈ ಸಮಿತಿಯ ವರದಿ ಅನ್ವಯ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಬೇಕಿದೆ.

ಕದ್ರೇಶಕುಮಾರ್ ವಿ.ಎನ್., ವಡ್ಡರಹಳ್ಳಿ

ಶೈಕ್ಷಣಿಕ ವ್ಯವಸ್ಥೆಯ ಸುಧಾರಣೆ ಹೇಗೆ?

ಮಕ್ಕಳ ಮನೋವಿಜ್ಞಾನ ಮತ್ತು ಪಾಲಕರ ಮನೋವೃತ್ತಿಗೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಆದ್ಯತೆ ಸಿಗುತ್ತಿಲ್ಲ. ಇದು ಶೈಕ್ಷಣಿಕ ರಂಗದ ಬೌದ್ಧಿಕ ದಿವಾಳಿತನಕ್ಕೆ ನಿದರ್ಶನ. ಪರರ ಮಕ್ಕಳ ಸಾಧನೆಯತ್ತ ಬೆಟ್ಟು ಮಾಡುತ್ತಾ ಪಾಲಕರು ತಮ್ಮ ಮಕ್ಕಳ ಅಂತರಂಗದ ಪ್ರತಿಭೆಯನ್ನು ನಿಷ್ಕರುಣೆಯಿಂದ ಹೊಸಕಿ ಹಾಕುತ್ತಿದ್ದಾರೆ. ಮಕ್ಕಳಿಗೆ ಭೌತಿಕ ಸೌಲಭ್ಯಗಳ ಕನಸು ತೋರಿಸುತ್ತಾ ಅವರನ್ನು ರಕ್ತಮಾಂಸದ ರೋಬೋಟ್‌ಗಳನ್ನಾಗಿಸುತ್ತಿದ್ದಾರೆ. ಮತ್ತೊಂದೆಡೆ ಸರ್ಕಾರ ಕ್ಯಾಪಿಟೇಷನ್ ಮತ್ತು ಡೊನೇಷನ್ ಲಾಬಿಗೆ ಮಣಿದಿದೆ. ಇದು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವರದಾನವಾಗಿದೆ. ಈ ಸಂಸ್ಥೆಗಳು ಐಷಾರಾಮಿ ಕ್ಲಾಸ್ ರೂಂಗಳೇ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿ ಎಂಬಂತೆ ವೈಭವೀಕರಿಸುವ ಜಾಹೀರಾತು ನೀಡುತ್ತವೆ; ಪಾಠೋಪಕರಣ, ಬೋಧನಾ ಕೌಶಲವನ್ನು ನಗಣ್ಯಗೊಳಿಸುತ್ತಿವೆ. ಈ ನಡುವೆಯೇ ‘ಮಗು ಕೇಂದ್ರಿತ ಶಿಕ್ಷಣ’ವೆಂದು ಶಿಕ್ಷಣ ತಜ್ಞರು ಸೆಮಿನಾರ್‌ಗಳಲ್ಲಿ ಮೇಜು ಕುಟ್ಟುತ್ತಿದ್ದಾರೆ. ಇವರೆಲ್ಲರ ಆಟ ನೋಡುತ್ತಾ ಮಕ್ಕಳು ಮೂಕರಾಗಿದ್ದಾರೆ.

ಡಿ.ಎಂ. ನದಾಫ್, ಅಫಜಲಪುರ

ಮಮತಾ: ಉದ್ಧಟತನವೊ? ಸೊಕ್ಕೋ?

ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಹೀನಾಯವಾಗಿ ಸೋತರೂ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಡುವುದಿಲ್ಲವೆಂದು ಘೋಷಿಸುತ್ತಿದ್ದಂತೆಯೇ, 2021ರಲ್ಲಿ ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದ ಜೋ ಬೈಡನ್ ಅವರಿಗೆ ಅಧಿಕಾರ ಬಿಟ್ಟುಕೊಡಲು ನಿರಾಕರಿಸಿ ರಂಪಾಟ ಮಾಡಿದ ಡೊನಾಲ್ಡ್ ಟ್ರಂಪ್ ನೆನಪಾದರು. ‘ಸಿಎಂ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ; ರಾಜ್ಯಪಾಲರನ್ನು ಭೇಟಿಯಾಗುವುದಿಲ್ಲ’ ಮುಂತಾದ ಸವಾಲುಗಳನ್ನು ಮುಂದಿಟ್ಟಿರುವ ಮಮತಾ, ‘ಬಿಜೆಪಿಯ ಗೆಲುವು ಜನಾದೇಶವಲ್ಲ; ಒಳಸಂಚಿನದು’ ಎಂದು ಆರೋಪಿಸಿದ್ದಾರೆ. ‘ನಾನು ಸೋತಿಲ್ಲ. ರಾಜೀನಾಮೆ ಕೊಡುವುದಿಲ್ಲ, ಹೋರಾಡುತ್ತೇನೆ’ ಎಂದು ಹೇಳಿರುವುದು ಅವಿವೇಕದ ವರ್ತನೆ.

‘ಬಿಜೆಪಿ ಗೆಲುವಿಗೆ ಚುನಾವಣಾ ಆಯೋಗವೆಂಬ ಖಳನಾಯಕನ ಪಾತ್ರವೇ ನಿರ್ಣಾಯಕ’ ಎನ್ನುತ್ತಿರುವ ಅವರು, ಇದುವರೆಗೂ ಬಿಜೆಪಿ ಅಧಿಕಾರಕ್ಕೆ ಬಂದಾಗಲೆಲ್ಲಾ ಇವಿಎಂಗಳ ವಿರುದ್ಧ ಹೊರಬರುತ್ತಿದ್ದ ಆಪಾದನೆಯನ್ನು ಈಗ ತಪ್ಪಿಸಿದಂತಾಗಿದೆ. ಹದಿನೈದು ವರ್ಷ ಗಳಷ್ಟು ದೀರ್ಘಾವಧಿ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿರುವ ಮತ್ತು ಇತ್ತೀಚೆಗಷ್ಟೇ ಸುಪ್ರೀಂ ಕೋರ್ಟ್‌ನಲ್ಲಿ ತನ್ನ ಸರ್ಕಾರದ ಪರ ತಾನೇ ಸ್ವತಃ ವಾದ ಮಂಡನೆ ಮಾಡಿರುವ ಅವರಿಗೆ ಸಂವಿಧಾನದ 164 ಮತ್ತು 172ನೇ ವಿಧಿಗಳ ಪರಿಚಯ ಇಲ್ಲವೇ? ತಮ್ಮ ನಡೆನುಡಿ ಮತ್ತು ವರ್ತನೆಗಳನ್ನು ಹದ್ದುಬಸ್ತಿಗೆ ತರುವ ಶಕ್ತಿ ಸಂವಿಧಾನಕ್ಕೆ ಇಲ್ಲವೆಂದು ಮಮತಾ ಭಾವಿಸುವುದಾದರೆ ಅದು ಇನ್ನಷ್ಟು ದಿನ ಪ್ರಚಾರದಲ್ಲಿ ಉಳಿಯುವ ಹುನ್ನಾರ ಎಂದಷ್ಟೇ ಅರ್ಥೈಸಬೇಕಾಗುತ್ತದೆ. ‘ತಮ್ಮ ಕೊರಳಿಗೆ ತಾವೇ ಉರುಳು ಹಾಕಿಕೊಳ್ಳಲಿ’ ಎಂದು ಈ ಬೆಳವಣಿಗೆಯನ್ನು ತೀವ್ರ ವಾಗಿ ಪ್ರತಿಭಟಿಸದೆ ಇರುವ ಬಿಜೆಪಿ ತಂತ್ರವನ್ನು ಮಮತಾ ಅರ್ಥ ಮಾಡಿಕೊಳ್ಳಬೇಕು. ಮಮತಾರ ಮಾನಸಿಕತೆ ಹೀಗಾಗಬಾರದಿತ್ತು.

ಸಿ.ಎಚ್. ಹನುಮಂತರಾಯ, ಬೆಂಗಳೂರು

ಚುರುಮುರಿ



ಮೇಡಂ ಬದಲು ಸರ್!

• ಗುರು ಪಿ.ಎಸ್.

ಕಣ್ಮುಂದೆ ಜನಸಾಗರ. ಮುಖದ ಮೇಲೆ ಬೆಳಕೋ ಬೆಳಕು. ಕ್ಯಾಮೆರಾಗಳ ಕಣ್ಣುಗಳು ಚಕಚಕಚಕ ಹೊಡೆದುಕೊಳ್ಳುತ್ತಿವೆ. ಎದುರಿಗೆ ಟೀವಿ ಚಾನೆಲ್‌ಗಳ ರಾಶಿ ರಾಶಿ ಮೈಕುಗಳು.

‘ಸಾರ್, ಈ ಅಭೂತಪೂರ್ವ ಗೆಲುವು ಕಂಡು ನಿಮಗೇನನ್ನಿಸುತ್ತಿದೆ?’

‘ಇನ್ನೇನನ್ನುಸ್ತೆ ರೀ, ಅಗ್ತಿರೋ ಖುಷೀನ ಹೇಳೋಕೆ ಪದಗಳೇ ಸಿಗ್ತಿಲ್ಲ. ಎಲ್ಲ ನನ್ನ ಅಭಿಮಾನಿಗಳ ಆಶೀರ್ವಾದ’.

‘ಪಕ್ಷ ಕಟ್ಟಿ ಎರಡು ವರ್ಷಕ್ಕೇ ಇಷ್ಟು ದೊಡ್ಡ ಗೆಲುವು! ನಿಮ್ಮ ಕಾರ್ ಡ್ರೈವರ್ ಮಗನೂ ಈಗ ಶಾಸಕ! ಇನ್ನೇನು, ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸೋದೊಂದು ಬಾಕಿ’.

‘... ಹೆಸರಿನವನಾದ ನಾನು ರಾಜ್ಯದ ಮುಖ್ಯಮಂತ್ರಿಯಾಗಿ...’ ಎನ್ನುತ್ತಿದ್ದಂತೆ ಮುಖದ ಮೇಲೆ ನೀರು ಬಿತ್ತು.

‘ಏನಾಯ್ತು ರೀ ನಿಮಗೆ, ನಿದ್ದೆಗಣ್ಣಲ್ಲಿ ಏನೇನೋ ಬಡಬಡಿಸ್ತಿದೀರಿ’ ಹೆಂಡತಿ ನೀರು ಎರಚಿದಳು.

‘ಅಯ್ಯೋ ನಾನು ಇಷ್ಟು ಹೊತ್ತು ಕಂಡಿದ್ದು ಕನಸಾ... ನಾನು ಸಿಎಂ ಆಗಿದ್ದೆ ಕಣೆ’.

‘ಓಹೋ ಅಗ್ತೀರಾ, ಅಗ್ತೀರಾ... ಕೆಲವರಿಗೆ ನನಸಾಗಿದ್ದು, ಹಲವರಿಗೆ ಕನಸಲ್ಲೂ ಸಂಭವಿಸಲ್ಲ. ನನ್ನ ಗೃಹಲಕ್ಷ್ಮಿ ದುಡ್ಡು ಬಂದು ನಾಲ್ಕು ತಿಂಗಳಾಯ್ತು, ಅದೇನಾಗಿದೆ ಅಂತ ಚೆಕ್ ಮಾಡಿ ಬರೋಗಿ’.

‘ಸುಮ್ನೆ ನೀನು ತಮಿಳುನಾಡಿಗೆ ಹೋಗಿಬಿಡು, ಅಲ್ಲಿ ತಿಂಗಳು ತಿಂಗಳು ದುಡ್ಡು, ಮಗಳ ಮದುವೆಗೆ ಚಿನ್ನ, ರೇಷ್ಮೆ ಸೀರೆ, ವರ್ಷಕ್ಕೆ 6 ಸಿಲಿಂಡರ್ ಎಲ್ಲ ಕೊಡ್ತಾರೆ’.

‘ಹೌದ್ ನೋಡ್ರಿ, ಅಲ್ಲಿ ರೀಜನಲ್ ಪಾರ್ಟಿಗೆ ಜನ ಎಷ್ಟ್ ಸಪೋರ್ಟ್ ಮಾಡ್ತಾರೆ, ನಮ್ ರಾಜ್ಯದಲ್ಲಿ ಯಾಕ್ ಮಾಡಲ್ಲ’.

‘ನೀನು ಹಿಂದಿ ವಿರೋಧ ಮಾಡ್ತೀಯ, ಆದರೆ ವೋಟ್ ಮಾತ್ರ ನ್ಯಾಷನಲ್ ಪಾರ್ಟಿಗಳಿಗೇ ಹಾಕ್ತೀಯ. ಪ್ರಾದೇಶಿಕ ಪಕ್ಷ ಇನ್ನೆಲ್ಲಿಂದ ಬರುತ್ತೆ’.

‘ರೀಜನಲ್ ಪಾರ್ಟಿ ಇದ್ದ ಬಂಗಾಳದಲ್ಲೀಗ ನ್ಯಾಷನಲ್ ಪಾರ್ಟಿ ಅಧಿಕಾರಕ್ಕೆ ಬಂದಿದೆ. ಅದಕ್ಕೇನಂತೀರಿ?’

‘ಮೇಡಂ ಬದಲು ಸರ್ ಬಂದ್ರು ಅಂತೀನಿ’.

‘ಅಂದ್ರೆ?’

‘ಅಂದ್ರೆ ಎಸ್‌ಐಆರ್ ಅಂತ’.

ಸಂಗತ

ರೂಪಾಯಿಗೆ ಜ್ವರ: ಆರ್ಥಿಕತೆಗೆ ಬಾಲಗ್ರಹ


ಕಚ್ಚಾತೈಲದ ಬಿಕ್ಕಟ್ಟು ಹಾಗೂ ಷೇರುಪೇಟೆಯಿಂದ ವಿದೇಶಿ ಬಂಡವಾಳ ಹಿಂತೆಗೆತ ರೂಪಾಯಿ ಬಲ ಕುಗ್ಗಿಸುತ್ತಿದೆ. ಇದರಿಂದ ದೇಶದ ಆರ್ಥಿಕತೆಗೆ ಗಾಸಿಯಾಗುತ್ತಿದೆ.

• ಕೆ.ಎಚ್. ಓಬಳೇಶ್

ಜಾಗತಿಕ ಮಟ್ಟದಲ್ಲಿ ಕೊಲ್ಲಿ ಯುದ್ಧವು ಸೃಷ್ಟಿಸಿರುವ ಬಿಕ್ಕಟ್ಟುಗಳು ಒಂದೆರಡಲ್ಲ. ಯುದ್ಧದಿಂದಾಗಿ ಇಡೀ ಜಗತ್ತೇ ಬೆಲೆ ತೆರುತ್ತಿದೆ. ಭಾರತದ ಅಡುಗೆಮನೆಗೂ ಯುದ್ಧದ ಬಿಸಿತಟ್ಟಿದೆ. ಬೇಡಿಕೆ ಮತ್ತು ಪೂರೈಕೆ ನಡುವಿನ ಸರಪಳಿ ತುಂಡಾಗಿದೆ. ಇದರಿಂದ ಜನಸಾಮಾನ್ಯರ ಜೇಬಿಗೆ ನಿತ್ಯವೂ ಕತ್ತರಿ ಬೀಳುತ್ತಿದೆ. ಭಾರತೀಯ ರೂಪಾಯಿಗೆ ಅಕ್ಷರಶಃ ಜ್ವರ ಬಂದಿದ್ದು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ಕುಸಿತದ ಹಾದಿ ಹಿಡಿದಿದೆ.

ಯುದ್ಧದಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಹೊಯ್ದಾಡುತ್ತಿದೆ. ಒಟ್ಟಾರೆ ಯುದ್ಧವು ಜಾಗತಿಕ ಆರ್ಥಿಕತೆಯ ಬುಡವನ್ನೇ ಅಲುಗಾಡಿಸುತ್ತಿದೆ. ಭಾರತದ ಆರ್ಥಿಕತೆಯೂ ಇದರಿಂದ ಹೊರತಲ್ಲ.

ದೇಶವೊಂದರ ಆರ್ಥಿಕ ಪರಿಸ್ಥಿತಿಯನ್ನು ಅರಿಯಲು ಒಟ್ಟು ಆಂತರಿಕ ಉತ್ಪನ್ನವೇ (ಜಿಡಿಪಿ) ಮಾನದಂಡ. ಸರ್ಕಾರದ ನೀತಿನಿರೂಪಣೆಗೆ ಇದೇ ಅಳತೆಯ ಮಾಪನ. ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಏಪ್ರಿಲ್‌ನಲ್ಲಿ ಪ್ರಕಟಿಸಿರುವ ವಿಶ್ವ ಆರ್ಥಿಕ ಮುನ್ನೋಟದ ವರದಿಯನ್ವಯ, ಭಾರತವು ಸಾಂಕೇತಿಕ ಜಿಡಿಪಿ (ನಾಮಿನಲ್ ಜಿಡಿಪಿ) ಪರಿಭಾಷೆಯಲ್ಲಿ ವಿಶ್ವದ ಅಗ್ರ ಐದು ಆರ್ಥಿಕತೆಗಳ ಪಟ್ಟಿಯಿಂದ ಕೆಳಕ್ಕಿಳಿದಿದೆ. ಅಮೆರಿಕ, ಚೀನಾ, ಜರ್ಮನಿ, ಜಪಾನ್, ಬ್ರಿಟನ್ ಬಳಿಕ ಆರನೇ ಸ್ಥಾನಕ್ಕೆ ಜಾರಿದೆ. ಆದರೆ, ಹಲವು ಬಿಕ್ಕಟ್ಟುಗಳ ನಡುವೆಯೂ ಜಾಗತಿಕಮಟ್ಟದಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿದೆ; 2026ರಲ್ಲಿ ಭಾರತದ ಆರ್ಥಿಕತೆಯು ಶೇ 6.5ರಷ್ಟು ಬೆಳವಣಿಗೆ ದಾಖಲಿಸಲಿದೆ. 2027ರಲ್ಲಿಯೂ ಇದೇ ಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆಯಿದೆ ಎಂದು ವರದಿ ಹೇಳಿದೆ.



ಜಾಗತಿಕಮಟ್ಟದಲ್ಲಿ ಅಮೆರಿಕದ ಡಾಲರ್ ಮೂಲಕವೇ ಜಿಡಿಪಿ ಶ್ರೇಯಾಂಕವನ್ನು ಅಳೆಯಲಾಗುತ್ತದೆ. ದೇಶದಲ್ಲಿ ತಯಾರಾದ ಒಟ್ಟು ಉತ್ಪನ್ನಗಳ ಮಾರುಕಟ್ಟೆ ಬೆಲೆಯ ಆಧಾರದ ಮೇಲೆ ಜಿಡಿಪಿಯನ್ನು ಅಂದಾಜಿಸಲಾಗುತ್ತದೆ. ಮಾರುಕಟ್ಟೆಯ ಮೌಲ್ಯ ಆಧರಿಸಿ ಲೆಕ್ಕ ಹಾಕುವ ಜಿಡಿಪಿಯನ್ನು ಸಾಂಕೇತಿಕ ಜಿಡಿಪಿ ಎಂದು ಕರೆಯಲಾಗುತ್ತದೆ; ಅಂದರೆ ಮುಂದಿನ ಆರ್ಥಿಕ ವರ್ಷವನ್ನು ಅದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಲು ಜಿಡಿಪಿಯನ್ನು ಮಾರುಕಟ್ಟೆ ದರಗಳಲ್ಲಿ ಲೆಕ್ಕ ಹಾಕುವುದೇ ಸಾಂಕೇತಿಕ ಜಿಡಿಪಿ. ಒಟ್ಟು ಉತ್ಪನ್ನಗಳು ಅಷ್ಟೇ ಇದ್ದರೂ ಉತ್ಪಾದನೆಯಾದ ಸರಕುಗಳ ಬೆಲೆಯಲ್ಲಿ ಹೆಚ್ಚಳವಾದರೆ ಜಿಡಿಪಿಯಲ್ಲಿ ಏರಿಕೆಯಾಗುವುದು ಸಹಜ. ಆದರೆ, ಉತ್ಪಾದನೆಯಲ್ಲಿ ಏರಿಕೆ ಆಗುವುದಿಲ್ಲ. ಅವುಗಳ ಬೆಲೆಯಲ್ಲಷ್ಟೇ ಏರಿಕೆಯಾಗುತ್ತದೆ. ಹಾಗಾಗಿಯೇ, ನೈಜ ಜಿಡಿಪಿಯ ಲೆಕ್ಕಾಚಾರದ ವೇಳೆ ನಾಮಿನಲ್ ಜಿಡಿಪಿಯಿಂದ ಹಣದುಬ್ಬರದ ದರವನ್ನು ಕಳೆಯಲಾಗುತ್ತದೆ. ಈ ಪ್ರಕ್ರಿಯೆಗೆ ‘ಡಿಫ್ಲೇಷನ್’ ಎನ್ನುತ್ತಾರೆ.

ಕಳೆದ ವರ್ಷದ ಐಎಂಎಫ್ ವರದಿಯು ಭಾರತದ ಜಿಡಿಪಿ ದತ್ತಾಂಶಗಳಿಗೆ ‘ಸಿ’ ಗ್ರೇಡ್ ನೀಡಿತ್ತು. ಈ ಶ್ರೇಯಾಂಕವು ಆರ್ಥಿಕತೆಯ ಬೆಳವಣಿಗೆಗೆ ಸಂಬಂಧಿಸಿದ ದತ್ತಾಂಶಗಳ ವಿಶ್ವಾಸಾರ್ಹತೆಯನ್ನು ಅನುಮಾನದಿಂದ ನೋಡಲು ಕಾರಣವಾಗಿತ್ತು. ಹಾಗಾಗಿ, ಜಿಡಿಪಿ ಅಂದಾಜಿನ ನಿಖರತೆ ಹೆಚ್ಚಿಸಲು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಹಲವು ಬದಲಾವಣೆ ಮಾಡಿದೆ. ಆ ಪೈಕಿ ಮೂಲ ವರ್ಷದ ಬದಲಾವಣೆ ಪ್ರಮುಖವಾಗಿದೆ. 2022–23 ಅನ್ನು ಮೂಲ ವರ್ಷವಾಗಿ ಬದಲಾಯಿಸಲಾಗಿದೆ. ಇನ್ನು ಮುಂದೆ ಸರಕು ಹಾಗೂ ಸೇವೆಗಳನ್ನು ಮಾರಾಟ ಮಾಡುವ ಮತ್ತು ಖರೀದಿಸುವ ಬೆಲೆಯನ್ನು ಈ ಮೂಲ ವರ್ಷದ ಉತ್ಪನ್ನ ಮತ್ತು ಬೆಲೆಯ ಜೊತೆಗೆ ಹೋಲಿಕೆ ಮಾಡಲಾಗುತ್ತದೆ.

ಭಾರತದ ಕಚ್ಚಾತೈಲದ ಬೇಡಿಕೆಯ ಪೈಕಿ ಶೇ 90ರಷ್ಟು ಪೂರೈಕೆಯು ಆಮದು ಮೇಲೆ ಅವಲಂಬಿತವಾಗಿದೆ. ಪಶ್ಚಿಮ ಏಷ್ಯಾದ ಬಿಕ್ಕಟ್ಟಿನಿಂದಾಗಿ ಆಮದು ವೆಚ್ಚ ಏರುಗತಿಯಲ್ಲಿದೆ. ಇದು ರೂಪಾಯಿಯನ್ನು ಒತ್ತಡದ ಕೂಪಕ್ಕೆ ತಳ್ಳಿದೆ. ಮತ್ತೊಂದೆಡೆ ದೇಶೀಯ ಷೇರುಪೇಟೆಗಳಲ್ಲಿ ದೇಶಿ ಸಾಂಸ್ಥಿಕ ಹೂಡಿಕೆದಾರರಿಂದ (ಡಿಐಐ) ಬಂಡವಾಳ ಹೂಡಿಕೆ ಪ್ರಮಾಣ ಹೆಚ್ಚುತ್ತಿದೆ. ಡಿಐಐ ಅಂದರೆ ಸ್ಥಿತಿವಂತರ ಹಣವಲ್ಲ; ಮಧ್ಯಮವರ್ಗದವರ ಹಣ. ಬ್ಯಾಂಕ್‌ಗಳಲ್ಲಿನ ನಿಶ್ಚಿತ ಠೇವಣಿಗಳ ಬದಲು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಇದಕ್ಕೆ ತದ್ವಿರುದ್ಧವೆಂಬಂತೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ದೇಶೀಯ ಷೇರುಪೇಟೆಗಳಿಂದ ಬಂಡವಾಳ ಹಿಂಪಡೆಯುತ್ತಿದ್ದಾರೆ. ಕಳೆದ ವರ್ಷ ₹1.66 ಲಕ್ಷ ಕೋಟಿ ವಿದೇಶಿ ಬಂಡವಾಳ ಹೊರಹೋಗಿದೆ. ಪ್ರಸಕ್ತ ವರ್ಷದ ಮೊದಲ ನಾಲ್ಕು ತಿಂಗಳ ಅವಧಿಯಲ್ಲಿ ವಿದೇಶಿ ಹೂಡಿಕೆದಾರರು ₹1.92 ಲಕ್ಷ ಕೋಟಿ ಹಿಂಪಡೆದಿದ್ದಾರೆ. ಇದು ಮಾರುಕಟ್ಟೆ ಪಾಲಿಗೆ ಹಿತಕರವಲ್ಲ. ಇದರಿಂದ ಮಾರುಕಟ್ಟೆಗಳು ಚೇತರಿಸಿಕೊಳ್ಳುವುದು ಕಷ್ಟ. ಈ ಬೆಳವಣಿಗೆಯು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗಿದೆ.

ಇನ್ನೊಂದೆಡೆ ಭಾರತವು ನಿರಂತರವಾಗಿ ವಿದೇಶಿ ವ್ಯಾಪಾರದ ಕೊರತೆಯನ್ನು ಎದುರಿಸುತ್ತಿದೆ. ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚುತ್ತಿದೆ. ಪ್ರತಿಬಾರಿಯ ವ್ಯಾಪಾರದ ಕೊರತೆಯು ದೇಶದ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಬೀರುವುದಿಲ್ಲ. ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ಸರಕುಗಳನ್ನು ಆಮದು ಮಾಡಿಕೊಳ್ಳುವುದರಿಂದ ತಯಾರಿಕಾ ವಲಯಕ್ಕೆ ಉತ್ತೇಜನಕ್ಕೆ ಸಿಗಲಿದೆ. ಇದು ರಫ್ತಿನ ಪ್ರಮಾಣ ಏರಿಕೆಗೂ ಸಹಕಾರಿಯಾಗಲಿದೆ ಎಂದು ಆರ್ಥಿಕ ತಜ್ಞರು ಹೇಳುತ್ತಾರೆ. ಆದರೂ, ಈ ಬೆಳವಣಿಗೆಯು ದೇಶೀಯ ಕರೆನ್ಸಿ ಮೇಲೆ ಒತ್ತಡವನ್ನು ಹೆಚ್ಚಿಸುವುದು ಸ್ಪಷ್ಟ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಂಗಾಳದಲ್ಲಿ 'ಕಮಲ' ಅರಳಿದ್ದು ಹೇಗೆ?

ಮಮತಾಗೆ ಮುಳುವಾದ ಆತ್ಮವಿಶ್ವಾಸ

• ಸೂರ್ಯನಾರಾಯಣ ವಿ.

'ಬಂಗಾಳವು ನಮಗೆ (ಬಿಜೆಪಿಗೆ) ರಾಜಕೀಯ ಸಮರವಲ್ಲ. ಅದು ನಾಗರಿಕತೆಯ ಕದನ. ನಾವು ಈ ಹಣಾಹಣಿಯನ್ನು ಅದೇ ದೃಷ್ಟಿಯಲ್ಲಿ ನೋಡುತ್ತೇವೆ. ಭಾರತವನ್ನು ಉಳಿಸಬೇಕಾದರೆ ನಾವು ಬಂಗಾಳವನ್ನು ಗೆಲ್ಲಲೇ ಬೇಕು. ಜನಸಂಖ್ಯೆ ಸ್ವರೂಪಕ್ಕೆ ಸಂಬಂಧಿಸಿದಂತೆ ಅಲ್ಲಿ ಸವಾಲು ಇದ್ದರೂ, ನಾವು ಅದನ್ನು ಗೆಲ್ಲಬೇಕು. ನಿಮ್ಮೆಲ್ಲರ ಆಶೀರ್ವಾದದಿಂದ ಖಂಡಿತವಾಗಿಯೂ ಗೆದ್ದೇ ಗೆಲ್ಲುತ್ತೇವೆ.'

–ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು 2025ರ ಡಿಸೆಂಬರ್‌ನಲ್ಲಿ ಸಂದರ್ಶನವೊಂದರಲ್ಲಿ ನೀಡಿದ ಹೇಳಿಕೆ ಇದು.

2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಂದ ನಂತರ ಉತ್ತರ ಪ್ರದೇಶ ಸೇರಿದಂತೆ ದೇಶದ ಉತ್ತರ ಭಾಗದ ದೊಡ್ಡ ರಾಜ್ಯಗಳಲ್ಲಿ ಅಧಿಕಾರ ಚುಕ್ಕಾಣಿ ಹಿಡಿಯುತ್ತಾ ಬಂದ ಬಿಜೆಪಿಗೆ ಪಶ್ಚಿಮ ಬಂಗಾಳ ದೊಡ್ಡ ಸವಾಲಾಗಿತ್ತು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಇಡೀ ದೇಶದಲ್ಲಿ ಸಮರ್ಥವಾಗಿ ಎದುರಿಸುತ್ತಿದ್ದ ಪ್ರಮುಖರಲ್ಲಿ ಮಮತಾ ಬ್ಯಾನರ್ಜಿ ಒಬ್ಬರು. ಅಲ್ಲಿ ಟಿಎಂಸಿಯನ್ನು ಸೋಲಿಸಿ ಬಿಜೆಪಿಯನ್ನು ಅಧಿಕಾರಕ್ಕೆ ತರುವುದು ಬಿಜೆಪಿಯ ಕೇಂದ್ರ ನಾಯಕರ ಪರಮ ಉದ್ದೇಶವಾಗಿತ್ತು. ಸಂತೋಷ್ ಅವರ ಹೇಳಿಕೆ ಅದನ್ನು ಒತ್ತಿ ಹೇಳುತ್ತದೆ.

ಮೊದಲ ಹಂತದ ಮತದಾನಕ್ಕೂ ಮೊದಲು ಏಪ್ರಿಲ್ ಎರಡನೇ ವಾರದಲ್ಲಿ ಮಾಧ್ಯಮಗಳಲ್ಲಿ ಒಂದು ವರದಿ ಪ್ರಕಟವಾಗಿತ್ತು. 'ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ನಡೆಸಿರುವ ಆಂತರಿಕ ಸಮೀಕ್ಷೆಯ ಪ್ರಕಾರ, ಪಕ್ಷವು 100ರಷ್ಟು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದು' ಎಂದು ಹೇಳಲಾಗಿತ್ತು. ಆದರೆ, ಅದೀಗ ಸುಳ್ಳಾಗಿದೆ. ಈ ಚುನಾವಣೆಯಲ್ಲಿ ನಿರೀಕ್ಷೆಗೂ ಮೀರಿದ ಸ್ಥಾನಗಳನ್ನು ಗಳಿಸಿ (206) ಪ್ರಚಂಡ ಬಹುಮತದೊಂದಿಗೆ ಬಂಗಾಳದ ನೆಲದಲ್ಲಿ ಅಧಿಕಾರಕ್ಕೆ ಏರಲು ಬಿಜೆಪಿ ಸಜ್ಜಾಗಿದೆ. 12 ವರ್ಷಗಳ ಸತತ ಪ್ರಯತ್ನ, ಶ್ರಮದಿಂದ ಅದು ಸಾಧ್ಯವಾಗಿದೆ.

34 ವರ್ಷಗಳಷ್ಟು ಸುದೀರ್ಘ ಅವಧಿಗೆ ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸಿದ್ದ ಸಿಪಿಎಂ, 2006ರ ವಿಧಾನಸಭೆಯ ಚುನಾವಣೆಯವರೆಗೂ ರಾಜ್ಯದ ರಾಜಕೀಯದಲ್ಲಿ ಬಿಗಿಯಾದ ಹಿಡಿತ ಹೊಂದಿತ್ತು. ಆದರೆ, 1998ರ ಜನವರಿಯಲ್ಲಿ ಕಾಂಗ್ರೆಸ್ ತೊರೆದ ಮಮತಾ ಬ್ಯಾನರ್ಜಿ ಅವರು ಸ್ಥಾಪಿಸಿದ ಅಖಿಲ ಭಾರತ ತೃಣಮೂಲ ಕಾಂಗ್ರೆಸ್ (ಎಐಟಿಸಿ – ಆಡು ಮಾತಿನಲ್ಲಿ ಟಿಎಂಸಿ) ಪಕ್ಷದ ಮುಂದೆ ಮುಂದಿನ ಐದು ವರ್ಷಗಳಲ್ಲಿ ಸಿಪಿಎಂ ದುರ್ಬಲವಾಯಿತು. ಇದೇ ಸಮಯದಲ್ಲಿ ಕಾಂಗ್ರೆಸ್ ಕೂಡ ಬಂಗಾಳದಲ್ಲಿ ನೆಲೆ ಕಳೆದುಕೊಳ್ಳಲು ಆರಂಭಿಸಿತು. 2011ರಲ್ಲಿ 184 ಸ್ಥಾನಗಳನ್ನು ಗೆಲ್ಲುವ ಮೂಲಕ ಪ್ರಚಂಡ ಬಹುಮತದೊಂದಿಗೆ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಅಧಿಕಾರದ ಗದ್ದುಗೆ ಏರಿತು.


ಸಿಪಿಎಂ ಮತ್ತು ಕಾಂಗ್ರೆಸ್‌ನ ವೈಫಲ್ಯದ ಲಾಭ ಪಡೆಯಲು ಯತ್ನಿಸಿದ ಬಿಜೆಪಿ 2011ರಿಂದೀಚೆಗೆ ಪಶ್ಚಿಮ ಬಂಗಾಳದಲ್ಲಿ ಪಕ್ಷದ ಬೇರುಗಳನ್ನು ಬಿಡಲು ಯತ್ನಿಸಿತು. ಆ ವರ್ಷದ ವಿಧಾನಸಭಾ ಚುನಾವಣೆಯಲ್ಲಿ ಅದಕ್ಕೆ ಸಿಕ್ಕಿದ್ದು ಶೇ 4.09ರಷ್ಟು ಮತಗಳು ಮಾತ್ರ. 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಪಕ್ಷವು ಪಶ್ಚಿಮ ಬಂಗಾಳಕ್ಕೆ ಹೆಚ್ಚು ಒತ್ತು ನೀಡಲಾರಂಭಿಸಿತು. 2016ರಲ್ಲಿ ಅದರ ಮತಗಳಿಕೆ ಪ್ರಮಾಣ ಹಿಂದಿನ ಚುನಾವಣೆಗೆ ಹೋಲಿಸಿದರೆ ಶೇ 6ರಷ್ಟು ಹೆಚ್ಚಾಯಿತು. ಮೂರು ಸ್ಥಾನಗಳನ್ನು ಗೆಲ್ಲುವಲ್ಲೂ ಯಶಸ್ವಿಯಾಯಿತು.

ಹಲವು ಸವಾಲು: ಹಿಂದುತ್ವದ ಆಧಾರದಲ್ಲಿ ರಾಜಕೀಯ ಮಾಡುತ್ತಾ ಬಂದಿದ್ದ ಬಿಜೆಪಿಯನ್ನು ಪಶ್ಚಿಮ ಬಂಗಾಳದ ಮತದಾರರು ಬಹುಬೇಗ ಒಪ್ಪಲಿಲ್ಲ. ಬಿಜೆಪಿ ಹೊರಗಿನ ಪಕ್ಷ ಎಂಬ ಭಾವನೆ ಅವರಲ್ಲಿತ್ತು. ಸಾಂಸ್ಕೃತಿಕವಾಗಿಯೂ ಪಕ್ಷಕ್ಕೆ ಅಲ್ಲಿನ ಜನರೊಂದಿಗೆ ಬೆರೆಯುವುದಕ್ಕೆ ಸಾಧ್ಯವಾಗಿರಲಿಲ್ಲ. ಅಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಶೇ 27ರಷ್ಟು ಮುಸ್ಲಿಮರು ಇರುವುದು ಕೂಡ ಅದರ ಮುಂದಿದ್ದ ಮತ್ತೊಂದು ಸವಾಲು. ತಳಮಟ್ಟದಲ್ಲಿ ಕಾರ್ಯಕರ್ತರ ಪಡೆಯನ್ನು ಕಟ್ಟುವುದರ ಜೊತೆಗೆ, ಮಮತಾ ಬ್ಯಾನರ್ಜಿ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದ, ಶಾರದಾ ಚಿಟ್ ಹಗರಣ, ನಾರದ ಕುಟುಕು ಕಾರ್ಯಾಚರಣೆ ಹಗರಣಗಳಲ್ಲಿ ಆರೋಪಿಯಾಗಿದ್ದ ಸುವೇಂದು ಅಧಿಕಾರಿ ಹಾಗೂ ಟಿಎಂಸಿಯ ಇತರ ಹಲವು ಶಾಸಕರು, ಮುಖಂಡರನ್ನು 2020ರ ಡಿಸೆಂಬರ್‌ನಲ್ಲಿ ಪಕ್ಷಕ್ಕೆ ಸೇರಿಸಿಕೊಂಡು ರಾಜ್ಯದಲ್ಲಿ ಪಕ್ಷಕ್ಕೆ ಇನ್ನಷ್ಟು ಶಕ್ತಿ ತುಂಬಿತು. ಇದು 2021ರ ವಿಧಾನಸಭಾ ಚುನಾವಣೆಯಲ್ಲಿ ಸ್ವಲ್ಪ ಫಲವನ್ನೂ ನೀಡಿತು. ಶೇ 37.97ರಷ್ಟು ಮತಗಳಿಕೆಯೊಂದಿಗೆ 77 ಸ್ಥಾನಗಳನ್ನು ಪಡೆಯಲು ಬಿಜೆಪಿ ಶಕ್ತವಾಯಿತು.


2024ರ ಲೋಕಸಭಾ ಚುನಾವಣೆಯಲ್ಲಿ ಸರಳ ಬಹುಮತ ಪಡೆಯದೇ ಹಿನ್ನಡೆ ಅನುಭವಿಸಿದ್ದ ಬಿಜೆಪಿ, ನಂತರ ತನ್ನ ಚುನಾವಣಾ ಕಾರ್ಯತಂತ್ರವನ್ನು ಬದಲಿಸಿತು. ಬಿಹಾರ, ಒಡಿಶಾ ಸೇರಿದಂತೆ ಹಲವು ರಾಜ್ಯಗಳಲ್ಲಿ ಅದು ಯಶಸ್ವಿಯಾಗಿತ್ತು. ಈಗ ಚುನಾವಣೆ ನಡೆದಿರುವ ಐದು ವಿಧಾನಸಭಾಗಳ ಪೈಕಿ ಅದು 'ಕಮಲ' ಪಾಳಯ ಹೆಚ್ಚು ಗಮನ ಹರಿಸಿದ್ದು ಪಶ್ಚಿಮ ಬಂಗಾಳಕ್ಕೆ. ರಾಜ್ಯದಲ್ಲಿ ತಳಮಟ್ಟದಲ್ಲಿ ಪಕ್ಷ ಕಟ್ಟುವುದರ ಜೊತೆಗೆ ಚುನಾವಣೆಗೂ ಕೆಲವು ತಿಂಗಳುಗಳ ಮೊದಲೇ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರೇ ಸಿದ್ಧತೆಗಳ ಮೇಲ್ವಿಚಾರಣೆ ನೋಡಿಕೊಂಡಿದ್ದರು. ಮತದಾನಕ್ಕೂ ಮುನ್ನ ಅಮಿತ್ ಶಾ ಅವರು 15 ದಿನ ಪಶ್ಚಿಮ ಬಂಗಾಳದಲ್ಲೇ ಉಳಿದುಕೊಂಡು ಚುನಾವಣಾ ಸಿದ್ಧತೆಗಳಲ್ಲಿ ಭಾಗಿಯಾಗಿದ್ದರು.

ಆಧಾರ: ಪಿಟಿಐ, ಬಿಬಿಸಿ, ಚುನಾವಣಾ ಆಯೋಗದ ದತ್ತಾಂಶಗಳು, ಮಾಧ್ಯಮ ವರದಿಗಳು

ನಕ್ಷೆಯಲ್ಲಿ ಚುನಾವಣಾ ಫಲಿತಾಂಶದ ನೋಟ



ಬಿಜೆಪಿ ಕೈ ಹಿಡಿದವರು...


ನರೇಂದ್ರ ಮೋದಿ

ಕಳೆದ ಚುನಾವಣೆಯಲ್ಲಿ ಬಿಜೆಪಿಯು ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಹೆಚ್ಚು ಕ್ಷೇತ್ರಗಳನ್ನು ಗೆಲ್ಲಲು ಮಾತ್ರ ಸಫಲವಾಗಿತ್ತು. ಆದರೆ, ಈ ಬಾರಿ ಉತ್ತರದ ಬಹುಪಾಲು ಜಿಲ್ಲೆಗಳು, ನೈರುತ್ಯಭಾಗ, ಗ್ರೇಟರ್ ಕೋಲ್ಕತ್ತ ಪ್ರದೇಶ, ಮಧ್ಯ ಭಾಗ ಸೇರಿದಂತೆ ಬಹುಪಾಲು ಕಡೆಗಳಲ್ಲಿ ಗೆಲುವು ಸಾಧಿಸಿದೆ. ಈ ಬಾರಿ ಹಿಂದೂ ಮತಗಳು ಧ್ರುವೀಕರಣಗೊಂಡಿದ್ದು ಬಿಜೆಪಿ ಗೆಲುವಿನಲ್ಲಿ ಬಹುಮುಖ್ಯ ಪಾತ್ರವಹಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಟಿಎಂಸಿಯ ಭದ್ರಕೋಟೆ ಎಂದು ಕರೆಸಿಕೊಳ್ಳುತ್ತಿದ್ದ ಜಿಲ್ಲೆಗಳಲ್ಲೂ ಹಿಂದೂಗಳು ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸಿದ್ದಾರೆ. ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗದವರು ಕೂಡ ಬಿಜೆಪಿ ಪರವಾದ ನಿಲುವನ್ನು ತೋರಿದ್ದಾರೆ ಎಂದು ಹಲವು ಮಾಧ್ಯಮಗಳು ವಿಶ್ಲೇಷಿಸಿವೆ.

ಚುನಾವಣಾ ಫಲಿತಾಂಶ ಪ್ರಕಟವಾಗುತ್ತಲೇ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದ ಸುವೇಂದು ಅಧಿಕಾರಿ, 'ಹಿಂದೂಗಳು ಬಿಜೆಪಿಗೆ ಮತಹಾಕಿದ್ದಾರೆ. ಮುಸ್ಲಿಮರು ಟಿಎಂಸಿಯನ್ನು ಬೆಂಬಲಿಸಿದ್ದಾರೆ' ಎಂದು ಹೇಳಿದ್ದರು.

ಎಸ್‌ಐಆರ್ ಪ್ರಭಾವ ಎಷ್ಟು?

ಭಾರತೀಯ ಚುನಾವಣಾ ಆಯೋಗವು ಪಶ್ಚಿಮ ಬಂಗಾಳದಲ್ಲಿ ನಡೆಸಿದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ತೀವ್ರ ಆಕ್ಷೇಪಕ್ಕೆ ಕಾರಣವಾಗಿತ್ತು.

ಚುನಾವಣೆಯಲ್ಲಿ ಟಿಎಂಸಿಯನ್ನು ಸೋಲಿಸುವುದಕ್ಕಾಗಿ ಕೇಂದ್ರ ಸರ್ಕಾರ ಚುನಾವಣಾ ಆಯೋಗದ ಮೂಲಕ ಎಸ್‌ಐಆರ್ ನಡೆಸುತ್ತಿದೆ ಎಂದು ಮಮತಾ ಬ್ಯಾನರ್ಜಿ ಅವರು ಆರೋಪಿಸಿದ್ದರು.

ಚುನಾವಣಾ ಆಯೋಗ ಮಾತ್ರವಲ್ಲದೇ, ಬಂಗಾಳದಲ್ಲಿ ಗೆಲ್ಲಲು ಕೇಂದ್ರ ಸರ್ಕಾರವು ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆಯಂತಹ ಸಂಸ್ಥೆಗಳನ್ನು ದುರ್ಬಳಕೆ ಮಾಡುತ್ತಿದೆ ಎಂದೂ ಆಪಾದಿಸಿದ್ದರು.

ಎಸ್‌ಐಆರ್ ಪ್ರಕ್ರಿಯೆ ವಿರುದ್ಧ ಮಮತಾ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲನ್ನೂ ಏರಿದ್ದರು. ಎಸ್‌ಐಆರ್ ಮೂಲಕ ಚುನಾವಣಾ ಆಯೋಗವು 90.83 ಲಕ್ಷದಷ್ಟು ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಟ್ಟಿತ್ತು. ಈ ಪೈಕಿ ಸೂಕ್ತ ದಾಖಲೆಗಳು ಇಲ್ಲದ ಕಾರಣಕ್ಕೆ 27.06 ಲಕ್ಷ ಮತದಾರರ ಬಗ್ಗೆ ನಿರ್ಧಾರ ಕೈಗೊಳ್ಳದೇ, ಪರಿಶೀಲನೆಯ ಹಂತದಲ್ಲಿರಿಸಿತ್ತು. ಇವರಿಗೆ ಮತದಾನದ ಹಕ್ಕನ್ನೂ ನೀಡಲಾಗಿರಲಿಲ್ಲ. ಹೆಸರು ಕೈಬಿಟ್ಟವರಲ್ಲಿ ಮುಸ್ಲಿಮರು ಮತ್ತು ಮತುವಾ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಈ ಪ್ರಕರಣಗಳ ಇತ್ಯರ್ಥಕ್ಕೆ ಸುಪ್ರೀಂ ಕೋರ್ಟ್ ನ್ಯಾಯಮಂಡಳಿಗಳನ್ನು ರಚಿಸಿದ್ದರೂ, ಪ್ರಕರಣಗಳು ವಿಲೇವಾರಿಯಾಗಿರಲಿಲ್ಲ. ಹೀಗಾಗಿ, ಇಷ್ಟು ಮತದಾರರು ಪಟ್ಟಿಯಿಂದ ಹೊರಗುಳಿದಿರುವುದು ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು. ಹೆಚ್ಚು ಪೈಪೋಟಿ ಇರುವ ಕ್ಷೇತ್ರಗಳಲ್ಲಿ ಇದು ಗೆಲುವಿನ ಸಾಧ್ಯತೆಯನ್ನು ಬುಡಮೇಲು ಮಾಡಬಹುದು. ಇದರಿಂದ ಟಿಎಂಸಿಗೆ ತೊಂದರೆಯಾಗಬಹುದು ಎಂದೂ ಹೇಳಲಾಗಿತ್ತು.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಹೆಚ್ಚು ಹೆಸರುಗಳನ್ನು ಕೈಬಿಟ್ಟಿರುವ ಕ್ಷೇತ್ರಗಳ ಫಲಿತಾಂಶವನ್ನು ನೋಡಿದರೆ, ಕಡಿಮೆ ಮತಗಳ ಅಂತರದಲ್ಲಿ ಫಲಿತಾಂಶ ನಿರ್ಧಾರವಾದ ಕ್ಷೇತ್ರಗಳಲ್ಲಿ ಇದು ಪರಿಣಾಮ ಬೀರಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಉದಾಹರಣೆಗೆ, ಎಸ್‌ಐಆರ್‌ನಿಂದ ಹೆಚ್ಚು ಮತದಾರರನ್ನು ಕಳೆದುಕೊಂಡ ಜಿಲ್ಲೆಯಲ್ಲಿ ಮುರ್ಷಿದಾಬಾದ್ ಪ್ರಮುಖವಾದುದು. ಅಲ್ಲಿ ನಾಲ್ಕು ಲಕ್ಷ ಜನರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿತ್ತು. ಇಲ್ಲಿ 22 ಕ್ಷೇತ್ರಗಳಿದ್ದು, ಬಿಜೆಪಿ ಕಳೆದ ಬಾರಿ ಇಲ್ಲಿ ಎರಡು ಸ್ಥಾನಗಳನ್ನು ಗಳಿಸಿತ್ತು. ಈ ಬಾರಿ ಅದು ಒಂಬತ್ತು ಕ್ಷೇತ್ರಗಳಲ್ಲಿ ಜಯಗಳಿಸಿದೆ. ಕಳೆದಬಾರಿ 20 ಕ್ಷೇತ್ರ ಗೆದ್ದಿದ್ದ ಟಿಎಂಸಿಗೆ ಈ ಸಲ ಸಿಕ್ಕಿದ್ದು 9 ಸ್ಥಾನಗಳು ಮಾತ್ರ.

ಮುಸ್ಲಿಂ ಮತ ವಿಭಜನೆ: ಮುಸ್ಲಿಂ ಪ್ರಾಬಲ್ಯದ ಜಿಲ್ಲೆಗಳಲ್ಲಿ ಈ ಬಾರಿಯೂ ಟಿಎಂಸಿ ಹೆಚ್ಚು ಸ್ಥಾನಗಳನ್ನು ಗೆದ್ದಿದ್ದರೂ, ಬಿಜೆಪಿಯು ಕಳೆದ ಸಲಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಜಯಗಳಿಸಿದೆ. ಮುಸ್ಲಿಂ ಮತದಾರರು ಶೇ 50ಕ್ಕಿಂತಲೂ ಹೆಚ್ಚಿರುವ 32 ಸ್ಥಾನಗಳಿವೆ. ಇಲ್ಲಿ ಈ ಬಾರಿ ಮತದಾನದ ಪ್ರಮಾಣವೂ ಹೆಚ್ಚಾಗಿದೆ.

2021ರಲ್ಲಿ ಎಲ್ಲ ಸ್ಥಾನಗಳನ್ನು ಟಿಎಂಸಿ ಗೆದ್ದಿದ್ದರೆ, ಈ ಬಾರಿ 23 ಸ್ಥಾನಗಳಷ್ಟೇ ಅದಕ್ಕೆ ಸಿಕ್ಕಿದೆ. ಕಾಂಗ್ರೆಸ್, ಜೆಯುಜೆಪಿ, ಸಿಪಿಎಂಗಳು ಇಲ್ಲಿ ಗೆಲುವು ಸಾಧಿಸಿವೆ. ಮುಸ್ಲಿಂ ಮತಗಳು ವಿಭಜನೆಯಾಗಿರುವುದನ್ನು ಇದು ತೋರಿಸುತ್ತದೆ.


ಮಮತಾ ಬ್ಯಾನರ್ಜಿ


* 293 ಕ್ಷೇತ್ರಗಳ ಫಲಿತಾಂಶವಷ್ಟೇ ಈಗ ಪ್ರಕಟವಾಗಿದೆ. ಫಾಲ್ಟದಲ್ಲಿ ಇದೇ 21ಕ್ಕೆ ಮರುಮತದಾನ ನಡೆಯಲಿದೆ.

294* ಒಟ್ಟು ಕ್ಷೇತ್ರಗಳು	148 ಬಹುಮತಕ್ಕೆ ಬೇಕಾದ ಸ್ಥಾನಗಳು	6.81 ಕೋಟಿ ಒಟ್ಟು ಮತದಾರರು	92.47% ಎರಡು ಹಂತಗಳಲ್ಲಿ ನಡೆದ ಮತದಾನದಲ್ಲಿ ಹಕ್ಕು ಚಲಾಯಿಸಿದ ಮತದಾರರ ಪ್ರಮಾಣ	207 ಬಿಜೆಪಿ ಗೆದ್ದ ಸ್ಥಾನಗಳು	80 ಟಿಎಂಸಿ ಗೆದ್ದ ಸ್ಥಾನಗಳು	6 ಇತರ ಪಕ್ಷಗಳು (ಕಾಂಗ್ರೆಸ್, ಎಜೆಯುಪಿ, ಸಿಪಿಎಂ, ಎಐಎಸ್‌ಎಫ್) ಗಳಿಸಿದ ಸ್ಥಾನಗಳು	2.92 ಕೋಟಿ ಬಿಜೆಪಿ ಪಡೆದ ಮತಗಳು	2.60 ಕೋಟಿ ಟಿಎಂಸಿ ಪಡೆದ ಮತಗಳು

ಬಿಜೆಪಿ ಗೆಲುವಿಗೆ ಏನು ಕಾರಣ?

- 15 ವರ್ಷಗಳಿಂದ ಆಡಳಿತದಲ್ಲಿರುವ ಮಮತಾ ಬ್ಯಾನರ್ಜಿ ಸರ್ಕಾರ ಎದುರಿಸುತ್ತಿದ್ದ ಆಡಳಿತ ವಿರೋಧಿ ಅಲೆ
- ಹಿಂದುತ್ವ ಪರವಾದ ನೀತಿ. 2021ರ ಚುನಾವಣಾ ಸಂದರ್ಭದಲ್ಲಿ ನಡೆದ ಹಿಂಸಾಚಾರ, ಬಾಂಗ್ಲಾದೇಶದ ಒಳನುಸುಳುಕೋರರು ಹಿಂದೂಗಳಿಗಷ್ಟೇ ಅಲ್ಲ, ಇಡೀ ದೇಶದ ಭದ್ರತೆಗೆ ಸವಾಲು ಎಂದು ಬಿಂಬಿಸಿದ್ದು
- ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನಲ್ಲಿ ತರಬೇತಿ ನಿರತ ವೈದ್ಯೆಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣ (ವೈದ್ಯೆಯ ತಾಯಿಗೆ ಟಿಕೆಟ್ ನೀಡಲಾಗಿತ್ತು. ಆಕೆ ಗೆದ್ದಿದ್ದಾರೆ), ಸಂದೇಶ್‌ಕಾಲಿ ಪ್ರಕರಣ ಸೇರಿದಂತೆ ಮಹಿಳೆಯರ ಮೇಲೆ ನಡೆಯುತ್ತಿದ್ದ ಅತ್ಯಾಚಾರ, ದೌರ್ಜನ್ಯಗಳನ್ನು ಮುಂದಿಟ್ಟುಕೊಂಡು ಟಿಎಂಸಿ ಆಡಳಿತದಲ್ಲಿ ಬಂಗಾಳ ಮಹಿಳೆಯರಿಗೆ ಸುರಕ್ಷಿತವಲ್ಲ ಎಂದು ಪ್ರತಿಪಾದಿಸಿದ್ದು
- ಶಿಕ್ಷಕರ ನೇಮಕಾತಿ ಹಗರಣ ಸೇರಿದಂತೆ ಸರ್ಕಾರದ ವಿರುದ್ಧ ಕೇಳಿ ಬಂದ ಭ್ರಷ್ಟಾಚಾರದ ಆರೋಪಗಳು
- ಬಡತನ, ನಿರುದ್ಯೋಗ ಸಮಸ್ಯೆ, ಟಿಎಂಸಿಯ ಉದ್ಯಮ ವಿರೋಧಿ ನೀತಿ
- ಮಹಿಳೆಯರಿಗೆ ನಗದು ಸೇರಿದಂತೆ ಉಚಿತ ಕೊಡುಗೆಗಳ ಘೋಷಣೆ
- ಬಿಜೆಪಿಯಿಂದ ಮಾತ್ರ ಬಂಗಾಳದ ಅಭಿವೃದ್ಧಿ ಸಾಧ್ಯ ಎಂಬ ಪ್ರತಿಪಾದನೆ
- ಡಿಜಿಟಲ್ ಮಾಧ್ಯಮದ ಪರಿಣಾಮಕಾರಿ ಬಳಕೆ

ವಿಧಾನಸಭಾ ಚುನಾವಣೆ: ಮತಗಳಿಕೆ ಪ್ರಮಾಣ



(ಆವರಣದಲ್ಲಿರುವುದು ಪಡೆದ ಸ್ಥಾನಗಳು)

ಮತಗಳಿಕೆ ಅಂತರ ಕಡಿಮೆ, ಆದರೆ...

ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಟಿಎಂಸಿಗಳು ಗಳಿಸಿರುವ ಮತಗಳ ಪ್ರಮಾಣದಲ್ಲಿ ಶೇ 5ರಷ್ಟು ವ್ಯತ್ಯಾಸವಿದೆಯಷ್ಟೆ. ಮತಗಳ ಲೆಕ್ಕಾಚಾರದಲ್ಲಿ ಬಿಜೆಪಿಯು ಟಿಎಂಸಿಗಿಂತ 32 ಲಕ್ಷದಷ್ಟು ಹೆಚ್ಚು ಮತಗಳನ್ನು ಪಡೆದಿದೆ. ಆದರೆ, ಗೆದ್ದಿರುವ ಕ್ಷೇತ್ರಗಳನ್ನು ಲೆಕ್ಕಹಾಕಿದರೆ ಈ ಅಂತರ (127) ಗಣನೀಯವಾಗಿದೆ.

ಟಿಎಂಸಿ ಸೋತಿದ್ದೇಕೆ?

- ಚುನಾವಣೆಯಲ್ಲಿ ಗೆಲ್ಲುವ ಬಗ್ಗೆ ಅತಿಯಾದ ಆತ್ಮವಿಶ್ವಾಸ
- ಮಹಿಳೆಯರು (ಕನ್ಯಶ್ರೀ, ಲಕ್ಷ್ಮಿ ಭಂಡಾರದಂತಹ ಯೋಜನೆಗಳು) ಮತ್ತು ಮುಸ್ಲಿಮರ ಕಲ್ಯಾಣಕ್ಕಾಗಿ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದ್ದ ಕಾರಣದಿಂದ, ಈ ಎರಡು ಸಮುದಾಯಗಳು ಪಕ್ಷದ ಕೈ ಬಿಡುವುದಿಲ್ಲ ಎಂದು ನಂಬಿದ್ದು
- ಫಲ ನೀಡದ ಬಂಗಾಳಿ ಅಸ್ಮಿತೆಯ ನಿರೂಪಣೆ
- ಆರ್.ಜಿ.ಕರ್ ಅತ್ಯಾಚಾರ ಪ್ರಕರಣದಲ್ಲಿ ಕಠಿಣ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದ್ದು
- ಜನ ಕಲ್ಯಾಣ ಕಾರ್ಯಕ್ರಮಗಳ ಹೊರತಾಗಿ, ಉದ್ಯಮಕ್ಕೆ ಉತ್ತೇಜನ, ಉದ್ಯೋಗ ಸೃಷ್ಟಿಗೆ ಕ್ರಮ ಕೈಗೊಳ್ಳದೇ ಇದ್ದುದು
- ಚುನಾವಣಾ ಆಯೋಗ ನಡೆಸಿದ ಮತದಾರರ ಸಮಗ್ರ ಪಟ್ಟಿ ಪರಿಷ್ಕರಣೆಯು ಮುಸ್ಲಿಂ ಬಾಹುಳ್ಯದ ಹಲವು ಕ್ಷೇತ್ರಗಳಲ್ಲಿ ಬೀರಿದ ಪರಿಣಾಮ
- ಮುಸ್ಲಿಂ ಮತಗಳು ವಿಭಜನೆಯಾಗಿದ್ದು. ಕಾಂಗ್ರೆಸ್, ಎಜೆಯುಪಿ, ಸಿಪಿಎಂ, ಎಐಎಸ್‌ಎಫ್ ಈ ಬಾರಿಗೆ ಕ್ರಮವಾಗಿ 2, 2, 1 ಮತ್ತು 1 ಕ್ಷೇತ್ರದಲ್ಲಿ ಗೆಲುವು ಸಾಧಿಸಿವೆ. ಇವರು ಗೆದ್ದ ಕ್ಷೇತ್ರಗಳೆಲ್ಲಾ ಮುಸ್ಲಿಂ ಮತದಾರರ ಸಂಖ್ಯೆ ಹೆಚ್ಚು ಇರುವವು
- ಬಿಜೆಪಿಯ ಕಾರ್ಯತಂತ್ರ ಮತ್ತು ಅದು ಹುಟ್ಟುಹಾಕಿದ್ದ ಸಂಕಥನಗಳಿಗೆ ಪ್ರತಿತಂತ್ರ ಹೆಣೆಯುವುದರಲ್ಲಿ ಎಡವಿದ್ದು
- ಎಸ್‌ಐಆರ್, ಪಕ್ಷವನ್ನು ಗುರಿಯಾಗಿಸಿಕೊಂಡು ಕೇಂದ್ರದ ತನಿಖಾ ಸಂಸ್ಥೆಗಳು ಕೈಗೊಂಡ ಕ್ರಮಗಳ ವಿರುದ್ಧ ನಡೆಸಿದ ಹೋರಾಟ ಫಲ ನೀಡದೇ ಇದ್ದುದು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭಾರಿ ಅಂತರದ ಗೆಲುವು ಸಾಧಿಸಿದ ಬಳಿಕ, ಸಂಭ್ರಮಾಚರಣೆಗೆ ಸಂಬಂಧಿಸಿದಂತೆ ಹಲವು ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗುತ್ತಿದೆ. ಈ ಪೈಕಿ 'ಎಕ್ಸ್' ಬಳಕೆದಾರ ರಿಷಿ ಬಾಗ್ರೀ ಎಂಬವರು ಹಂಚಿಕೊಂಡಿರುವ ವಿಡಿಯೊವನ್ನು ನಾಲ್ಕು ಲಕ್ಷದಷ್ಟು ಮಂದಿ ವೀಕ್ಷಿಸಿದ್ದು, ಹಲವರು ಹಂಚಿಕೊಳ್ಳುತ್ತಿದ್ದಾರೆ. ಕೋಲ್ಕತ್ತದ ಐತಿಹಾಸಿಕ ಹೌರಾ ಸೇತುವೆಯಲ್ಲಿ ಕಿಕ್ಕಿರಿದು ಸೇರಿರುವ ಜನರು ಸಂಭ್ರಮ ಪಡುತ್ತಿರುವ ವಿಡಿಯೊ ಅದಾಗಿದ್ದು, ಜನರು ಜೈ ಶ್ರೀರಾಮ್ ಎಂದು ಘೋಷಣೆ ಕೂಗುವುದೂ ಅದರಲ್ಲಿ ಕೇಳಿಸುತ್ತದೆ. 'ಹೌರಾ ಸೇತುವೆಯಲ್ಲಿ ಬಿಜೆಪಿ ಗೆಲುವಿನ ಸಂಭ್ರಮಾಚರಣೆ' ಎಂದು ಪ್ರತಿಪಾದಿಸುತ್ತಾ ರಿಷಿ ಅವರು ಈ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು.



ವಿಡಿಯೊದ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, ಪ್ರಭಾಕರ್ ಗಿರಿಧಾರಿ ಎಂಬ ಹೆಸರಿನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ವರ್ಷದ ಮಾರ್ಚ್ 4ರಂದು ಹಂಚಿಕೊಂಡ ವಿಡಿಯೊ ಸಿಕ್ಕಿತು. ಆ ವಿಡಿಯೊ ತುಣುಕಿನಲ್ಲೂ ಹೌರಾ ಸೇತುವೆಯಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನರು ಜೈ ಶ್ರೀರಾಮ್ ಘೋಷಣೆ ಕೂಗುವ ದೃಶ್ಯಾವಳಿ ಇತ್ತು. ಈಗ ಹಂಚಿಕೊಳ್ಳಲಾಗುತ್ತಿರುವ ವಿಡಿಯೊ, ಇದೇ ವಿಡಿಯೊ ಎಂಬುದು ಖಚಿತವಾಯಿತು. ಆ ವಿಡಿಯೊವು ಹೋಳಿ ಸಂಭ್ರಮಾಚರಣೆಗೆ ಸಂಬಂಧಿಸಿದ್ದಾಗಿತ್ತು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ, 2026ರ ಮಾರ್ಚ್ 1 ರಂದು 'ಜರ್ನಿ ವಿದ್ ಸುಶ್ಮಿತಾ' ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಪೋಸ್ಟ್ ಮಾಡಲಾದ ಇದೇ ವಿಡಿಯೊ ಸಿಕ್ಕಿತು. ಕೋಲ್ಕತ್ತದಲ್ಲಿ ನಡೆದ '2026ರ ರೋಲ್ಸ್ ರಾಯ್ಸ್ ಹೋಳಿ ಸಂಭ್ರಮಾಚರಣೆ' ಎಂಬ ವಿವರಣೆ ಅದರಲ್ಲಿತ್ತು. ಎರಡು ತಿಂಗಳ ಹಿಂದಿನ ವಿಡಿಯೊ ಇದಾಗಿದ್ದು, ಬಿಜೆಪಿ ಗೆದ್ದಿರುವುದಕ್ಕೂ ಇದಕ್ಕೂ ಸಂಬಂಧವಿಲ್ಲ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಸಾಧನೆಯ ಸತ್ಯ


ಪಿ.ಚಂದ್ರಿಕಾ

'ಮನುಷ್ಯ ಹುಟ್ಟಿದ ಮೇಲೆ ಸಾಯಲೇಬೇಕು. ಸತ್ತಮೇಲೆ ಜಗತ್ತು ನಮ್ಮನ್ನು ಅತ್ಯಂತ ಗೌರವದಿಂದ ನೆನೆಸಿಕೊಳ್ಳಬೇಕು. ಅಂಥ ಸಾಧನೆಯನ್ನು ಮಾಡಬೇಕು' ಹೀಗೆ ಹಿರಿಯನೊಬ್ಬ ಮಾತಾಡುವಾಗ ಯುವಕನೊಬ್ಬ ಕೇಳಿದ, 'ಅಯ್ಯಾ ಇದು ತುಂಬಾ ವಿಚಿತ್ರ. ಸತ್ತಮೇಲೆ ಜಗತ್ತಿನಲ್ಲಿ ಏನಾದರೂ ನಮಗೇನು ತಿಳಿಯುತ್ತದೆ?' ಎಂದ. ಹಿರಿಯ ನಕ್ಕು, ಎಲ್ಲರಿಗಿರುವುದೂ ಒಂದೇ ದೇಹ. ಆದರೂ ಕೆಲವರನ್ನು ಹೂಳಿದ ಕಡೆಗೆ ಸ್ಮಶಾನ ಅಂತೀವಿ. ಮತ್ತೆ ಕೆಲವರನ್ನು ಹೂಳಿದ ಕಡೆಯನ್ನು ಗದ್ದುಗೆ ಎಂದು ಗೌರವಿಸುತ್ತೇವೆ. ಗುರು ಸತ್ತಮೇಲೂ ಈ ಜಗತ್ತಿಗೆ ದಾರಿಯನ್ನು ತೋರುತ್ತಿರುತ್ತಾರೆ ಅಲ್ಲವೇ?' ಎಂದ ಹಿರಿಯ.

ಪಟ್ಟುಬಿಡದೆ, 'ನೀವು ಅಧ್ಯಾತ್ಮ ಅಂತ ಕಣ್ಣಿಗೆ ಕಾಣದ ಯಾವ ಸಂಗತಿಯನ್ನೋ ಹೇಳುತ್ತಿದ್ದೀರಿ. ನನಗೆ ಬೇಕಿರುವುದು ಅದಲ್ಲ. ಸತ್ತಮೇಲೆ ಮಣ್ಣಲ್ಲಿ ಕರಗಿ ನಮ್ಮ ಅಸ್ತಿತ್ವವೇ ಇರಲ್ಲ. ಆದರೂ ಬೆಲೆ ಎಲ್ಲಿಯದು ಹೇಳಿ' ಎಂದ ಯುವಕ. ಹಿರಿಯ ಸ್ವಲ್ಪ ಗಂಭೀರವಾಗುತ್ತಾ, 'ನಿಜ ನೀನು ಬುದ್ಧಿವಂತ. ಮನುಷ್ಯನ ಬೆಲೆಯ ಬಗ್ಗೆ ಕೇಳುತ್ತಿರುವೆ. ನಿನಗೆ ಎರಡು ಘಟನೆಗಳನ್ನು ಹೇಳುತ್ತೇನೆ. ಮಹಾನ್ ವಿಜ್ಞಾನಿ ಐಸಾಕ್ ನ್ಯೂಟನ್ ಮರಣ ಹೊಂದಿದ. ಇಂಥವನನ್ನು ಕಳಕೊಂಡು ಬಿಟ್ಟೆವಲ್ಲಾ ಈಗೇನು ಮಾಡುವುದು ಎಂದು ಜಗತ್ತು ಮಮ್ಮಲ ಮರುಗಿತು. ಅಷ್ಟರಲ್ಲಿ ನ್ಯೂಟನ್‌ನ ಹಲ್ಲೊಂದು ಹರಾಜಿಗೆ ಬಂತು. ತಕ್ಷಣವೇ ಒಬ್ಬ ಅದನ್ನು ಖರೀದಿಸಿ ತನ್ನ ಉಂಗುರಕ್ಕೆ ಸೇರಿಸಿ, ತನ್ನೊಂದಿಗೆ ಅವನನ್ನು ಉಳಿಸಿಕೊಳ್ಳಬೇಕೆಂದು ನಿರ್ಧರಿಸಿದ. ಅದಕ್ಕಾಗಿ ಅವನು ಭಾರಿ ಮೊತ್ತವನ್ನು ತೆತ್ತ. ಜನ ಎಲ್ಲರೂ ನ್ಯೂಟನ್‌ನನ್ನು ಹೀಗೂ ನಮ್ಮ ಹತ್ತಿರ ಉಳಿಸಿಕೊಳ್ಳಬಹುದು ಎಂದು ನಮಗೆ ಯಾಕೆ ತೋಚಲಿಲ್ಲವೋ ಎಂದು ಪೇಚಾಡಿಕೊಂಡರಂತೆ. ಅದೇ ನೆಪೋಲಿಯನ್ ಈ ಪ್ರಪಂಚವನ್ನೇ ಆಳಲು ಹೊರಟವನು. ಕ್ರೌರ್ಯದ ಪರಮಾವಧಿಯನ್ನು ಮೆರೆದವನು. ಅವನು ಯುದ್ಧದ ಬಗ್ಗೆ ಬರೆದ ಪುಟ್ಟ ಟಿಪ್ಪಣಿಯ ಚೀಟಿಯನ್ನು ಹರಾಜು ಹಾಕಿದಾಗ, ಅದನ್ನು ಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಕೊನೆಗೆ ಒಬ್ಬ ಅತ್ಯಂತ ಕಡಿಮೆ ಹಣಕ್ಕೆ ಅದನ್ನು ಕೊಂಡ. ಯಾರೋ ಕೊಂಡವನನ್ನು ಕೇಳಿದ: 'ರಾಕ್ಷಸನೊಬ್ಬನ ಟಿಪ್ಪಣಿಯಿಂದ ಏನು ಪ್ರಯೋಜನ'. ಕೊಂಡವ ಹೇಳಿದ: 'ಜಗತ್ತನ್ನು ಚೆಂಡು ಮಾಡಿಕೊಂಡು ಒದೆಯಲು ಹೊರಟವನ ಈ ಟಿಪ್ಪಣಿ ಅತ್ಯಂತ ಕಡಿಮೆ ಮೊತ್ತಕ್ಕೆ ಹರಾಜಾಯಿತು. ಅದನ್ನು ಕೊಳ್ಳಲು ಯಾರೂ ಮುಂದೆ ಬರದಾದಾಗ ನಾನು ಕೊಂಡೆ ಯಾಕೆಂದರೆ ಕ್ರೌರ್ಯವನ್ನು ಯಾವತ್ತೂ ಜಗತ್ತು ಒಪ್ಪಲ್ಲ ಎನ್ನುವ ಪಾಠವನ್ನು ನೀವು ತಿಳಿಯಿರಿ ಎಂದು ನನ್ನ ಮಕ್ಕಳು–ಮೊಮ್ಮಕ್ಕಳಿಗೆ ಹೇಳಲು.' ಈಗ ಹೇಳು, ಜಗತ್ತು ನಮ್ಮ ಕೆಲಸದಿಂದ ನಮ್ಮನ್ನು ನೆನಪಿಟ್ಟುಕೊಳ್ಳುತ್ತದೆಯೇ ಇಲ್ಲವೇ?' ಎಂದ ಹಿರಿಯ.

ಯುವಕನಿಗೆ ಅರ್ಥವಾಯಿತು. ಹಿರಿಯ ಹೇಳಿದ, 'ನಮ್ಮ ಕೆಲಸಗಳು ನಿಸ್ವಾರ್ಥವಾಗಿದ್ದು, ಜನೋಪಯೋಗಿ ಆಗಿದ್ದರೆ ಗೌರವ ತಾನಾಗೇ ಬರುತ್ತದೆ. ಅದಕ್ಕೆ ಮತ್ತೆ ಯಾರ ವಿವರಣೆಯ ಅಗತ್ಯವೂ ಇರುವುದಿಲ್ಲ. ನಮ್ಮ ನಿರ್ಧಾರಗಳು ಇನ್ನೊಬ್ಬರನ್ನು ಬಾಧಿಸುವ, ಅವಮಾನಿಸುವ ಹಾಗಿದ್ದಾಗ ಪ್ರಪಂಚ ನಮ್ಮ ನಂತರವೂ ಕೀಳಾಗಿಯೇ ನೋಡುತ್ತದೆ ನೆನಪಿಟ್ಟುಕೋ.'

ಸಮಾಜಕ್ಕೆ ಎರವಾಗದ ಹಾಗೆ ಬದುಕಿಬಿಟ್ಟರೆ ಅದೇ ದೊಡ್ಡದು. ನಮ್ಮ ಅಸ್ತಿತ್ವದಿಂದ ಯಾರಿಗೂ ಕೇಡು ಸಂಭವಿಸದಿದ್ದರೆ ಅದೇ ಸಾಧನೆ ಅಲ್ಲವೇ! ❖

ಗುಂಡಣ್ಣ



ಪದಬಂಧ 6395


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಾರವನ್ನು ಹಿಡಿದಿರುವ ಬ್ರಾಹ್ಮಣ (3)
3.ಹಿರಿಯ ಸಹೋದರಿ ಇಲ್ಲಿದ್ದಾಳೆ (2)
4.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
6.ನೂರು ವರ್ಷಗಳ ಕಾಲ ಬದುಕುವವನು (4)
8.ತಿರುಗಿಸಿ ನೋಡಿದರೂ ಇದು ಹೊಸತು (3)
11.ಬಣ್ಣ ಬಣ್ಣದ ದಾರಗಳಿಂದ ಬಟ್ಟೆಯ ಮೇಲೆ ಮಾಡಿದ ಹೆಣಿಗೆ (3)
13.ಹಸುವಿನ ಬಳಿಯಿರುವ ಎಳೆಮಗು (4)
17.ಇದು ಕೊಬ್ಬಿದ ಆನೆ (4)
18.ಖನಿಜಗಳ ನೆಲೆ (2)
19.ಲೀಲಾಜಾಲವಾಗಿ ಹಾಕಿದ ಹರಾಜು (3)

ಮೇಲಿಂದ ಕೆಳಕ್ಕೆ

1.ಹಾರಿ ಬಂದು ಉಪಸ್ಥಿತಿಯಾಗಿರುವಿಕೆ (3)
2.ಮಾವನವರ ಆದಾಯ (4)
3.ಕಡಿಮೆ ಆಯುಸ್ಸುಳ್ಳವನು (3)
5.ಪರವಶನಾಗಿರುವಾಗ ಆಧೀನತೆ (2)
7.ಕಾರಿನಲ್ಲಿ ಕುಳಿತು ಆಡಿದ ಬೇಟೆ (3)
9.ನಡುವೆಯೇ ಆರಂಭವಾಗಿರುವ ಕಂಪನ (3)
10.ವಿವಾದವಿಲ್ಲದೇ ನಡೆದಿರುವ ಮದುವೆ (3)
12.ಎಳ್ಳು ನೀರು ಬಿಡುವಿಕೆ (4)
14.ಶ್ರೇಷ್ಠ ಮುತ್ತು ಇಲ್ಲಿದೆ (3)
15.ಸುಗಮವಾಗಿ ಕಿತ್ತು ತಂದಿರುವ ಹೂ (2)
16.ಧಾನ್ಯಗಳನ್ನು ಶೇಖರಿಸುವ ನೆಲಮಾಳಿಗೆ (3)



6394ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮತ್ತು 3.ದಾಯಾದಿ 5.ಹಣೆಬರಹ 6.ಗಡವ 7.ಜಠರ 8.ದಳ್ಳಾಳಿತನ 9.ವಿಧಾನ 10.ನಾಸ್ತಿಕ 13.ಆಮ್ಲಜನಕ 14.ಕರಡು 15.ಮಚ್ಚು

ಮೇಲಿಂದ ಕೆಳಕ್ಕೆ:
1.ಮಲರೋಗ 2.ಸಿಂಬಳ 3.ದಾಹ 4.ದಿನಕರ 5.ಹಯವದನ 7.ಜನನಾಯಕ 9.ವಿತರಕ 11.ಕಲಗಚ್ಚು 12.ಮಜಲು 13.ಆಡು

ಸುಡೊಕು 6778

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6				7		1	
8		7	6		4			
	2			8			5	6
	4			1		9		
		1	8		5		7	
7	5			9		3		
	8			7		4		3
			4		8		9	7
9		4			2		6	

6777 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

07 ಮೇ 2026 ಗುರುವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಪಂಚಮಿ ಗಂ. 10-15 ನಕ್ಷತ್ರ: ಪೂರ್ವಾಷಾಢ 18-46 ಯೋಗ: ಸಾಧ್ಯ 26-00 ಕರಣ: ತೈತಿಲ ಗಂ. 10-15, ಮೇಷ ಮಾಸದ 24 ನೇ ದಿನ. ಮಳೆ ನಕ್ಷತ್ರ : ಭರಣಿ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-10 ಸೂರ್ಯಾಸ್ತ : 06-44, ಮುಸ್ಲಿಂ ದಿನಾಂಕ : 19 ಜುಲ್ಕಾದಾ, ಅದೃಷ್ಟ ಸಂಖ್ಯೆ : 1, 10

ಮೇಷ: ಸೂರ್ಯನಾರಾಯಣನ ಸ್ಮರಣೆ ಮಾಡಿದಲ್ಲಿ ಆರೋಗ್ಯ ವೃದ್ಧಿ. ಮೈ ಕೈ ನೋವುಗಳು ಶಮನಗೊಳ್ಳುತ್ತವೆ. ಕೆಲಸಗಳು ನೆರವೇರಲು ತುಸು ಶ್ರಮ ವಹಿಸಬೇಕಾದೀತು.

ವೃಷಭ: ಮಕ್ಕಳ ಓದಿಗೆ ಅಡ್ಡಿಯಾಗಿರುವ ಸಮಸ್ಯೆಗೆ ಪರಿಹಾರ ಸಿಕ್ಕಿ ಮನಸ್ಸಿನಲ್ಲಿ ನೆಮ್ಮದಿ ಮೂಡುತ್ತದೆ. ಹೊಸ ಉದ್ಯಮ ಆರಂಭಿಸಲು ಬಂಡವಾಳ ಹೂಡಿಕೆ ಮಾಡಬಹುದು. ಹೊಸ ವಾಹನ ಖರೀದಿ ಅಗತ್ಯವೆನಿಸುತ್ತದೆ.

ಮಿಥುನ: ಪ್ರಾಪಂಚಿಕ ವಿಚಾರವನ್ನು ಬಿಟ್ಟು ಆಧ್ಯಾತ್ಮಿಕ ವಿಚಾರಗಳ ಕಡೆಗೆ ಗಮನ ಹರಿಯಲಿದೆ. ಉನ್ನತ ಪೊಲೀಸ್ ಅಧಿಕಾರಿಗಳಿಗೆ ಸಂತಸದ ಸುದ್ದಿ ಕೇಳಿಬರಲಿದೆ. ಹಿರಿಯರ ಆಶೀರ್ವಾದ ಲಭಿಸುವುದು.

ಕರ್ಕಾಟಕ: ಸ್ನೇಹಿತರ ಕಷ್ಟಗಳಿಗೆ ನೆರವಾಗುವ ಸ್ವಭಾವದಿಂದ ಸಮಸ್ಯೆಗಳನ್ನು ಎಳೆದುಕೊಂಡಂತೆ ಆಗಬಹುದು. ಬೆಲೆ ಬಾಳುವ ವಸ್ತುವನ್ನು ಕಳೆದುಕೊಳ್ಳುವ ಸಾಧ್ಯತೆ ಇದ್ದು, ಎಚ್ಚರದಿಂದ ಇರಿ.

ಸಿಂಹ: ಅಧಿಕ ಶ್ರಮದಿಂದ ದೀರ್ಘಕಾಲಿಕ ಕಾರ್ಯಗಳು ಚಾಲನೆಗೊಂಡು ಸಂತಸ ವೃದ್ಧಿ. ಓದು ಅಥವಾ ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ.

ಕನ್ಯಾ: ದೇಹಾರೋಗ್ಯದ ಸಲುವಾಗಿ ಕಾರ್ಯಗಳನ್ನು ಬಿಟ್ಟು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ. ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಸಹವರ್ತಿಗಳ ಅಭಿಪ್ರಾಯಗಳನ್ನು ಪಡೆದುಕೊಳ್ಳಿ.

ತುಲಾ: ರಾಜಕೀಯ ಕ್ಷೇತ್ರದಲ್ಲಿರುವವರು ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ರೂಢಿಸಿಕೊಳ್ಳಿ. ಇನ್ನೊಬ್ಬರನ್ನು ಅರ್ಥೈಸಿಕೊಳ್ಳುವ ಗುಣ ಕಡಿಮೆಯಾಗಲಿದೆ.

ವೃಶ್ಚಿಕ: ದೊಡ್ಡ ವಿಚಾರವೊಂದಕ್ಕೆ ಕೈ ಹಾಕಬೇಕಾದ ಸನ್ನಿವೇಶ ಎದುರಾಗುವುದು. ಆತ್ಮಸಂಯಮ ರೂಢಿಸಿಕೊಳ್ಳಬೇಕಾದ ಅಗತ್ಯವಿದೆ. ಸಂಸಾರದಲ್ಲಿ ಸಾಮರಸ್ಯವಿದ್ದು ಮನಸ್ಸಿಗೆ ಶಾಂತಿ ಉಂಟಾಗಲಿದೆ.


ಧನು: ವ್ಯವಹಾರವು ಊಹಿಸಿದ ವೆಚ್ಚಕ್ಕಿಂತ ಕಡಿಮೆ ಖರ್ಚಿನಲ್ಲಿ ಸಂಪೂರ್ಣವಾಗುವುದು. ಕೆಲವೊಂದು ಸಾಂಸಾರಿಕ ಸಮಸ್ಯೆಗಳಿಗೆ ಅತ್ಯಂತ ಭಾವುಕರಾಗುವಂತಾಗುವುದು.

ಮಕರ: ಆಸ್ತಿಗೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳು ಬಹಿರಂಗಗೊಳ್ಳಲಿವೆ. ವಾಣಿಜ್ಯ ಬೆಳೆಗಳನ್ನು ದಾಸ್ತಾನು ಮಾಡಿಕೊಳ್ಳುವ ಯೋಚನೆ ಸರಿಯಾದದ್ದಾಗಿರುತ್ತದೆ. ಆತ್ಮಬಲದ ಮೇಲೆ ನಂಬಿಕೆ ಇಡಿ.

ಕುಂಭ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ವೈವಾಹಿಕ ಮಾತುಕತೆಗಳು ಪ್ರಗತಿ ಪಥದತ್ತ ಸಾಗಲು ಶ್ರೀಸೀತಾರಾಮರನ್ನು ಪ್ರಾರ್ಥಿಸಿ.

ಮೀನ: ದೇವತಾ ಕಾರ್ಯಗಳಲ್ಲಿ ಭಾಗವಹಿಸುವ ಉದ್ದೇಶದಿಂದ ಪ್ರಯಾಣ ಮಾಡಬೇಕಾಗಬಹುದು. ಅನಾರೋಗ್ಯ ಹೊಂದಿದ್ದ ಪತ್ನಿಯ ಆರೋಗ್ಯದಲ್ಲಿ ಸುಧಾರಣೆ ಕಂಡುಬರುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,032
ಇಂದಿನ ಅಂತ್ಯ: 24,330
ದಿನದ ಗರಿಷ್ಠ: 24,356
298

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹590
12 ಕ್ಕೆ ₹84
ಮೈಸೂರು: 100 ಕ್ಕೆ ₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹247
ಆರ್‌ಎಸ್‌ಎಸ್-5 ₹242
ಗುಡ್ ಲಾಟ್ ₹212

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹355-598
ದ್ವಿತಳಿ (ಬಿ.ವಿ) ₹366-825

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1640 (1640)
ಸೋಯಾ (ರಿಫೈನ್ಡ್) ₹1520 (1520)
ಸೂರ್ಯಕಾಂತಿ (ರಿಫೈನ್ಡ್) ₹1660 (1670)
ಪಾಮೋಲಿನ್ ₹1480 (1480)

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹23900
ಎಸಿ ₹14150
ಆರ್‌ಪಿ ₹18150
ಆರ್‌ಸಿ ₹9800

‘ಯುದ್ಧಾಂತ್ಯ: ಶೀಘ್ರ ಅಂತಿಮ ಒಪ್ಪಂದ’

ಇರಾನ್ ಜತೆಗಿನ ಮಾತುಕತೆಯಲ್ಲಿ ಮಹತ್ತರ ಪ್ರಗತಿ • ಒಪ್ಪಂದ ಮಾಡಿಕೊಳ್ಳದಿದ್ದರೆ ಬಾಂಬ್ ದಾಳಿ: ಟ್ರಂಪ್

ವಾಷಿಂಗ್ಟನ್: ‘ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಇರಾನ್ ಜತೆಗೆ ನಡೆಯುತ್ತಿರುವ ಮಾತುಕತೆಯಲ್ಲಿ ಮಹತ್ತರ ಪ್ರಗತಿ ಕಂಡುಬಂದಿದೆ’ ಎಂದು ಅಮೆರಿಕ ಮತ್ತು ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನ ಬುಧವಾರ ಹೇಳಿಕೊಂಡಿವೆ.



ಡೊನಾಲ್ಡ್ ಟ್ರಂಪ್

‘ಯುದ್ಧ ಕೊನೆಗೊಳಿಸುವ ನಿಟ್ಟಿನಲ್ಲಿ ಮಾತುಕತೆ ಪ್ರಗತಿಯಲ್ಲಿದೆ’ ಎಂದು ಇರಾನ್‌ನ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ.

‘ಆದರೆ, ಅಮೆರಿಕದೊಂದಿಗೆ ಅಂತಿಮ ಒಪ್ಪಂದ ಮಾಡಿಕೊಳ್ಳಲು ಇರಾನ್ ಒಪ್ಪದಿದ್ದರೆ ಮತ್ತೆ ಬಾಂಬ್ ದಾಳಿ ಆರಂಭಿಸಲಾಗುವುದು. ಅಲ್ಲಿಯವರೆಗೆ ಅಮೆರಿಕದ ಹಡಗುಗಳು ಹೊರ್ಮುಜ್ ಜಲಸಂಧಿ ದಾಟಲು ಬೆಂಗಾವಲಾಗಿ ಯುದ್ಧನೌಕೆಗಳನ್ನು ನಿಯೋಜಿಸಿದ್ದ ‘ಪ್ರಾಜೆಕ್ಟ್ ಫ್ರೀಡಂ’ ಯೋಜನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ’ ಎಂದು ಅಮೆರಿಕದ

> ‘ಮಾತುಕತೆಯಲ್ಲಿ ಸಕಾರಾತ್ಮಕ ಬೆಳವಣಿಗೆ ಕಂಡುಬಂದಿದೆ. ಇರಾನ್ ಜತೆಗೆ ಶೀಘ್ರದಲ್ಲೇ ಪೂರ್ಣ ಮತ್ತು ಅಂತಿಮ ಒಪ್ಪಂದ ಏರ್ಪಡಲಿದೆ
> **ಡೊನಾಲ್ಡ್ ಟ್ರಂಪ್**
> ಅಮೆರಿಕದ ಅಧ್ಯಕ್ಷ

> ಅಮೆರಿಕ–ಇರಾನ್ ನಡುವಿನ ಅಂತಿಮ ಒಪ್ಪಂದವು ಪಶ್ಚಿಮ ಏಷ್ಯಾ ವಲಯ ಮತ್ತು ಅದರ ಆಚೆಗೂ ಶಾಂತಿ, ಸ್ಥಿರತೆ ಮರು ಸ್ಥಾಪಿಸುತ್ತದೆ ಎಂಬ ಭರವಸೆಯನ್ನು ಹೊಂದಿದ್ದೇವೆ
> **ಶೆಹಬಾಜ್ ಷರೀಫ್**
> ಪಾಕಿಸ್ತಾನದ ಪ್ರಧಾನಿ

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

‘ಇರಾನ್ ಅಂತಿಮ ಒಪ್ಪಂದಕ್ಕೆ ಸಹಿ ಹಾಕುತ್ತದೆಯೋ ಎನ್ನುವುದನ್ನು ನೋಡೋಣ, ಅಲ್ಲಿಯವರೆಗೆ ‘ಪ್ರಾಜೆಕ್ಟ್ ಫ್ರೀಡಂ’ ನಿಲ್ಲಿಸಿದ್ದೇವೆ’ ಎಂದು ಟ್ರಂಪ್ ಅವರು ಟ್ರೂತ್ ಸೋಷಿಯಲ್ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ. ಅಂತಿಮ ಒಪ್ಪಂದ ಒಳಗೊಂಡಿರುವ ಅಂಶಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಟ್ರಂಪ್ ಬಹಿರಂಗಪಡಿಸಿಲ್ಲ.

ಜಿನೀವಾ ಅಥವಾ ಇಸ್ಲಾಮಾಬಾದ್‌ನಲ್ಲಿ ಮಾತುಕತೆ

‘ಯುದ್ಧ ಕೊನೆಗೊಳಿಸಿ, ಹೊರ್ಮುಜ್ ಜಲಸಂಧಿ ತೆರೆಯುವ ನಿಟ್ಟಿನಲ್ಲಿ ನಡೆಯುತ್ತಿರುವ ಪ್ರಯತ್ನಗಳು ಅಂತಿಮ ಹಂತದಲ್ಲಿವೆ. ಒಂದು ಪುಟದ ಒಪ್ಪಂದ ಪತ್ರಕ್ಕೆ ಅಮೆರಿಕ–ಇರಾನ್ ಬಹುತೇಕ ಒಪ್ಪಿಕೊಂಡಿವೆ. ಜಿನೀವಾ ಅಥವಾ ಇಸ್ಲಾಮಾಬಾದ್‌ನಲ್ಲಿ, 30 ದಿನಗಳ ಅಂತಿಮ ಸುತ್ತಿನ ಮಾತುಕತೆ ನಡೆಯಲಿದೆ’ ಎಂದು ಅಮೆರಿಕದ ಇಬ್ಬರು ಅಧಿಕಾರಿಗಳ ಹೇಳಿಕೆಗಳನ್ನು ಉಲ್ಲೇಖಿಸಿ ‘ಆಕ್ಸಿಯೊಸ್’ ಸುದ್ದಿಸಂಸ್ಥೆ ವರದಿ ಮಾಡಿದೆ.

ಹೊರ್ಮುಜ್ ತೆರೆಯಿರಿ: ಇರಾನ್‌ಗೆ ಚೀನಾ ಒತ್ತಡ

ಬೀಜಿಂಗ್ (ಪಿಟಿಐ): ‘ಹೊರ್ಮುಜ್ ಜಲಸಂಧಿಯನ್ನು ತ್ವರಿತವಾಗಿ ಸಂಚಾರಕ್ಕೆ ಮುಕ್ತಗೊಳಿಸಿ, ಇಲ್ಲದಿದ್ದರೆ ಇರಾನ್ ಅನ್ನು ಜಾಗತಿಕವಾಗಿ ಪ್ರತ್ಯೇಕಿಸಲಾಗುವುದು’ ಎಂದು ಇರಾನ್ ಮೇಲೆ ಚೀನಾ ಒತ್ತಡ ಹೇರಿದೆ.

‘ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸುವುದಿಲ್ಲ’ ಎಂಬ ಇರಾನ್ ಹೇಳಿಕೆಯನ್ನು ಚೀನಾ ಶ್ಲಾಘಿಸಿದೆ.

ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ, ಇರಾನ್‌ನ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ನಡೆಸಿದ ಮಾತುಕತೆಯಲ್ಲಿ, ಹೊರ್ಮುಜ್ ಜಲಸಂಧಿಯನ್ನು ಆದಷ್ಟು ಬೇಗ ಸಂಚಾರಕ್ಕೆ ಮುಕ್ತಗೊಳಿಸಬೇಕು. ಇದು ಅಂತರರಾಷ್ಟ್ರೀಯ ಸಮುದಾಯ ಬೇಡಿಕೆ ಆಗಿದೆ ಎನ್ನುವುದನ್ನು ಮನವರಿಕೆ ಮಾಡಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಸಮಗ್ರ ಕದನ ವಿರಾಮ ಜಾರಿಗೊಳಿಸುವುದು ತುರ್ತು ಆದ್ಯತೆಯಾಗಿದೆ ಎಂದು ಚೀನಾ ಭಾವಿಸುತ್ತದೆ’ ಎಂದು ವಾಂಗ್ ಯಿ ಹೇಳಿದ್ದಾರೆ. ‘ಹೊರ್ಮುಜ್ ಜಲಸಂಧಿ ಸಮಸ್ಯೆ ಇತ್ಯರ್ಥಪಡಿಸಲು ಆದ್ಯತೆ ನೀಡುತ್ತೇವೆ’ ಎಂದು ಅರಾಘ್ಚಿ ಹೇಳಿದ್ದಾರೆ.

ಟ್ರೆಂಡ್ಸ್‌ನಿಂದ ಹೊಸ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರೆಂಡ್ಸ್ ಕಂಪನಿಯು ‘ದಿಸ್ ಹಾಲಿಡೇ, ಟ್ರೆಂಡ್ ಇಟ್’ ಎಂಬ ಹೊಸ ಗ್ರಾಹಕ ಅಭಿಯಾನವನ್ನು ಆರಂಭಿಸಿದ್ದು, 17ರವರೆಗೆ ನಡೆಯಲಿದೆ.

ಯಾವುದೇ ಟ್ರೆಂಡ್ಸ್ ಮಳಿಗೆಯಲ್ಲಿ ₹1,499 ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಉತ್ಪನ್ನಗಳನ್ನು ಖರೀದಿಸುವ ಗ್ರಾಹಕರು, ಮಳಿಗೆಯಲ್ಲಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಎ.ಐ ಸೃಷ್ಟಿ ಮಾಡಿದ ಪ್ರವಾಸದ ಹಾಡನ್ನು ರಚಿಸಿ ಅಭಿಯಾನಕ್ಕೆ ಮೀಸಲಾಗಿರುವ ಮೈಕ್ರೊಸೈಟ್‌ಗೆ ಸಲ್ಲಿಸಬೇಕು. ಈ ಸ್ಪರ್ಧೆಯಲ್ಲಿ 100 ವಿಜೇತರನ್ನು ಆಯ್ಕೆ ಮಾಡಿ, ಬಹುಮಾನ ನೀಡಲಾಗುವುದು ಎಂದು ಕಂಪನಿ ತಿಳಿಸಿದೆ.

ಈ ಅಭಿಯಾನವನ್ನು ಬ್ರ್ಯಾಂಡ್ ರಾಯಭಾರಿ ಮತ್ತು ಬಾಲಿವುಡ್ ತಾರೆ ಅನೀತ್ ಪಡ್ಡಾ ಮುನ್ನಡೆಸುತ್ತಿದ್ದಾರೆ.

ಮುತ್ತೂಟ್ ಮೌಲ್ಯ 25 ಪಟ್ಟು ಹೆಚ್ಚಳ

ಬೆಂಗಳೂರು: ಚಿನ್ನದ ಅಡಮಾನ ಸಾಲ ನೀಡುವ ದೇಶದ ಎನ್‌ಬಿಎಫ್‌ಸಿ ಕಂಪನಿಗಳ ಸಾಲಿನಲ್ಲಿ ಮುಂಚೂಣಿಯಲ್ಲಿ ಇರುವ ಮುತ್ತೂಟ್ ಫೈನಾನ್ಸ್ ಲಿಮಿಟೆಡ್, ಷೇರುಪೇಟೆಯಲ್ಲಿ ನೋಂದಾಯಿತವಾಗಿ 15 ವರ್ಷಗಳನ್ನು ಪೂರ್ಣಗೊಳಿಸಿದೆ.

ಈ ಅವಧಿಯಲ್ಲಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ಸರಿಸುಮಾರು 25 ಪಟ್ಟು ಹೆಚ್ಚಳ ಕಂಡಿದೆ ಎಂದು ಪ್ರಕಟಣೆ ತಿಳಿಸಿದೆ. ಕಂಪನಿಯು 2011ರಲ್ಲಿ ಷೇರುಪೇಟೆಯಲ್ಲಿ ನೋಂದಣಿ ಆದಾಗ ಮಾರುಕಟ್ಟೆ ಬಂಡವಾಳ ಮೌಲ್ಯವು ಸರಿಸುಮಾರು ₹6,000 ಕೋಟಿ ಆಗಿತ್ತು. ಅದು ಈಗ ₹1.50 ಲಕ್ಷ ಕೋಟಿಗೆ ತಲುಪಿದೆ ಎಂದು ಕಂಪನಿ ಹೇಳಿದೆ.

ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಾರ್ಜ್ ಅಲೆಕ್ಸಾಂಡರ್ ಮುತ್ತೂಟ್ ಅವರು ‘₹1.5 ಲಕ್ಷ ಕೋಟಿ ಮೊತ್ತದ ಮಾರುಕಟ್ಟೆ ಬಂಡವಾಳ ಹೊಂದುವುದು ಆರ್ಥಿಕ ಸಾಧನೆಗಿಂತ ಹೆಚ್ಚಿನದಾಗಿದೆ, ಇದು ಕುಟುಂಬಗಳು ಮತ್ತು ಹೂಡಿಕೆದಾರರು 15 ವರ್ಷಗಳಿಗೂ ಹೆಚ್ಚು ಕಾಲದಿಂದ ನಮ್ಮ ಮೇಲೆ ಇಟ್ಟಿರುವ ನಂಬಿಕೆಯ ದ್ಯೋತಕ’ ಎಂದು ಹೇಳಿದ್ದಾರೆ.

ಕಂಪನಿಯು ಪ್ರತಿದಿನ 2.5 ಲಕ್ಷಕ್ಕೂ ಹೆಚ್ಚು ಗ್ರಾಹಕರಿಗೆ ಸೇವೆ ಒದಗಿಸುತ್ತಿದೆ.

ಸುದ್ದಿ 2 ನಿಮಿಷ

ಬಯೋಕಾನ್‌ಗೆ ಕ್ಲೇರ್ ಉತ್ತರಾಧಿಕಾರಿ

ನವದೆಹಲಿ (ಪಿಟಿಐ): ದೇಶದ ಮುಂಚೂಣಿ ಬಯೋಟೆಕ್ ಕಂಪನಿಯಾದ ಬಯೋಕಾನ್‌ನ ಕಾರ್ಯನಿರ್ವಾಹಕ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಅವರು ತಮ್ಮ ಉತ್ತರಾಧಿಕಾರಿ ಸ್ಥಾನಕ್ಕೆ ಕ್ಲೇರ್ ಮಜುಂದಾರ್ ಅವರನ್ನು ಆಯ್ಕೆ ಮಾಡಿದ್ದಾರೆ. ಕ್ಲೇರ್ ಅವರು ಕಿರಣ್ ಅವರ ಸಹೋದರ ರವಿ ಮಜುಂದಾರ್ ಅವರ ಮಗಳು.

ಕಿರಣ್ ಅವರಿಗೆ ಮಕ್ಕಳಿಲ್ಲ. ಬಯೋಕಾನ್ ಕಂಪನಿಯ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಕೆಲವು ವರದಿಗಳು ನಿಜ ಎಂದು ‘ಎಕ್ಸ್’ ಪೋಸ್ಟ್‌ನಲ್ಲಿ ಹೇಳಿದ್ದಾರೆ. ತಾವು ಕ್ಲೇರ್ ಅವರನ್ನು ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿರುವುದಾಗಿಯೂ ಹೇಳಿದ್ದಾರೆ.

ಹೀಗಿದ್ದರೂ, ಕ್ಲೇರ್ ಅವರು ಬಯೋಕಾನ್‌ನಲ್ಲಿ ತಕ್ಷಣವೇ ಜವಾಬ್ದಾರಿ ವಹಿಸಿಕೊಳ್ಳುತ್ತಿಲ್ಲ ಎಂಬುದನ್ನು ಕಿರಣ್ ಅವರು ಸ್ಪಷ್ಟಪಡಿಸಿದ್ದಾರೆ. ‘ನನಗೆ ಸದ್ಯದಲ್ಲಿ ನಿವೃತ್ತಿ ಆಗುವ ಆಲೋಚನೆ ಇಲ್ಲ. ಕ್ಲೇರ್ ಅವರು ಕಾಲಕ್ರಮೇಣ ನನ್ನ ಹುದ್ದೆಯನ್ನು ವಹಿಸಿಕೊಳ್ಳಲಿದ್ದಾರೆ’ ಎಂದು ಕಿರಣ್ ಅವರು ಬರೆದಿದ್ದಾರೆ.

ಕ್ಲೇರ್ ಅವರು ಅಮೆರಿಕದ ಬೋಸ್ಟನ್‌ನಲ್ಲಿ ಬಿಕಾರಾ ಥೆರಪೆಟಿಕ್ಸ್ ಹೆಸರಿನ ಕಂಪನಿಯೊಂದನ್ನು 2018ರಲ್ಲಿ ಆರಂಭಿಸಿದ್ದಾರೆ. ರವಿ ಮಜುಂದಾರ್ ಅವರು ಬಯೋಕಾನ್ ಕಂಪನಿಯಲ್ಲಿ ಕಾರ್ಯನಿರ್ವಾಹಕೇತರ ಅಧ್ಯಕ್ಷರಾಗಿದ್ದಾರೆ.



ಕ್ಲೇರ್ ತಾನು ಕಂಪನಿಯೊಂದನ್ನು ಮುನ್ನಡೆಸಬಲ್ಲೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಹೀಗಾಗಿ ಅವರನ್ನು ಉತ್ತರಾಧಿಕಾರಿ ಆಗಿ ಸೂಚಿಸುತ್ತಿರುವುದಾಗಿ ಕಿರಣ್ ಅವರು ಹೇಳಿದ್ದಾರೆ.

ಸಂಘರ್ಷ ಕೊನೆಗೊಳ್ಳುವ ನಿರೀಕ್ಷೆ, ಸೆನ್ಸೆಕ್ಸ್ ಚೇತರಿಕೆ

ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಶಮನಗೊಳ್ಳುವ ಆಶಾಭಾವ ಮೂಡಿದ ಕಾರಣದಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಇಳಿಕೆ ಕಂಡಿತು. ಇದರ ಪರಿಣಾಮವಾಗಿ ದೇಶದ ಷೇರುಪೇಟೆಗಳಲ್ಲಿ ಬುಧವಾರ ತೇಜಿ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 940 ಅಂಶ ಹಾಗೂ ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 298 ಅಂಶ ಏರಿಕೆ ಕಂಡವು. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಉತ್ತಮ ವಹಿವಾಟು ಕೂಡ ದೇಶಿ ಮಾರುಕಟ್ಟೆಗಳಿಗೆ ಹುರುಪು ತುಂಬಿತು.

‘ಮಾರುಕಟ್ಟೆ ಜಿಗಿತಕ್ಕೆ ಜಾಗತಿಕ ಸಂಗತಿಗಳೇ ಮುಖ್ಯವಾಗಿದ್ದವು. ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದವೊಂದು ಸಾಧ್ಯವಾಗುತ್ತದೆ ಎಂಬ ಆಶಾವಾದವು ಕಚ್ಚಾ ತೈಲದ ಬೆಲೆಯು ತೀವ್ರವಾಗಿ ಇಳಿಕೆ ಕಾಣಲು ಕಾರಣವಾಯಿತು’ ಎಂದು ಲಿವ್‌ಲಾಂಗ್ ವೆಲ್ತ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಹರಿಪ್ರಸಾದ್ ಕೆ. ಹೇಳಿದ್ದಾರೆ.

ಕೇಂದ್ರ ಸಚಿವ ಸಂಪುಟವು ಸಾಲ ಖಾತರಿ ಯೋಜನೆಯನ್ನು ಘೋಷಣೆ ಮಾಡಿರುವುದು ಬ್ಯಾಂಕಿಂಗ್ ವಲಯದ ಷೇರುಗಳಿಗೆ ನೆರವಾಯಿತು ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇ 8ರಷ್ಟು ಇಳಿಕೆ ಆಗಿ ಬ್ಯಾರಲ್‌ಗೆ 101.1 ಡಾಲರ್‌ಗೆ ತಲುಪಿದೆ.

ರೂಪಾಯಿ ಮೌಲ್ಯ ಏರಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 69 ಪೈಸೆ ಏರಿಕೆಯಾಗಿದ್ದು, ವಹಿವಾಟಿನ ಅಂತ್ಯದ ವೇಳೆಗೆ ಮೌಲ್ಯವು 94.49 ಆಗಿದೆ.

ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ, ಮೀಡಿಯಾ ಡೆವಲಪ್‌ಮೆಂಟ್ ಫೌಂಡೇಷನ್ ನೀಡುವ ಪುರಸ್ಕಾರ

ಆಯುಷ್ ತಿವಾರಿ, ಜೇನ್, ಸಂಖದೀಪ್‌ಗೆ ಎಸಿಜೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಚೆನ್ನೈ: ಇಲ್ಲಿನ ಏಷ್ಯನ್ ಕಾಲೇಜ್ ಆಫ್ ಜರ್ನಲಿಸಂ (ಎಸಿಜೆ) ಹಾಗೂ ಮೀಡಿಯಾ ಡೆವಲಪ್‌ಮೆಂಟ್ ಫೌಂಡೇಷನ್ ನೀಡುವ 2025ನೇ ಸಾಲಿನ ‘ಎಸಿಜೆ ಪತ್ರಿಕೋದ್ಯಮ ಪ್ರಶಸ್ತಿ’ಗೆ ಪತ್ರಕರ್ತರಾದ ಆಯುಷ್ ತಿವಾರಿ, ಜೇನ್ ಅಲ್ಕಾಜಿ ಮತ್ತು ಪತ್ರಿಕಾ ಛಾಯಾಗ್ರಾಹಕ ಸಂಖದೀಪ್ ಬ್ಯಾನರ್ಜಿ ಆಯ್ಕೆಯಾಗಿದ್ದಾರೆ.

ಮೂವರು ಸದಸ್ಯರನ್ನು ಒಳಗೊಂಡ ಸಮಿತಿಯು ಕಾಲೇಜಿನ ಕ್ಯಾಂಪಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಗಳನ್ನು ಪ್ರಕಟಿಸಿತು.

ತನಿಖಾ ಪತ್ರಿಕೋದ್ಯಮ ವಿಭಾಗದಲ್ಲಿ ನೀಡುವ ‘ಎಸಿಜೆ–2025’ ಪ್ರಶಸ್ತಿಗೆ ಆಯುಷ್ ತಿವಾರಿ ಅವರು ಭಾಜನರಾಗಿದ್ದಾರೆ. ‘ಸ್ಕ್ರೋಲ್ ಡಾಟ್ ಇನ್’ನಲ್ಲಿ ಪ್ರಕಟವಾದ ‘ಭಾರತದ ಸೈಬರ್ ವಂಚನೆಯ ಪಿಡುಗು ಬಹುಕೋಟಿ ಡಾಲರ್ ಮೊತ್ತದ ಜಾಗತಿಕ ಉದ್ಯಮದ ಒಂದು ಭಾಗ’ ಎಂಬ ವಿಶೇಷ ವರದಿಗೆ ಈ ಪ್ರಶಸ್ತಿ ಸಂದಿದೆ.

ACJ JOURNALISM AWARDS

ಸಾಮಾಜಿಕ ಪರಿಣಾಮ ಉಂಟು ಮಾಡಿದ ಪತ್ರಿಕೋದ್ಯಮ ವಿಭಾಗದಲ್ಲಿ ನೀಡುವ ‘ಕೆ.ಪಿ. ನಾರಾಯಣ ಕುಮಾರ್ ಸ್ಮಾರಕ ಪ್ರಶಸ್ತಿ’ಯು ಜೇನ್ ಅಲ್ಕಾಜಿ ಅವರಿಗೆ ಸಂದಿದೆ. ‘ದ ಕ್ಯಾರವಾನ್’ನಲ್ಲಿ ಪ್ರಕಟವಾದ ‘ಹಳಿಗಳ ಮೇಲೆ ನೆತ್ತರು: ಪ್ರತಿ ವರ್ಷ ರೈಲ್ವೆ ಹಳಿ ನಿರ್ವಹಣೆಯ ಸುಮಾರು 100 ಸಿಬ್ಬಂದಿ ಕೆಲಸದ ಸಮಯದಲ್ಲಿ ಏಕೆ ಸಾವಿಗೀಡಾಗುತ್ತಿದ್ದಾರೆ?’ ಎಂಬ ವಿಶೇಷ ವರದಿಗೆ ಈ ಪ್ರಶಸ್ತಿ ದೊರೆತಿದೆ.

‘ಆಶೀಷ್ ಯೆಚೂರಿ ಸ್ಮಾರಕ ಪ್ರಶಸ್ತಿ’ಯು ಪತ್ರಿಕಾ ಛಾಯಾಗ್ರಾಹಕ ಸಂಖದೀಪ್ ಬ್ಯಾನರ್ಜಿ ಅವರಿಗೆ ಸಂದಿದೆ. ‘ದ ಇಂಡಿಯನ್ ಎಕ್ಸ್‌ಪ್ರೆಸ್’ನಲ್ಲಿ ಪ್ರಕಟಗೊಂಡ ಮರಾಠಿಗರ ಪ್ರತಿಭಟನೆಯ ‘ವಿಶ್ರಾಂತಿಯಲ್ಲಿರುವ ಪ್ರತಿಭಟನಕಾರರು’ ಎಂಬ ಶೀರ್ಷಿಕೆಯ ಅವರ ಛಾಯಾಚಿತ್ರಕ್ಕೆ ಈ ಪ್ರಶಸ್ತಿ ಸಿಕ್ಕಿದೆ.

ತನಿಖಾ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಿಗೆ ₹2 ಲಕ್ಷ ನಗದು ಮತ್ತು ಸ್ಮರಣಿಕೆ, ಸಾಮಾಜಿಕ ಪರಿಣಾಮ ಪ್ರಶಸ್ತಿ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹1 ಲಕ್ಷ ನಗದು ಮತ್ತು ಸ್ಮರಣಿಕೆ ನೀಡಲಾಗುತ್ತದೆ.

ನಿರೂಪಕಿ ಸೇವಂತಿ ನಿನಾನ್ ಅಧ್ಯಕ್ಷತೆಯ ತೀರ್ಪುಗಾರರ ಸಮಿತಿಯು ಈ ಆಯ್ಕೆಗಳನ್ನು ಮಾಡಿದೆ.

ಪತ್ರಕರ್ತೆ ನಿರುಪಮಾ ಸುಬ್ರಮಣಿಯನ್ ಮತ್ತು ಪತ್ರಿಕಾ ಛಾಯಾಗ್ರಾಹಕ ಸುಧಾರಕ್ ಓಲ್ವೆ ಸದಸ್ಯರಾಗಿದ್ದರು.

ತೀರ್ಪುಗಾರರ ಮೆಚ್ಚುಗೆ ಪಡೆದವರು

ತೀರ್ಪುಗಾರರ ಸಮಿತಿಯು ಆಯಾ ವಿಭಾಗಗಳಲ್ಲಿ ವಿಶೇಷ ಸಾಧನೆ ಮಾಡಿದವರ ಹೆಸರುಗಳನ್ನು ವಿಶೇಷವಾಗಿ ಉಲ್ಲೇಖಿಸಿದೆ.

ತನಿಖಾ ಪತ್ರಿಕೋದ್ಯಮ ವಿಭಾಗದ ಎಸಿಜೆ ಪ್ರಶಸ್ತಿ: ತಬಸ್ಸುಮ್ ಬರ್ನಗರ್‌ವಾಲಾ– ‘ಸ್ಕ್ರೋಲ್ ಡಾಟ್ ಇನ್’ನಲ್ಲಿ ಪ್ರಕಟಗೊಂಡ ‘ಭಾರತೀಯ ಆಸ್ಪತ್ರೆಗಳ ಮೇಲೆ ಹೊಂಚು ಹಾಕುತ್ತಿರುವ ನಿಗೂಢ ಹಂತಕರು. ಇದಕ್ಕೆ ಯಾರು ಹೊಣೆ?’ ಎಂಬ ವರದಿ.

ಶಿವನಾರಾಯಣ್ ರಾಜಪುರೋಹಿತ್– ‘ನ್ಯೂಸ್‌ಲಾಂಡ್ರಿ’ಯಲ್ಲಿ ಪ್ರಕಟಗೊಂಡ ‘ಭಾರತದ ಇ–ತ್ಯಾಜ್ಯದ ಭೂಗತ ಲೋಕ’ ಎಂಬ ವರದಿ.

ಸಾಮಾಜಿಕ ಪರಿಣಾಮ ಪತ್ರಿಕೋದ್ಯಮ ವಿಭಾಗದ ಕೆ. ಪಿ. ನಾರಾಯಣ ಕುಮಾರ್ ಸ್ಮಾರಕ ಪ್ರಶಸ್ತಿ: ಅಪರ್ಣಾ ಗಣೇಶನ್– ‘ದ ಮೈಗ್ರೇಷನ್ ಸ್ಟೋರಿ’ಯಲ್ಲಿ ಪ್ರಸಾರವಾದ ‘ಭಾರತದಲ್ಲಿ ಸೌರ ಫಲಕಗಳ ಹಿಂದಿನ ಸತ್ಯ: ಮರೆಮಾಚಿದ ನಷ್ಟ’ ಎಂಬ ವಿಡಿಯೊ ವರದಿ.

ಸಫೀನಾ ವಾನಿ– ‘ಡೌನ್ ಟು ಅರ್ಥ್’ನಲ್ಲಿ ಪ್ರಕಟಗೊಂಡ ‘ಭಾರತದ ಬೃಹತ್ ನವೀಕರಿಸಬಹುದಾದ ಇಂಧನ ಪಾರ್ಕ್ ಲಡಾಖ್‌ನ ಪಶ್ಮೀನಾ ಜೀವನೋಪಾಯಕ್ಕೆ ಬೆದರಿಕೆಯಾಗಿದೆಯೇ?’ ಎಂಬ ವರದಿ.

ಆಶೀಷ್ ಯೆಚೂರಿ ಸ್ಮಾರಕ ಪ್ರಶಸ್ತಿ: ಇಮ್ರಾನ್ ನಿಸ್ಸಾರ್– ‘ದ ಹಿಂದು’ ಪತ್ರಿಕೆಯಲ್ಲಿ ಪ್ರಕಟಗೊಂಡ 2025ರಲ್ಲಿ ಕಾಶ್ಮೀರದಲ್ಲಿ ಸಂಭವಿಸಿದ್ದ ಪ್ರವಾಹದ ಕುರಿತ ಚಿತ್ರ.

ಜೋಸ್ ಅಲುಕ್ಕಾಸ್‌ನಿಂದ 24ರವರೆಗೆ ಚಿನ್ನಾಭರಣಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೋಸ್ ಅಲುಕ್ಕಾಸ್ ಕಂಪನಿಯು, ನಗರದ ಡಿಕನ್ಸನ್ ರಸ್ತೆಯಲ್ಲಿರುವ ತನ್ನ ಮಳಿಗೆಯಲ್ಲಿ ‘ಸಿಗ್ನೇಚರ್ ಜ್ಯುವೆಲರಿ ಶೋ – ವಿಶ್ವಮಟ್ಟದ ಚಿನ್ನಾಭರಣಗಳ ಪ್ರದರ್ಶನ ಮತ್ತು ಮಾರಾಟ’ ಮೇಳವನ್ನು ಇದೇ ತಿಂಗಳ 24ರವರೆಗೆ ಆಯೋಜಿಸಿದೆ.

ಈ ಮೇಳದಲ್ಲಿ ಹಾರಗಳು, ಆಕರ್ಷಕ ಕಿವಿಯೋಲೆಗಳು, ವಿಶೇಷವಾಗಿ ವಿನ್ಯಾಸಗೊಳಿಸಿದ ವಧುವಿನ ಸೆಟ್‌ಗಳು ಸೇರಿದಂತೆ ಅತ್ಯಾಕರ್ಷಕ ಚಿನ್ನಾಭರಣಗಳ ಪ್ರದರ್ಶನವಿದೆ ಎಂದು ಕಂಪನಿ ಹೇಳಿದೆ.

ಪ್ರದರ್ಶನದಲ್ಲಿ ಗ್ರಾಹಕರು, ಚಿನ್ನದ ಮೇಕಿಂಗ್ ಚಾರ್ಜ್ ಮೇಲೆ ಮತ್ತು ವಜ್ರಾಭರಣಗಳ ಮೇಲೆ ಶೇ 30ರವರೆಗೆ ವಿನಾಯಿತಿ ಪಡೆಯಬಹುದು. ಜೊತೆಗೆ, ಹಳೆಯ 22 ಕ್ಯಾರಟ್ ಚಿನ್ನವನ್ನು ಹೊಸ ವಿನ್ಯಾಸಗಳೊಂದಿಗೆ ವಿನಿಮಯ ಮಾಡಿಕೊಳ್ಳುವಾಗ ಶೂನ್ಯ ವೇಸ್ಟೇಜ್ ಸೌಲಭ್ಯ ಇರಲಿದೆ ಎಂದು ಕಂಪನಿ ತಿಳಿಸಿದೆ.

‘ಸಿಗ್ನೇಚರ್ ಜ್ಯುವೆಲರಿ ಶೋ’ ಆಭರಣ ಪ್ರಿಯರಿಗೆ ವಿಶಿಷ್ಟ ಅನುಭವ ನೀಡಲಿದೆ. ಅಲ್ಲದೆ, ಗ್ರಾಹಕರ ವೈಯಕ್ತಿಕ ಶೈಲಿಗೆ ಅನುಗುಣವಾಗಿ ವಿನ್ಯಾಸಗಳನ್ನು ಹೊಂದಿಸಿಕೊಳ್ಳುವ ಅವಕಾಶವನ್ನು ಒದಗಿಸುತ್ತದೆ ಎಂದು ಜೋಸ್ ಅಲುಕ್ಕಾಸ್‌ನ ವ್ಯವಸ್ಥಾಪಕ ನಿರ್ದೇಶಕ ಪಾಲ್ ಅಲುಕ್ಕಾಸ್ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ) 06-05-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1555 (1560)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,000 (1,47,700)
ಬೆಳ್ಳಿ ಕೆ.ಜಿಗೆ	2,50,000 (2,40,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸೇವಾವಲಯದ ಪ್ರಗತಿ 5 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಬೆಳವಣಿಗೆ ಏಪ್ರಿಲ್ ತಿಂಗಳಿನಲ್ಲಿ ಐದು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ಬುಧವಾರ ತಿಳಿಸಿದೆ.

ಮಾರ್ಚ್ ತಿಂಗಳಿನಲ್ಲಿ ಸೂಚ್ಯಂಕವು 57.5 ದಾಖಲಾಗಿತ್ತು. ಇದು ಏಪ್ರಿಲ್‌ನಲ್ಲಿ 58.8ಕ್ಕೆ ಏರಿಕೆ ಆಗಿದೆ. ದೇಶದ ಗ್ರಾಹಕರಿಂದ ಸೇವಾ ವಲಯಕ್ಕೆ ಹೊಸ ಕಾರ್ಯಾದೇಶ ಬರುವುದು ಹೆಚ್ಚಳವಾಗಿದೆ. ಇದು ವಲಯದ ಪ್ರಗತಿಗೆ ಕಾರಣ ಎಂದು ತಿಳಿಸಿದೆ.

ಸೂಚ್ಯಂಕವು 50ಕ್ಕಿಂತ ಮೇಲಿದ್ದರೆ ಬೆಳವಣಿಗೆಯು ಸಶಕ್ತವಾಗಿದೆ ಎಂದು



ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿದೆ ಎಂದು ಅರ್ಥ.

‘ಸೇವಾವಲಯದ ಬೆಳವಣಿಗೆ ಏಪ್ರಿಲ್‌ನಲ್ಲಿ ಐದು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ. ಹೊಸ ರಫ್ತು ಕಾರ್ಯಾದೇಶ ಇಳಿಕೆಯಾದರೂ, ವಲಯದ ಚಟುವಟಿಕೆ ಮತ್ತು ಹೊಸ ಕಾರ್ಯಾದೇಶ ಸದೃಢಗೊಂಡಿವೆ’ ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದೇಶದ ಸೇವಾ ವಲಯಕ್ಕೆ ಬೇಡಿಕೆ ಇಳಿಕೆ ಆಗಿದ್ದು, ಬೇಡಿಕೆಯು ವಿದೇಶಿ ಮಾರುಕಟ್ಟೆಗಳಿಂದ ಬರುವ ಬದಲು ದೇಶದ ಮಾರುಕಟ್ಟೆಗಳಿಂದ ಬರುತ್ತಿದೆ ಎಂದು ತಿಳಿಸಿದ್ದಾರೆ.

ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರು ಹೇಳಿರುವ ಪ್ರಕಾರ ಸ್ಪರ್ಧಾತ್ಮಕ ಬೆಲೆ, ಇ–ವಾಣಿಜ್ಯ ವಲಯ ಮತ್ತು ಗ್ರಾಹಕರಿಂದ ಬರುವ ಬೇಡಿಕೆಯು ಒಟ್ಟಾರೆ ಮಾರಾಟದ ಹೆಚ್ಚಳಕ್ಕೆ ನೆರವಾಗಿವೆ.

ಸೇವಾ ವಲಯದ ಕಂಪನಿಗಳ ಕಾರ್ಯಾಚರಣೆ ವೆಚ್ಚದಲ್ಲಿ ಗಣನೀಯ ಹೆಚ್ಚಳ ಆಗಿದೆ. ಆದರೂ ಹೆಚ್ಚುವರಿ ವೆಚ್ಚದ ಹೊರೆಯ ಒಂದು ಪಾಲನ್ನು ಮಾತ್ರ ಕಂಪನಿಗಳು ಗ್ರಾಹಕರ ಮೇಲೆ ವರ್ಗಾವಣೆ ಮಾಡಿವೆ.

ಹೊಸ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದ ಆರಂಭದ ತಿಂಗಳಾದ ಏಪ್ರಿಲ್‌ನಲ್ಲಿ ಕಂಪನಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೌಕರರನ್ನು ನೇಮಕ ಮಾಡಿಕೊಂಡಿವೆ. ಹೊಸ ವಹಿವಾಟುಗಳ ಪ್ರಮಾಣ ಹೆಚ್ಚಳ ಕಂಡಿರುವುದು ಕಂಪನಿಗಳಿಗೆ ಹೊಸದಾಗಿ ನೌಕರರನ್ನು ನೇಮಕ ಮಾಡಿಕೊಳ್ಳುವ ವಿಶ್ವಾಸ ಮೂಡಿಸಿದೆ.

ಕೇರಳದಾದ್ಯಂತ ಹೋಟೆಲ್‌ಗಳು ಬಂದ್

ಎಲ್‌ಪಿಜಿ ಬೆಲೆ ಏರಿಕೆ: ಕೆಎಚ್‌ಆರ್‌ಎ ನೇತೃತ್ವದಲ್ಲಿ ಪ್ರತಿಭಟನೆ

ಕೊಚ್ಚಿ (ಪಿಟಿಐ): ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ವಿರೋಧಿಸಿ, ಕೇರಳ ಹೋಟೆಲ್ ಮತ್ತು ರೆಸ್ಟೋರೆಂಟ್ ಅಸೋಸಿಯೇಷನ್ (ಕೆಎಚ್‌ಆರ್‌ಎ) ನೇತೃತ್ವದಲ್ಲಿ ಬುಧವಾರ ರಾಜ್ಯದಾದ್ಯಂತ ಹೋಟೆಲ್‌ಗಳನ್ನು ಬಂದ್ ಮಾಡಿ ಪ್ರತಿಭಟನೆ ಮಾಡಲಾಯಿತು.

ರಾಜ್ಯದ ಅನೇಕ ಪ್ರದೇಶಗಳಲ್ಲಿ ದೊಡ್ಡ ಹೋಟೆಲ್‌ಗಳು, ಸಣ್ಣ ಚಹಾ ಅಂಗಡಿಗಳು ತಮ್ಮ ವ್ಯಾಪಾರವನ್ನು ಬಂದ್ ಮಾಡಿ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದವು.

ಪರಿಸ್ಥಿತಿಯನ್ನು ನಿಯಂತ್ರಿಸಲು ಮಧ್ಯಪ್ರವೇಶಿಸದ ಕೇಂದ್ರ ಸರ್ಕಾರವನ್ನು ಟೀಕಿಸಿರುವ ಕೆಎಚ್‌ಆರ್‌ಎ, ‘ತೈಲ ಕಂಪನಿಗಳು ಸತತವಾಗಿ ಇಂಧನ ಬೆಲೆಗಳನ್ನು ನಿರಂತರ ಏರಿಕೆ ಮಾಡಿರುವುದರಿಂದ, ಹೋಟೆಲ್ ಕ್ಷೇತ್ರದಲ್ಲಿ ಇರುವವರು ಬದುಕು ಸಾಗಿಸುವುದು ಕಷ್ಟವಾಗಿದೆ’ ಎಂದು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ತೈಲ ಕಂಪನಿಗಳು ಕೇವಲ ಲಾಭದ ಮೇಲೆ ಕಣ್ಣಿಟ್ಟು ಸಾಮಾನ್ಯ ಜನರ ಮತ್ತು ಸಣ್ಣ ವ್ಯಾಪಾರಿಗಳ ಕಷ್ಟವನ್ನು ಮರೆತು ಯಾವುದೇ



ತಿರುವನಂತಪುರದಲ್ಲಿ ಕೆಎಚ್‌ಆರ್‌ಎ ಸದಸ್ಯರು ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ವಿರೋಧಿಸಿ ಬುಧವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಅಂಕೆಯಿಲ್ಲದೆ ಬೆಲೆ ಏರಿಸುತ್ತಿವೆ ಎಂದು ಅದು ಆರೋಪಿಸಿದೆ.

ಪ್ರತಿಭಟನೆಯ ಭಾಗವಾಗಿ ಹೋಟೆಲ್ ಮಾಲೀಕರು ರಾಜ್ಯಾದ್ಯಂತ ತೈಲ ಕಂಪನಿ ಕಚೇರಿಗಳು ಮತ್ತು ಕೇಂದ್ರ ಸರ್ಕಾರಿ ಸಂಸ್ಥೆಗಳ ಮುಂದೆ ಮೆರವಣಿಗೆಗಳನ್ನು ನಡೆಸಿ ತಮ್ಮ ವಿರೋಧ ವ್ಯಕ್ತಪಡಿಸಿದರು. ಜೊತೆಗೆ, ಬಂದ್‌ನಿಂದಾಗಿ ಸಾರ್ವಜನಿಕರಿಗೆ ಉಂಟಾದ ಅನಾನುಕೂಲತೆಗೆ ಸಂಘಟನೆ ವಿಷಾದ ವ್ಯಕ್ತಪಡಿಸಿದೆ.

ಹಂಟಾವೈರಸ್: ಮೂವರಲ್ಲಿ ಪತ್ತೆ

ಜೊಹಾನಸ್‌ಬರ್ಗ್/ಜಿನೀವಾ (ಎಪಿ): ‘ಎಂವಿ ಹೊಂಡಿಯಸ್’ ಹಡಗಿನಲ್ಲಿದ್ದ ಮೂವರು ಪ್ರಯಾಣಿಕರಲ್ಲಿ ಹಂಟಾವೈರಸ್ ಸೋಂಕು ಪತ್ತೆಯಾಗಿದೆ.

ವ್ಯಕ್ತಿಯಿಂದ ವ್ಯಕ್ತಿಗೆ ಹರಡುವ ಈ ಸೋಂಕು ಇಬ್ಬರಲ್ಲಿ ಇರುವುದನ್ನು ದಕ್ಷಿಣ ಆಫ್ರಿಕಾದ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ ಎಂದು ಆರೋಗ್ಯ ಸಚಿವಾಲಯ ಬುಧವಾರ ತಿಳಿಸಿದೆ. ಅರ್ಜೆಂಟೀನಾದಿಂದ ಅಂಟಾರ್ಕ್ಟಿಕಾ ಮತ್ತು ದಕ್ಷಿಣ ಅಟ್ಲಾಂಟಿಕ್‌ನ ದ್ವೀಪಗಳಲ್ಲಿ ವಾರಗಳ ಕಾಲ ಪ್ರವಾಸದಲ್ಲಿದ್ದ ‘ಎಂವಿ ಹೊಂಡಿಯಸ್’ ಹಡಗು ದಕ್ಷಿಣ ಆಫ್ರಿಕಾಕ್ಕೆ ಬಂದ ನಂತರ ಪ್ರಯಾಣಿಕರ ತಪಾಸಣೆ ನಡೆಸಿದಾಗ ಈ ಸೋಂಕು ಪತ್ತೆಯಾಗಿದೆ ಎಂದಿದೆ.

ದಕ್ಷಿಣ ಅಮೆರಿಕದಿಂದ ಬಂದ ಪ್ರಯಾಣಿಕರೊಬ್ಬರಲ್ಲಿ ಹಂಟಾವೈರಸ್ ಸೋಂಕು ಇರುವುದು ದೃಢಪಟ್ಟಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಸ್ವಿಟ್ಜರ್ಲೆಂಡ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಟಿಷ್ ಪ್ರಜೆಯೊಬ್ಬರು ದಕ್ಷಿಣ ಆಫ್ರಿಕಾದ ಆಸ್ಪತ್ರೆಯೊಂದರ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪಶ್ಚಿಮ ಆಫ್ರಿಕಾದ ಕೇಪ್ ವರ್ಡ್ ದ್ವೀಪದ ಕರಾವಳಿಯಲ್ಲಿ ಹಡಗು ಇದ್ದಾಗ ಸೋಂಕಿನಿಂದ ಮೂವರು ಮೃತಪಟ್ಟಿದ್ದು, ನಾಲ್ವರು ಅಸ್ವಸ್ಥರಾಗಿದ್ದಾರೆ.

ಮೂವರ ಸ್ಥಳಾಂತರ: ಹಂಟಾವೈರಸ್ ಪೀಡಿತ ಮೂವರು ಶಂಕಿತರನ್ನು ಹಡಗಿನಿಂದ ಸ್ಥಳಾಂತರಿಸಲಾಗಿದ್ದು, ನೆದರ್ಲೆಂಡ್‌ಗೆ ಕರೆದೊಯ್ಯಲಾಗುತ್ತಿದೆ.

ಪ್ರಯಾಣಿಕರು ಮತ್ತು ಸಿಬ್ಬಂದಿಯ ಆರೋಗ್ಯದ ಮೇಲ್ವಿಚಾರಣೆಗಾಗಿ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಹಡಗಿನ ನಿರ್ವಾಹಕರೊಂದಿಗೆ ಸಂವಹನ ನಡೆಸಿದೆ ಎಂದು ಡಬ್ಲ್ಯುಎಚ್‌ಒ ಮಹಾನಿರ್ದೇಶಕ ಟೆಡ್ರೋಸ್ ಅಧಾನೊಮ್ ಗೆಬ್ರೆಯೆಸಸ್ ತಿಳಿಸಿದ್ದಾರೆ.

‘ಅಕ್ರಮ ವಲಸಿಗರನ್ನು ಹೊರದಬ್ಬಲ್ಲ’

ಢಾಕಾ (ಪಿಟಿಐ): ‘ಗಡಿ ರಾಜ್ಯವಾದ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವು ಸಾಧಿಸಿದ್ದು, ಅಕ್ರಮ ವಲಸಿಗರನ್ನು ಬಾಂಗ್ಲಾದೇಶಕ್ಕೆ ದಬ್ಬುವುದಿಲ್ಲ’ ಎಂದು ಬಾಂಗ್ಲಾದೇಶದ ಗೃಹ ಸಚಿವ ಸಲಾಹುದ್ದೀನ್ ಅಹ್ಮದ್ ಅವರು ಬುಧವಾರ ಇಲ್ಲಿ ಭರವಸೆ ವ್ಯಕ್ತಪಡಿಸಿದರು.

‘ಅಕ್ರಮ ವಲಸಿಗರನ್ನು ಬಂಗಾಳದಿಂದ ಬಲವಂತವಾಗಿ ಹೊರದಬ್ಬುವ ಯಾವುದೇ ಘಟನೆ ಸಂಭವಿಸುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ಆದರೂ ಗಡಿಯಲ್ಲಿ ಕಟ್ಟೆಚ್ಚರದಿಂದ ಇರುವಂತೆ ಗಡಿ ಭದ್ರತಾ ಪಡೆಗೆ ಸೂಚಿಸಿದ್ದೇನೆ’ ಎಂದು ವರದಿಗಾರರ ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು.

‘ಬಂಗಾಳದಲ್ಲಿ ಸರ್ಕಾರ ಬದಲಾಗಿದ್ದು, ಅಕ್ರಮ ವಲಸಿಗರು ಎಂದು ಜನರನ್ನು ಬಾಂಗ್ಲಾದೇಶಕ್ಕೆ ದಬ್ಬಿದರೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ವಿದೇಶಾಂಗ ಸಚಿವ ಖಲೀಲ್ ಉರ್ ರೆಹಮಾನ್ ಅವರು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿಯ ಫೇಸ್‌ಬುಕ್ ಪುಟದಲ್ಲಿ ಉಲ್ಲೇಖಿಸಿದ ಒಂದು ದಿನದ ನಂತರ ಅಹ್ಮದ್ ಅವರು ಈ ಹೇಳಿಕೆ ನೀಡಿದ್ದಾರೆ.

ಅಕ್ರಮ ವಲಸಿಗರನ್ನು ಬಂಗಾಳ, ಅಸ್ಸಾಂನಿಂದ ಹೊರಹಾಕಲಾಗುವುದು ಎಂದು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿತ್ತು.

ಅಡಿಕೆ ಧಾರಣೆ

ಕುಮಟಾ	
ಚಿಪ್ಪು	31869-36019
ಕೋಕ	18019-34099
ಫ್ಯಾಕ್ಟರಿ	14029-28169
ಹಳೆಚಾಲಿ	47099-48989
ಹೊಸಚಾಲಿ	43099-47909
ಪುತ್ತೂರು	
ಕೋಕ	20000-34500
ಹೊಸತು	30000-47500
ಶಿವಮೊಗ್ಗ	
ಸರಕು	73009-98596
ಬೆಟ್ಟೆ	50499-65300
ರಾಶಿ	45999-56009
ಗೊರಬಲು	19010-45799
ಸಿದ್ದಾಪುರ	
ಬಿಳಿಗೋಟು	26900-36129
ಚಾಲಿ	39500-47199
ಕೋಕ	23299-33699
ಕೆಂಪುಗೋಟು	30900-34699
ರಾಶಿ	50000-53599
ತಟ್ಟಿಬೆಟ್ಟೆ	36219-38899
ಶಿರಸಿ	
ಬೆಟ್ಟೆ	42199-49989
ಬಿಳಿಗೋಟು	21600-38229
ಚಾಲಿ	44600-48730
ಕೆಂಪುಗೋಟು	24019-37099
ರಾಶಿ	50009-54699



ರಷ್ಯಾ ಸೇನಾ ಪಡೆ ನಡೆಸಿದ ವೈಮಾನಿಕ ದಾಳಿಯಿಂದ ಉಕ್ರೇನ್‌ನ ಕ್ರಾಮಟೊರ್ಸ್ಕ್ ನಗರದಲ್ಲಿ ಕಾರುಗಳಿಗೆ ಹೊತ್ತಿಕೊಂಡಿದ್ದ ಬೆಂಕಿಯನ್ನು ಅಗ್ನಿಶಾಮಕ ಸಿಬ್ಬಂದಿ ನಂದಿಸಿದರು —ಎಎಫ್‌ಪಿ ಚಿತ್ರ

ರಷ್ಯಾ ದಾಳಿ: 27 ಮಂದಿ ಸಾವು

ಕೀವ್ (ಎಪಿ): ಉಕ್ರೇನ್ ಮೇಲೆ ರಷ್ಯಾ ಮಂಗಳವಾರ ರಾತ್ರಿ ನಡೆಸಿದ ಡ್ರೋನ್ ಹಾಗೂ ಕ್ಷಿಪಣಿ ದಾಳಿಯಲ್ಲಿ 27 ಮಂದಿ ಮೃತಪಟ್ಟಿದ್ದು, 120 ಮಂದಿ ಗಾಯಗೊಂಡಿದ್ದಾರೆ.

ಎರಡನೇ ವಿಶ್ವಯುದ್ಧದ 81ನೇ ವಿಜಯೋತ್ಸವದ ಅಂಗವಾಗಿ ಶುಕ್ರವಾರ ಮತ್ತು ಶನಿವಾರದಂದು ಏಕಪಕ್ಷೀಯ ಕದನವಿರಾಮ ಜಾರಿಯಲ್ಲಿರಲಿದೆ ಎಂದು ರಷ್ಯಾ ಘೋಷಿಸಿತ್ತು. ಹೀಗಾಗಿ, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಸಹ ಏಕಪಕ್ಷೀಯ ಕದನ ವಿರಾಮವನ್ನು ಘೋಷಿಸಿದ್ದರು. ಕದನ ವಿರಾಮದ ಉಲ್ಲಂಘಿಸಿದರೆ ಸೇನಾ ದಾಳಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದರು.

‘ರಷ್ಯಾದ ಸೇನಾ ಪಡೆಗಳು ಮಂಗಳವಾರ ರಾತ್ರಿಯಿಂದ ಬುಧವಾರ ಬೆಳಗಿನ ಜಾವದವರೆಗೆ 108 ಡ್ರೋನ್‌ಗಳು ಮತ್ತು ಮೂರು ಕ್ಷಿಪಣಿಗಳನ್ನು ಹಾರಿಸಿವೆ’ ಎಂದು ಉಕ್ರೇನ್ ವಿದೇಶಾಂಗ ಸಚಿವ ಆ್ಯಂಡ್ರಿ ಸಿಬಿಹಾ ಹೇಳಿದ್ದಾರೆ.

‘ಉಕ್ರೇನ್ ತನ್ನದೇ ಆದ ಕದನ ವಿರಾಮವನ್ನು ಪಾಲಿಸುತ್ತಿಲ್ಲ. ಮಂಗಳವಾರ ಸಂಜೆಯಿಂದ ಬುಧವಾರ ಬೆಳಗಿನ ಜಾವದ ನಡುವೆ ರಷ್ಯಾದ ವಿವಿಧ ಪ್ರದೇಶಗಳು, ಕ್ರಿಮಿಯಾ ಪರ್ಯಾಯ ದ್ವೀಪ ಮತ್ತು ಕಪ್ಪು ಸಮುದ್ರದ ಮೇಲೆ ಉಕ್ರೇನ್ 53 ಡ್ರೋನ್‌ಗಳನ್ನು ಹಾರಿಸಿದ್ದು, ಅವುಗಳನ್ನು ನಮ್ಮ ವಾಯು ರಕ್ಷಣಾ ವ್ಯವಸ್ಥೆಯ ಮೂಲಕ ಹೊಡೆದು ಉರುಳಿಸಲಾಗಿದೆ’ ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ.

ಹೊಗೆ ತಪಾಸಣೆ ನಡೆಸದೇ ಪ್ರಮಾಣಪತ್ರ

ವಾಹನದ ಫೋಟೊ ಕಳುಹಿಸಿ, ₹50 ಪಾವತಿಸಿದರೆ ಐದು ನಿಮಿಷಕ್ಕೆ ಸಿದ್ಧ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮನೆ ಮುಂದೆಯೇ ವಾಹನ ನಿಲ್ಲಿಸಿಕೊಂಡು ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಹರಿಯಾಣ ರಾಜ್ಯಗಳ ಹೊಗೆ ತಪಾಸಣೆ ಕೇಂದ್ರಗಳಿಂದ ಪ್ರಮಾಣ ಪತ್ರ ಪಡೆಯುವ ಅಕ್ರಮ ನಡೆಯುತ್ತಿದೆ.

ರಾಷ್ಟ್ರೀಯ ಮಾಹಿತಿ ಕೇಂದ್ರದ (ಎನ್‌ಐಸಿ) ಲೋಪವನ್ನು ಬಳಸಿಕೊಂಡು, ಕೇವಲ ₹50 ಪಾವತಿಸಿ ಹೊಗೆ ತಪಾಸಣೆ ನಡೆಸದೆಯೇ ಕಳ್ಳ ದಾರಿಯಲ್ಲಿ ಪ್ರಮಾಣಪತ್ರ ಪಡೆಯಲಾಗುತ್ತಿದೆ.

ಕರ್ನಾಟಕದಲ್ಲಿ ಹೊಸ ತಂತ್ರಾಂಶವನ್ನು ಪೊಲ್ಯುಷನ್ ಅಂಡರ್ ಕಂಟ್ರೋಲ್ ಸೆಂಟರ್‌ನಲ್ಲಿ (ಪಿಯುಸಿಸಿ) ಅನುಷ್ಠಾನಗೊಳಿಸಿ ಮಾಲಿನ್ಯ (ಹೊಗೆ) ತಪಾಸಣೆ ಕಟ್ಟುನಿಟ್ಟು ಮಾಡಲಾಗಿತ್ತು. ಹೊಸ ತಂತ್ರಾಂಶವು ವಾಹನ್–4ಕ್ಕೆ ಸಂಯೋಜನೆಗೊಂಡಿರುವುದರಿಂದ ವಾಹನದ ನೋಂದಣಿ ಸಂಖ್ಯೆಯನ್ನು ನಮೂದಿಸಿದ ಕೂಡಲೇ ಎಲ್ಲ ವಿವರಗಳು ಲಭ್ಯವಾಗುತ್ತವೆ. ವಾಯು ಮಾಲಿನ್ಯ ತಪಾಸಣೆ ಯಾವಾಗ ಮಾಡಲಾಗಿದೆ? ಮುಂದೆ ಯಾವಾಗ ಮಾಡಬೇಕು? ಎಂಜಿನ್ ಸ್ಥಿತಿ ಏನು? ವಾಹನಕ್ಕೆ ಎಷ್ಟು ವರ್ಷವಾಗಿದೆ? ಮಾಲೀಕರು ಯಾರು? ಅವರ ದೂರವಾಣಿ ಸಂಖ್ಯೆ ಸಹಿತ ಎಲ್ಲ ವಿವರಗಳು ಲಭ್ಯವಾಗುತ್ತವೆ. ಮಾಲಿನ್ಯ ಮಟ್ಟ (ನಾರ್ಮ್) ದಾಖಲಾಗುತ್ತದೆ. ತಪಾಸಣೆ ನಡೆಸುವ ಛಾಯಾಚಿತ್ರವೂ ದಾಖಲಾಗುವುದರಿಂದ ವಾಹನಗಳು ತಪಾಸಣಾ ಕೇಂದ್ರಕ್ಕೆ ಬರಲೇಬೇಕು.

ಆದರೆ, ವಾಹನದ ಫೋಟೊವನ್ನು ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಹರಿಯಾಣ ರಾಜ್ಯಗಳ ತಪಾಸಣಾ ಕೇಂದ್ರಗಳಿಗೆ ಕಳುಹಿಸಿ ₹50 ಪಾವತಿ ಮಾಡಿದರೆ ಐದು ನಿಮಿಷದ ಒಳಗೆ ಪ್ರಮಾಣಪತ್ರ ಕಳುಹಿಸಿಕೊಡುತ್ತಾರೆ. 'ಇದನ್ನು ಎನ್‌ಐಸಿಯ ವಾಹನ್–4 ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿದರೆ ಸ್ವೀಕೃತವಾಗುತ್ತದೆ.

ಸಾರಿಗೆ ಅಧಿಕಾರಿಯ ಕಾರಿಗೂ ಪ್ರಮಾಣಪತ್ರ!: 'ಕಳ್ಳದಾರಿಯಲ್ಲಿ ಸುಲಭವಾಗಿ ಪ್ರಮಾಣಪತ್ರ ಪಡೆಯಲಾಗುತ್ತದೆ ಎಂದು ಎರಡು ದಿನಗಳ ಹಿಂದೆ ಗೊತ್ತಾಯಿತು. ಅದರ ಪತ್ತೆಗೆ ನನ್ನ ಸರ್ಕಾರಿ ಕಾರಿನ ಫೋಟೊ ತೆಗೆದು ಆಂಧ್ರ ಪ್ರದೇಶದ ತಪಾಸಣಾ ಕೇಂದ್ರಕ್ಕೆ ಕಳುಹಿಸಿ ₹50 ಪಾವತಿಸಲಾಯಿತು. ಐದು ನಿಮಿಷದಲ್ಲಿ ಪ್ರಮಾಣ ಪತ್ರ ಬಂತು' ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ (ಪರಿಸರ ಮತ್ತು ಇ–ಆಡಳಿತ) ಜ್ಞಾನೇಂದ್ರ ಕುಮಾರ್ ವಿವರ ನೀಡಿದರು.

'ಸಿನಿಮಾ ನಟರು, ರಾಜಕಾರಣಿಗಳ ಫೋಟೊಗಳನ್ನು ವಾಹನಗಳ ಜೊತೆ ಯಾರೋ ತೆಗೆದು ಕಳುಹಿಸಿ ಪ್ರಮಾಣ ಪತ್ರ ಪಡೆದಿದ್ದಾರೆ ಎಂದು ಕೆಲವರು ಮಾಹಿತಿ ನೀಡಿದರು. ರಸ್ತೆ ಬದಿಯಲ್ಲಿ ನಿಂತ ಯಾರದ್ದೋ ವಾಹನದ ಫೋಟೊ ತೆಗೆದು ಕಳುಹಿಸಿ ಪ್ರಮಾಣಪತ್ರ ಪಡೆದುಕೊಳ್ಳಬಹುದು ಎಂದೂ ತಿಳಿಸಿದ್ದರು. ಪ್ರಸಿದ್ಧರ ಹೆಸರನ್ನು ಸುಮ್ಮನೆ ಹೇಳುವುದು ಎಂಬ ಕಾರಣಕ್ಕೆ ನಾನು ನಂಬಿರಲಿಲ್ಲ. ಆಗ ಈ ರೀತಿ ಅಕ್ರಮ ನಡೆಯುವುದು ಖಚಿತವಾಯಿತು. ಇದಕ್ಕೆ ರಾಜ್ಯದಲ್ಲಿ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗುವುದು' ಎಂದರು.



ಹರಿಯಾಣದ ಹೊಗೆ ತಪಾಸಣಾ ಕೇಂದ್ರದಿಂದ ಪಡೆದಿರುವ ಪ್ರಮಾಣಪತ್ರ

ಕೇಂದ್ರಕ್ಕೆ ಪತ್ರ: ಜ್ಞಾನೇಂದ್ರ ಕುಮಾರ್



ಜ್ಞಾನೇಂದ್ರ ಕುಮಾರ್

'ಭಾರತ ಸರ್ಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದಡಿ ಕಾರ್ಯನಿರ್ವಹಿಸುವ ಎನ್‌ಐಸಿ ತಂತ್ರಾಂಶ ಸುರಕ್ಷಿತವಾಗಿಲ್ಲ. ಅದನ್ನು ದುರ್ಬಳಕೆ ಮಾಡಿಕೊಂಡು ಮೂರು ರಾಜ್ಯಗಳಲ್ಲಿ ಪ್ರಮಾಣಪತ್ರ ನೀಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ತಂತ್ರಾಂಶವನ್ನು ಸುರಕ್ಷಿತಗೊಳಿಸಲು ಕೋರಲಾಗುವುದು' ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಮಹಾರಾಷ್ಟ್ರ, ಹರಿಯಾಣ, ಆಂಧ್ರ ಪ್ರದೇಶದಲ್ಲಿ ಹೊಗೆ ತಪಾಸಣೆ ಪ್ರಮಾಣಪತ್ರ ಇರುವ ಕರ್ನಾಟಕದ ವಾಹನಗಳನ್ನು ಮಾನ್ಯ ಮಾಡಬಾರದು. ಅವುಗಳನ್ನು ರಾಜ್ಯದಲ್ಲಿಯೇ ತಪಾಸಣೆಗೆ ಒಳಪಡಿಸಬೇಕು ಎಂದು ಎಲ್ಲ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಇದಲ್ಲದೇ ಆ ಮೂರು ರಾಜ್ಯಗಳ ಸಾರಿಗೆ ಇಲಾಖೆಗೆ ಪತ್ರ ಬರೆದು ದುರ್ಬಳಕೆಯ ಬಗ್ಗೆ ಗಮನಕ್ಕೆ ತರಲಾಗುವುದು ಎಂದರು.

ಏಡ್ಸ್ ಕಾರಣಕ್ಕೆ ವಿಚ್ಛೇದನ: ಆಧಾರರಹಿತ ಡಿಕ್ರಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್‌ಐವಿ ಕಾಯಿಲೆಯಿಂದ ಬಳಲುತ್ತಿರುವುದಾಗಿ ಪತ್ನಿ ಮತ್ತು ಆಕೆಯ ಕುಟುಂಬದವರು ನಿಂದಿಸಿದ್ದಾರೆ' ಎಂಬ ಆರೋಪವನ್ನು ಆಧರಿಸಿ ಪತಿಗೆ ಕೌಟುಂಬಿಕ ನ್ಯಾಯಾಲಯ ಮಂಜೂರು ಮಾಡಿದ್ದ ವಿಚ್ಛೇದನದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ವಿಚ್ಛೇದನ ಆದೇಶ ರದ್ದುಪಡಿಸುವಂತೆ ಕೋರಿ ಪತ್ನಿ (38) ಸಲ್ಲಿಸಿದ್ದ 'ಮಿಶ್ರ ಮೊದಲ ಮೇಲ್ಮನವಿ'ಯನ್ನು (ಎಂಎಫ್‌ಎ) ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ನೇತೃತ್ವದ ವಿಭಾಗೀಯ ನ್ಯಾಯಪೀಠ (ಕಲಬುರಗಿ), 'ದಾಖಲೆಯಲ್ಲಿರುವ ಇಂತಹ ಗಂಭೀರ ಆರೋಪವನ್ನು ಒಪ್ಪಲಾಗದು' ಎಂದು ಹೇಳಿದೆ.



'ಕ್ರೌರ್ಯವನ್ನು ಸಾಬೀತು ಪಡಿಸಲು ಸೂಕ್ತ ಮತ್ತು ಆಸಕ್ತಿ ದಾಯಕ ದಾಖಲೆ ಗಳನ್ನು ಪತಿ ವಿಚಾರಣಾ ನ್ಯಾಯಾಲಯಕ್ಕೆ ಒದಗಿಸಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ಈ ಕುರಿತಂತೆ ಬೀದರ್ ಪ್ರಧಾನ ಸಿವಿಲ್ ಸ್ಟೇಟ್ ಕೋರ್ಟ್ 2016ರ ಡಿಸೆಂಬರ್ 5ರಂದು ನೀಡಿರುವ ವಿಚ್ಛೇದನ ಡಿಕ್ರಿ ರದ್ದುಪಡಿಸಿದೆ. ಪತಿಯ ಪರ ಹೈಕೋರ್ಟ್ ವಕೀಲ ಹಣಮಂತರಾಯ ಸಿಂದೋಲೆ ವಾದ ಮಂಡಿಸಿದ್ದರು.

ಪ್ರಕರಣ: ಮೇಲ್ಮನವಿ ಸಲ್ಲಿಸಿರುವ ಪತ್ನಿ ಖಾಸಗಿ ಶಾಲೆಯಲ್ಲಿ ಪ್ರಾಂಶುಪಾಲೆ. ಪತಿ ಸಾಂಖ್ಯಿಕ ಇನ್ಸ್‌ಪೆಕ್ಟರ್. ದಂಪತಿ 2002ರ ಜೂನ್ 16ರಂದು ಮದುವೆಯಾಗಿದ್ದರು. ಇವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ.

'ನನ್ನ ಪತ್ನಿ ಇಬ್ಬರೂ ಪುತ್ರರೊಂದಿಗೆ ತವರು ಮನೆಗೆ ತೆರಳಿದ್ದಾಳೆ. ಹಲವು ಬಾರಿ ಕರೆದರೂ ಮರಳಿ ಬಂದಿಲ್ಲ. ಪತ್ನಿ ಮತ್ತು ಆಕೆಯ ಕುಟುಂಬದವರು ನಾನು ಎಚ್‌ಐವಿ ಕಾಯಿಲೆಯಿಂದ ಬಳಲುತ್ತಿದ್ದೇನೆ ಎಂದು ನಿಂದಿಸಿದ್ದಾರೆ. ಆದ್ದರಿಂದ, ಹಿಂದೂ ವಿವಾಹ ಕಾಯ್ದೆ–1955ರ ಅಡಿ ವಿಚ್ಛೇದನ ನೀಡಬೇಕು' ಎಂದು ಪತಿ ಕೋರಿದ್ದರು. ಇದನ್ನು ಬೀದರ್‌ನ ಕೌಟುಂಬಿಕ ನ್ಯಾಯಾಲಯ ಪುರಸ್ಕರಿಸಿತ್ತು. ಪತ್ನಿ ಈ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

'ಜಿಲ್ಲೆಗೊಂದು ಪಾರಂಪರಿಕ ಶಾಲೆ ಪ್ರಸ್ತಾವ'

ಚಾಮರಾಜನಗರ: 'ಶತಮಾನ ಕಂಡ ಶಾಲೆಗಳನ್ನು ಜಿಲ್ಲೆಗೆ ಒಂದರಂತೆ 31 ಶಾಲೆಗಳನ್ನು ಪಾರಂಪರಿಕ ಶಾಲೆಗಳಾಗಿ ಪರಿವರ್ತಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದರು.

ಕನ್ನಡ ಮಾಧ್ಯಮ ಶಾಲೆಗಳ ಉಳಿವು ಕುರಿತು ಇಲ್ಲಿ ನಡೆದ ಸಭೆಯಲ್ಲಿ ಅವರು, 'ಗಾಂಧೀಜಿ ಭೇಟಿ ನೀಡಿದ್ದ ಶಾಲೆ, ವಿಶ್ವೇಶ್ವರಯ್ಯ, ಕುವೆಂಪು ಓದಿದ ಶಾಲೆ, ಕನ್ನಡ ಭಾಷೆಯನ್ನು ಬೆಳೆಸಿದ ಮಹನೀಯರು, ವಿಜ್ಞಾನಿಗಳು ಓದಿದ ಶಾಲೆಗಳನ್ನು ಆಯ್ಕೆ ಮಾಡುವಂತೆ ಗಮನ ಸೆಳೆಯಲಾಗಿದೆ' ಎಂದರು.

'ರಾಜ್ಯದಲ್ಲಿ 290 ಭಾಷೆಗಳು ಬಳಕೆಯಲ್ಲಿವೆ. 27 ಭಾಷೆಗಳನ್ನು 15 ಸಾವಿರಕ್ಕೂ ಹೆಚ್ಚು ಜನ ಬಳಸುತ್ತಾರೆ. ಹಿಂದಿ ಭಾಷೆ ಕಲಿಕೆಗೆ ನೀಡುವ ಆದ್ಯತೆಯನ್ನು ಈ ಭಾಷೆಗಳ ಕಲಿಕೆಗೂ ನೀಡಬೇಕು. ಕರಾವಳಿ ಭಾಗದ ಕೆಲ ಶಾಲೆಗಳಲ್ಲಿ ಕೊರಗ, ತುಳು ಭಾಷೆ, ಕೊಡಗಿನ ಕೆಲ ಶಾಲೆಗಳಲ್ಲಿ ಕೊಡವ ಭಾಷೆ, ಹೀಗೆ ಆಯಾ ಪ್ರಾಂತ್ಯದ ಆಡುಭಾಷೆ ಕಲಿಕೆಗೆ ಆದ್ಯತೆ ನೀಡಿದರೆ ಬಹುದೊಡ್ಡ ಸಾಂಸ್ಕೃತಿಕ ಕ್ರಾಂತಿ ಮಾಡಬಹುದು' ಎಂದರು.

ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್ ಅಮಾನತು ವಾಪಸ್

ಬೆಂಗಳೂರು: 'ಪೊಲೀಸ್ ಇಲಾಖೆಯ ಕಚೇರಿಯಲ್ಲಿ ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ' ಎಂಬ ಆರೋಪದ ಮೇಲೆ ಐಪಿಎಸ್ ಅಧಿಕಾರಿ ಕೆ.ರಾಮಚಂದ್ರ ರಾವ್ ಅವರನ್ನು ಅಮಾನತುಗೊಳಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ಬುಧವಾರ ವಾಪಸ್ ಪಡೆದಿದೆ.



ಕೆ.ರಾಮಚಂದ್ರ ರಾವ್

ಅಮಾನತುಗೊಂಡಾಗ ರಾಮಚಂದ್ರ ರಾವ್, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಡಿಜಿಪಿ ಆಗಿದ್ದರು. ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೊ ಆಧರಿಸಿ, ಜ.19ರಂದು ಅಮಾನತು ಮಾಡಿ ಪ್ರಕರಣದ ತನಿಖೆಗೆ ಸರ್ಕಾರ ಆದೇಶಿಸಿತ್ತು.

ತಕ್ಷಣದಿಂದಲೇ ಜಾರಿಗೆ ಬರುವಂತೆ ರಾವ್ ಅವರಿಗೆ ಪೊಲೀಸ್ ಕೈಪಿಡಿ ವಿಭಾಗದ ಡಿಜಿಪಿ ಹುದ್ದೆ ನೀಡಲಾಗಿದೆ. ಇದನ್ನು ಸಿಐಡಿ ಡಿಜಿಪಿ ಹುದ್ದೆಗೆ ಸಮನಾಂತರ ಎಂದು ಪರಿಗಣಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ವಿಡಿಯೊ ಅಸಲಿ' ಎಂದಿದ್ದ ತನಿಖಾ ಸಮಿತಿ: ಪ್ರಕರಣದ ತನಿಖೆಗೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಆರ್.ಹಿತೇಂದ್ರ ನೇತೃತ್ವದಲ್ಲಿ ನಾಲ್ವರು ಐಪಿಎಸ್ ಅಧಿಕಾರಿಗಳ ಸಮಿತಿಯನ್ನು ಸರ್ಕಾರ ರಚಿಸಿತ್ತು. ಸಮಿತಿಯು ತನಿಖೆ ನಡೆಸಿ, 100 ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ವಿಡಿಯೊ 'ಅಸಲಿ' ಎಂದು ವರದಿಯಲ್ಲಿ ಉಲ್ಲೇಖಿಸಿತ್ತು.

'ವಿಡಿಯೊದಲ್ಲಿ ಯಾವುದೇ ಮಾರ್ಪಾಟು ಆಗಿಲ್ಲ' ಎಂದು ಎಫ್‌ಎಸ್‌ಎಲ್ ವರದಿಯಿಂದ ದೃಢಪಟ್ಟಿದೆ ಎಂಬುದಾಗಿಯೂ ತನಿಖಾ ಸಮಿತಿ ಹೇಳಿತ್ತು. ವಿಡಿಯೊ ಅಸಲಿಯೆಂದು ದೃಢಪಟ್ಟ ಬೆನ್ನಲ್ಲೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) ರಾಮಚಂದ್ರರಾವ್ ಅವರಿಗೆ ನೋಟಿಸ್ ಜಾರಿ ಮಾಡಿ ಇಲಾಖಾ ತನಿಖೆ ಆರಂಭಿಸಿತ್ತು.

'ಬಿಎಸ್‌ವೈ ಅಭಿಮಾನೋತ್ಸವದ ಮೇಲೆ ಫಲಿತಾಂಶ ಪರಿಣಾಮ ಬೀರದು'

'ಉಪಚುನಾವಣೆ ಸೋಲು: ಹತಾಶೆ ಇಲ್ಲ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಉಪ ಚುನಾವಣೆಯ ಫಲಿತಾಂಶವು ಇಲ್ಲಿ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಮೇಲೆ ಪರಿಣಾಮ ಬೀರುವುದಿಲ್ಲ. ಸೋಲಿನಿಂದ ನಾವು ಹತಾಶರಾಗಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಬುಧವಾರ ಇಲ್ಲಿ ಪ್ರತಿಪಾದಿಸಿದರು.

'ರಾಜ್ಯ ಸರ್ಕಾರ ಯಾವ ರೀತಿ ಚುನಾವಣೆ ಮಾಡಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಗ್ಯಾರಂಟಿ ಮೇಲೆ ವಿಶ್ವಾಸ ಇದ್ದರೆ ಮುಖ್ಯಮಂತ್ರಿಯವರು ಎರಡೂ ಕ್ಷೇತ್ರಗಳಲ್ಲಿ ಏಕೆ ಕುಳಿತುಕೊಳ್ಳ ಬೇಕಿತ್ತು' ಎಂದು ಪ್ರಶ್ನಿಸಿದರು.

'ಬಿಎಸ್‌ವೈ ಅಭಿಮಾನೋತ್ಸವಕ್ಕೆ ನಿರೀಕ್ಷೆ ಮೀರಿ ಜನ ಬೆಂಬಲ ವ್ಯಕ್ತವಾಗುತ್ತಿದೆ. ರಾಜ್ಯದ ವಿವಿಧೆಡೆಯಿಂದ 10 ಸಾವಿರಕ್ಕೂ ಹೆಚ್ಚು ಬಸ್‌ಗಳು ಬರಲಿವೆ. 50 ಸಾವಿರ ಕಾರುಗಳು, 5 ಸಾವಿರ ಇತರೆ ವಾಹನಗಳು ಬರಲಿದ್ದು, ಅಂದಾಜು 10 ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ' ಎಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ಎರಡು ಕೃತಿ ಬಿಡುಗಡೆ: 'ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಯಡಿಯೂರಪ್ಪ ಅವರಿಗೆ ಸಂಬಂಧಿಸಿದ 2 ಕೃತಿಗಳು ಬಿಡುಗಡೆಯಾಗಲಿವೆ. 50 ವರ್ಷಗಳ ಅವರ ರಾಜಕೀಯ ಹೋರಾಟ ಒಳಗೊಂಡ ಜೀವನ ಚರಿತ್ರೆ 'ಕೆಂದಾವರೆ–ಕಮಲ ಅರಳಿದ ಕಥೆ' ಕೃತಿಯನ್ನು ಆರ್. ರಘು (ಕೌಟಿಲ್ಯ) ನಿರೂಪಿಸಿದ್ದಾರೆ. ಯಡಿಯೂರಪ್ಪ ಅವರು ಸದನದಲ್ಲಿ ಮಾಡಿದ ಭಾಷಣಗಳ ಸಂಗ್ರಹ 'ಸದನ ಶಿಕಾರಿ– ಯಡಿಯೂರಪ್ಪನವರ ಗುಡುಗಿನ ನುಡಿಗಳು' ಕೃತಿ ಆರ್.ರಘು (ಕೌಟಿಲ್ಯ) ಪರಿಕಲ್ಪನೆಯಲ್ಲಿ ಮೂಡಿ ಬಂದಿದ್ದು, ರೇವಯ್ಯ ಒಡೆಯರ್ ಸಂಪಾದಿಸಿದ್ದಾರೆ. ಈ ಕೃತಿಗಳನ್ನು ಕೇಂದ್ರದ ಗೃಹ ಸಚಿವ ಅಮಿತ್ ಶಾ ಬಿಡುಗಡೆ ಮಾಡುವರು' ಎಂದು ಸಂಸದ ಗೋವಿಂದ ಕಾರಜೋಳ ಇದೇ ವೇಳೆ ತಿಳಿಸಿದರು.

'ಮೇ 8ರಂದು ಯಡಿಯೂರಪ್ಪ ಅವರು ಚಿತ್ರದುರ್ಗ ಪುರಪ್ರವೇಶ ಮಾಡಲಿದ್ದಾರೆ. 1,008 ಮಹಿಳೆಯರು ಪೂರ್ಣಕುಂಭ ಸ್ವಾಗತ ಕೋರಲಿದ್ದಾರೆ. 200 ಮಹಿಳೆಯರು ಒನಕೆ ಓಬವ್ವನ ಪಾತ್ರಧಾರಿಯಾಗಿ 'ನಾರಿ ಶಕ್ತಿ ವಂದನ್' ಕಾಯ್ದೆ ಬೆಂಬಲಿಸಿ ಗೌರವ ಸಲ್ಲಿಸಲಿದ್ದಾರೆ. ಮೆರವಣಿಗೆಯಲ್ಲಿ 25ಕ್ಕೂ ಹೆಚ್ಚು ಕಲಾ ತಂಡಗಳು ಭಾಗವಹಿಸಲಿವೆ' ಎಂದು ಅವರು ವಿವರಿಸಿದರು.



ಬಿ.ವೈ. ವಿಜಯೇಂದ್ರ ಮತ್ತು ಇತರೆ ಮುಖಂಡರು ಬುಧವಾರ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆಯನ್ನು ಪರಿಶೀಲಿಸಿದರು

ಅಮಿತ್ ಶಾ ಭೇಟಿ; ಸಮಯ ಬದಲಾವಣೆ

'ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಮೇ 9ರಂದು ಪಶ್ಚಿಮ ಬಂಗಾಳದ ನೂತನ ಮುಖ್ಯ ಮಂತ್ರಿ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಿರುವ ಕಾರಣ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮ ವೇಳಾಪಟ್ಟಿಯಲ್ಲಿ ಬದಲಾವಣೆ ಆಗಿದೆ. ಅಂದು ಬೆಳಿಗ್ಗೆ 11ರ ಬದಲಾಗಿ ಸಂಜೆ 4ಕ್ಕೆ ವೇದಿಕೆಗೆ ಬರಲಿದ್ದಾರೆ' ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

'ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ಕಾರ್ಯಕ್ರಮ ನಿಗದಿಯಾಗಿತ್ತು. ಅಮಿತ್ ಶಾ ಅವರು ಮಧ್ಯಾಹ್ನ 12.30ಕ್ಕೆ ಕೋಲ್ಕತ್ತದಿಂದ ಹೊರಟು, ಬೆಂಗಳೂರು ತಲುಪಿ, ಅಲ್ಲಿಂದ 3.45ಕ್ಕೆ ಚಿತ್ರದುರ್ಗ ಹೆಲಿಪ್ಯಾಡ್ ತಲುಪಲಿದ್ದಾರೆ. ಮಧ್ಯಾಹ್ನ 2ಕ್ಕೆ ಕಾರ್ಯಕ್ರಮ ಆರಂಭ ಗೊಳ್ಳಲಿದ್ದು, ಸಂಜೆ 5ರವರೆಗೂ ನಡೆಯಲಿದೆ' ಎಂದರು.

ಮೂವರು ಐಪಿಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಪಡೆಯ ಐಜಿಪಿ ಸಂದೀಪ್ ಪಾಟೀಲ್ ಅವರನ್ನು ಬೆಳಗಾವಿ ಉತ್ತರ ವಲಯದ ಐಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಉತ್ತರ ವಲಯ ಐಜಿಪಿಯಾಗಿದ್ದ ಚೇತನ್‌ಸಿಂಗ್ ರಾಠೋರ ಅವರನ್ನು ಸಿಐಡಿಯ ಆರ್ಥಿಕ ಅಪರಾಧಗಳ ವಿಭಾಗದ ಐಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ.

ಸ್ಥಳ ನಿರೀಕ್ಷಣೆಯಲ್ಲಿದ್ದ ಅನುಪಮ್ ಅಗ್ರವಾಲ್ ಅವರನ್ನು ಸಂದೀಪ್ ಪಾಟೀಲ್ ಅವರ ವರ್ಗಾವಣೆಯಿಂದ ತೆರವಾದ ಹಾಗೂ ಮೇಲ್ದರ್ಜೆಗೇರಿಸಲಾದ ಕೆಎಸ್‌ಆರ್‌ಪಿ ಪಡೆಯ ಐಜಿಪಿಯಾಗಿ ನೇಮಿಸಲಾಗಿದೆ.

ಖಾಸಗಿ ಕೋಟಾ: ಸೀಟು ಹಂಚಿಕೆಗೆ ಕೆಇಎ ಷರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಮೊದಲ ಸುತ್ತಿನ ಸೀಟು ಹಂಚಿಕೆಯ ನಂತರ ಕಾಲೇಜುಗಳು ಸಲ್ಲಿಸುವ ಖಾಸಗಿ ಕೋಟಾದ ಉಳಿಕೆ ಸೀಟುಗಳನ್ನು ಪರಿಗಣಿಸದಿರಲು ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಿರ್ಧರಿಸಿವೆ.

ಸಾಮಾನ್ಯ ಪ್ರವೇಶ ಪರೀಕ್ಷೆಯ ನಂತರ ವಿದ್ಯಾರ್ಥಿಗಳ ಅರ್ಹತಾ ಪಟ್ಟಿ ಆಧಾರದಲ್ಲಿ ಸೀಟು ಹಂಚಿಕೆಗೆ ಕೌನ್ಸೆಲಿಂಗ್ ಆರಂಭಿಸಲಾಗುತ್ತದೆ. ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ, ಬಿ-ಫಾರ್ಮ್, ಫಾರ್ಮ್–ಡಿ, ಯೋಗ ಮತ್ತು ನ್ಯಾಚುರೋಪಥಿ, ಅಲೈಡ್ ಹೆಲ್ತ್ ಸೈನ್ಸ್, ಆರ್ಕಿಟೆಕ್ಚರ್, ಬಿ.ಎಸ್‌ಸಿ ನರ್ಸಿಂಗ್, ಹೋಮಿಯೋಪಥಿ ಕೋರ್ಸ್‌ಗಳಿಗೆ ಸೀಟು ಹಂಚಿಕೆಗೂ ಮೊದಲು ಪ್ರತಿ ಕಾಲೇಜುಗಳೂ ನಿಗದಿಯಾದ ಒಟ್ಟು ಸೀಟುಗಳ ಸಂಖ್ಯೆಯನ್ನು (ಸೀಟ್ ಮ್ಯಾಟ್ರಿಕ್ಸ್) ಕೆಇಎಗೆ ಸಲ್ಲಿಸಬೇಕು.

ಖಾಸಗಿ ಕಾಲೇಜುಗಳಗೆ ಸೀಟು ಹಂಚಿಕೆ ಮಾಡುವಾಗ ಸರ್ಕಾರಿ ಕೋಟಾದ ಸೀಟುಗಳನ್ನು ಮಾತ್ರ ಕೆಇಎ ಪರಿಗಣಿಸುತ್ತದೆ. ಖಾಸಗಿ ಕೋಟಾದ ಸೀಟುಗಳಲ್ಲಿ ಕೆಲ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶ ಕಡಿಮೆಯಾದಾಗ ಅಂತಹ ಸೀಟುಗಳನ್ನು ಕೌನ್ಸೆಲಿಂಗ್ ಮೂಲಕ ಭರ್ತಿ ಮಾಡಲು ಕೆಇಎಗೆ ಮನವಿ ಸಲ್ಲಿಸಲಾಗುತ್ತದೆ ಉಳಿಕೆಯಾದ ಖಾಸಗಿ ಕೋಟಾ ಸೀಟುಗಳನ್ನು 2026–27ನೇ ಸಾಲಿನಿಂದ ಎರಡನೇ ಮತ್ತು ಮೂರನೇ ಸುತ್ತಿಗೆ ತೆಗೆದುಕೊಳ್ಳುತ್ತಿಲ್ಲ.

ಮೊದಲ ಸುತ್ತಿನ ಸೀಟು ಹಂಚಿಕೆಯ ನಂತರ ಖಾಸಗಿ ಕೋಟಾದ ಸೀಟುಗಳನ್ನು ಹಂಚಿಕೆಗೆ ತೆಗೆದುಕೊಂಡರೆ ಮೊದಲ ಸುತ್ತಿನಲ್ಲಿ ಸೀಟು ಪಡೆದ ವಿದ್ಯಾರ್ಥಿಗಳು ಪ್ರವೇಶ ಪಡೆಯದೇ ಕಾದು ನೋಡುವ ತಂತ್ರ ಅನುಸರಿಸುತ್ತಾರೆ. ಇದರಿಂದ ಇತರೆ ವಿದ್ಯಾರ್ಥಿಗಳಿಗೂ ಅಡ್ಡಿಯಾಗುತ್ತದೆ. ಕೌನ್ಸೆಲಿಂಗ್ ಪ್ರಕ್ರಿಯೆಗೂ ವ್ಯತ್ಯಯವಾಗುತ್ತದೆ ಎನ್ನುವ ಕಾರಣಕ್ಕೆ ಇಂತಹ ನಿರ್ಧಾರಕ್ಕೆ ಬರಲಾಗಿದೆ ಎಂದು ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

'ಕಳೆದ ವರ್ಷ 15,000ಕ್ಕೂ ಹೆಚ್ಚು ಸೀಟುಗಳನ್ನು ಮೊದಲ ಸುತ್ತಿನ ನಂತರ ನೀಡಲಾಗಿತ್ತು. ಇದು ಕೌನ್ಸೆಲಿಂಗ್ ವಿಳಂಬಕ್ಕೂ ಕಾರಣವಾಗಿತ್ತು. ಅಗತ್ಯವಿದ್ದರೆ ಖಾಸಗಿ ಕೋಟಾದ ಸೀಟುಗಳನ್ನು ಮೊದಲ ಸುತ್ತಿಗೂ ಮೊದಲೇ ನೀಡಬೇಕು ಎಂಬ ನಿಯಮ ಸರ್ಕಾರ–ಖಾಸಗಿ ಕಾಲೇಜುಗಳ ನಡುವಿನ ಒಪ್ಪಂದದಲ್ಲೇ ಇದೆ. ಆದರೆ, ಕಟ್ಟುನಿಟ್ಟಾಗಿ ಅನುಸರಿಸುತ್ತಿರಲಿಲ್ಲ. ಈ ವರ್ಷದಿಂದ ಜಾರಿಗೆ ತರಲಾಗುತ್ತಿದೆ' ಎಂದು ಕೆಇಎ ಹೇಳಿದೆ.

ತೆಲಂಗಾಣ: ನಾಲ್ವರು ರೈತರ ಸಾವು

ಕರೀಮ್‌ನಗರ (ತೆಲಂಗಾಣ): ಇಲ್ಲಿನ ಮಂಚೇರಿಯಲ್ ಜಿಲ್ಲೆಯ ಎರಡು ಗ್ರಾಮಗಳಲ್ಲಿ ಸಂಭವಿಸಿದ ಚಾವಣಿ ಮತ್ತು ಗೋಡೆ ಕುಸಿತದಿಂದಾಗಿ ನಾಲ್ವರು ರೈತರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ಕೊಥೂರು ಗ್ರಾಮದಲ್ಲಿ ಸುರಿದ ಭಾರಿ ಮಳೆ ಮತ್ತು ಬಿರುಗಾಳಿಯ ಕಾರಣಕ್ಕೆ ರೈತರು ಶೆಡ್‌ನಲ್ಲಿ ಆಶ್ರಯ ಪಡೆಯುತ್ತಿದ್ದ ವೇಳೆ ಅವಘಡ ಸಂಭವಿಸಿದೆ. ಇಬ್ಬರು ರೈತರು ಮೃತಪಟ್ಟಿದ್ದಾರೆ.

ಗಂಪಲಪಳ್ಳಿ ಗ್ರಾಮದಲ್ಲಿ ಕಟ್ಟಡವೊಂದು ಕುಸಿದು ಇಬ್ಬರು ಮೃತಪಟ್ಟಿದ್ದಾರೆ. ಗಾಯಗೊಂಡ ಮೂವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಿಧನ ವಾರ್ತೆ

ಜಗದೀಶ್ ಹಿರೇಮನಿ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಮಾಜಿ ಕಾರ್ಯದರ್ಶಿ ಜಗದೀಶ್ ಹಿರೇಮನಿ (52) ಅವರು ಬುಧವಾರ ಬೆಳಿಗ್ಗೆ ನಿಧನರಾದರು.



ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರು ತೀವ್ರ ಹೃದಯಾಘಾತಕ್ಕೆ ಒಳಗಾಗಿ ಕೊನೆಯುಸಿರೆಳೆದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ. ಅವರ ಹುಟ್ಟೂರಾದ ಬಾಗಲಕೋಟೆಯಲ್ಲಿ ಅಂತ್ಯಸಂಸ್ಕಾರ ಗುರುವಾರ ನಡೆಯಲಿದೆ.

ಜಗದೀಶ್ ಹಿರೇಮನಿ ಎಬಿವಿಪಿ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿದ್ದರು. ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿಯೂ ಕೆಲಸ ಮಾಡಿದ್ದರು. ಬಿಜೆಪಿ ಪ್ರಶಿಕ್ಷಣ ವಿಭಾಗದ ಸಂಚಾಲಕ ತಂಡದಲ್ಲಿದ್ದರು.


ಚಿತ್ರತಂಡ

‘ಮೃತ್ಯುದೇವತೆ’ಯಲ್ಲಿ ಹೆಣ್ಣಿನ ಕಥೆ

ಮಹಿಳಾ ಪ್ರಧಾನ ಕಥೆ ಹೊಂದಿರುವ ‘ಮೃತ್ಯುದೇವತೆ’ ಚಿತ್ರದ ‘ದೇವಿ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನವೀನ್ ಮಹದೇವ್ ನಿರ್ದೇಶನದ ಚಿತ್ರ ಸೆನ್ಸಾರ್ ಹಂತದಲ್ಲಿದೆ. ನಿರ್ದೇಶಕ ಓಂ ಸಾಯಿಪ್ರಕಾಶ್ ಚಿತ್ರದ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

‘ಸಮಾಜದಲ್ಲಿ ಪ್ರತಿನಿತ್ಯ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ ಪ್ರಕರಣಗಳ ಕುರಿತಾದ ಕಥೆಯಿದು. ಹೀಗೆ ಸಂಕಷ್ಟಕ್ಕೆ ಸಿಲುಕಿದ ಮೂರು ಹೆಣ್ಣು ಮಕ್ಕಳು, ಹೇಗೆ ಕಷ್ಟದಿಂದ ಪಾರಾಗಿ ಬರುತ್ತಾರೆ ಎಂಬುದೇ ಚಿತ್ರಕಥೆ. ಹೆಣ್ಣುಮಕ್ಕಳು ಅದೆಷ್ಟೇ ಚತುರರಾಗಿದ್ದರೂ, ದುಷ್ಟರು ಅವರನ್ನು ಹೇಗೆಲ್ಲ ಸಂಕಷ್ಟಕ್ಕೆ ಸಿಲುಕಿಸುತ್ತಾರೆ, ಹೆಣ್ಣಿನ ಸಹನೆಯ ಕಟ್ಟೆ ಒಡೆದಾಗ ಏನಾಗುತ್ತದೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ. ಸ್ವಲ್ಪ ಹಾರರ್ ಸ್ವರೂಪದಲ್ಲಿದೆ. ಮೇ.22ಕ್ಕೆ ಚಿತ್ರ ತೆರೆಗೆ ತರುವ ಆಲೋಚನೆಯಿದೆ’ ಎಂದರು ನಿರ್ದೇಶಕ.

ವಿನಯಾ ಪ್ರಕಾಶ್, ಹಿಮಶ್ರೀ, ಸಾರಿಕಾ ರಾವ್ ಹಾಗೂ ಡಯಾನಾ ಪ್ರಮುಖ ಪಾತ್ರಗಳಲ್ಲಿದ್ದಾರೆ. ನವೀನ್ ಮಹದೇವ್ ಕೂಡ ಒಂದು ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವರ್ಷಿತಾ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಸರಸ್ವತಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಅನಿರುದ್ಧ ಛಾಯಾಚಿತ್ರಗ್ರಹಣ, ಶಿವಪ್ರಸಾದ್ ಸಂಗೀತ ನಿರ್ದೇಶನ, ಮಂಜು ವಿಕ್ರಂ ಸಂಕಲನ ಚಿತ್ರಕ್ಕಿದೆ.


ಕಂಗನಾ

ಜೂನ್ 12ಕ್ಕೆ ಭಾರತ ಭಾಗ್ಯ ವಿಧಾತ

ಕಂಗನಾ ರನಾವತ್ ನಟನೆಯ ‘ಭಾರತ ಭಾಗ್ಯ ವಿಧಾತ’ ಸಿನಿಮಾ ಜೂನ್ 12ರಂದು ತೆರೆಕಾಣಲಿದೆ ಎಂದು ಚಿತ್ರತಂಡ ತಿಳಿಸಿದೆ.

ಚಿತ್ರದ ಕಥೆಯು ನೈಜ ಘಟನೆಗಳನ್ನು ಆಧರಿಸಿದೆ. 2008ರಲ್ಲಿ ಮುಂಬೈನ ಮೇಲೆ ನಡೆದ ಉಗ್ರರ ದಾಳಿ ಸಂದರ್ಭದಲ್ಲಿ 400ಕ್ಕೂ ಅಧಿಕ ಜನರ ಜೀವ ಉಳಿಸಿದ ಆಸ್ಪತ್ರೆಯೊಂದರ ಸಿಬ್ಬಂದಿ ಕುರಿತಾದ ಕಥೆ ಇದರಲ್ಲಿದೆ. ಸಿನಿಮಾವನ್ನು ಮನೋಜ್ ತಪಾಡಿಯಾ ನಿರ್ದೇಶಿಸಿದ್ದಾರೆ. ಕಥೆಯನ್ನು ಮನೋಜ್ ಅವರೇ ಬರೆದಿದ್ದಾರೆ. ‘ಇದು ನಿಜವಾದ ದೇಶಭಕ್ತಿಯ ಸಿನಿಮಾ. ಇಂತಹ ಕಥೆಯ ಭಾಗವಾದ ಹೆಮ್ಮೆ ನನಗಿದೆ’ ಎಂದಿದ್ದಾರೆ ಕಂಗನಾ.

ಪೆನ್ ಸ್ಟುಡಿಯೊಸ್ ಬ್ಯಾನರ್‌ನಡಿ ಜಯಂತಿಲಾಲ್ ಗಡ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಮಣಿಕರ್ಣಿಕಾ ಫಿಲ್ಮ್ಸ್, ಪರಮಹಂಸ್ ಕ್ರಿಯೇಷನ್ಸ್ ನಿರ್ಮಾಣದಲ್ಲಿ ಕೈಜೋಡಿಸಿದೆ. ‘ಈ ಸಿನಿಮಾ ತನ್ನ ಜನರ ಮೂಲಕ ದೇಶದ ಆತ್ಮವನ್ನು ಪ್ರತಿಬಿಂಬಿಸಿದೆ. ದೇಶದೊಳಗಿನ ಸದೃಢವಾದ ನಾರಿಶಕ್ತಿಯನ್ನು ಚಿತ್ರವು ತೋರಿಸಿದೆ’ ಎಂದಿದ್ದಾರೆ ಜಯಂತಿಲಾಲ್. ಗಿರಿಜಾ ಓಕ್, ಸ್ಮಿತ ತಂಬೆ, ಅಮೃತ ನಾಮ್‌ದೇವ್, ಇಶಾ ಡೇ, ಪ್ರಿಯಾ ಬೆರ್ಡೆ, ಆಶಾ ಶೆಲ್ಲರ್, ಸುಹಿತ ಥಾಟ್ಟೆ ಮುಂತಾದವರು ತಾರಾಬಳಗದಲ್ಲಿದ್ದಾರೆ.


ರಾಗಿಣಿ

‘ಮದನಿಕ’ಳಾದ ರಾಗಿಣಿ ದ್ವಿವೇದಿ

ರಾಗಿಣಿ ದ್ವಿವೇದಿ ನಾಯಕಿಯಾಗಿ ನಟಿಸಿರುವ ‘ಮದನಿಕ’ ಚಿತ್ರ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಬಿ.ಎಸ್. ಸಂಜಯ್ ನಿರ್ದೇಶನದ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

‘400 ವರ್ಷಗಳ ಹಿಂದಿನ ಕಥೆ. ರಾಗಿಣಿ ಮದನಿಕ ಆಗಿ ಅಭಿನಯಿಸಿದ್ದಾರೆ. ಆಕರ್ಷಕ, ಸುಂದರ ಹುಡುಗಿಯ ಪಾತ್ರವಿದು. ಈ ಕಥೆ ಮಾಡುವಾಗ ನನಗೆ ಅರಿವಿಲ್ಲದಂತೆ ಒಂದಷ್ಟು ಘಟನೆಗಳು ನಡೆದವು. ಅವುಗಳನ್ನಿಟ್ಟುಕೊಂಡು ಕಥೆಯನ್ನು ಇನ್ನಷ್ಟು ಗಟ್ಟಿಗೊಳಿಸಿದೆ. ಸಿನಿಮಾದಲ್ಲಿ ಹತ್ತು ಹಾಡುಗಳಿವೆ. ಸದ್ಯ ಚಿತ್ರ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ’ ಎಂದು ಮಾಹಿತಿ ನೀಡಿದರು ನಿರ್ದೇಶಕ.

‘ಚಿತ್ರದ ಬಗ್ಗೆ ಸಾಕಷ್ಟು ಕುತೂಹಲವಿದೆ. ಎರಡೂವರೆ ವರ್ಷಗಳ ಪಯಣವಿದು. ಕಥೆ ತುಂಬಾ ಚೆನ್ನಾಗಿದೆ. ಈ ಅವಧಿಯಲ್ಲಿ ಸಿನಿಮಾ ತಂತ್ರಜ್ಞಾನ ಸಾಕಷ್ಟು ಬದಲಾಗಿದೆ. ಆದರೆ ಭಾವನೆಗಳು ಬದಲಾಗಿಲ್ಲ. ಭಾವುಕ ಪ್ರಪಂಚಕ್ಕೆ ಕರೆದುಕೊಂಡು ಹೋಗುವ ಸಿನಿಮಾ’ ಎಂದರು ರಾಗಿಣಿ.

ಸಲಾಂ ಕೇರಳ ಸಂಗೀತ, ಆರ್. ಗಿರಿ ಛಾಯಾಚಿತ್ರಗ್ರಹಣವಿದೆ. ಸುಜಾತ ಲಕ್ಷ್ಮಿ ಹಾಗೂ ಕುಮಾರಸ್ವಾಮಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಧರ್ಮ ಕೀರ್ತಿರಾಜ್, ಹರೀಶ್ ರಾಜ್, ಅಶ್ವಿನ್, ರಾಜ್ವಿ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ.

ಮೇ 22ರಂದು ‘ಮಕ್ಕಳ ಸೈನ್ಯ’ ತೆರೆಗೆ

ಎಸ್.ಕೆ. ಸುನೀಲ್ ಕುಮಾರ್ ಚೊಚ್ಚಲ ನಿರ್ದೇಶನದ ‘ಮಕ್ಕಳ ಸೈನ್ಯ’ ಚಿತ್ರ ಮೇ 22ರಂದು ತೆರೆಗೆ ಬರಲಿದೆ.

‘ಸಿಂಹದ ಮರಿ ಸೈನ್ಯ’ ಚಿತ್ರದ ರೀತಿಯ ಕಥೆ ಈ ಚಿತ್ರದಲ್ಲಿದೆ. ಸ್ನೇಹ, ಸಾಹಸ, ತಂದೆ - ಮಗಳ ಬಾಂಧವ್ಯ ಹಾಗೂ ಸನಾತನ ಸಂಸ್ಕೃತಿ ಕುರಿತಾದ ಕಥೆಯಿದೆ. ನಾನೇ ಚಿತ್ರಕಥೆ, ಸಂಭಾಷಣೆ ಬರೆದಿರುವೆ. ಮಂಡ್ಯ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ದೊಡ್ಡರಂಗೇಗೌಡ ಅವರ ಸಾಹಿತ್ಯವಿದೆ. ಸನ್ನಿರಾಜ್ ಸಂಗೀತ ನೀಡಿದ್ದಾರೆ. ಕಮರ್ಷಿಯಲ್ ಚಿತ್ರದಲ್ಲಿನ ಎಲ್ಲ ಅಂಶಗಳೂ ಈ ಚಿತ್ರದಲ್ಲಿದೆ. ಮುನಿಸ್ವಾಮಿ ಅವರು ನಿರ್ಮಾಣ ಮಾಡಿದ್ದಾರೆ’ ಎಂದರು ನಿರ್ದೇಶಕ. ಮಹಾಲಕ್ಷ್ಮಿ, ಗಗನ, ಸೋನಾಕ್ಷಿ, ಶಶಾಂಕ್, ರಾಬರ್ಟ್, ರುದ್ರಪ್ಪ ಮುಂತಾದವರು ಚಿತ್ರದಲ್ಲಿದ್ದಾರೆ.

ಜೀ5ನಲ್ಲಿ ‘ಲವ್ ಮಾಕ್ಟೇಲ್–3’

ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶಿಸಿರುವ ‘ಲವ್ ಮಾಕ್ಟೇಲ್–3’ ಸಿನಿಮಾ ಚಿತ್ರಮಂದಿರಗಳಲ್ಲಿ ಯಶಸ್ವಿ ಪ್ರದರ್ಶನ ಕಂಡು ಒಟಿಟಿಗೆ ಲಗ್ಗೆ ಇಡಲಿದೆ.

ಮೇ 8ರಿಂದ ಸಿನಿಮಾ ಜೀ5ನಲ್ಲಿ ಸ್ಟ್ರೀಮ್ ಆಗಲಿದೆ. ಇದು ‘ಲವ್ ಮಾಕ್ಟೇಲ್’ ಸರಣಿ ಚಿತ್ರಗಳ ಕೊನೆಯ ಚಿತ್ರವಾಗಿದೆ ಎಂದಿದೆ ಚಿತ್ರತಂಡ. ಸಿನಿಮಾದ ಕಥೆಯನ್ನು ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್ ಹಾಗೂ ಯದುನಂದನ್ ಬರೆದಿದ್ದಾರೆ. ಚಿತ್ರವನ್ನು ಕ್ರಿಸ್ಮಿ ಫಿಲಂಸ್ ಲಾಂಛನದಲ್ಲಿ ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ನಿರ್ಮಾಣ ಮಾಡಿದ್ದಾರೆ. ಈ ಕಥೆಯು ಆದಿತ್ಯ (ಡಾರ್ಲಿಂಗ್ ಕೃಷ್ಣ) ಹಾಗೂ ನಿಧಿ(ಸಂವೃತಾ) ಸುತ್ತ ಸುತ್ತುತ್ತದೆ. ದತ್ತು ಪಡೆದ ಮಗುವನ್ನು ಆಕೆಯ ನಿಜವಾದ ಅಜ್ಜಿ ಬಂದು ಹಿಂದಿರುಗಿಸಲು ಒತ್ತಾಯಿಸಿದಾಗ ಕಥೆಯು ತೆರೆದುಕೊಳ್ಳುತ್ತದೆ. ಚಿತ್ರದಲ್ಲಿ ಅಮೃತಾ ಐಯ್ಯಂಗಾರ್, ದಿಲೀಪ್ ರಾಜ್, ಶ್ವೇತಾ ಪ್ರಸಾದ್ ಮುಂತಾದವರು ನಟಿಸಿದ್ದಾರೆ.



ಯುಡಿಎಫ್ ಗೆಲುವಿನ ಹಿಂದೆ ‘ಕೈ’ ವಾರ್ ರೂಮ್

ಪ್ರಚಾರ ಕಾರ್ಯಕ್ಕೆ ರಮೇಶ್ ಕುಮಾರ್ ಪುತ್ರ ಹರ್ಷ ಕನಡಂ ನೇತೃತ್ವ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ವಿಧಾನಸಭಾ ಚುನಾವಣೆಯಲ್ಲಿ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್(ಯುಡಿಎಫ್) 102 ಸ್ಥಾನಗಳೊಂದಿಗೆ ಐತಿಹಾಸಿಕ ಗೆಲುವು ದಾಖಲಿಸಿರುವುದರ ಹಿಂದೆ ರಾಜ್ಯ ಕಾಂಗ್ರೆಸ್‌ನ ‘ವಾರ್ ರೂಮ್’ನ ಪಾತ್ರ ಪ್ರಮುಖವಾಗಿದೆ.

ಸಾಮಾಜಿಕ ಮಾಧ್ಯಮದ ಮೂಲಕ ಪಕ್ಷದ ಕಾರ್ಯಕರ್ತರನ್ನು ತಳಮಟ್ಟದವರೆಗೆ ಸಕ್ರಿಯವಾಗಿಟ್ಟಿದ್ದ ಈ ‘ವಾರ್ ರೂಮ್’ ನೇತೃತ್ವವಹಿಸಿದ್ದವರು ಕರ್ನಾಟಕ ವಿಧಾನಸಭೆಯ ಮಾಜಿ ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ಅವರ ಪುತ್ರ ಹರ್ಷ ಕನಡಂ.

ಚುನಾವಣೆ ಆರಂಭಕ್ಕೂ ಮುಂಚಿತವಾಗಿ ಈ ವಾರ್ ರೂಮ್ ಸಕ್ರಿಯವಾಗಿತ್ತು. ರಾಜ್ಯಮಟ್ಟದ ನಾಯಕರಿಂದ ಹಿಡಿದು ತಳಮಟ್ಟದ ಕಾರ್ಯಕರ್ತರವರೆಗೆ ನಿರಂತರ ಸಂವಹನ ಸಾಧಿಸುವುದು, ಮಾಧ್ಯಮಗಳಿಗೆ ಅಗತ್ಯ ಪ್ರಚಾರ ಸಾಮಗ್ರಿ ಸಿದ್ಧಪಡಿಸುವುದು, ವಿರೋಧ ಪಕ್ಷಗಳ ಹೇಳಿಕೆಗಳಿಗೆ ಪ್ರತಿಕ್ರಿಯೆಗಳನ್ನು ತಯಾರಿಸುವುದು, ಪಕ್ಷದ ನಾಯಕರು ನೀಡುವ ಸಂದೇಶವನ್ನು ತಳಮಟ್ಟದ


ಸಾಂದರ್ಭಿಕ ಚಿತ್ರ

ಕಾರ್ಯಕರ್ತರಿಗೆ, ಮತದಾರರಿಗೆ ಪರಿಣಾಮಕಾರಿಯಾಗಿ ತಲುಪಿಸುವುದು ‘ವಾರ್‌ರೂಮ್’ನ ಪ್ರಮುಖ ಉದ್ದೇಶಗಳಾಗಿದ್ದವು.

55 ಸದಸ್ಯರಿದ್ದ ಈ ವಾರ್ ರೂಮ್‌ನಲ್ಲಿ ಹೆಚ್ಚಿನವರು ಮಹಿಳೆಯರು. ಇವರೊಂದಿಗೆ ಅನೇಕ ಸಂಸ್ಥೆಗಳು ಮತ್ತು ಸ್ವಯಂಸೇವಕರೂ ಸಹ ವಿಷಯಗಳನ್ನು ಸಿದ್ಧಪಡಿಸಿಕೊಡುತ್ತಿದ್ದರು.

'ಸಾಮಾಜಿಕ ಮಾಧ್ಯಮಗಳ ಮೂಲಕ ಮಾನವ -ಪ್ರಾಣಿ ಸಂಘರ್ಷ, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಅವರ ಕುಟುಂಬದ ವಿರುದ್ಧದ ಆರೋಪಗಳು, ವಿವಿಧ ಇಲಾಖೆಗಳಲ್ಲಿನ ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗದಂತಹ ವಿಷಯಗಳಿಗೆ ಪ್ರಚಾರ ನೀಡಲಾಯಿತು. ಇವೆಲ್ಲವುಗಳಿಗಿಂತ ಶಬರಿಮಲೆ ಅಯ್ಯಪ್ಪ ದೇವಾಲಯದ ಚಿನ್ನದ ದರೋಡೆಗೆ ಸಂಬಂಧಿಸಿದ ವಿಷಯಗಳು ಸಾಮಾಜಿಕ ಮಾಧ್ಯಮ ಪ್ರಚಾರಗಳಲ್ಲಿ ಹೆಚ್ಚು ಪ್ರಾಬಲ್ಯ ಮೆರೆದವು’ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ವಾರ್ ರೂಮ್ ಉಪಾಧ್ಯಕ್ಷ ಪಿ.ಎಂ.ನಿಯಾಸ್ ಹೇಳಿದರು.

ಕೇರಳದಲ್ಲಿ ನಡೆದ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತಪಟ್ಟಿಯಿಂದ ದೊಡ್ಡ ಪ್ರಮಾಣದಲ್ಲಿ ಹೆಸರುಗಳು ಅಳಿಸಿ ಹೋಗದಂತೆ ತಡೆಯುವಲ್ಲಿ ವಾರ್ ರೂಮ್ ನೆರವಾಯಿತು’ ಎಂದು ನಿಯಾಸ್ ಹೇಳಿದರು.

‘ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪ್ರತಿ ಪ್ರಕರಣದ ಪ್ರಕ್ರಿಯೆಯನ್ನೂ ಪರಿಶೀಲಿಸುತ್ತಿದ್ದೆವು. ನೈಜ ಮತದಾರರು ಹೊರಗುಳಿಯದಂತೆ ನೋಡಿಕೊಳ್ಳಲು ಬೂತ್ ಮಟ್ಟದ ಏಜೆಂಟ್ ಮತ್ತು ಕಾರ್ಯಕರ್ತರನ್ನು ಎಚ್ಚರಿಸುತ್ತಿದ್ದವು. ಸ್ಥಳೀಯ ಮಟ್ಟದ ನಾಯಕರಿಂದ ಪಡೆದ ಮಾಹಿತಿಗಳನ್ನು ಪಡೆದು ಪರಿಶೀಲಿಸುವ ಕಾರ್ಯವಿಧಾನವನ್ನೂ ಜಾರಿಗೆ ತಂದಿದ್ದೆವು’ ಎಂದು ಅವರು ವಿವರಿಸಿದರು.

ವಿಷ್ಣುನಾಥ್ ತುಮರಿ ಅಳಿಯ - 4ನೇ ಬಾರಿ ಶಾಸಕ

ಸಾಗರ (ಶಿವಮೊಗ್ಗ): ತಾಲ್ಲೂಕಿನ ತುಮರಿ ಗ್ರಾಮದ ಸಾಹಿತಿ ಹಾ.ಮ. ಭಟ್ಟ ಅವರ ಪುತ್ರಿ, ಕವಯತ್ರಿ ಹಾ.ಮ. ಕನಕ ಅವರ ಪತಿ ಪಿ.ಸಿ. ವಿಷ್ಣುನಾಥ್ (48) ಕೇರಳಂ ವಿಧಾನಸಭೆಗೆ ಕಾಂಗ್ರೆಸ್ ಪಕ್ಷದಿಂದ 4ನೇ ಬಾರಿ ಆಯ್ಕೆಯಾಗಿದ್ದಾರೆ.

ವಿಶ್ವನಾಥ್ ಅವರು ಕೊಲ್ಲಂ ಜಿಲ್ಲೆಯ ಕುಂದರ ಕ್ಷೇತ್ರದಿಂದ ಸಮೀಪದ ಪ್ರತಿಸ್ಪರ್ಧಿ ಸಿಪಿಐನ ಎಸ್. ಎಲ್. ಸಜಿಕುಮಾರ್ ವಿರುದ್ಧ 32,564 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಎಐಸಿಸಿ ಕಾರ್ಯದರ್ಶಿಯಾಗಿರುವ ವಿಷ್ಣುನಾಥ್, ಚುನಾವಣೆ ವೇಳೆ ಕಾಂಗ್ರೆಸ್‌ನ ಕೇರಳಂ ರಾಜ್ಯ ಘಟಕದ ಕಾರ್ಯಾಧ್ಯಕ್ಷರಾಗಿದ್ದರು. ತಮ್ಮ 28ನೇ ವಯಸ್ಸಿನಲ್ಲಿ ಕೇರಳಂ ಯುವ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದಾಗ ಅವರು 2006ರ ಚುನಾವಣೆಯಲ್ಲಿ ಮೊದಲ ಬಾರಿಗೆ ಚೆಂಗನೂರು ಕ್ಷೇತ್ರದಿಂದ ಸ್ಪರ್ಧಿಸಿ ಜಯಿಸಿದ್ದರು. ಈ ಕಾರಣಕ್ಕೆ ಕೇರಳದ ರಾಜಕಾರಣದಲ್ಲಿ ‘ಬೇಬಿ ಎಂಎಲ್‌ಎ’ ಎಂದೇ ಅವರು ಪರಿಚಿತರಾಗಿದ್ದಾರೆ.

ಕ್ಷೇತ್ರದಿಂದ ಸತತ ಎರಡು ಬಾರಿ ಆಯ್ಕೆಯಾಗಿದ್ದ ಅವರು, 2016ರಲ್ಲಿ ಸೋಲು ಅನುಭವಿಸಿದ್ದರು. 2021ರಲ್ಲಿ ಕ್ಷೇತ್ರ ಬದಲಿಸಿ, ಕುಂದರ ಕ್ಷೇತ್ರದಿಂದ ಗೆದ್ದಿದ್ದರು. ಈ ಬಾರಿ ಕಾಂಗ್ರೆಸ್ ನೇತೃತ್ವದ


ಪಿ.ಸಿ. ವಿಷ್ಣುನಾಥ್ ಅವರನ್ನು ಪತ್ನಿ ಹಾ.ಮ. ಕನಕ ಅಭಿನಂದಿಸಿದರು

ಯುಡಿಎಫ್ ಮೈತ್ರಿಕೂಟ ಅಧಿಕಾರಕ್ಕೆ ಬಂದಿದ್ದರಿಂದ ಸಚಿವ ಸಂಪುಟದಲ್ಲಿ ಸ್ಥಾನ ದೊರೆಯುವ ವಿಶ್ವಾಸ ಹೊಂದಿದ್ದಾರೆ.

ತಂದೆಯ ಸ್ಮರಣಾರ್ಥ ಪ್ರತಿ ವರ್ಷ ಹಾ.ಮ. ಭಟ್ಟರ ಪುತ್ರ ರಘು ಹಲ್ಕರೆ ಮತ್ತು ಕುಟುಂಬದವರು ತುಮರಿಯಲ್ಲಿ ಸಾಹಿತ್ಯೋತ್ಸವ ಸಂಘಟಿಸುತ್ತಾರೆ. ಕಳೆದ ವರ್ಷ ನಡೆದಿದ್ದ ಉತ್ಸವದಲ್ಲಿ ವಿಷ್ಣುನಾಥ್ ಭಾಗವಹಿಸಿದ್ದರು.

‘2005ರಲ್ಲಿ ಗಾಂಧಿ ಪ್ರತಿಷ್ಠಾನ ಗುಜರಾತ್‌ನಲ್ಲಿ ಆಯೋಜಿಸಿದ್ದ ಗಾಂಧೀಜಿಯವರ ದಂಡಿ ಯಾತ್ರೆಯ 75ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ನಾನು ಮೊದಲ ಬಾರಿಗೆ ವಿಷ್ಣುನಾಥ್ ಅವರನ್ನು ಭೇಟಿಯಾದೆ. ಪರಿಚಯ ಪ್ರೇಮಕ್ಕೆ ತಿರುಗಿ 2007ರಲ್ಲಿ ನಾವು ಕೇರಳದ ಗುರುವಾಯೂರಿನಲ್ಲಿ ಮದುವೆಯಾದೆವು’ ಎಂದು ಹಾ.ಮ.ಕನಕ ‘ಪ್ರಜಾವಾಣಿ’ ಎದುರು ನೆನಪು ಮಾಡಿಕೊಂಡರು.

‘ನಿನ್ನೆಲ್ಲ ಬಯಕೆಗಳನ್ನು ಬದಿಗಿಡುವುದಾದರೆ ಮದುವೆಯಾಗಬಹುದು’ ಎಂದು ವಿಷ್ಣು ಮದುವೆಗೆ ಮುನ್ನ ನನಗೆ ಹೇಳಿದ್ದರು. ಇಂದಿಗೂ ಕೇರಳಂನಲ್ಲಿ ಬಾಡಿಗೆ ಮನೆಯಲ್ಲೇ ವಾಸವಾಗಿದ್ದೇವೆ ಎಂದರು.

WAN-IFRA | COLOR QUALITY CLUB 2026-28 | V1

‘ರಾಜೀನಾಮೆ ನಿರಾಕರಣೆ ಸಾಂಕೇತಿಕ ಪ್ರತಿಭಟನೆ’

ಮುಖ್ಯಾಂಶಗಳು

- ಮಮತಾ ನಿರ್ಧಾರ ಸಮರ್ಥಿಸಿಕೊಂಡ ಟಿಎಂಸಿ
- ರಾಷ್ಟ್ರಪತಿ ಆಡಳಿತ ಜಾರಿಗೊಳಿಸಲಿ: ಮಮತಾ ಕಿಡಿ

ಕೋಲ್ಕತ್ತಾ (ಪಿಟಿಐ): ಚುನಾವಣಾ ಸೋಲಿನ ಬಳಿಕ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರಾಕರಿಸಿದ್ದ ನಾಯಕಿ ಮಮತಾ ಬ್ಯಾನರ್ಜಿ ಅವರ ನಿಲುವನ್ನು ಟಿಎಂಸಿ ಬಲವಾಗಿ ಸಮರ್ಥಿಸಿಕೊಂಡಿದೆ. ರಾಜೀನಾಮೆ ನಿರಾಕರಣೆಯನ್ನು ‘ಸಾಂಕೇತಿಕ ಪ್ರತಿಭಟನೆ’ ಎಂದು ಮುಖಂಡರು ಕರೆದಿದ್ದಾರೆ.

ಕಾಳಿಘಾಟ್‌ನಲ್ಲಿ ಬುಧವಾರ ನಡೆದ ಟಿಎಂಸಿ ಶಾಸಕರು ಮತ್ತು ಹಿರಿಯ ಮುಖಂಡರ ಸಭೆಯಲ್ಲಿ ಮಾತನಾಡಿದ ಮಮತಾ ಬ್ಯಾನರ್ಜಿ, ‘ಬಿಜೆಪಿಯು ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯನ್ನು ಲೂಟಿ ಮಾಡಿದೆ. ಫಲಿತಾಂಶವನ್ನು ತಿರುಚಲಾಗಿದ್ದು, ಇದರ ವಿರುದ್ಧ ಸುಪ್ರೀಂಕೋರ್ಟ್ ಮೆಟ್ಟಿಲೇರಲಾಗುವುದು, ‘ಅವರು ಬೇಕಿದ್ದರೆ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಲಿ, ನನ್ನನ್ನು ವಜಾಗೊಳಿಸಲಿ, ಇದು ಕರಾಳ ದಿನವಾಗಿಯೇ ದಾಖಲೆಗಳಲ್ಲಿ ಉಳಿಯಲಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು ಎಂದು ಮೂಲಗಳು ಹೇಳಿವೆ.

ಸಭೆಯಲ್ಲಿ ಭಾಗವಹಿಸಿದ್ದ ಟಿಎಂಸಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮತ್ತು ಹಿರಿಯ ಮುಖಂಡರು, ಪಕ್ಷದ ಮರು ಸಂಘಟನೆ, ಭವಿಷ್ಯದ ಕಾರ್ಯಸೂಚಿ ಬಗ್ಗೆ ಚರ್ಚೆ ನಡೆಸಿದರು.


ಮಮತಾ ಬ್ಯಾನರ್ಜಿ

‘ತಿರುಚಲಾದ ಜನಾದೇಶವನ್ನು ಒಪ್ಪಲು ಸಾಧ್ಯವಿಲ್ಲ’ ಎಂದಿರುವ ಮಮತಾ ಬ್ಯಾನರ್ಜಿ, ಆ ಮೂಲಕ ಸುದೀರ್ಘ ರಾಜಕೀಯ ಮತ್ತು ಕಾನೂನು ಹೋರಾಟದ ಸೂಚನೆ ನೀಡಿದ್ದಾರೆ.

ಸಂವಿಧಾನ ತಜ್ಞರ ಪ್ರಕಾರ ಈಗಿನ ಪಶ್ಚಿಮ ಬಂಗಾಳ ವಿಧಾನಸಭೆಯು ಮೇ 7ರವರೆಗೆ ಅಸ್ತಿತ್ವದಲ್ಲಿರಲಿದೆ. ಅಲ್ಲಿಯವರೆಗೆ ಮಮತಾ ಬ್ಯಾನರ್ಜಿ ಅಧಿಕಾರದಲ್ಲಿ ಮುಂದುವರಿಯಬಹುದು, ಆದರೆ, ವಿಧಾನಸಭೆ ಅವಧಿ ಮುಗಿದ ನಂತರ, ಅವರು ರಾಜೀನಾಮೆ ಸಲ್ಲಿಸದಿದ್ದರೂ ಮುಖ್ಯಮಂತ್ರಿ ಹುದ್ದೆ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

ಬಹುಮತ: ಸಾಕ್ಷ್ಯ ಕೇಳಿದ ರಾಜ್ಯಪಾಲ

ಒಂದನೇ ಪುಟದಿಂದ...

ಆದರೆ, ಕಾಂಗ್ರೆಸ್ ಪಕ್ಷ ಟಿವಿಕೆಗೆ ಬೆಂಬಲ ಸೂಚಿಸಿದ ಬಳಿಕ ಪರಿಸ್ಥಿತಿ ಬದಲಾಯಿತು. ಸಂಜೆಯ ವೇಳೆಗೆ, ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಶಾಸಕರ ತುರ್ತು ಸಭೆ ನಡೆಸಿದ್ದಾರೆ. ‘ಪಕ್ಷವು ಟಿವಿಕೆಯನ್ನು ಎಂದಿಗೂ ಬೆಂಬಲಿಸುವುದಿಲ್ಲ’ ಎಂದು ತಮ್ಮ ಆಪ್ತ ಕೆ.ಪಿ. ಮುನುಸಾಮಿ ಮೂಲಕ ಪ್ರಕಟಿಸಿದ್ದಾರೆ.

ತಮಗೆ 117 ಶಾಸಕರ ಬೆಂಬಲವಿದೆ ಎಂಬುದಕ್ಕೆ ಪುರಾವೆ ನೀಡುವಂತೆ ರಾಜ್ಯಪಾಲರು ಸೂಚಿಸಿರುವುದು ವಿಜಯ್ ಅವರನ್ನು ಒತ್ತಡಕ್ಕೆ ಸಿಲುಕಿಸಿದೆ. 113 ಶಾಸಕರ ಬೆಂಬಲ ಹೊಂದಿರುವ ಟಿವಿಕೆಗೆ ಸರ್ಕಾರ ರಚಿಸಲು ಇನ್ನೂ ನಾಲ್ವರು ಶಾಸಕರ ಬೆಂಬಲ ಬೇಕಿದೆ. ಅದಕ್ಕಾಗಿ ಸಿಪಿಐ, ಸಿಪಿಎಂ ಮತ್ತು ವಿಸಿಕೆಯ ಬೆಂಬಲ ಕೋರಿದೆ. ಈ ಮೂರು ಪಕ್ಷಗಳು ತಲಾ ಎರಡು ಸ್ಥಾನಗಳನ್ನು ಗೆದ್ದುಕೊಂಡಿವೆ.

ಟಿವಿಕೆ ಕೋರಿಕೆಯ ಹೊರತಾಗಿಯೂ, ಡಿಎಂಕೆ ಮೈತ್ರಿಕೂಟದಲ್ಲಿರುವ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್), ಬೆಂಬಲ ನೀಡಲು ನಿರಾಕರಿಸಿದೆ.

ಸಿಪಿಐ, ಸಿಪಿಎಂ ಮತ್ತು ವಿಸಿಕೆ ಪಕ್ಷಗಳು ‘ಶೀಘ್ರ’ದಲ್ಲೇ ನಿರ್ಧಾರ ಪ್ರಕಟಿಸುವುದಾಗಿ ಹೇಳಿವೆ. ಈ ಮೂರು ಪಕ್ಷಗಳು ವಿಜಯ್‌ಗೆ ಬೆಂಬಲ ನೀಡಿದರೆ ಶಾಸಕರ ಸಂಖ್ಯೆ 119ಕ್ಕೆ ತಲುಪಲಿದ್ದು, ಟಿವಿಕೆಗೆ ಸರ್ಕಾರ ರಚಿಸಲು ಸಾಧ್ಯವಾಗಲಿದೆ.

‘ವಿಜಯ್ ಅವರು ನಮ್ಮ ಬೆಂಬಲ ಕೋರಿದ್ದಾರೆ. ಹಿರಿಯ ನಾಯಕರ ಜತೆ ಗುರುವಾರ ಚರ್ಚಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದು ವಿಸಿಕೆ ಪಕ್ಷದ ಮುಖ್ಯಸ್ಥ ತೊಲ್ ತಿರುಮಾವಳವನ್ ಹೇಳಿದ್ದಾರೆ.

ಇಕ್ಕಟ್ಟಿನಲ್ಲಿ ಎಡಪಕ್ಷಗಳು: ಸಿಪಿಐ ಮತ್ತು ಸಿಪಿಎಂ ಪಕ್ಷಗಳು ಟಿವಿಕೆಗೆ ಬೆಂಬಲ ನೀಡಬೇಕೇ, ಬೇಡವೇ ಎಂಬ ದ್ವಂದ್ವದಲ್ಲಿ ಸಿಲುಕಿವೆ. ಕಾಂಗ್ರೆಸ್ ಮಾಡಿದಂತೆ, ತಕ್ಷಣವೇ ಡಿಎಂಕೆ ಮೈತ್ರಿಯಿಂದ ಹೊರಬರಲು ಈ ಪಕ್ಷಗಳು ಸಿದ್ಧವಿಲ್ಲ. ‘ಆದರೂ, ಬಿಜೆಪಿಯು ಪರಿಸ್ಥಿತಿಯ ಲಾಭ ಎತ್ತಿಕೊಳ್ಳುವುದನ್ನು ತಡೆಯಲು ಎಡಪಕ್ಷಗಳು ಟಿವಿಕೆಗೆ ಬೆಂಬಲ ನೀಡುವ ಸಾಧ್ಯತೆ ಅಧಿಕ’ ಎಂದು ಮೂಲಗಳು ಹೇಳಿವೆ.

‘ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಎಂ.ಎ.ಬೇಬಿ (ಸಿಪಿಎಂ) ಮತ್ತು ಡಿ.ರಾಜಾ (ಸಿಪಿಐ) ಅವರು ಹಿರಿಯ ನಾಯಕರ ಜತೆ ಚರ್ಚಿಸಿ ಒಮ್ಮತದ ನಿರ್ಧಾರಕ್ಕೆ ಬರಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ದ್ರೋಹ ಬಗೆದ ಕಾಂಗ್ರೆಸ್: ಡಿಎಂಕೆ

ತಮಿಳುನಾಡಿನಲ್ಲಿ ಸರ್ಕಾರ ರಚಿಸಲು ವಿಜಯ್ ಅವರ ಟಿವಿಕೆಗೆ ಬೆಂಬಲ ನೀಡುವ ಕಾಂಗ್ರೆಸ್‌ನ ನಿರ್ಧಾರವನ್ನು ಅದರ ದೀರ್ಘಕಾಲದ ಮಿತ್ರ ಪಕ್ಷ ಡಿಎಂಕೆ ಟೀಕಿಸಿದೆ.

ಕಾಂಗ್ರೆಸ್ ನಿರ್ಧಾರದ ಕುರಿತು ಬುಧವಾರ ಪ್ರತಿಕ್ರಿಯಿಸಿದ ಡಿಎಂಕೆ ವಕ್ತಾರ ಸರವಣನ್ ಅಣ್ಣಾದುರೈ, ‘ಕಾಂಗ್ರೆಸ್ ಪಕ್ಷವು ಟಿವಿಕೆಯೊಂದಿಗೆ ಮೈತ್ರಿ ಮಾಡಿಕೊಳ್ಳುವ ಮೂಲಕ ತಮಿಳುನಾಡಿನ ಜನರ ಬೆನ್ನಿಗೆ ಚೂರಿ ಹಾಕಿದೆ’ ಎಂದಿದ್ದಾರೆ.

‘ನಾವು ಕಾಂಗ್ರೆಸ್‌ಗೆ ಸದಾ ಬೆಂಬಲ ನೀಡುತ್ತಾ ಬಂದಿದ್ದೇವೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಬಿಂಬಿಸಿದ್ದು ನಮ್ಮ ಪಕ್ಷದ ನಾಯಕ ಎಂ.ಕೆ. ಸ್ಟಾಲಿನ್’ ಎಂದು ಹೇಳಿದ್ದಾರೆ.

ದ್ರೋಹ ಬಗೆದಿಲ್ಲ: ಡಿಎಂಕೆ ಮಾಡಿರುವ ಆರೋಪವನ್ನು ಕಾಂಗ್ರೆಸ್ ತಳ್ಳಿಹಾಕಿದ್ದು, ಮೈತ್ರಿ ಸರ್ಕಾರವು ತಮಿಳುನಾಡಿನಲ್ಲಿ ಆಡಳಿತದಲ್ಲಿದ್ದಾಗ ತಮ್ಮ ಪಕ್ಷದ ನಾಯಕರು ಯಾವುದೇ ಹುದ್ದೆಯನ್ನು ಬಯಸಲಿಲ್ಲ ಎಂದು ಹೇಳಿದೆ. 2014ರ ಲೋಕಸಭಾ ಚುನಾವಣೆಯಲ್ಲಿ ಡಿಎಂಕೆ ಕೂಡ ತಮ್ಮಿಂದ ದೂರ ಸರಿದಿತ್ತು ಎಂದಿದೆ.

‘ನಾವು ತೆಗೆದುಕೊಂಡ ನಿರ್ಧಾರವನ್ನು ಬೆನ್ನಿಗೆ ಚೂರಿ ಹಾಕುವುದು ಎಂದು ಕರೆಯಲಾಗದು. ಸಮಾನ ಮನಸ್ಕ ಪಕ್ಷಗಳು ಸೇರಿಕೊಂಡು ರಾಜ್ಯದಲ್ಲಿ ಸರ್ಕಾರ ರಚಿಸಿದರೆ ಏನು ಸಮಸ್ಯೆ?’ ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

‘2014ರ ಲೋಕಸಭಾ ಚುನಾವಣೆಯಲ್ಲಿ ನಮ್ಮಿಂದು ದೂರ ಸರಿದು ಏಕಾಂಗಿಯಾಗಿ ಹೋರಾಡಲು ಡಿಎಂಕೆ ನಿರ್ಧರಿಸಿತ್ತು. ಅದು ಅವರ ಪ್ರಜಾಸತ್ತಾತ್ಮಕ ಹಕ್ಕು. ‘ನೀವು ಕಾಂಗ್ರೆಸ್‌ನ ಬೆನ್ನಿಗೆ ಚೂರಿ ಹಾಕುತ್ತಿದ್ದೀರಾ’ ಎಂದು ನೀವು ಅವರನ್ನು ಆ ಸಂದರ್ಭದಲ್ಲಿ ಕೇಳಿದ್ದೀರಾ? ಇದನ್ನು ಬೆನ್ನಿಗೆ ಚೂರಿ ಹಾಕುವುದು ಎಂದು ಕರೆಯಲಾಗದು’ ಎಂದಿದ್ದಾರೆ.

ಡಿಎಂಕೆ ಮೈತ್ರಿಗೆ ‘ಕೈ’ ಗುಡ್‌ಬೈ

ಒಂದನೇ ಪುಟದಿಂದ...

‘ತಮಿಳುನಾಡು ಕಾಂಗ್ರೆಸ್ ಸಮಿತಿ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷವು, ಸರ್ಕಾರ ರಚಿಸಲು ಟಿವಿಕೆಗೆ ಸಂಪೂರ್ಣ ಬೆಂಬಲ ನೀಡಲು ನಿರ್ಧರಿಸಿದೆ’ ಎಂದು ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೋಡಂಕರ್ ಹೇಳಿದ್ದಾರೆ.

ಆದರೆ, ತಮ್ಮ ಬೆಂಬಲ ಷರತ್ತುಬದ್ಧವಾಗಿರುತ್ತದೆ ಎಂದು ಕಾಂಗ್ರೆಸ್ ಹೇಳಿದೆ. ‘ಭಾರತದ ಸಂವಿಧಾನದಲ್ಲಿ ನಂಬಿಕೆಯಿಲ್ಲದ ಯಾವುದೇ ಕೋಮುವಾದಿ ಶಕ್ತಿಗಳನ್ನು ಮೈತ್ರಿಕೂಟದಿಂದ ದೂರವಿಡುವಂತೆ ಟಿವಿಕೆಯೊಂದಿಗೆ ಕೇಳಿಕೊಂಡಿದ್ದೇವೆ’ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

‘ಪರಸ್ಪರ ಗೌರವ, ಸೂಕ್ತ ಪಾಲುದಾರಿಕೆ ಮತ್ತು ಉಭಯ ಪಕ್ಷಗಳ ನಡುವೆ ಜವಾಬ್ದಾರಿಯ ಹಂಚಿಕೆಯೊಂದಿಗೆ ಮಾಡಿಕೊಂಡಿರುವ ಈ ಮೈತ್ರಿಯು ಸರ್ಕಾರ ರಚನೆಗೆ ಮಾತ್ರ ಸೀಮಿತವಾಗಿರದೆ, ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಹಾಗೂ ರಾಜ್ಯಸಭೆ ಮತ್ತು 2029ರ ಲೋಕಸಭೆ ಚುನಾವಣೆವರೆಗೂ ಮುಂದುವರಿಯಲಿದೆ’ ಎಂದು ಹೇಳಿದೆ.

‘ಕಾಂಗ್ರೆಸ್ ಪಕ್ಷವು ಹೊಸ ಸರ್ಕಾರದ ಭಾಗವಾಗಲಿದೆ. ನಾವು ಕೇವಲ ಹೊರಗಿನಿಂದ ಬೆಂಬಲ ನೀಡುತ್ತಿಲ್ಲ. ಪಕ್ಷವು ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಹೊಂದಿರುತ್ತದೆ’ ಎಂದು ಚೋಡಂಕರ್ ಹೇಳಿದ್ದಾರೆ.

ಟಿವಿಕೆಗೆ ಬೆಂಬಲ ನೀಡುವ ಕಾಂಗ್ರೆಸ್ ನಿರ್ಧಾರವನ್ನು ಸ್ವಾಗತಿಸಿದ ಪಕ್ಷದ ಕಾರ್ಯಕರ್ತರು ಚೆನ್ನೈನಲ್ಲಿರುವ ಕೇಂದ್ರ ಕಚೇರಿ ಸತ್ಯಮೂರ್ತಿ ಭವನದ ಬಳಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಕೇರಳಂ ಸಿ.ಎಂ: ಮುಂಚೂಣಿಯಲ್ಲಿ ಸತೀಶನ್

ಒಂದನೇ ಪುಟದಿಂದ...

ಕಾಂಗ್ರೆಸ್ ಹಿರಿಯ ಮುಖಂಡ ಎ.ಕೆ. ಆ್ಯಂಟನಿ ಅವರ ಅಭಿಪ್ರಾಯವನ್ನೂ ವೀಕ್ಷಕರು ಪಡೆಯಲಿದ್ದಾರೆ.

‘ಮುಖ್ಯಮಂತ್ರಿ ಆಯ್ಕೆ ವಿಷಯದಲ್ಲಿ ಜನಪ್ರಿಯತೆ ಮತ್ತು ಜನ ಬೆಂಬಲ ಮಾತ್ರ ಮುಖ್ಯವಲ್ಲ, ಪಕ್ಷದ ಶಾಸಕರ ಬೆಂಬಲವೂ ನಿರ್ಣಾಯಕ’ ಎಂದು ವೇಣುಗೋಪಾಲ್ ಪರವಾಗಿ ಬೆಂಬಲಿಗರು ಧ್ವನಿ ಎತ್ತಿದ್ದಾರೆ. ರಾಹುಲ್ ಗಾಂಧಿ ಅವರ ಕಟ್ಟಾ ನಿಷ್ಠಾವಂತರಲ್ಲಿ ವೇಣುಗೋಪಾಲ್ ಕೂಡ ಒಬ್ಬರಾಗಿರುವುದರಿಂದ, ರಾಹುಲ್ ಅವರ ನಿರ್ಧಾರವೂ ಕೇರಳಂ ಮುಖ್ಯಮಂತ್ರಿ ಆಯ್ಕೆಯಲ್ಲಿ ಮಹತ್ತರ ಪಾತ್ರವಹಿಸಲಿದೆ ಎನ್ನಲಾಗುತ್ತಿದೆ.

ಅಸ್ಸಾಂ: ಹಿಮಂತ ರಾಜೀನಾಮೆ

ಒಂದನೇ ಪುಟದಿಂದ...

‘ಪಕ್ಷವು ಇಬ್ಬರು ಕೇಂದ್ರ ವೀಕ್ಷಕರನ್ನು ನೇಮಿಸಿದೆ. ಅವರ ಉಪಸ್ಥಿತಿಯಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಅಲ್ಲಿ ನೂತನ ನಾಯಕರ ಆಯ್ಕೆ ನಡೆಯಲಿದೆ. ಅಲ್ಲಿಯವರೆಗೂ ಕಾಯಬೇಕಿದೆ’ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ವೀಕ್ಷಕರಾಗಿ ಕೇಂದ್ರ ಸಚಿವ ಜೆ.ಪಿ. ನಡ್ಡಾ, ಸಹ ವೀಕ್ಷಕರಾಗಿ ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಮಂಗಳವಾರ ನೇಮಕಗೊಂಡಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಈಚೆಗೆ ನಡೆದ ಚುನಾವಣೆಯಲ್ಲಿ 102 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಬಿಜೆಪಿ 82 ಕ್ಷೇತ್ರಗಳಲ್ಲಿ ವಿಜಯಿಯಾಗಿದೆ. ಅಸ್ಸಾಂ ವಿಧಾನಸಭೆಯ ಸದಸ್ಯ ಬಲ 126.

‘ಧರ್ಮ, ಜಾತಿ ನಿರ್ಣಾಯಕ’

ಕೇರಳಂನ ಹೊಸ ಕಾಂಗ್ರೆಸ್ ಸರ್ಕಾರದ ರಚನೆಯಲ್ಲಿ ಧರ್ಮ ಮತ್ತು ಜಾತಿ ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಮೂಲಗಳು ಹೇಳಿವೆ. ಮುಖ್ಯಮಂತ್ರಿ ಸ್ಥಾನಕ್ಕಾಗಿ ಸ್ಪರ್ಧೆಯಲ್ಲಿರುವ ಚೆನ್ನಿತ್ತಲ, ವೇಣುಗೋಪಾಲ್ ಮತ್ತು ಸತೀಶನ್ ಮೂವರೂ ನಾಯರ್ ಸಮುದಾಯಕ್ಕೆ ಸೇರಿದವರು. ಕುತೂಹಲಕಾರಿ ಸಂಗತಿ ಎಂದರೆ, ಇವರು ಮೂವರೂ ಕಾಂಗ್ರೆಸ್ ಮುಖಂಡ, ಮಾಜಿ ಮುಖ್ಯಮಂತ್ರಿ, ದಿವಂಗತ ಕರುಣಾಕರನ್ ಅವರ ಶಿಷ್ಯರು.

ಬಲ ಪ್ರದರ್ಶನಕ್ಕೆ ಸಜ್ಜು: ಮುಖ್ಯಮಂತ್ರಿ ಹೆಸರು ಅಂತಿಮಗೊಳಿಸಲು ಎಐಸಿಸಿ ವೀಕ್ಷಕರು ಗುರುವಾರ ಕಾಂಗ್ರೆಸ್ ಶಾಸಕರೊಂದಿಗೆ ಮಾತುಕತೆ ನಡೆಸಲಿದ್ದು, ಬಲ ಪ್ರದರ್ಶನಕ್ಕೆ ಮುಖಂಡರು ಸಜ್ಜಾಗಿದ್ದಾರೆ. ವಿ.ಡಿ ಸತೀಶನ್ ಮತ್ತು ತಂಡವು ಹೆಚ್ಚಿನ ಶಾಸಕರ ಬೆಂಬಲ ತಮಗೆ ಲಭಿಸಬಹುದು ಎಂಬ ವಿಶ್ವಾಸದಲ್ಲಿದೆ.

‘ತಮಗೆ 50ರಿಂದ 63 ಚುನಾಯಿತ ಸದಸ್ಯರ ಬೆಂಬಲ ಇದೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಪುನರುಚ್ಚರಿಸಿದ್ದಾರೆ. ಆದರೆ, ವೇಣುಗೋಪಾಲ್ ಅವರಿಗೆ ನಿಷ್ಠರು ಎಂದು ಹೇಳಲಾದ ಕೆಲವು ಸದಸ್ಯರು, ಸತೀಶನ್ ಅವರೊಂದಿಗೂ ಸಂಪರ್ಕದಲ್ಲಿದ್ದಾರೆ ಎಂದು ಮೂಲಗಳು ಹೇಳಿವೆ.

ಅಮೃತಸರ, ಜಲಂಧರ್ ಬಳಿ ಘಟನೆ; ಪಾಕಿಸ್ತಾನದ ಐಎಸ್‌ಐ ನಂಟಿನ ಶಂಕೆ

ಪಂಜಾಬ್: ಎರಡು ಕಡೆ ಸ್ಫೋಟ; ಬೆಚ್ಚಿದ ಜನ

ಚಂಡೀಗಢ (ಪಿಟಿಐ): ಅಮೃತಸರದ ಖಾಸಾದಲ್ಲಿರುವ ಸೇನೆಯ ದಂಡು ಪ್ರದೇಶ ಹಾಗೂ ಜಲಂಧರ್‌ನಲ್ಲಿರುವ ಭದ್ರತಾ ಪಡೆಯ (ಬಿಎಸ್‌ಎಫ್) ಕೇಂದ್ರ ಕಚೇರಿ ಬಳಿ ಮಂಗಳವಾರ ರಾತ್ರಿ ಸ್ಫೋಟಗಳು ಸಂಭವಿಸಿವೆ.

ಬಿಎಸ್‌ಎಫ್ ಕಚೇರಿಯ ಹೊರಗೆ ರಾತ್ರಿ 8 ಗಂಟೆ ಸುಮಾರಿಗೆ ಮೊದಲ ಸ್ಫೋಟ ಸಂಭವಿಸಿದ್ದು, ರಾತ್ರಿ 11 ಗಂಟೆ ಸುಮಾರಿಗೆ ಅಮೃತಸರ ಸೇನಾ ದಂಡು ಪ್ರದೇಶದ ಗಡಿಭಾಗದ ಗೋಡೆ ಬಳಿ ಎರಡನೇ ಸ್ಫೋಟ ಸಂಭವಿಸಿದೆ.

ಬಿಎಸ್‌ಎಫ್ ಕಚೇರಿ ಬಳಿ ಸಂಭವಿಸಿದ ಸ್ಫೋಟದ ದೃಶ್ಯವು ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸ್ಫೋಟದಿಂದ ಒಂದು ಸ್ಕೂಟರ್ ಬೆಂಕಿಗಾಹುತಿಯಾಗಿದೆ. ಸಂಚಾರ ಸಿಗ್ನಲ್ ಕಂಬ ಹಾಗೂ ಅಂಗಡಿಯ ಕಿಟಕಿ ಗಾಜುಗಳಿಗೆ ಹಾನಿಯಾಗಿದೆ.

ಈ ಸ್ಫೋಟಗಳು ಪಂಜಾಬ್‌ನ ಜನರನ್ನು ಆತಂಕಕ್ಕೀಡು ಮಾಡಿವೆ. ಘಟನಾ ಸ್ಥಳಕ್ಕೆ ಡಿಜಿಪಿ


ಜಲಂಧರ್‌ನಲ್ಲಿರುವ ಬಿಎಸ್‌ಎಫ್ ಕೇಂದ್ರ ಕಚೇರಿ ಬಳಿ ಸಂಭವಿಸಿದ ಸ್ಫೋಟದ ಸ್ಥಳಕ್ಕೆ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಬುಧವಾರ ಭೇಟಿ ನೀಡಿ ಪರಿಶೀಲಿಸಿದರು —ಪಿಟಿಐ ಚಿತ್ರ

ಗೌರವ್ ಯಾದವ್ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಅಲ್ಲದೆ, ಬಿಎಸ್‌ಎಫ್ ಐಜಿಯೊಂದಿಗೆ ಸಭೆ ನಡೆಸಿದ್ದಾರೆ.

‘ಪೊಲೀಸರು ತನಿಖೆ ಕೈಗೊಂಡಿದ್ದು, ಘಟನೆಗೆ ಸಂಬಂಧಿಸಿದಂತೆ ಕೆಲ ಸುಳಿವುಗಳು ದೊರೆತಿವೆ. ಜಲಂಧರ್‌ನಲ್ಲಿ ನಡೆದ ಸ್ಫೋಟದಲ್ಲಿ ಯಾವುದೋ ಒಂದು ರೀತಿಯ ಸ್ಫೋಟಕ ವಸ್ತುವನ್ನು ಬಳಸಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಸ್ಥಳದಲ್ಲಿ ದೊರೆತ ಸ್ಫೋಟಕ ಮಾದರಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಪೊಲೀಸ್ ಆಯುಕ್ತ ಧನಪ್ರೀತ್ ಕೌರ್ ತಿಳಿಸಿದ್ದಾರೆ.

ಸಣ್ಣಪುಟ್ಟ ಸ್ಫೋಟ ನಡೆಸುವ ಬಿಜೆಪಿ: ‘ಅಮೃತಸರ ಹಾಗೂ ಜಲಂಧರ್ ಬಳಿ ಸಂಭವಿಸಿದ ಸ್ಫೋಟಗಳು ಸಣ್ಣ ಮಟ್ಟದವು. ಕಡಿಮೆ ತೀವ್ರತೆ ಹೊಂದಿದ್ದವು’ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಹೇಳಿದ್ದಾರೆ.

‘ಬಿಜೆಪಿಯು ಚುನಾವಣೆ ನಡೆಯುವ ಪ್ರತಿಯೊಂದು ರಾಜ್ಯದಲ್ಲೂ ಗಲಭೆ ನಡೆಯುವಂತೆ ಪ್ರಚೋದಿಸುತ್ತದೆ. ಸಣ್ಣಪುಟ್ಟ ಸ್ಫೋಟಗಳನ್ನು ನಡೆಸುತ್ತದೆ. ಧರ್ಮ ಮತ್ತು ಜಾತಿಯ ಆಧಾರದ ಮೇಲೆ ಜನರನ್ನು ವಿಭಜಿಸುತ್ತದೆ. ಇದು ಪಂಜಾಬ್‌ಗಾಗಿ ಅವರ ಸಿದ್ಧತೆಯನ್ನು ತೋರಿಸುತ್ತದೆ’ ಎಂದಿದ್ದಾರೆ.

‘ಸಾಕ್ಷ್ಯ ನೀಡಿ ಇಲ್ಲವೇ ರಾಜೀನಾಮೆ ಕೊಡಿ: ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರ ಆರೋಪಕ್ಕೆ ತಿರುಗೇಟು ನೀಡಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸುನಿಲ್ ಜಾಖಡ್, ‘ಈ ಆರೋಪಕ್ಕೆ ಸಾಕ್ಷ್ಯಾಧಾರ ನೀಡಬೇಕು ಇಲ್ಲವೇ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಬೇಕು’ ಎಂದು ಒತ್ತಾಯಿಸಿದ್ದಾರೆ.

‘ಐಎಸ್‌ಐ ಕೈವಾಡ ಶಂಕೆ’

‘ಈ ಸ್ಫೋಟಗಳ ಹೊಣೆಯನ್ನು ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ. ಆದರೆ, ಈ ಘಟನೆಯ ಹಿಂದೆ ಪಾಕಿಸ್ತಾನದ ಐಎಸ್‌ಐ ಕೈವಾಡವಿರಬಹುದು’ ಎಂದು ಪಂಜಾಬ್ ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ.

‘ಅಪರೇಷನ್ ಸಿಂಧೂರದ ವಾರ್ಷಿಕೋತ್ಸವಕ್ಕೆ ಪಂಜಾಬ್‌ನಲ್ಲಿ ಅಡ್ಡಿ ಉಂಟುಮಾಡಲು ಪಾಕಿಸ್ತಾನದ ಐಎಸ್‌ಐ ಯೋಜನೆಗಳ ಭಾಗವಾಗಿ ಈ ಸ್ಫೋಟ ನಡೆದಿರಬಹುದು’ ಎಂದು ಶಂಕಿಸಿದ್ದಾರೆ.



ಬೆಂಗಳೂರಿನಿಂದ ಫೈನಲ್ ಸ್ಥಳಾಂತರ

ಧರ್ಮಶಾಲಾ, ನವಚಂಡೀಗಢದಲ್ಲಿ ಪ್ಲೇ ಆಫ್ ಪಂದ್ಯಗಳು • ಅಹಮದಾಬಾದ್‌ನಲ್ಲಿ 31ರಂದು ಫೈನಲ್

ಪಿಟಿಐ/ಪ್ರಜಾವಾಣಿ ವಾರ್ತೆ

ಬೆಂಗಳೂರು/ನವದೆಹಲಿ: ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ಆಯೋಜನೆಯ ಅವಕಾಶವು ಬೆಂಗಳೂರಿನ ಕೈತಪ್ಪಿದೆ. ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಈ ಸಲವೂ ಫೈನಲ್ ನಡೆಯಲಿದೆ.

ಈ ಸಲದ ಟೂರ್ನಿಯ ಆರಂಭಕ್ಕೂ ಮುನ್ನ ಬೆಂಗಳೂರಿನಲ್ಲಿ ಪ್ಲೇಆಫ್ ಪಂದ್ಯ ಮತ್ತು ಫೈನಲ್ ಆಯೋಜನೆಯಾಗಲಿವೆ ಎಂದು ಹೇಳಲಾಗಿತ್ತು. ಆದರೆ ಬುಧವಾರ ಪ್ಲೇಆಫ್ ಮತ್ತು ಫೈನಲ್ ಪಂದ್ಯಗಳ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ.

ಮೇ 26ರಂದು ಧರ್ಮಶಾಲಾದಲ್ಲಿ ಮೊದಲ ಕ್ವಾಲಿಫೈಯರ್ ಹಾಗೂ ನವ ಚಂಡೀಗಢ (ಮುಲ್ಲನಪುರ) ದಲ್ಲಿ ಎಲಿಮಿನೇಟರ್ ಮತ್ತು ಎರಡನೇ ಕ್ವಾಲಿಫೈಯರ್ ನಡೆಯಲಿವೆ.

'ಈ ಮೊದಲು ಫೈನಲ್ ಪಂದ್ಯದ ಆತಿಥ್ಯಕ್ಕೆ ಬೆಂಗಳೂರು ನಗರವನ್ನೇ ನಿಗದಿ ಮಾಡಲಾಗಿತ್ತು. ಸ್ಥಳೀಯ ರಾಜ್ಯ ಸಂಸ್ಥೆ ಹಾಗೂ ಪದಾಧಿಕಾರಿಗಳು ವ್ಯಕ್ತಪಡಿಸಿರುವ ಅವಶ್ಯಕತೆಗಳು ಬಿಸಿಸಿಐ ಶಿಷ್ಟಾಚಾರ ಮತ್ತು ಮಾರ್ಗಸೂಚಿಯ ವ್ಯಾಪ್ತಿಯನ್ನು ಮೀರಿದ್ದಾಗಿವೆ. ಆದ್ದರಿಂದ ಫೈನಲ್ ಪಂದ್ಯದ ತಾಣವನ್ನು ಸ್ಥಳಾಂತರಿಸಲಾಗಿದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ. ಆದರೆ ನಿರ್ದಿಷ್ಟವಾಗಿ ಕಾರಣಗಳನ್ನು ಉಲ್ಲೇಖಿಸಿಲ್ಲ.

ಹೋದ ವರ್ಷ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಕಾಲ್ತುಳಿತ ಸಂಭವಿಸಿತ್ತು. 11 ಅಭಿಮಾನಿಗಳು ಅಸುನೀಗಿದ್ದರು. ಅದರ ನಂತರ ಸುರಕ್ಷತೆ ಕೊರತೆಯ ಕಾರಣ ನೀಡಿ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಯಾವುದೇ ಪಂದ್ಯಗಳ ಆತಿಥ್ಯವನ್ನು ನೀಡಿರಲಿಲ್ಲ. ಸರ್ಕಾರದ ನಿಯೋಗದ ಸೂಚನೆಗಳ ಪ್ರಕಾರ ಕ್ರೀಡಾಂಗಣದಲ್ಲಿ ನವೀಕರಣ ಕಾಮಗಾರಿ ಕೈಗೊಳ್ಳಲಾಗಿತ್ತು. ಅದರ ನಂತರ ಪರಿಶೀಲನೆ ನಡೆಸಿದ್ದ ಸರ್ಕಾರ ನೇಮಕ ಮಾಡಿದ್ದ ಸಮಿತಿಯು ಪಂದ್ಯಗಳ ಆಯೋಜನೆಗೆ ಅನುಮತಿ ನೀಡಿತ್ತು. ಅದರಿಂದಾಗಿ ಈ ಸಲದ ಐಪಿಎಲ್ ಉದ್ಘಾಟನೆ ಪಂದ್ಯವೂ ಸೇರಿದಂತೆ ಆರ್‌ಸಿಬಿಯ ಒಟ್ಟು ಐದು ಪಂದ್ಯಗಳು ಯಶಸ್ವಿಯಾಗಿ ನಡೆದವು.

ಆದರೆ ಶಾಸಕರಿಗೆ ಉಚಿತ ಪಾಸ್‌ಗಳನ್ನು ನೀಡಬೇಕೆಂದು ಸದನದಲ್ಲಿಯೇ ಬೇಡಿಕೆ ವ್ಯಕ್ತವಾಗಿತ್ತು. ಅದರಿಂದಾಗಿ ಕೆಎಸ್‌ಸಿಎ ಮತ್ತು ಆರ್‌ಸಿಬಿಯು ಪ್ರತಿಯೊಬ್ಬ ಶಾಸಕರು, ಸಚಿವರು ಮತ್ತು ಸಂಸದರಿಗೆ ಉಚಿತ ಪಾಸ್ ನೀಡಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 35 ಸಾವಿರ ಆಸನ ಸಾಮರ್ಥ್ಯ ಇದೆ. ಅದರಲ್ಲಿ 2–3 ಸಾವಿರ ಉಚಿತ ಪಾಸ್‌ಗಳು ಶಾಸಕರಿಗೇ ಹೋದರೆ ಆಯೋಜಕರಿಗೆ ನಷ್ಟವಾಗುತ್ತದೆ ಎಂಬ ಮಾತುಗಳು ಕೇಳಿಬಂದಿದ್ದವು. ಅದರಿಂದಾಗಿ ಪ್ಲೇಆಫ್ ಮತ್ತು ಫೈನಲ್ ಪಂದ್ಯಗಳನ್ನು ಇಲ್ಲಿ ಆಯೋಜಿಸುವ ಕುರಿತು ಬಿಸಿಸಿಐ ಮರುಚಿಂತನೆ ನಡೆಸಿತ್ತು.

ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣವು 1.32 ಲಕ್ಷ ಪ್ರೇಕ್ಷಕರ ಆಸನ ಸಾಮರ್ಥ್ಯ ಹೊಂದಿರುವುದೂ ಕೂಡ ಫೈನಲ್ ಆತಿಥ್ಯದ ಅವಕಾಶ ಪಡೆಯಲು ಕಾರಣವೆನ್ನಲಾಗಿದೆ. 2022, 2023 ಹಾಗೂ 2025ರಲ್ಲಿ ಇದೇ ತಾಣದಲ್ಲಿ ಫೈನಲ್ ಪಂದ್ಯಗಳು ನಡೆದಿದ್ದವು.

ಐಪಿಎಲ್: ಪ್ಲೇ ಆಫ್, ಫೈನಲ್ ವೇಳಾಪಟ್ಟಿ

ಪಂದ್ಯ	ಸ್ಥಳ	ದಿನಾಂಕ
ಕ್ವಾಲಿಫೈಯರ್ 1	ಧರ್ಮಶಾಲಾ	ಮೇ 26
ಎಲಿಮಿನೇಟರ್	ನವ ಚಂಡೀಗಢ	ಮೇ 27
ಕ್ವಾಲಿಫೈಯರ್ 2	ನವ ಚಂಡೀಗಢ	ಮೇ 29
ಫೈನಲ್	ಅಹಮದಾಬಾದ್	ಮೇ 31

ಫೈನಲ್ ಸ್ಥಳಾಂತರದಿಂದ ಬೇಸರ: ಕೆಎಸ್‌ಸಿಎ

ಐಪಿಎಲ್ ಫೈನಲ್ ಪಂದ್ಯವನ್ನು ಬೆಂಗಳೂರಿನ ಬದಲು ಬೇರೆ ತಾಣಕ್ಕೆ ಸ್ಥಳಾಂತರಿಸಿರುವ ಬಿಸಿಸಿಐ ನಿರ್ಧಾರಕ್ಕೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ತೀವ್ರ ಬೇಸರ ವ್ಯಕ್ತಪಡಿಸಿದೆ.

'ಪ್ಲೇಆಫ್ ಮತ್ತು ಫೈನಲ್ ಪಂದ್ಯಗಳ ಆಯೋಜನೆಗಾಗಿ ನಾವು ಪೂರ್ಣ ಸಿದ್ಧತೆ ಮಾಡಿಕೊಂಡಿದ್ದೇವೆ. ಆದರೆ ಪಂದ್ಯಗಳನ್ನು ಸ್ಥಳಾಂತರ ಮಾಡಿರುವ ಸುದ್ದಿ ತಿಳಿದುಬಂದಿದೆ. ಆದರೆ ಮಂಡಳಿಯಿಂದ ಇನ್ನೂ ಅಧಿಕೃತ ಮಾಹಿತಿ ಬಂದಿಲ್ಲ. ಕಾರಣಗಳೂ ಗೊತ್ತಾಗಿಲ್ಲ. ನಮ್ಮ ಅಧ್ಯಕ್ಷರಾದ ವೆಂಕಟೇಶ್ ಪ್ರಸಾದ್ ಅವರು ಮಂಡಳಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಸಂಬಂಧಪಟ್ಟವರೊಂದಿಗೆ ಮಾತುಕತೆ ಮಾಡುತ್ತಿದ್ದಾರೆ' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ್ ತಿಳಿಸಿದ್ದಾರೆ.

'ನಮ್ಮ ಸಿದ್ಧತೆಗಳ ಕುರಿತು ಬಿಸಿಸಿಐಗೆ ವಿವರಗಳನ್ನು ಬರೆದಿದ್ದೇವೆ. ಐಪಿಎಲ್, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಪಂದ್ಯಗಳ ಆಯೋಜನೆಗೂ ಕೂಡ ಸಿದ್ಧತೆಗಳಾಗಿವೆ. ಕಳೆದ ಐದು ಪಂದ್ಯಗಳನ್ನೂ ಯಶಸ್ವಿಯಾಗಿ ನಡೆಸಿದ್ದೇವೆ. ಎಲ್ಲರಿಂದ ಶ್ಲಾಘನೆ ಕೂಡ ವ್ಯಕ್ತವಾಗಿದೆ' ಎಂದರು.

ಅಕ್ಟೋಬರ್ 17ರಂದು ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಟಿ20 ಪಂದ್ಯ ಹಾಗೂ ಡಿಸೆಂಬರ್ 16ರಂದು ಭಾರತ–ಶ್ರೀಲಂಕಾ ಏಕದಿನ ಪಂದ್ಯವು ಇಲ್ಲಿ ಆಯೋಜನೆಯಾಗಲಿವೆ.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ

ಬಿಸಿಸಿಐ ಹೇಳಿಕೆ ನೀಡಲಿ, ಉತ್ತರ ಕೊಡುತ್ತೇನೆ: ಡಿಕೆಶಿ

ಬೆಂಗಳೂರು: 'ಶಾಸಕರು ಟಿಕೆಟ್‌ಗಾಗಿ ಬೇಡಿಕೆ ಇಟ್ಟ ಕಾರಣಕ್ಕೆ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಪಂದ್ಯವನ್ನು ಸ್ಥಳಾಂತರಿಸಲು ನಿರ್ಧರಿಸಿದ್ದೇವೆ ಎಂದು ಬಿಸಿಸಿಐ ಹೇಳಿಕೆ ನೀಡಲಿ, ಆಗ ನಾನು ಸರಿಯಾದ ಉತ್ತರ ಕೊಡುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

'ಶಾಸಕರು ಟಿಕೆಟ್ ಬೇಡಿಕೆ ಇಟ್ಟರುವ ಕಾರಣಕ್ಕೆ, ಬೆಂಗಳೂರಿನಲ್ಲಿ ನಡೆಯಬೇಕಿದ್ದ ಅಂತಿಮ ಪಂದ್ಯವನ್ನು ಸ್ಥಳಾಂತರಿಸಲು ನಿರ್ಧರಿಸಿದ್ದೇವೆ' ಎಂದು ಬಿಸಿಸಿಐ ಹೇಳಿಕೆ ನೀಡಿದೆಯೇ ಎಂಬುದರ ಬಗ್ಗೆ ಸುದ್ದಿಗಾರರು ಕೇಳಿದಾಗ, 'ಅಹಮದಾಬಾದ್‌ನಲ್ಲಿ ದೊಡ್ಡ ಕ್ರೀಡಾಂಗಣವಿದೆ, ಹೆಚ್ಚು ಜನ ಸೇರುತ್ತಾರೆ ಎಂಬ ಕಾರಣದಿಂದ ಅಲ್ಲಿಗೆ ಅಂತಿಮ ಪಂದ್ಯವನ್ನು ಸ್ಥಳಾಂತರ ಮಾಡಿರಬೇಕು. ಶಾಸಕರಿಗೆ ಟಿಕೆಟ್ ವಿತರಣೆಗೂ ಅಂತಿಮ ಪಂದ್ಯದ ಸ್ಥಳಾಂತರಕ್ಕೂ ಸಂಬಂಧ ಇಲ್ಲ' ಎಂದರು.

'ಬೇರೆ ಕಡೆ ಐಪಿಎಲ್ ಟಿಕೆಟ್‌ನ ಶೇ 50ರಷ್ಟು ಟಿಕೆಟ್ ಮೀಸಲಿರುತ್ತದೆ' ಎಂದೂ ಶಿವಕುಮಾರ್ ಹೇಳಿದರು. ಐಪಿಎಲ್ ಕ್ರಿಕೆಟ್ ಪಂದ್ಯಗಳ ಟಿಕೆಟ್ ನೀಡುವಂತೆ ಇತ್ತೀಚೆಗೆ ನಡೆದ ವಿಧಾನಸಭಾ ಅಧಿವೇಶನದಲ್ಲಿ ಶಾಸಕರು ಆಗ್ರಹಿಸಿದ್ದರು. ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ್, ಶಾಸಕರ ಕುಟುಂಬಕ್ಕೆ ಐದು ಟಿಕೆಟ್ ನೀಡಬೇಕೆಂದು ಆಗ್ರಹಿಸಿದ್ದರು. ಅದಕ್ಕೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಇತರ ಕೆಲವು ಶಾಸಕರೂ ದನಿಗೂಡಿಸಿದ್ದರು. ಶಾಸಕರ ಬೇಡಿಕೆಯಂತೆ ಉಚಿತ ಟಿಕೆಟ್ ಕೊಡಲು ವ್ಯವಸ್ಥೆ ಮಾಡುವಂತೆ ಸಭಾಧ್ಯಕ್ಷರು ಸೂಚಿಸಿದ್ದರು. ಬಳಿಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ಚರ್ಚೆ ನಡೆಸಿದ್ದ ಕೆಎಸ್‌ಸಿಎ ಪದಾಧಿಕಾರಿಗಳು, ಶಾಸಕರಿಗೆ ತಲಾ ಮೂರು ಟಿಕೆಟ್ ಉಚಿತವಾಗಿ ನೀಡಲು ಒಪ್ಪಿದ್ದರು.

'ಪಂದ್ಯ ಸ್ಥಳಾಂತರ: ಬೆಂಗಳೂರಿನ ಘನತೆಗೆ ಕುತ್ತು'

'ವಿವಿಐಪಿ ಪಾಸ್‌ಗಳ ಹಪಾಹಪಿ ಹಾಗೂ ಶಾಸಕರ ಉಚಿತ ಟಿಕೆಟ್ ವ್ಯಾಮೋಹದಿಂದಾಗಿ ಬೆಂಗಳೂರಿನಲ್ಲಿ ನಡೆಯಬೇಕಿದ್ದ ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್‌ನ ಪಾಲಾಗಿದೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಅಭಿನಂದನೆಗಳು. ಉಚಿತ ಟಿಕೆಟ್‌ಗಳ ವ್ಯಾಮೋಹದಿಂದಾಗಿ, ನಮ್ಮೂರಿನಲ್ಲಿ ನಡೆಯಬೇಕಿದ್ದ ಫೈನಲ್ ಪಂದ್ಯವನ್ನು ಅಹಮದಾಬಾದ್‌ಗೆ ಉಡುಗೊರೆಯಾಗಿ ನೀಡಿದ್ದೀರಿ. ಕ್ರೀಡಾಂಗಣವಿರುವುದು ಕ್ರಿಕೆಟ್ ಅಭಿಮಾನಿಗಳಿಗಾಗಿಯೇ ಹೊರತು, ಶಾಸಕರಿಗಾಗಿ ಅಲ್ಲ' ಎಂದು ಟೀಕಿಸಿದ್ದಾರೆ.

'ಚಿನ್ನಸ್ವಾಮಿ ಕ್ರೀಡಾಂಗಣವನ್ನು ತಮ್ಮ ವೈಯಕ್ತಿಕ ಟಿಕೆಟ್ ಕೌಂಟರ್ ಮಾಡಿಕೊಂಡಿರುವ ಶಾಸಕರ ಬೇಜವಾಬ್ದಾರಿ ವರ್ತನೆಯಿಂದಾಗಿ, ನಾವು ಒಂದು ಪಂದ್ಯವನ್ನಷ್ಟೇ ಅಲ್ಲ, ರಾಷ್ಟ್ರ ಮಟ್ಟದಲ್ಲಿ ಬೆಂಗಳೂರಿನ ಘನತೆಯನ್ನೂ ಕಳೆದುಕೊಂಡಿದ್ದೇವೆ' ಎಂದಿದ್ದಾರೆ.

ಗೆಲುವಿನ ಹಳಿಗೆ ಮರಳುವತ್ತ ರಜತ್ ಪಡೆ ಚಿತ್ತ

ಆರ್‌ಸಿಬಿಗೆ ಪಂತ್ ಬಳಗ ಸವಾಲು

ಲಖನೌ (ಪಿಟಿಐ): ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಬ್ಯಾಟಿಂಗ್ ಲಯಕ್ಕೆ ಮರಳುವ ಗುರಿಯೊಂದಿಗೆ ಗುರುವಾರ ಕಣಕ್ಕಿಳಿಯಲಿದೆ.

ಒಟ್ಟು 12 ಅಂಕ ಗಳಿಸಿರುವ ರಜತ್ ಪಾಟೀದಾರ್ ಬಳಗವು ಏಕಾನಾ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ರಿಷಭ್ ಪಂತ್ ನಾಯಕತ್ವದ ಲಖನೌ ತಂಡವು ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿದೆ. ನಾಲ್ಕು ಅಂಕಗಳೊಂದಿಗೆ ಕೊನೆಯ ಸ್ಥಾನದಲ್ಲಿದೆ. ಆರ್‌ಸಿಬಿ ಸೇರಿದಂತೆ ಒಟ್ಟು ಮೂರು ತಂಡಗಳು 12 ಅಂಕ ಗಳಿಸಿವೆ. ಸನ್‌ರೈಸರ್ಸ್ ಹೈದರಾಬಾದ್ (14) ಮತ್ತು ಪಂಜಾಬ್ ಕಿಂಗ್ಸ್ (13) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ. ಅದರಿಂದಾಗಿ ಟೂರ್ನಿಯು ಈಗ ಕುತೂಹಲಘಟ್ಟದಲ್ಲಿದೆ.

ಆರ್‌ಸಿಬಿಗೆ ಇನ್ನೂ ಐದು ಪಂದ್ಯಗಳು ಬಾಕಿ ಇವೆ. ಅದರಲ್ಲಿ ಕನಿಷ್ಠ ಮೂರರಲ್ಲಿ ಗೆದ್ದರೂ ಪ್ಲೇಆಫ್ ಹಾದಿ ಸುಗಮವಾಗುತ್ತದೆ. ಅದಕ್ಕಾಗಿ ಕಳೆದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ಎದುರು ಮಾಡಿದ ಲೋಪಗಳನ್ನು ತಿದ್ದಿಕೊಂಡು ಕಣಕ್ಕಿಳಿಯುವ ಸವಾಲು ರಜತ್ ಪಡೆಗೆ ಇದೆ. ಆ ಪಂದ್ಯದಲ್ಲಿ 76ಕ್ಕೆ 2 ವಿಕೆಟ್ ಕಳೆದುಕೊಂಡಿದ್ದ ತಂಡವು 96 ರನ್‌ಗಳಿಗೆ 6 ವಿಕೆಟ್ ಪತನಕ್ಕೊಳಗಾಗಿತ್ತು. ಕೇವಲ ಮೂರು ಓವರ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್ ಉರುಳಿದ್ದವು. 155 ರನ್‌ಗಳ ಸಾಧಾರಣ ಮೊತ್ತದ ಗುರಿಯನ್ನು ಆರ್‌ಸಿಬಿಯು ಎದುರಾಳಿಗೆ ಒಡ್ಡಿತ್ತು.

ಆದರೆ, ಆರ್‌ಸಿಬಿಯ ಬ್ಯಾಟಿಂಗ್ ಪಡೆ ಬಲಿಷ್ಠವಾಗಿದೆ ಎಂಬುದು ಇದೇ ಟೂರ್ನಿಯ ಪಂದ್ಯಗಳಲ್ಲಿಯೇ ಸಾಬೀತಾಗಿದೆ. ಪ್ರಮುಖವಾಗಿ ವಿರಾಟ್ ಕೊಹ್ಲಿ (379 ರನ್), ದೇವದತ್ತ ಪಡಿಕ್ಕಲ್, ರಜತ್, ಟಿಮ್ ಡೇವಿಡ್, ಜಿತೇಶ್ ಶರ್ಮಾ ಅವರು ಅಮೋಘ ಲಯದಲ್ಲಿದ್ದಾರೆ. ಆಲ್‌ರೌಂಡರ್ ಕೃಣಾಲ್ ಪಾಂಡ್ಯ, ರೊಮೆರಿಯೊ ಶೆಫರ್ಡ್ ಕೂಡ ಬ್ಯಾಟಿಂಗ್‌ನಲ್ಲಿ ಉಪಯುಕ್ತ ಕಾಣಿಕೆ ನೀಡಬಲ್ಲವರು.

ಬೌಲಿಂಗ್ ಮಾತ್ರ ಬಲಿಷ್ಠವಾಗಿದೆ. ಜೋಷ್ ಹೇಜಲ್‌ವುಡ್, ಭುವನೇಶ್ವರ್ ಕುಮಾರ್ ಹಾಗೂ ರಸಿಕ್ ಸಲಾಮ್ ದಾರ್ ಹಾಗೂ ಸ್ಪಿನ್ನರ್ ಸುಯಶ್ ಶರ್ಮಾ ಅವರು ಇದುವರೆಗೂ ಉತ್ತಮವಾಗಿ ಬೌಲಿಂಗ್ ಮಾಡಿದ್ದಾರೆ. ತಂಡವನ್ನು ಗೆಲುವಿನತ್ತ ಮುನ್ನಡೆಸಿದ್ದಾರೆ. ಹೋದ ತಿಂಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಲಖನೌ ತಂಡವನ್ನು ಸೋಲಿಸುವಲ್ಲಿ ಆರ್‌ಸಿಬಿಯ ಹೇಜಲ್‌ವುಡ್ ಅವರೇ ಪ್ರಮುಖ ಪಾತ್ರ ವಹಿಸಿದ್ದರು. ಲಖನೌ ತವರಿನಲ್ಲಿಯೂ ಆಸ್ಟ್ರೇಲಿಯಾದ ಬೌಲರ್ ತಮ್ಮ ಸಾಮರ್ಥ್ಯ ಮೆರೆಯಲು ಸಿದ್ಧರಾಗಿದ್ದಾರೆ.

ಆತಿಥೇಯ ತಂಡದ ಬ್ಯಾಟರ್‌ಗಳಾದ ಮಿಚೆಲ್ ಮಾರ್ಷ್, ರಿಷಭ್ ಪಂತ್, ಏಡನ್ ಮರ್ಕರಂ ಹಾಗೂ ನಿಕೊಲಸ್ ಪೂರನ್ ಅವರ ಅಸ್ಥಿರ ಪ್ರದರ್ಶನವು ತಂಡದ ಸೋಲಿಗೆ ಪ್ರಮುಖ ಕಾರಣವಾಗಿದೆ. ಅನುಭವಿ ವೇಗಿ ಮೊಹಮ್ಮದ್ ಶಮಿ, ಮೊಹ್ಸಿನ್ ಖಾನ್, ಆವೇಶ್ ಖಾನ್, ಸ್ಪಿನ್ನರ್ ದಿಗ್ವೇಶ್ ರಾಠಿ ಅವರು ತಮ್ಮ ತವರಿನಂಗಳದಲ್ಲಿ ಮೋಡಿ ಮಾಡಲು ಸಿದ್ಧರಾಗಿದ್ದಾರೆ. ಆರ್‌ಸಿಬಿಯ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಅವರ ಮುಂದಿದೆ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಎಸ್‌ಆರ್‌ಎಚ್	11	7	4	0	14	0.737
ಪಿಬಿಕೆಎಸ್	10	6	3	1	13	0.571
ಆರ್‌ಸಿಬಿ	9	6	3	0	12	1.420
ಆರ್ ಆರ್	10	6	4	0	12	0.510
ಜಿಟಿ	10	6	4	0	12	-0.147
ಸಿಎಸ್‌ಕೆ	10	5	5	0	10	0.151
ಡಿಸಿ	10	4	6	0	8	-0.949
ಕೆಕೆಆರ್	9	3	5	1	7	-0.539
ಎಂಐ	10	3	7	0	6	-0.649
ಎಲ್‌ಎಸ್‌ಜಿ	9	2	7	0	4	-1.076

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸನ್, ಎಸ್‌ಆರ್‌ಎಚ್ (494 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (17 ವಿಕೆಟ್)



ಆರ್‌ಸಿಬಿಯ ದೇವದತ್ತ ಪಡಿಕ್ಕಲ್ ಮತ್ತು ರಜತ್ ಪಾಟೀದಾರ್



ರಿಷಭ್ ಪಂತ್

ಬಲಾಬಲ — ಒಟ್ಟು ಪಂದ್ಯ 7

ಆರ್‌ಸಿಬಿ ಜಯ	5
ಎಲ್‌ಎಸ್‌ಜಿ ಗೆಲುವು	2

ಇಂದಿನ ಪಂದ್ಯ

ಲಖನೌ ಸೂಪರ್ ಜೈಂಟ್ಸ್ V/s ರಾಯಲ್ ಚಾಲೆಂಜರ್ಸ್ ಬೆಂಗಳೂರು

ತಾಣ: ಲಖನೌ
ಪಂದ್ಯ ಆರಂಭ: ರಾತ್ರಿ 7.30

ಲೈವ್ — ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ವಿಶ್ವ ಟಿಟಿ: ಭಾರತದ ಸವಾಲು ಅಂತ್ಯ

ಲಂಡನ್ (ಪಿಟಿಐ): ಭಾರತದ ಮಹಿಳಾ ತಂಡವು ವಿಶ್ವ ಟೇಬಲ್ ಟೆನಿಸ್ ತಂಡ ಚಾಂಪಿಯನ್‌ಷಿಪ್‌ನ 32ರ ಘಟ್ಟದ ಪಂದ್ಯದಲ್ಲಿ 1–3ರಿಂದ ಅಮೆರಿಕ ತಂಡಕ್ಕೆ ಸೋತು ಟೂರ್ನಿಯಿಂದ ಹೊರಬಿತ್ತು.

ಇದಕ್ಕೂ ಮೊದಲು ಭಾರತ ಪುರುಷರ ತಂಡವು 0–3ರಿಂದ ಆಸ್ಟ್ರಿಯಾ ವಿರುದ್ಧ ಸೋಲು ಅನುಭವಿಸಿತ್ತು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ.

ಅನುಭವಿ ಆಟಗಾರ್ತಿ ಮಣಿಕಾ ಬಾತ್ರಾ ಭಾರತದ ಪರ ಏಕೈಕ ಗೆಲುವು ದಾಖಲಿಸಿದರು. ಅವರು 11-2, 11-8, 8-11, 11-4ರಿಂದ ರೇಯಸ್ ಜೆಸ್ಸಿಕಾ ವಿರುದ್ಧ ಗೆದ್ದರು. ಆರಂಭಿಕ ಸಿಂಗಲ್ಸ್‌ನಲ್ಲಿ ಕರ್ನಾಟಕದ ಯಶಸ್ವಿನಿ ಘೋರ್ಪಡೆ 8-11, 8-11, 7-11ರಿಂದ ಮೊಯ್ಲ್ಯಾಂಡ್ ಸ್ಯಾಲಿ ಎದುರು ಸೋತರು. ದಿಯಾ ಚಿತಾಳೆ 8-11, 7-11, 11-13ರಿಂದ ಲಿಲಿ ಜಾಂಗ್ ಅವರಿಗೆ ಮಣಿದರು. ನಿರ್ಣಾಯಕ ಸಿಂಗಲ್ಸ್‌ನಲ್ಲಿ ಮಣಿಕಾ 12-10, 9-11, 3-11, 11-13ರಿಂದ ಸ್ಯಾಲಿ ಅವರಿಗೆ ಶರಣಾದರು.

ತುಮಕೂರು ಓಪನ್ ಐಟಿಎಫ್ ಮಹಿಳಾ ಟೆನಿಸ್

ಮೊದಲ ಸುತ್ತಿನಲ್ಲೇ ಆಕಾಂಕ್ಷಾಗೆ ಆಘಾತ

ಪ್ರಜಾವಾಣಿ ವಾರ್ತೆ

ತುಮಕೂರು: ಭಾರತದ ಉದಯೋನ್ಮುಖ ತಾರೆ ಆಕಾಂಕ್ಷಾ ದಿಲೀಪ್ ನಿಟ್ಟೂರೆ ಅವರು 'ತುಮಕೂರು ಓಪನ್' ಐಟಿಎಫ್ ಡಬ್ಲ್ಯು 35 ವಿಶ್ವ ಮಹಿಳಾ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು.

ಇಲ್ಲಿನ ವಿಶ್ವವಿದ್ಯಾಲಯ ಆವರಣದ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಎರಡನೇ ದಿನವಾದ ಬುಧವಾರ ಸಿಂಗಲ್ಸ್‌ನ 32ರ ಸುತ್ತಿನ ಪಂದ್ಯದಲ್ಲಿ ರಷ್ಯಾದ ಅರಿನಾ ಅರಿಪುಲಿನಾ 6-1, 6-1ರಿಂದ ಎಂಟನೇ ಶ್ರೇಯಾಂಕದ ಆಕಾಂಕ್ಷಾ ಅವರಿಗೆ ಆಘಾತ ನೀಡಿದರು. ಶ್ರೇಯಾಂಕರಹಿತ ಅರಿನಾ ಅವರಿಗೆ 23 ವರ್ಷ ವಯಸ್ಸಿನ ಆಕಾಂಕ್ಷಾ ಯಾವುದೇ ಹಂತದಲ್ಲಿ ಸಾಟಿಯಾಗಲಿಲ್ಲ.

ಭಾರತದ ಲಕ್ಷ್ಮಿಸಿರಿ ದಂಡು 1-6, 7-5, 6-3 ಸೆಟ್‌ಗಳಿಂದ ಸ್ವದೇಶದ ಪ್ರತ್ಯುಷ ರಾಚಪುಡಿ ಅವರನ್ನು ಮಣಿಸಿದರು. ಕ್ವಾಲಿಫೈಯರ್ ಆಟಗಾರ್ತಿ ಲಕ್ಷ್ಮಿಸಿರಿ ಆರಂಭಿಕ ಸೆಟ್‌ನ ಹಿನ್ನಡೆಯಿಂದ ಚೇತರಿಸಿಕೊಂಡು ಪ್ರಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು.

ಮತ್ತೊಂದು ಕ್ವಾಲಿಫೈಯರ್ ಆಟಗಾರ್ತಿ ಕಶಿಶ್ ಭಾಟಿಯಾ 6-1, 6-1 ಸೆಟ್‌ಗಳಿಂದ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಅಮೋದಿನಿ ನಾಯಕ್ ವಿರುದ್ಧ ಗೆಲುವು ದಾಖಲಿಸಿದರು. ವೈಲ್ಡ್ ಕಾರ್ಡ್ ಸ್ಪರ್ಧಿ ಜೆನ್ನಿಫರ್ ಲುಯಿಖಾಮ್ 6-3, 4-6, 6-3ರಿಂದ ಚೆವಿಕಾ ರೆಡ್ಡಿ ಸಮಾ ಅವರಿಗೆ ಸೋಲುಣಿಸಿದರು.

ಮೂರನೇ ಶ್ರೇಯಾಂಕದ ವೈದೇಹಿ ಚೌಧರಿ 6-3, 6-4 ಸೆಟ್‌ಗಳಿಂದ ಸ್ಥಳೀಯ ತಾರೆ ಸೋಹಾ ಸಾದಿಕ್ ಅವರನ್ನು ಸೋಲಿಸಿದರು. ನಾಲ್ಕನೇ ಶ್ರೇಯಾಂಕದ ಝೀಲ್ ದೇಸಾಯಿ 6-0, 6-0 ರಿಂದ ಜೀತೇಶ್ ಕುಮಾರಿ ವಿರುದ್ಧ ಜಯ ಗಳಿಸಿದರು.

ಅಗ್ರ ಶ್ರೇಯಾಂಕದ ಜಸ್ಟಿನಾ ಮಿಕುಲ್‌ಸ್ಕೈಟ್ (ಲಿಥುವೇನಿಯಾ) 6–1, 6–1ರಿಂದ ಭಾರತದ ಸೌಮ್ಯಾ ವಿಗ್ ವಿರುದ್ಧ ಗೆಲುವು ದಾಖಲಿಸಿದರು. ಎರಡನೇ ಶ್ರೇಯಾಂಕದ ಜುಝಾನ್ನಾ ಪಾವ್ಲಿಕೊವ್ಸ್ಕಾ (ಪೋಲೆಂಡ್) 6–0, 6–1ರಿಂದ ಶ್ರೀಮಾನ್ಯಾ ರೆಡ್ಡಿ ಅನುಗೊಂಡ ಅವರನ್ನು ಸೋಲಿಸಿದರು. ರಷ್ಯಾದ ಎಕಟೆರಿನಾ ಯಾಶಿನಾ 6-2, 6-2ರಿಂದ ಬೇಲಾ ತಮಣಕರ್ ಅವರನ್ನು ಮಣಿಸಿದರು. ಪೋಲೆಂಡ್‌ನ ಜುಝಾನ್ನಾ ಕೊಲೊನಸ್ 6–2, 6–0ರಿಂದ ಐಶ್ವರ್ಯಾ ಜಾಧವ್ ಎದುರು ಗೆದ್ದರು.



ರಷ್ಯಾದ ಅರಿನಾ ಅರಿಪುಲಿನಾ

ಇಶಾನ್, ಕ್ಲಾಸೆನ್ ಆಟ: ಸನ್ ನಾಗಾಲೋಟ

ಕಮಿನ್ಸ್ ಮಿಂಚು • ಕಿಂಗ್ಸ್‌ಗೆ ಹ್ಯಾಟ್ರಿಕ್ ಸೋಲು • ಕೂಪರ್ ಶತಕಕ್ಕೆ ಸಿಗದ ಫಲ

ಹೈದರಾಬಾದ್ (ಪಿಟಿಐ): ಇಶಾನ್ ಕಿಶನ್ ಮತ್ತು ಹೆನ್ರಿಚ್ ಕ್ಲಾಸೆನ್ ಅವರ ಮಿಂಚಿನ ಅರ್ಧಶತಕಗಳ ಮುಂದೆ ಕೂಪರ್ ಕೊನೊಲಿ ಅವರ ಅಜೇಯ ಶತಕದಾಟಕ್ಕೆ ಫಲ ಸಿಗಲಿಲ್ಲ. ಸನ್‌ರೈಸರ್ಸ್ ಹೈದರಾಬಾದ್ ತಂಡವು ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು 33 ರನ್‌ಗಳಿಂದ ಸುಲಭವಾಗಿ ಮಣಿಸಿ, ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಹಾಲಿ ಆವೃತ್ತಿಯಲ್ಲಿ ತಮ್ಮ ಮೊದಲ ಏಳು ಪಂದ್ಯಗಳಲ್ಲಿ ಅಜೇಯ ಸಾಧನೆ ಮೆರೆದಿದ್ದ ಶ್ರೇಯಸ್ ಅಯ್ಯರ್ ಪಡೆಯು ಹ್ಯಾಟ್ರಿಕ್ ಸೋಲಿನೊಂದಿಗೆ ಅಂಕ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಸರಿಯಿತು. ಸನ್‌ರೈಸರ್ಸ್ ತಂಡವು ಈ ಗೆಲುವಿನೊಂದಿಗೆ ಏ.11ರಂದು (ಮುಲ್ಲನಪುರ) ಪಂಜಾಬ್ ವಿರುದ್ಧ ಅನುಭವಿಸಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಂಡು, ಗೆಲುವಿನ ಹಳಿಗೆ ಮರಳಿತು.

ಉಪ್ಪಳದ ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಪಂಜಾಬ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಯಥಾಪ್ರಕಾರ ಅಭಿಷೇಕ್ ಶರ್ಮಾ (35; 13ಎ) ಮತ್ತು ಟ್ರಾವಿಸ್ ಹೆಡ್ (38; 19ಎ) ಅಬ್ಬರದ ಆರಂಭ ನೀಡಿದರು. ಬಳಿಕ ಇಶಾನ್ (55;32ಎ) ಹಾಗೂ ಕ್ಲಾಸೆನ್ (69;43ಎ) ಬೀಸಾಟ ನಡೆಸಿದರು. ಇದರಿಂದಾಗಿ ಆತಿಥೇಯ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 235 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಪಂಜಾಬ್ ಪರ ಆಸ್ಟ್ರೇಲಿಯಾದ ಎಡಗೈ ಬ್ಯಾಟರ್ ಕೂಪರ್ (ಔಟಾಗದೇ 107;59ಎ, 4x7, 6x8) ಏಕಾಂಗಿ ಹೋರಾಟ ನಡೆಸಿದರೂ ಗೆಲುವಿಗೆ ಸಾಕಾಗಲಿಲ್ಲ. ಹೈದರಾಬಾದ್ ವೇಗಿಗಳ ಪರಿಣಾಮಕಾರಿ ದಾಳಿಗೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಬೇಗನೆ ಡಗೌಟ್ ಸೇರಿಕೊಂಡರು. ಹೀಗಾಗಿ, ತಂಡವು 7 ವಿಕೆಟ್‌ಗೆ 202 ರನ್ ಗಳಿಸಿ ಓವರ್‌ಗಳನ್ನು ಪೂರ್ಯೆಸಿತು.

ಪಂಜಾಬ್ ತಂಡಕ್ಕೆ ಆರಂಭದಲ್ಲೇ ನಾಯಕ ಪ್ಯಾಟ್ ಕಮಿನ್ಸ್ ಪೆಟ್ಟು ನೀಡಿದರು. ಮೊದಲ ಓವರ್‌ನ ಕೊನೆಯ ಎಸೆತದಲ್ಲಿ ಪ್ರಿಯಾಂಶ್ ಆರ್ಯ (1) ವಿಕೆಟ್ ಪಡೆದು ಸಂಭ್ರಮಿಸಿದರು. ಎರಡನೇ ಓವರ್‌ನಲ್ಲಿ ಪ್ರಭಸಿಮ್ರನ್ ಸಿಂಗ್ (3) ಔಟಾದರು. ಶ್ರೇಯಸ್ (5) ಕೂಡಾ ನಿರಾಸೆ ಮೂಡಿಸಿದರು. ತಂಡವು 23 ರನ್ ಗಳಿಸುವಷ್ಟರಲ್ಲಿ ಪ್ರಮುಖ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ನಂತರ ಕೂಪರ್ ಜವಾಬ್ದಾರಿಯುತ ಆಟವಾಡಿದರು. ಮಾರ್ಕಸ್ ಸ್ಟೋಯಿನಿಸ್ (28;14) ಅವರೊಂದಿಗೆ ನಾಲ್ಕನೇ ವಿಕೆಟ್‌ಗೆ 40 ರನ್ ಹಾಗೂ ಸೂರ್ಯಾಂಶ್ ಶೆಡ್ಗೆ (25) ಅವರೊಂದಿಗೆ ಐದನೇ ವಿಕೆಟ್‌ಗೆ 47 ರನ್ ಸೇರಿಸಿದರು. ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ, ಇನ್ನೊಂದೆಡೆ ಕೂಪರ್ ಕೌಶಲ ಮತ್ತು ಆಕ್ರಮಣಕಾರಿ ಆಟ ಪ್ರದರ್ಶಿಸಿದರು. ಮಾರ್ಕೊ ಯಾನ್ಸನ್ (19) ಅವರೊಂದಿಗೆ ಏಳನೇ ವಿಕೆಟ್‌ಗೆ 68 (40ಎ) ರನ್ ಪೇರಿಸಿ ಸೋಲಿನ ಅಂತರ ತಗ್ಗಿಸಿದರು. ಕೊನೆಯ ಓವರ್‌ನಲ್ಲಿ ಬೌಂಡರಿ ಬಾರಿಸಿ ಐಪಿಎಲ್‌ನಲ್ಲಿ ಚೊಚ್ಚಲ ಶತಕ ದಾಖಲಿಸಿದರು. ಈ ಮೂಲಕ ಐಪಿಎಲ್‌ನಲ್ಲಿ ಶತಕ ಬಾರಿಸಿದ ಅತಿ ಕಿರಿಯ ವಿದೇಶಿ ಬ್ಯಾಟರ್ ಎಂಬ ಹಿರಿಮೆಗೆ ಕೂಪರ್ (22 ವರ್ಷ, 257 ದಿನ) ಪಾತ್ರರಾದರು.

ಇದಕ್ಕೂ ಮೊದಲು ಹೈದರಾಬಾದ್ ತಂಡದ ಅಭಿಷೇಕ್ ಮತ್ತು ಹೆಡ್ ಅಬ್ಬರಿಸಿದರು. ಎಡಗೈ ವೇಗದ ಜೋಡಿ ಅರ್ಷದೀಪ್ ಸಿಂಗ್ ಮತ್ತು ಮಾರ್ಕೊ ಯಾನ್ಸೆನ್ ಅವರನ್ನು ದಂಡಿಸಿದರು. ಇದರಿಂದಾಗಿ ಮೂರು ಓವರ್‌ಗಳಲ್ಲಿ ತಂಡವು 50ರ ಗಡಿ ದಾಟಿತು. ಅಭಿಷೇಕ್ ವಿಕೆಟ್ ಪಡೆಯುವ ಮೂಲಕ ಈ ಜೊತೆಯಾಟವನ್ನು ವೇಗಿ ಲಾಕಿ ಫರ್ಗ್ಯುಸನ್ ಮುರಿದರು. ಇದಾಗಿ ಮೂರು ಓವರ್‌ಗಳ ನಂತರ ಹೆಡ್ ವಿಕೆಟ್ ಗಳಿಸುವಲ್ಲಿ ಯಜುವೇಂದ್ರ ಚಾಹಲ್ ಯಶಸ್ವಿಯದರು. ಆದರೆ, ಅವರದ್ದೇ ಬೌಲಿಂಗ್‌ನಲ್ಲಿ ಶಶಾಂಕ್ ಸಿಂಗ್ ಅವರು ಒಂದು ಕ್ಯಾಚ್ ಬಿಟ್ಟರು ಮತ್ತು ವಿಕೆಟ್‌ಕೀಪರ್ ಪ್ರಭಸಿಮ್ರನ್ ಸ್ಟಂಪಿಂಗ್ ಅವಕಾಶ ಕೈಚೆಲ್ಲಿದರು. ಇದರಿಂದಾಗಿ ಚಾಹಲ್ ಅಸಮಾಧಾನಗೊಂಡರು.

ಇದರ ಪ್ರಯೋಜನವನ್ನು ಬ್ಯಾಟರ್‌ಗಳು ಮುಲಾಜಿಲ್ಲದೇ ಪಡೆದುಕೊಂಡರು. ಸನ್‌ರೈಸರ್ಸ್ ತಂಡದ ಇನಿಂಗ್ಸ್‌ನಲ್ಲಿ ಒಟ್ಟು 17 ಸಿಕ್ಸರ್ ದಾಖಲಾದವು. ಅಭಿಷೇಕ್ ಮತ್ತು ಹೆಡ್ ನಂತರ ಇಶಾನ್ ಹಾಗೂ ಕ್ಲಾಸೆನ್ ಅವರ ಆಟದ ಅಬ್ಬರ ಮುಗಿಲುಮುಟ್ಟಿತು. ಮೂರನೇ ವಿಕೆಟ್ ಜೊತೆಯಾಟದಲ್ಲಿ 88 (48ಎ) ರನ್ ಸೇರಿಸಿದರು. ಇಶಾನ್ ಔಟಾದ ನಂತರ ಕ್ಲಾಸೆನ್ ಅವರು ನಿತೀಶ್ ಕುಮಾರ್ ರೆಡ್ಡಿ (29; 13ಎ) ಅವರೊಂದಿಗೆ 66 ರನ್ ಸೇರಿಸಿದರು. ಹೀಗಾಗಿ ತಂಡವು ದೊಡ್ಡ ಮೊತ್ತ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಸನ್‌ರೈಸರ್ಸ್ ಹೈದರಾಬಾದ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 235 (ಅಭಿಷೇಕ್ ಶರ್ಮಾ 35, ಟ್ರಾವಿಸ್ ಹೆಡ್ 38, ಇಶಾನ್ ಕಿಶನ್ 55, ಹೆನ್ರಿಚ್ ಕ್ಲಾಸೆನ್ 69, ನಿತೀಶ್ ಕುಮಾರ್ ರೆಡ್ಡಿ ಔಟಾಗದೇ 29; ಯಜುವೇಂದ್ರ ಚಾಹಲ್ 32ಕ್ಕೆ1). ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 202 (ಕೂಪರ್ ಕೊನೊಲಿ ಔಟಾಗದೇ 107, ಮಾರ್ಕಸ್ ಸ್ಟೋಯಿನಿಸ್ 28; ಪ್ಯಾಟ್ ಕಮಿನ್ಸ್ 34ಕ್ಕೆ 2, ಶಿವಾಂಗ್ ಕುಮಾರ್ 45ಕ್ಕೆ 2). ಪಂದ್ಯದ ಆಟಗಾರ: ಪ್ಯಾಟ್ ಕಮಿನ್ಸ್




ಹೆನ್ರಿಚ್ ಕ್ಲಾಸೆನ್ ಚಿತ್ರಗಳು:ಎಎಫ್‌ಪಿ / ಪಿಟಿಐ



ವಿಕೆಟ್ ಪಡೆದ ಸಂಭ್ರಮದಲ್ಲಿ ಪ್ಯಾಟ್ ಕಮಿನ್ಸ್

ಮಾಜಿ ಕ್ರಿಕೆಟಿಗ ಶಿಖರ್ ಧವನ್ ವಿವಾಹ



ಗುರುಗ್ರಾಮ (ಪಿಟಿಐ): ಭಾರತ ತಂಡದ ಮಾಜಿ ಕ್ರಿಕೆಟಿಗ ಶಿಖರ್ ಧವನ್ ಅವರು ಐರ್ಲೆಂಡ್‌ನ ಸೋಫಿ ಶೈನ್ ಜೊತೆ ಬುಧವಾರ ಇಲ್ಲಿ ವಿವಾಹ ನೋಂದಣಿ ಮಾಡಿಕೊಂಡರು.

ರಿಜಿಸ್ಟ್ರಾರ್ ಕಚೇರಿಗೆ ಪತ್ನಿ ಸೋಫಿ ಜತೆ ಬಂದಿದ್ದ ಅವರು ದಾಖಲೆಗಳಿಗೆ ಸಹಿ ಹಾಕಿದರು. ಅವರ ಕುಟುಂಬ ಸದಸ್ಯರ ಜೊತೆ ಪುರೋಹಿತರೊಬ್ಬರು ಹಾಜರಿದ್ದರು.

ಫೆಬ್ರುವರಿ 21ರಂದು ನವದೆಹಲಿಯಲ್ಲಿ ಆಪ್ತರಷ್ಟೇ ಇದ್ದ ಸಮಾರಂಭದಲ್ಲಿ ಧವನ್, ಐರ್ಲೆಂಡ್‌ನ 'ಪ್ರಾಡಕ್ಟ್ ಕನ್ಸಲ್ಟೆಂಟ್' ಸೋಫಿ ಶೈನ್ ಅವರನ್ನು ವರಿಸಿದ್ದರು. ಸೋಫಿ ಪ್ರಸ್ತುತ ಶಿಖರ್ ಧವನ್ ಪ್ರತಿಷ್ಠಾನದ ಮುಖ್ಯಸ್ಥೆಯಾಗಿದ್ದಾರೆ.

ಗುಕೇಶ್‌ಗೆ ಮಣಿದ ಸಿಂದರೋವ್



ವಾರ್ಸಾ (ಪೋಲೆಂಡ್), (ಪಿಟಿಐ): ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಸೂಪರ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯ ಐದನೇ ಸುತ್ತಿನಲ್ಲಿ ಬುಧವಾರ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ ಅವರನ್ನು 52 ನಡೆಗಳಲ್ಲಿ ಸೋಲಿಸಿದರು.

ಸಿಂದರೋವ್ ಅವರು ಮುಂಬರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಗುಕೇಶ್ ಅವರಿಗೆ ಚಾಲೆಂಜರ್ ಆಗಿದ್ದಾರೆ. ಹೀಗಾಗಿ ಈ ವಿಜಯ ಗುಕೇಶ್ ಅವರಿಗೆ ವಿಶ್ವಾಸದ ದೃಷ್ಟಿಯಿಂದ ಮಹತ್ವದ್ದು. ಪೋಲೆಂಡ್ ಟೂರ್ನಿಯು ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ಫಾರ್ಮ್ ಉತ್ತಮವಾಗಿಲ್ಲದ ಕಾರಣ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗೆ ಸಿದ್ಧತೆ ನಡೆಸಲು ಗುಕೇಶ್, ಗ್ರ್ಯಾಂಡ್ ಚೆಸ್ ಟೂರ್‌ನ ಮೊದಲ ಕೆಲವು ಟೂರ್ನಿಗಳಲ್ಲಿ ಆಡಿರಲಿಲ್ಲ. ಈ ಸುತ್ತಿನಲ್ಲಿ ಆಡುವ ಮೊದಲು ಇಬ್ಬರೂ, ನಾಲ್ಕನೇ ಸುತ್ತಿನ ಪಂದ್ಯಗಳನ್ನು ಸೋತಿದ್ದರು.

ಖಾಸಗಿ ಬೀಜ ಕಂಪನಿಗಳಿಗೆ ರೈತರ ಸಡ್ಡು

ಒಂದನೇ ಪುಟದಿಂದ...

ಮೊದಲ ಹಂತದಲ್ಲಿ 1,000ಕ್ಕೂ ಹೆಚ್ಚು ದೇಸಿ ತಳಿಗಳನ್ನು ಕಲೆ ಹಾಕಲಾಗಿತ್ತು. ನಂತರ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಬೆಳೆ ಪ್ರಾತ್ಯಕ್ಷಿಕೆ ನಡೆಸಿತ್ತು. ದೇಸಿ ತಳಿಗಳ ಪ್ರಾತ್ಯಕ್ಷಿಕೆಯಲ್ಲಿ ಬಂದ ಇಳುವರಿ ಕಂಡು ಕೃಷಿ ವಿಶ್ವವಿದ್ಯಾಲಯಗಳೇ ಬೆರಗಾಗಿವೆ. ಹಲವು ತಳಿಗಳು ರೋಗ ಬಾಧೆಗೂ ಸಿಲುಕದೆ, ಪ್ರಕೃತಿ ವಿಕೋಪಗಳನ್ನು ಮೆಟ್ಟಿನಿಂತು ರೈತರಿಗೆ ಆಶಾಕಿರಣವಾಗಿ ಪರಿಣಮಿಸಿವೆ. ಅವುಗಳಲ್ಲಿ ಭತ್ತ, ರಾಗಿ, ಜೋಳ, ಎಣ್ಣೆಕಾಳು, ದ್ವಿದಳ ಧಾನ್ಯ, ಸಿರಿ ಧಾನ್ಯ ಸೇರಿದಂತೆ 30ಕ್ಕೂ ಹೆಚ್ಚು ಬೆಳೆಗಳ 490 ತಳಿಗಳನ್ನು ಆಯ್ಕೆ ಮಾಡಲಾಗಿದೆ.

ಕರ್ನಾಟಕದ ಸ್ಥಳೀಯ ಹವಾಮಾನಕ್ಕೆ ಹೊಂದಿಕೊಳ್ಳುವ, ಕಡಿಮೆ ನೀರು ಹಾಗೂ ಗೊಬ್ಬರಕ್ಕೆ ಹುಲುಸಾಗಿ ಬೆಳೆಯುವ ಉತ್ತಮ ಪೌಷ್ಟಿಕತೆ ಮತ್ತು ಔಷಧೀಯ ಗುಣಗಳನ್ನು ಒಳಗೊಂಡ ತಳಿಗಳ ಬೀಜಗಳನ್ನು ಆಯ್ಕೆ ಮಾಡ ಲಾಗಿದೆ. ಇವುಗಳನ್ನು ವೈಜ್ಞಾನಿಕ ದೃಢೀಕರಣಕ್ಕೆ ಒಳಪಡಿಸಿದ ನಂತರ ಆಯ್ಕೆಯಾದ ತಳಿಗಳನ್ನು ಮಾರಾಟ ಮಾಡಲು ರೈತರಿಗೆ ಪರವಾನಗಿ ನೀಡಲಾಗಿದೆ.

ಕಠಿಣ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಲಾದ ಎಲ್ಲ ತಳಿಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಆಯಾ ರೈತರಿಗೆ ಅನುಕೂಲವಾಗುವಂತೆ ಕಾನೂನು ತೊಡಕುಗಳನ್ನು ನಿವಾರಿಸಲಾಗಿದೆ. ತಳಿಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ಆರ್ಥಿಕ ಸಹಾಯ ನೀಡಲಾಗಿದೆ. ಕೃಷಿ ವಿಜ್ಞಾನಿಗಳ ನೆರವಿನ ಹಸ್ತ ಕಲ್ಪಿಸಲಾಗಿದೆ. ಕರ್ನಾಟಕದ ಆಚೆಗೂ ಮಾರುಕಟ್ಟೆ ವಿಸ್ತರಿಸಲು ರಾಷ್ಟ್ರಮಟ್ಟದಲ್ಲಿ ನೋಂದಣಿ ಮಾಡಿಸಿ (ಜಿಐ ಟ್ಯಾಗ್), ಡಿಜಿಟಲ್ ವೇದಿಕೆ ಮತ್ತು ಮಾರುಕಟ್ಟೆ ಸಂಪರ್ಕಗಳ ಸೌಲಭ್ಯವನ್ನೂ ಕಲ್ಪಿಸಲಾಗಿದೆ.

ಪಾಕ್ ಜೊತೆ ಸರಣಿಗೆ ನಿಷೇಧ ಮುಂದುವರಿಕೆ

ನವದೆಹಲಿ (ಪಿಟಿಐ): ಪಾಕಿಸ್ತಾನ ಜೊತೆಗೆ ದ್ವಿಪಕ್ಷೀಯ ಸರಣಿಗಳಲ್ಲಿ ಆಡುವುದಕ್ಕೆ ಹೋದ ವರ್ಷ ಹೇರಲಾಗಿದ್ದ ನಿಷೇಧ ಮುಂದುವರಿಯಲಿದೆ. ಆದರೆ ಅಂತರರಾಷ್ಟ್ರೀಯ ಕ್ರೀಡಾಕೂಟಗಳಿಗೆ ಆ ದೇಶದ ಅಥ್ಲೀಟುಗಳು ಇಲ್ಲಿ ಬಂದು ಪಾಲ್ಗೊಳ್ಳುವುದಕ್ಕೆ ತಡೆಯಿರುವುದಿಲ್ಲ ಎಂದು ಕ್ರೀಡಾ ಸಚಿವಾಲಯ ಬುಧವಾರ ತಿಳಿಸಿದೆ.

ಕ್ರೀಡಾಪಟುಗಳು, ತಂಡದ ಅಧಿಕಾರಿಗಳು, ತಾಂತ್ರಿಕ ಅಧಿಕಾರಿಗಳು, ಅಂತರರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ಪದಾಧಿಕಾರಿಗಳಿಗೆ ವೀಸಾ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವುದಕ್ಕೆ ಬದ್ಧರಾಗಿರುವುದಾಗಿ ಸಚಿವಾಲಯ ತಿಳಿಸಿದೆ.

'ದ್ವಿಪಕ್ಷೀಯ ಸರಣಿಗಳಿಗೆ ಸಂಬಂಧಿಸಿದಂತೆ ಭಾರತ ತಂಡಗಳು, ಪಾಕಿಸ್ತಾನದಲ್ಲಿ ನಡೆಯುವ ಸರಣಿಗಳಿಗೆ ಹೋಗುವುದಿಲ್ಲ. ಅಥವಾ ಪಾಕಿಸ್ತಾನದ ತಂಡಗಳಿಗೆ ಇಲ್ಲಿ ಬಂದು ಆಡಲು ಅನುಮತಿ ನೀಡುವುದಿಲ್ಲ' ಎಂದು ಸಚಿವಾಲಯವು ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ, ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ) ಮತ್ತು ಭಾರತ ಕ್ರೀಡಾ ಪ್ರಾಧಿಕಾರಕ್ಕೆ ಕಳುಹಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ.

'ಅಂತರರಾಷ್ಟ್ರೀಯ ಅಥವಾ ಬಹು ತಂಡಗಳು ಭಾಗವಹಿಸುವ ಕ್ರೀಡಾಕೂಟಗಳು ಭಾರತದಲ್ಲಿ ಅಥವಾ ಹೊರದೇಶದಲ್ಲಿ ನಡೆಯುವ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳ ಮಾರ್ಗದರ್ಶಿ ಸೂತ್ರ ಮತ್ತು ನಮ್ಮ ಕ್ರೀಡಾಪಟುಗಳ ಹಿತಾಸಕ್ತಿ ಗಮನದಲ್ಲಿಟ್ಟುಕೊಳ್ಳಲಾಗುವುದು' ಎಂದೂ ತಿಳಿಸಲಾಗಿದೆ.

'ಅಂತರರಾಷ್ಟ್ರೀಯ ಕೂಟಗಳಲ್ಲಿ ಪಾಕಿಸ್ತಾನ ತಂಡ ಅಥವಾ ಆ ದೇಶದ ಆಟಗಾರರಿದ್ದಲ್ಲಿ ಭಾರತದ ಆಟಗಾರರಿಗೆ ಪಾಲ್ಗೊಳ್ಳಲು ಅವಕಾಶ ನೀಡಲಾಗುವುದು. ಹಾಗೆಯೇ ಭಾರತದಲ್ಲಿ ಇಂಥ ಅಂತರರಾಷ್ಟ್ರೀಯ ಕ್ರೀಡಾಕೂಟಗಳು ನಡೆದರೆ ಪಾಕಿಸ್ತಾನದ ಆಟಗಾರರು ಅಥವಾ ತಂಡಗಳಿಗೆ ಪಾಲ್ಗೊಳ್ಳಲು ಅವಕಾಶವಿದೆ' ಎಂದು ಸುತ್ತೋಲೆ ಹೇಳಿದೆ.

2025ರಲ್ಲಿ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದನಾ ದಾಳಿ ನಂತರ ಯುಎಇಯಲ್ಲಿ ಹಮ್ಮಿಕೊಂಡಿದ್ದ ಏಷ್ಯಾಕಪ್ ಕ್ರಿಕೆಟ್‌ನಲ್ಲಿ ನಲ್ಲಿ ಭಾರತ ಭಾಗವಹಿಸುವುದಕ್ಕೆ ಆಕ್ರೋಶಗಳು ವ್ಯಕ್ತವಾಗಿದ್ದವು. ಆ ಟೂರ್ನಿಯಲ್ಲಿ ಪಾಕಿ ಸ್ತಾನವೂ ಪಾಲ್ಗೊಂಡಿತ್ತು. ನಂತರ ಕ್ರೀಡಾ ಸಚಿವಾಲಯವು ಇದಕ್ಕೆ ಸಂಬಂಧಿಸಿ ನೀತಿಯನ್ನು ರೂಪಿಸಿತ್ತು.

ಕಾಮನ್‌ವೆಲ್ತ್ ಟಿಟಿ ನವದೆಹಲಿ ಆತಿಥ್ಯ

ನವದೆಹಲಿ (ಪಿಟಿಐ): 22ನೇ ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ಗೆ ನವದೆಹಲಿ ಆತಿಥ್ಯ ವಹಿಸಲಿದೆ. ಜುಲೈ 27 ರಿಂದ ಆಗಸ್ಟ್ 2ರವರೆಗೆ ತ್ಯಾಗರಾಜ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಚಾಂಪಿಯನ್‌ಷಿಪ್‌ನಲ್ಲಿ 35 ದೇಶಗಳ ತಂಡಗಳು ಭಾಗವಹಿಸಲಿವೆ.

ದೆಹಲಿ ಸರ್ಕಾರ ಮತ್ತು ಭಾರತ ಟೇಬಲ್ ಟೆನಿಸ್ ಫೆಡರೇಷನ್ ಸಹಯೋಗದಲ್‌ಇ ಚಾಂಪಿಯನ್‌ಷಿಪ್ ನಡೆಯಲಿದೆ ಎಂದು ಮುಖ್ಯಮಂತ್ರಿ ರೇಖಾ ಗುಪ್ತಾ ಬುಧವಾರ ಪ್ರಕಟಿಸಿದರು. ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಮಲೇಷ್ಯಾ, ಸಿಂಗಪುರ, ಸ್ಕಾಟ್ಲೆಂಡ್, ವೇಲ್ಸ್, ನೈಜೀರಿಯಾ ಮೊದಲಾದ ತಂಡಗಳು ಕಣದಲ್ಲಿವೆ.

ಆರ್ಚರಿ ವಿಶ್ವಕಪ್: ಕಾಂಪೌಂಡ್ ತಂಡ ವಿಭಾಗದಲ್ಲಿ ಭಾರತಕ್ಕೆ ಬರಿಗೈ

ಶಾಂಘೈ (ಪಿಟಿಐ): ಪದಕದ ಭರವಸೆಯಾಗಿದ್ದ ಭಾರತದ ಪುರುಷರ ಮತ್ತು ಮಹಿಳಾ ತಂಡಗಳು, ಆರ್ಚರಿ ವಿಶ್ವಕಪ್ ಸ್ಟೇಜ್ 2 ಟೂರ್ನಿಯ ಕಾಂಪೌಂಡ್ ವಿಭಾಗದಲ್ಲಿ ಬುಧವಾರ ನಿರಾಶೆ ಅನುಭವಿಸಬೇಕಾಯಿತು.

ನಿರ್ಣಾಯಕ ಸಂದರ್ಭದಲ್ಲಿ ಒತ್ತಡಕ್ಕೆ ಒಳಗಾದ ಭಾರತದ ಬಿಲ್ಗಾರರು ಖಾಲಿಕೈಯಲ್ಲಿ ಮರಳಬೇಕಾಯಿತು. ಅತಿ ಹೆಚ್ಚಿನ ಆಘಾತ ಎದುರಾಗಿದ್ದು ಭಾರತ ಮಹಿಳಾ ತಂಡದಿಂದ. ಹೋದ ತಿಂಗಳು ಮೆಕ್ಸಿಕೊದಲ್ಲಿ ನಡೆದಿದ್ದ ವರ್ಷದ ಮೊದಲ ವಿಶ್ವಕಪ್‌ನಲ್ಲಿ ಈ ತಂಡ ಚಿನ್ನ ಗೆದ್ದಿದ್ದ ಕಾರಣ ಇಲ್ಲೂ ಪದಕದ ನಿರೀಕ್ಷೆ ಇಡಲಾಗಿತ್ತು.

ಜ್ಯೋತಿ ಸುರೇಖಾ ವೆನ್ನಂ, ಪ್ರಗತಿ ಮತ್ತು ಅದಿತಿ ಸ್ವಾಮಿ ಅವರಿದ್ದ ತಂಡ ಕ್ವಾರ್ಟರ್‌ಫೈನಲ್‌ನಲ್ಲಿ ಟರ್ಕಿ ತಂಡಕ್ಕೆ 227–233 ರಲ್ಲಿ ಮಣಿಯಿತು.

ಪುರುಷರ ತಂಡ (ಓಜಸ್ ದೇವತಳೆ, ಸಾಹಿಲ್ ಜಾಧವ್ ಮತ್ತು ಕುಶಲ್ ದಲಾಲ್) ಒಂದು ಹಂತ ಮುಂದೆ ಹೋದರೂ ಸೆಮಿಫೈನಲ್‌ನಲ್ಲಿ ಅಮೆರಿಕ ತಂಡಕ್ಕೆ 234–235 ರಲ್ಲಿ ಮಣಿಯಿತು.

ಕಂಚಿನ ಪದಕಕ್ಕೆ ನಡೆದ ಹಣಾಹಣಿಯಲ್ಲಿ ಭಾರತ ತಂಡವು ಶೂಟ್ ಆಫ್‌ನಲ್ಲಿ ಚೀನಾ ಎದುರು ಸೋಲನುಭವಿಸಿತು. ನಿಗದಿ ಸುತ್ತಿನಲ್ಲಿ ಸ್ಕೋರ್ 234–234ರಲ್ಲಿ ಸಮನಾಗಿತ್ತು. ಶೂಟ್ ಆಫ್‌ನಲ್ಲಿ ಚೀನಾ ಮೇಲುಗೈ ಸಾಧಿಸಿತು.

ವೈಯಕ್ತಿಕ ವಿಭಾಗ: ತಂಡ ವಿಭಾಗದಲ್ಲಿ ನಿರಾಸೆಯಾದರೂ, ವೈಯಕ್ತಿಕ ವಿಭಾಗದಲ್ಲಿ ಭಾರತದ ಕಾಂಪೌಂಡ್ ಬಿಲ್ಗಾರರು 32 ಸುತ್ತಿಗೆ ಮುನ್ನಡೆದಿದ್ದಾರೆ.